
ಲಕ್ಷ್ಮಣ ಕೊಡಸೆ
ಸಕಾಲ

# ಸಕಾಲ

**(ಕಾದಂಬರಿ)**

**ಲಕ್ಷ್ಮಣ ಕೊಡಸೆ**

## ಲೇಖಕರ ಮಾತು

ಕನ್ನಡದ ಹಿರಿಯ ಚಿಂತಕರಲ್ಲಿ ಒಬ್ಬರಾದ ನನ್ನ ಬಹುಕಾಲದ ಹಿರಿಯ ಗೆಳೆಯ ಪ್ರೊ.ಎಸ್.ಜಿ.ಸಿದ್ಧರಾಮಯ್ಯ ಅವರೊಂದಿಗೆ ದೇವರಾಜ ಅರಸು ಜನ್ಮಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಲು ಉತ್ತರ ಕರ್ನಾಟಕಕ್ಕೆ ಪ್ರವಾಸ ಹೋಗಿದ್ದ ಸಂದರ್ಭದಲ್ಲಿ ಮೂಡಿದ ವಸ್ತು ಇಲ್ಲಿ ಈ ಸ್ವರೂಪದಲ್ಲಿ ಸಿದ್ಧವಾಗಿದೆ.

ಇಲ್ಲಿನ ಎಲ್ಲಾ ಪಾತ್ರಗಳೂ ಘಟನೆಗಳೂ ಕಾಲ್ಪನಿಕ.

ಈ ಬರಹಕ್ಕೆ ಒತ್ತಾಸೆಯಾಗಿರುವವರು ಆಪ್ತ ಗೆಳೆಯರಾದ ಪ್ರೊ.ಮೀರಾಸಾಬಿಹಳ್ಳಿ ಶಿವಣ್ಣ, ಕಂನಾಡಿಗ ನಾರಾಯಣ. ಗೆಳೆಯ ಸಿ.ವಿಜಿ. ಚಂದ್ರು ಅವರ ಮಹತ್ವಾಕಾಂಕ್ಷೆಯ ಯೋಜನೆಯಲ್ಲಿ ಈ ಮೂಲಕ ಭಾಗವಹಿಸುತ್ತಿರುವುದಕ್ಕೆ ನನಗೆ ಸಂತೋಷವಾಗಿದೆ.

ಈ ಎಲ್ಲ ಗಣ್ಯ ಮಿತ್ರಬಳಗಕ್ಕೆ ನಾನು ಆಭಾರಿ.

**– ಲಕ್ಷ್ಮಣ ಕೊಡಸೆ**

**ನಂ.45, 2ನೇ ಅಡ್ಡರಸ್ತೆ, ನ್ಯೂ ಬ್ಯಾಂಕ್ ಕಾಲೊನಿ, ಕೋಣನಕುಂಟೆ, ಬೆಂಗಳೂರು– 560062**

**9448484726**

****************************

# ಸಕಾಲ

ಅಧ್ಯಾಯ–1

## ಆಸ್ಪತ್ರೆ ಭೇಟಿ

‘ಬೆಳಗ್ಗೆಯಿಂದಲೂ ಚೆನ್ನಾಗಿಯೇ ಇದ್ದ. ಮಧ್ಯಾಹ್ನ ನಮ್ಮೊಟ್ಟಿಗೆ ಊಟಾನೂ ಮಾಡ್ದ. ‘ಸಾರಿಗೆ ಉಪ್ಪೇ

ಹಾಕಿಲ್ಲ' ಅಂತ ಊಟಕ್ಕೆ ಕೂತಾಗ ಬೈದು ಉಪ್ಪು ಬೇರೆ ಹಾಕಿಸ್ಕಂಡಿದ್ದ. ಸಾಯಂಕಾಲ ನಾವೆಲ್ಲ ಇಲ್ಲೇ ಇದ್ದಾಗ ಚೆನ್ನಾಗಿ ಮಾತಾಡ್ತ ಕುಳಿತಿದ್ದ. ಒಂದಕ್ಕೆ ಅಂತ ಎದ್ದು ಜಗಲಿ ಇಳಿದು ಹೊರಕ್ಕೆ ಹೋದ. ವಾಪಸು ಬರೋವಾಗ ಬಾಗಿಲು ದಾಟುತಾ ಇದ್ದವನೇ ಹೊಂಗಿದ. 'ಅರೆರೆ ಹಿಡ್ಕೊಳ್ರೊ..' ಅಂತ ನಾನು ಎದ್ದು ಬರೋವಷ್ಟರಲ್ಲಿ ಕೆಳಕ್ಕೆ ಬಿದ್ದು ಬಿಟ್ಟ. ಎಬ್ಬಿಸಿ ನಿಲ್ಲಿಸಾಕೆ ಹೋದರೆ 'ಬಲಗಾಲು ಸ್ವಾಧೀನಕ್ಕೆ ಬರ್ತಾ ಇಲ್ಲ' ಅಂತ ಹೇಳ್ದ. ನೋಡು ಈಗ ಹಿಂಗೆ ಮಲಗಿದಾನೆ...'

ಸಂಜೆಗತ್ತಲಿನಲ್ಲಿ ಕೋಣೆಯಲ್ಲಿ ಮಂಚದ ಮೇಲೆ ಮಲಗಿದ್ದ ತಿಮ್ಮನಾಯ್ಕರ ಬಳಿ ಸುತ್ತುವರಿದಿದ್ದವರಿಗೆ ಮಾಹಿತಿ ನೀಡುತ್ತಿದ್ದ ಲಿಂಗರಾಜ. ಅವನು ತಲೆದಸಿ ನಿಂತು ವಿವರ ಕೊಡುತ್ತಿದ್ದರೆ, ಕಾಲ ಬಳಿ ನಿಂತಿದ್ದ ಗಂಗಮ್ಮ ಸೆರಗನ್ನು ಮುಷ್ಟಿಯಲ್ಲಿ ಹಿಡಿದುಕೊಂಡು 'ಯಾವತ್ತೂ ಹಿಂಗೆ ಮಲಗಿದವರೇ ಅಲ್ಲ. ಒಂದು ಜಡ, ತಲೆನೋವು ಅಂತ ಹೇಳಿದೋರಲ್ಲ. ಅವತ್ಯಾವತ್ತೋ ಒಂದು ದಿನ ಜಡ ಬಂದು ಮಲಗಿದವರು 'ಸುಮ್ಮನೆ ಮಲಗಿಕೊಂಡಿದ್ರೆ ಮೈಕೈಯೆಲ್ಲ ನೋವು' ಅಂತ ಎದ್ದು ತ್ವಾಟದ ಕಡೆ ಹೋಗಿ ಬೇಲಿ ಹಾಕೋರ ಜತೆ ಸೇರ್ಕಂಡಿದ್ರು..' ಎಂದು ಹನಿಗಣ್ಣಾದರು. ಅನಿರೀಕ್ಷಿತ ಸ್ಥಿತಿಗೆ ಕಂಗಾಲಾಗಿದ್ದ ಗಂಗಮ್ಮ ಎದುರು ನಿಂತವರನ್ನು ಅಸಹಾಯಕತೆಯಿಂದ ನೋಡಿದರು. 'ಇದೊಳ್ಳೆ ಗ್ರಾಚಾರ ಆತಲ್ಲ. ಕಾಲು ಎತ್ತಿ ಇಡಾಕೇ ಆಗ್ಲಿಲ್ಲ. ಮರಗಟ್ಟಿ ಹೋದಂಗೆ ಆಗಿ ಬಿಡ್ತು. ಈ ಹುಡುಗರು ಬಂದು ಆತುಗೊಳ್ಳದೆ ಇದ್ದಿದ್ರೆ ತಲೆಗೆ ಪೆಟ್ಟು ಆಗ್ತಿತ್ತೇನೋ..' ಎಂದು ಮಲಗಿದ್ದ ತಿಮ್ಮನಾಯ್ಕರೂ ದನಿಗೂಡಿಸಿದರು.

ಅದು ಮೂಲದಲ್ಲಿ ಒಂದೇ ಮನೆಗೆ ಸೇರಿದ ಹದಿನೈದು ಮನೆಗಳಿದ್ದ ಹಳ್ಳಿ. ಬಿಡಿ ಬಿಡಿಯಾಗಿ ತಮ್ಮ ತಮ್ಮ ಗದ್ದೆ ಹಕ್ಕಲುಗಳಿದ್ದ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದ ಮಲೆನಾಡಿನ ಊರು. ಸರ್ಕಾರಿ ರಸ್ತೆಯಿಂದ ಕಾಲ್ನಡಿಗೆಯಲ್ಲಿ ಇಪ್ಪತ್ತು ನಿಮಿಷದ ದಾರಿಯಿದ್ದ ಜಾಗ. ಊರಿನ ಒಂದು ಕಡೆಯಿಂದ ಇನ್ನೊಂದು ಕಡೆಗೆ ಅನತಿ ದೂರದಲ್ಲಿ ಹಾದು ಹೋಗುವ ಗ್ರಾಮಪಂಚಾಯಿತಿ ರಸ್ತೆಯೇ ಊರಿಗೆ ಸಂಪರ್ಕ ಕಲ್ಪಿಸುವ ರಾಜಮಾರ್ಗ. ಮೇಲ್ಬದಿಯಲ್ಲಿ ದೊಡ್ಡದೊಂದು ಕೆರೆ ಇದ್ದು ಅದರ ಕೆಳಗಿನ ಜಾಗದಲ್ಲಿ ಅಡಿಕೆ ತೋಟವೂ ಅದರ ಕೆಳಗೆ ಗದ್ದೆಗಳೂ ಇದ್ದದು ಊರಿನ ನೈಸರ್ಗಿಕ ಸ್ವರೂಪ. ಕುಟುಂಬಗಳು ಬೆಳೆದಂತೆ ಅವುಗಳು ವಿಭಜನೆಯಾಗಿ ಊರು ನಿಧಾನವಾಗಿ ತನ್ನ ವಿಸ್ತೀರ್ಣವನ್ನು ಹೆಚ್ಚಿಸಿಕೊಂಡಿದೆ.

ಊರಿಗೆ ಯಜಮಾನನಂತಿದ್ದ ತಿಮ್ಮನಾಯ್ಕರಿಗೆ 'ಹೇಗೆ ಹೇಗೋ ಆಗಿ ಕೆಳಗೆ ಬಿದ್ದುಬಿಟ್ರಂತೆ' ಅನ್ನುವ ಸುದ್ದಿ ಊರಿಗೆ ಬೇಗನೆ ಹರಡಿತ್ತು. ಅದು ಒಂದೇ ಮನೆತನದವರ ಊರಾಗಿದ್ದರಿಂದ ಚಿಗಪ್ಪ ದೊಡಪ್ಪಗಳ ಸಂಬಂಧದ ಹೆಸರಿನಲ್ಲಿಯೇ 'ಅಯ್ಯನಿಗೆ ಹುಸಾರಿಲ್ಲಂತೆ', 'ದೊಡಪ್ಪ ಜಗಲೀಲಿ ಹೊಂಗಿ ಕೆಳಗೆ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡಿದಾನಂತೆ', 'ಮಾವಯ್ಯನಿಗೆ ಬಾಯಿ ಬಿದ್ದು ಹೋಗಿದೆಯಂತೆ', 'ತಿಮ್ಮಜ್ಜನಿಗೆ ಪ್ರಜ್ಞೆ ತಪ್ಪಿಹೋಗಿ ಈಗಲೋ ಆಗಲೇ ಅಂತೆ' ಎಂದೆಲ್ಲ ಉದ್ಗಾರ- ವದಂತಿಗಳನ್ನು ಹುಟ್ಟಿಸಿತ್ತು. ಕೆಲವರು ಕೈಲಿದ್ದ ಕೆಲಸ ಬಿಟ್ಟು ಬಂದಿದ್ದರು. ಇನ್ನು ಕೆಲವರು ಮಾಡುತ್ತಿದ್ದ ಕೆಲಸ ಮುಗಿಸಿಯೇ ಬಂದಿದ್ದರು. ವರ್ಷದ ಹಿಂದೆಯಷ್ಟೆ ಕೆಳಗಿನ ಮನೆ ರಂಗಣ್ಣ ಮನೆಯ ಹಂಚು ಸರಿ ಮಾಡುವುದಕ್ಕೆ ಮಾಡು ಹತ್ತಿದವನು 'ಯಾಕೊ ತಲೆ ಸುತ್ತುತಾ ಇದೆ' ಎಂದು ಕೆಳಕ್ಕೆ ಇಳಿದು ವಾಂತಿ ಮಾಡಿಕೊಂಡ ಸ್ವಲ್ಪ ಹೊತ್ತಿಗೆ ಕುಸಿದು ಬಿದ್ದು ಉಸಿರು ಕಳೆದುಕೊಂಡದ್ದನ್ನು ನೆನಪು ಮಾಡಿಕೊಂಡವರಿಗೆ 'ಈಗಂತೂ ಹಿಂಗೇ ಅಂತ ಹೇಳಕ್ಕಾಗಲ್ಲ ಕಣ್ರೋ.. ಏನೋ ಒಂದು ಹೆಳೆ' ಎನ್ನುತ್ತ ಗಾಬರಿಯಲ್ಲಿಯೇ ಬಂದಿದ್ದರು. ಅವರಿಗೆ ತಿಮ್ಮನಾಯ್ಕರು ಚೆನ್ನಾಗಿ ಮಾತನಾಡುತ್ತ ಇದ್ದುದು ಸಮಾಧಾನ ತಂದಿತು.

‘ಏನಾಗ್ತಿದೆ? ಎಲ್ಲಿ ನೋವಾಗ್ತಿದೆ? ಕಾಲು, ಮಂಡಿ, ಪಾದ, ಬೆರಳು ಮಡಿಚಲು ಆಗ್ತಿದೆಯಾ?’ ಎಂದು ಕೈ ಮುಟ್ಟಿ ವಿಚಾರಿಸಿಕೊಂಡರು. ‘ಇದು ಪಾರ್ಸಿ ಕಣ್ರೊ.. ನಮ್ಮ ಮಾವಯ್ಯನಿಗೂ ಹಿಂಗೇ ಆಗಿತ್ತು ಮಾರಾಯ. ಕೂಡ್ಲೆ ಅಂಕೋಲಕ್ಕೆ ಕಳಿಸಿ ಮದ್ದು ತರಿಸಿದರು. ಒಂದಾರು ತಿಂಗಳು ಹಚ್ಚಿದರು. ಆಮೇಲೆ ಹುಷಾರಾಗಿ ಮನೆ ಬಾಗಿಲಲ್ಲೇ ಓಡಾಡುವಷ್ಟಾದರು. ಅವರಿಗೆ ಎಡಭಾಗಕ್ಕೆ ಹೊಡೆದಿತ್ತು. ಇಲ್ಲಿ ಬಲಗಾಲಿಗೆ ಆಗಿರೋದರಿಂದ ಬೇಗನೇ ಗುಣವಾಗುತ್ತೆ. ಈಗೇನು ಅಂಕೋಲಕ್ಕೆ ಒಂದೇ ದಿನದಲ್ಲಿ ಹೋಗಿ ವಾಪಸು ಬಂದು ಬಿಡಬಹುದು’ ಎಂದೊಬ್ಬ ಅನುಭವಿ ಹೇಳಿದ. ‘ಗೌರ್ಮೆಂಟ್ ಔಸ್ದಿ ತಂದ್ರೂ ಪ್ರಯೋಜ್ನ ಆಗಲ್ಲ. ಏನಿದ್ರೂ ಅಂಕೋಲದ ಮದ್ದೇ ಸರಿ. ಪಾರಿವಾಳದ ರಕ್ತ ಹಚ್ಚಿ ನೀವಿದ್ರೆ ಒಳ್ಳೇದು ಅಂತಲೂ ಹೇಳ್ತಾರೆ. ಅದರ ಮಾಂಸವೂ ಒಳ್ಳೇದಂತೆ.. ಯಾವುದಕ್ಕೂ ಬೇಗ ವ್ಯವಸ್ಥೆ ಮಾಡಿ. ಹಂಗೇ ರಾಮಣ್ಣನಿಗೂ ಹೇಳಿ ಕಳಿಸಿ. ಅವನು ದೊಡ್ಡ ಮನುಸ್ಯ. ಬೇಗ ಸಿಕ್ತಾನೋ ಇಲ್ಲೋ... ಲಿಂಗರಾಜು, ಎಲ್ಲೋ ನಿನ್ನಣ್ಣ ನಾಗರಾಜ? ಈಗ ಎಲ್ಲಿದಾನೆ? ಅವನಿಗೂ ಸುದ್ದಿ ಕೊಟ್ಟುಬಿಡಿ. ಅವನೂ ಬಂದಿದ್ರೆ ಒಳ್ಳೇದಿತ್ತು...’ ಎಂದು ಮತ್ತೊಬ್ಬರು ಸಲಹೆ ಮಾಡಿದರು. ಬಂದಿದ್ದವರಲ್ಲಿ ಹಿರಿಯರು ಕಿರಿಯರೆನ್ನದೆ ತಲೆಗೊಂದೊಂದು ಮಾತು ಹೇಳುತ್ತಿರುವುದನ್ನು ಕೇಳಿಸಿಕೊಳ್ಳುತ್ತಿದ್ದ ತಿಮ್ಮನಾಯ್ಕರು ಅಸಹನೆಯಿಂದ ‘ಏನ್ರೋ ಮಾರಾಯರ. ತ್ವಾಳ ಹಳ್ಳಕ್ಕೆ ಬಿತ್ತು ಅನ್ನೋ ಗಾದೆ ನೆನಪಿಗೆ ಬರೋಹಂಗೆ ಮಾತಾಡ್ತೀರಲ್ಲ. ಏನು ಯಾರಿಗೂ ಆಗಬಾರದ್ದು ಆಗಿಹೋಯ್ತು.. ಇಲ್ಲಿ ನೋಡ್ರೋ ಅಂಥದ್ದೇನೂ ಆಗಿಲ್ಲ’ ಎನ್ನುತ್ತ ನಿಧಾನವಾಗಿ ಏಳಲು ಯತ್ನಿಸಿದರು. ಲಿಂಗರಾಜು ತಕ್ಷಣವೇ ‘ಅಜ್ಜ ಅಜ್ಜ ಹುಷಾರು..’ ಎನ್ನುತ್ತ ಬೆನ್ನಿಗೆ ಕೈ ಆಪುಕೊಟ್ಟ. ತಿಮ್ಮನಾಯ್ಕರು ಬಲಗಾಲನ್ನು ನಿಧಾನವಾಗಿ ಮಂಚದಿಂದ ಕೆಳಕ್ಕೆ ಇಳಿಬಿಡಲು ಪ್ರಯತ್ನಿಸಿದರು. ಸ್ವಲ್ಪ ಸ್ವಲ್ಪ ಜಾರಿಸುತ್ತ ಇಳಿಸಿದರು. ಪಾದವನ್ನೂ ಅಲುಗಾಡಿಸಲು ಯತ್ನಿಸಿದರು. ಎರಡೂ ಪಾದಗಳನ್ನು ಊರಿ ಕುಳಿತುಕೊಂಡ ಮೇಲೆ ಅದುವರೆಗೆ ಏನೇನೋ ಮಾತಾಡುತ್ತಿದ್ದವರು ದನಿ ತಗ್ಗಿಸಿ ‘ಏಯ್ ಬಿಡ್ರೊ ಅಷ್ಟೇನೂ ಆಗಿಲ್ಲ. ನಾವು ಸುಮ್ಮನೆ ಪಾರ್ಸಿ ಇರಬೇಕು ಅಂತ ಗಾಬರಿ ಮಾಡಿಕೊಂಡೆವು. ಎಲ್ಲೋ ಕಾಲು ಉಳುಕಿರಬೇಕು.. ಲಿಂಗರಾಜ, ಎಲ್ಲೋ ನಿಮ್ಮಪ್ಪ, ಓಮ್ನಿ ತರಿಸಿ ಡಾಕ್ಟರ್ ಹತ್ರ ಕರ್ಕೊಂಡು ಹೋಗೋದಲ್ವೇನೋ..’ ಎಂದು ಮತ್ತಷ್ಟು ಸಲಹೆ ನೀಡಿ ನಿಧಾನ ನಿಧಾನವಾಗಿ ಒಬ್ಬೊಬ್ಬರೇ ನಿರ್ಗಮಿಸಿದರು. ಅವರೆಲ್ಲ ಹೋದ ಮೇಲೆ ಕೋಣೆಯಿಂದ ಹೊರಬಂದ ಗಂಗಮ್ಮ, ಊರಿನವರೇ ಆಗಿದ್ದರೂ ಮನೆ ಬಾಗಿಲಿಗೆ ಬಂದವರಿಗೆ ಕುಡಿಯುವುದಕ್ಕೆ ಏನನ್ನೂ ಕೊಡಲಾಗದೆ ಕಳುಹಿಸಿದ್ದಕ್ಕೆ ವ್ಯಥೆಪಟ್ಟರು.

* * *

ತಿಮ್ಮನಾಯ್ಕರು ಬಾಗಿಲ ಬಳಿ ಹೊಂಗಿ ಬಿದ್ದಾಗ ಊರಿನವರಂತೆಯೇ ಗಾಬರಿಯಾಗಿದ್ದ ಲಿಂಗರಾಜ, ಅವ್ವನೊಂದಿಗೆ ಸೇರಿ ಅವರನ್ನು ಎತ್ತಿ ಮಂಚಕ್ಕೆ ಸಾಗಿಸಿದ್ದ. ಶಿವಮೊಗ್ಗಕ್ಕೆ ಹೋಗಿದ್ದ ಅಪ್ಪಯ್ಯ ಬರುವುದು ರಾತ್ರಿ ಬಸ್ಸಿಗೆ ಎಂಬುದು ಗೊತ್ತಿತ್ತು. ಅಜ್ಜನ ಅನಿರೀಕ್ಷಿತ ಸ್ಥಿತಿಗೆ ಆತಂಕಗೊಂಡು ತನ್ನ ಮೊಬೈಲ್‌ನಿಂದ ಅಣ್ಣ ನಾಗರಾಜನಿಗೂ, ಅತ್ತೆ ಈರಮ್ಮನಿಗೂ ಸುದ್ದಿ ಕೊಟ್ಟ. ಎಂಬತ್ತರ ಆಚೆ ಗಡಿಯಲ್ಲಿದ್ದ ತಿಮ್ಮನಾಯ್ಕರು ಹಠಾತ್ತಾಗಿ ಕುಸಿದರೆಂದರೆ ಅದನ್ನು ಆಯತಪ್ಪಿದ ವರ್ತನೆ ಎಂದು ಸುಲಭದಲ್ಲಿ ತಿಳಿಯಲು ಅವನು ಸಿದ್ಧನಿರಲಿಲ್ಲ. ಕೆಳಗಿನಮನೆ ರಂಗಣ್ಣನ ನೆನಪು ಅವನಿಗೂ ಬಂದಿತ್ತು. ಸುದ್ದಿ ತಿಳಿಸಿ, ಹೊರಬಂದಾಗ ಆಗಲೇ ಅಜ್ಜನ ಮಂಚದ ಬಳಿ ಬಂದಿದ್ದ ಅಜ್ಜಿ ಗಂಗಮ್ಮ ಶೈತ್ಯೋಪಚಾರದಲ್ಲಿ ತೊಡಗಿದ್ದರು. ‘ನಿಂಬೆ ಹಣ್ಣಿನ ಪಾನಕ ಕೊಡಲೋ, ಬಿಸಿ ಹಾಲು ತಂದು ಕೊಡಲೋ’ ಎಂದು ಕೇಳುತ್ತಿದ್ದರು. ಅನಿರೀಕ್ಷಿತವಾಗಿ ಸಂಭವಿಸಿದ

ಆಘಾತಕ್ಕೆ ವಿಚಲಿತರಾಗಿದ್ದ ತಿಮ್ಮನಾಯ್ಕರಿಗೆ ಬಾಯಿಯ ಪಸೆ ಆರಿತ್ತು. ಯಾವುದಾದರೂ ಸರಿ, ಕುಡಿಯುವುದಕ್ಕೆ ಕೊಡು ಎಂಬಂತೆ ಎಡಗೈಯಲ್ಲಿ ಸಂಜ್ಞೆ ಮಾಡಿದಾಗ ಬಾಯಿಯೇ ಬಿದ್ದು ಹೋಗಿರಬಹುದೆಂದು ಗಂಗಮ್ಮನವರಿಗೆ ಇನ್ನಷ್ಟು ಗಾಬರಿಯಾಗಿತ್ತು. ಅಷ್ಟರಲ್ಲಿ ಒಳಮನೆಯಿಂದ ಸೊಸೆ ಪಾರ್ವತಿ ಬಿಸಿ ಕಾಫಿ ಮಾಡಿ ತಂದಿದ್ದರಿಂದ ಅದನ್ನು ಹೆಂಡತಿಯ ನೆರವಿನಿಂದ ನಿಧಾನವಾಗಿ ಕುಡಿದು ಚೇತರಿಸಿಕೊಂಡಿದ್ದರು ತಿಮ್ಮನಾಯ್ಕರು. ಅವರು 'ಇದೆಂಥ ಆಯಿತೋ? ಮಾರಾಯ' ಎಂದು ಲಿಂಗರಾಜುವನ್ನು ಉದ್ದೇಶಿಸಿ ಮಾತನಾಡಿದಾಗಲೇ ಗಂಗಮ್ಮನಿಗೆ ಸ್ವಲ್ಪ ಧೈರ್ಯ ಬಂದದ್ದು.

ಅಜ್ಜನ ಉಪಚಾರ ಒಳಕೋಣೆಯಲ್ಲಿ ನಡೆಯುತ್ತಿದ್ದಾಗ ಅಡುಗೆಮನೆಗೆ ಹಿಂತಿರುಗಿದ್ದ ಲಿಂಗರಾಜ ಅಲ್ಲಿ ಅವ್ವನೊಂದಿಗೆ ಸಮಾಲೋಚಿಸಿ ತಕ್ಷಣವೇ ಬರುವಂತೆ ಗುರುತಿದ್ದ ಓಮ್ನಿ ಚಾಲಕನಿಗೆ ಫೋನ್ ಮಾಡಿ ತಿಳಿಸಿದ್ದ. ಮೊದಲು ಡಾಕ್ಟರ್ ಹತ್ತಿರ ಕರೆದೊಯ್ಯುವುದೇ ಸರಿ ಎಂದು ಅವನು ಗಂಗಮ್ಮನಿಗೆ ಹೇಳಿದಾಗ 'ಮನೇಲಿ ನಿಮ್ಮಪ್ಪನೂ ಇಲ್ಲ' ಎಂದು ಹೇಳಿದ್ದರು. 'ಇದಕ್ಕೆಲ್ಲ ಅಪ್ಪಯ್ಯ ಬ್ಯಾಡ ಅಂತಾನೇನು ಅಜ್ಜಿ' ಎಂದು ಲಿಂಗರಾಜ ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದ. ಊರಿನವರು ಓಮ್ನಿ ಕರೆಸಿ ಡಾಕ್ಟರ್ ಹತ್ತಿರ ಕರೆದೊಯ್ಯುವಂತೆ ಸಲಹೆ ಕೊಡುವುದಕ್ಕೆ ಮೊದಲೇ ಅದರ ಏರ್ಪಾಟು ಮಾಡಿದ್ದ ಲಿಂಗರಾಜು.

ಊರಿನವರೆಲ್ಲ ನಿರ್ಗಮಿಸಿದ ಸ್ವಲ್ಪ ಹೊತ್ತಿಗೆ ಮನೆಯ ಅಂಗಳದಲ್ಲಿ ವಾಹನವೊಂದು ಬಂದು ನಿಂತ ಸದ್ದು ಜಗುಲಿಯಲ್ಲಿದ್ದವರಿಗೆ ಕೇಳಿಸಿತು. ಅಜ್ಜನನ್ನು ಕರೆದೊಯ್ಯಲು ತಾನು ಹೇಳಿದ್ದ ಬಾಡಿಗೆ ಕಾರು ಓಮ್ನಿ ಬಂದಿರುವ ಖಚಿತ ನಂಬಿಕೆಯಿಂದ ಅಜ್ಜನಿಗೆ ಬೇರೆ ಬಟ್ಟೆ ಹಾಕುವಂತೆ ಹೇಳಿ ತಾನೂ ಶರ್ಟು ಪ್ಯಾಂಟು ಏರಿಸಿಕೊಂಡು ಗಡಿಬಿಡಿಯಿಂದ ಹೊರಡಲು ಸಿದ್ಧವಾಗಿ ಹೊರಬಂದ ಲಿಂಗರಾಜುಗೆ ಕಂಡದ್ದು ಗಾಬರಿ ತುಂಬಿದ್ದ ಈರತ್ತೆ ಮತ್ತು ವಾಸಮಾವ. ತಾನು ಫೋನ್ ಮಾಡಿ ತಿಳಿಸಿದ್ದ ವರ್ತಮಾನಕ್ಕೆ ಅಷ್ಟು ಬೇಗ ಈರತ್ತೆ, ವಾಸಮಾವ ಕಾರು ಮಾಡಿಕೊಂಡು ಬಂದುದಕ್ಕೆ ಅವನಿಗೆ ಆಶ್ಚರ್ಯವೂ ಆಯಿತು. ಅವರಿಬ್ಬರೂ ಕಾರಿನಿಂದ ಇಳಿದವರೇ 'ಹೆಂಗದಾನೆ ಅಪ್ಪಯ್ಯ?', 'ಹೆಂಗಿದಾರೆ ಮಾವಯ್ಯ' ಎಂದು ವಿಚಾರಿಸುತ್ತ ಜಗುಲಿಗೆ ಧಾವಿಸಿ ತಿಮ್ಮನಾಯ್ಕರು ಮಲಗಿದ್ದ ಪಕ್ಕದ ಕೋಣೆಯ ಬಳಿ ಸಾಗಿದರು. ಮಗಳು ತಕ್ಷಣಕ್ಕೆ ಸ್ಪಂದಿಸಿ ಬಂದಿರುವುದಕ್ಕೆ ಸಮಾಧಾನಗೊಂಡ ಗಂಗಮ್ಮ ತನಗೆ ಗೊತ್ತಾಗಿದ್ದನ್ನು ಹೇಳತೊಡಗಿದ್ದರು. ಹೇಗೂ ಕಾರು ಮನೆ ಬಾಗಿಲಿನಲ್ಲಿ ಬಂದಿರುವಾಗ ಬಾಡಿಗೆ ಕಾರನ್ನು ಕರೆಸುವುದೇಕೆ ಎಂದು ಯೋಚಿಸಿದ ಲಿಂಗರಾಜು ಅವರ ಬಳಿ ಬಂದು 'ಮಾವ, ನಾನು ಓಮ್ನಿಗೆ ಹೇಳಿದ್ದೆ, ಅವನಿನ್ನೂ ಬಂದಿಲ್ಲ. ಒಂದು ಹೆಜ್ಜೆ ಅಜ್ಜನ್ನ ಪೇಟೆವರೆಗೂ ನಿಮ್ಮ ಕಾರ್‍ನಲ್ಲಿ ಕರ್ಕೊಂಡು ಹೋಗಾನ' ಎಂದು ಕೇಳಿದ. 'ಅದಕ್ಕೇನು, ನಡಿ ನಾನೂ ಬರ್ತೀನಿ' ಎಂದು ವಾಸನಾಯ್ಕರು ಸಮ್ಮತಿ ಸೂಚಿಸಿದರು. ಅವರ ಸಮ್ಮತಿ ಸಿಗುತ್ತಲೇ ಲಿಂಗರಾಜು ಫೋನ್ ಮಾಡಿ ಓಮ್ನಿ ಚಾಲಕನಿಗೆ ಬರಬೇಡವೆಂದು ತಿಳಿಸಿದ.

ಒಂದು ಕಡೆ ಲಿಂಗರಾಜು, ಇನ್ನೊಂದೆಡೆ ವಾಸನಾಯ್ಕರ ಹೆಗಲ ಮೇಲೆ ಕೈ ಇರಿಸಿಕೊಂಡು ತಿಮ್ಮನಾಯ್ಕರು ನಿಧಾನವಾಗಿ ಜಗುಲಿಯಿಂದ ನಿಧಾನವಾಗಿ ಬಾಗಿಲು ದಾಟಿ ಕಾರನ್ನು ಸಮೀಪಿಸಿದರು. ಹಿಂದಿನ ಸೀಟಿನಲ್ಲಿ ಅವರನ್ನು ಕುಳ್ಳಿರಿಸಿ ಪಕ್ಕದಲ್ಲಿ ವಾಸನಾಯ್ಕರು ಕುಳಿತರು. ಮುಂದೆ ಚಾಲಕನ ಪಕ್ಕ ಲಿಂಗರಾಜು ಕುಳಿತುಕೊಂಡ. 'ನಾನು ಬರಲೇನೋ' ಎಂದು ಗಂಗಮ್ಮ ಕೇಳಿದ್ದಕ್ಕೆ 'ಬೇಡ ಅಜ್ಜಿ, ನೀನ್ಯಾಕೆ? ನಾವು ಇಬ್ರೂ ಇದೀವಲ್ಲ..' ಎಂದು ಲಿಂಗರಾಜು ಹೇಳಿದ.

ವಾಸನಾಯ್ಕರು ಕರೆತಂದಿದ್ದ ಬಾಡಿಗೆ ಕಾರಿನ ಚಾಲಕ ಸರ್ಕಾರಿ ರಸ್ತೆ ತಲುಪುವವರೆಗಿನ ಹಳ್ಳಿ ಜಲ್ಲಿ

ರಸ್ತೆಯಲ್ಲಿ ಹೊಂಡ ತಗ್ಗುಗಳನ್ನು ಅಸಮಾಧಾನದಿಂದಲೇ ನಿವಾರಿಸಿಕೊಳ್ಳುತ್ತ 'ಇಲ್ಲಿ ಪಂಚಾಯ್ತಿ ಅಂತ ಇಲ್ಲೇನು? ಎಷ್ಟು ಕರಾಬಾಗಿ ರಸ್ತೆ ಇಟ್ಟುಕೊಂಡಿದ್ದೀರಲ್ಲ..' ಎಂದು ಆಕ್ಷೇಪಿಸಿದಾಗ ಅಜ್ಜನನ್ನು ಯಾರ ಬಳಿ ಒಯ್ಯುವುದೆಂದು ಚಿಂತೆಯಲ್ಲಿ ಮುಳುಗಿದ್ದ ಲಿಂಗರಾಜು ಅದಕ್ಕೆ ಲಕ್ಷ್ಯ ವಹಿಸಲಿಲ್ಲ. ಬಾಡಿಗೆ ಕಾರಿನ ಚಾಲಕರಿಗೆ ಸಮಯ ಸಂದರ್ಭದ ವಿವೇಚನೆ ಇರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಂಡ ವಾಸನಾಯ್ಕರು ತಡೆಯಲಾರದೆ, 'ಹಳ್ಳಿ ರಸ್ತೆಗಳು ಹೇಗಯ್ಯ ಇರ್ತವೆ. ಅಷ್ಟು ಯಾಕೆ, ನೀನೇ ಬಂದ್ಯೆಲ್ಲ, ಸರ್ಕಾರಿ ರಸ್ತೆ, ಎಷ್ಟು ಹೊಂಡ ಬಿದ್ದಿದ್ದವು ನೋಡಿಲ್ಲೇನು?' ಎಂದು ಪ್ರತಿಯಾಗಿ ಆಕ್ಷೇಪಿಸಿದರು. 'ಹೋಗಲಿ ಬಿಡಿ ಮಾವ, ಅದೇನೋ ಹೇಳ್ತಾರಲ್ಲ, ಅಜ್ಜಿಗೆ ಯಾವ್ದೋ ಚಿಂತೆ ಅಂತ.. ನಮ್ಮ ಸಂಕಟ ನಮಗೆ' ಎಂದು ಲಿಂಗರಾಜು ವ್ಯಥೆಯಿಂದ ಹೇಳಿದಾಗ ಚಾಲಕ ಪರಿಸ್ಥಿತಿಯ ಗಾಂಭೀರ್ಯತೆಯನ್ನು ಗಮನಕ್ಕೆ ತಂದುಕೊಂಡು ಸುಮ್ಮನಾದ. ಮತ್ತೆ ಮಾತನಾಡುವ ಸಾಹಸಕ್ಕೆ ಹೋಗಲಿಲ್ಲ.

ಆಗಲೇ ಗಂಟೆ ಎಂಟನ್ನು ಸಮಿಪಿಸಿತ್ತು. ಸರ್ಕಾರಿ ಆಸ್ಪತ್ರೆಯ ಪಕ್ಕದಲ್ಲಿಯೇ ಡಾಕ್ಟರ್ ನಿವಾಸ ಇದ್ದುದರಿಂದ ನೇರವಾಗಿ ಆಸ್ಪತ್ರೆಯ ಬಾಗಿಲಿಗೇ ಕಾರನ್ನು ತಂದು ನಿಲ್ಲಿಸಿ ಕೆಳಕ್ಕೆ ಇಳಿದ ಲಿಂಗರಾಜು ಡಾಕ್ಟರ್ ನಿವಾಸಕ್ಕೆ ಧಾವಿಸಿ ಕರೆಗಂಟೆ ಬಾರಿಸಿದ. ಇಂಥದ್ದೆಲ್ಲ ಅನುಭವ ಇದ್ದ ವೈದ್ಯ ಬಾಗಿಲು ತೆಗೆಯುವ ಮೊದಲು ಕಿಟಕಿಯಲ್ಲಿಯೇ ವಿಚಾರಿಸಿದರು. ಲಿಂಗರಾಜು ವಿವರಗಳನ್ನೆಲ್ಲ ಹೇಳಿದ ಮೇಲೆ ಬಾಗಿಲು ತೆಗೆದು ಹೊರಬಂದರು. ಅಲ್ಲಿದ್ದ ಕಾವಲುಗಾರನನ್ನು ಕರೆದು ಆಸ್ಪತ್ರೆ ಆವರಣದ ಹಿಂದಿನ ಕ್ವಾರ್ಟ್ರಸ್‌ನಲ್ಲಿದ್ದ ನರ್ಸ್ ಅನ್ನು ಕರೆಯಲು ಹೇಳಿದರು. ಲಿಂಗರಾಜು, ವಾಸನಾಯ್ಕರು ನಿಧಾನವಾಗಿ ತಿಮ್ಮನಾಯ್ಕರನ್ನು ನಡೆಸಿಕೊಂಡು ತಪಾಸಣಾ ಕೋಣೆಗೆ ಸಾಗಿಸಿ ಪರೀಕ್ಷಾ ಮಂಚದ ಮೇಲೆ ಮಲಗಿಸಿದರು. ವೈದ್ಯರು ನರ್ಸ್ ಬರುವವರೆಗೆ ಕಾಯದೆ, ಸ್ಟೆತಾಸ್ಕೋಪ್‌ನಿಂದ ಹೃದಯಬಡಿತ, ನಾಡಿ ಮಿಡಿತಗಳನ್ನು ನೋಡಿದರು. ಕಾಲಿನ ತಪಾಸಣೆಯನ್ನೂ ಮಾಡಿದರು. ಸಕ್ಕರೆ, ರಕ್ತದೊತ್ತಡ ಇತ್ಯಾದಿ ಪ್ರಶ್ನೆ ಕೇಳಿದರಾದರೂ ಅವುಗಳಿಗೆ ಲಿಂಗರಾಜು 'ಗೊತ್ತಿಲ್ಲ ಸಾರ್' ಎಂದೇ ಉತ್ತರ ನೀಡಿದ. ಆದರೂ ವೈದ್ಯರು ಹೆಚ್ಚಿನ ನಿಗಾ ವಹಿಸುತ್ತಿಲ್ಲ ಎಂದುಕೊಂಡ ವಾಸನಾಯ್ಕರು 'ಸಾರ್.. ಇವರು ರಾಮಣ್ಣನೋರ ತಂದೆ.. ಅದೇ ಸಿನಿಮಾ ತೆಗೀತಾರಲ್ಲ.. ಹಳ್ಳೂರು ರಾಮಣ್ಣನೋರು ಅಂತ.. ಮೊನ್ನೆ ಮೊನ್ನೆ ಅವರಿಗೊಂದು ದೊಡ್ಡ ಪ್ರಶಸ್ತಿ ಬಂತಲ್ಲ.. ಅವರ ತಂದೆ ಇವರು..' ಎಂದು ಹೇಳಿದರು. 'ಓಹ್.. ಅವರ ತಂದೆನಾ.. 'ಹಳ್ಳೂರು ರಾಮಣ್ಣ ಅವರ ಬಗ್ಗೆ ಪೇಪರ್‌ನಲ್ಲಿ ನೋಡಿದೀನಿ. ಅವಾಗವಾಗ ಅವರ ಹೆಸರು ಬರ್ತಾನೆ ಇರುತ್ತೆ. ಅವರ ತಂದೆನಾ ಇವರು..' ಎಂದು ವೈದ್ಯರು ಕುತೂಹಲ ತೋರಿದರು. ತಕ್ಷಣವೇ ಹತ್ತಿರದಲ್ಲಿದ್ದ ತಮ್ಮ ನಿವಾಸಕ್ಕೆ ತೆರಳಿ ತುರ್ತು ಸಂದರ್ಭದಲ್ಲಿ ಬಳಸುವ ಸಣ್ಣದೊಂದು ಉಪಕರಣವನ್ನು ತಂದರು. ಸೂಚಿಯಿಂದ ತಿಮ್ಮನಾಯ್ಕರ ತೋರುಬೆರಳನ್ನು ಚುಚ್ಚಿ ರಕ್ತ ತೆಗೆದು ಪರೀಕ್ಷೆ ನಡೆಸಿದರು. ಎಡಭುಜಕ್ಕೆ ರಬ್ಬರಿನ ಪಟ್ಟಿಯನ್ನು ಸುತ್ತಿ ರಕ್ತದ ಒತ್ತಡವನ್ನೂ ನೋಡಿದರು. ವಯಸ್ಸು ಕೇಳಿದರು. 'ಗುಡ್ ಗುಡ್.. ಶುಗರ್ ಇಲ್ಲ, ಬಿಪಿ ಇಲ್ಲ. ಕೆಲವೊಮ್ಮೆ ಕೊಲೆಸ್ಟ್ರಾಲ್ ಅಂದರೆ ಕೊಬ್ಬಿನ ಅಂಶ ರಕ್ತನಾಳಗಳಲ್ಲಿ ಗಟ್ಟಿಯಾಗಿ ಸೇರಿಕೊಂಡರೆ ಇಂಥ ಸಮಸ್ಯೆ ಆಗುತ್ತೆ. ಇಲ್ಲಿ ಅಂಥ ಏನೂ ಸಮಸ್ಯೆ ಇಲ್ಲ. ಸದ್ಯಕ್ಕೆ ಕಾಲಿಗೆ ನೋವು ಉಪಶಮನ ಆಗಬೇಕು. ನಿದ್ದೆ ಬರಲಿ ಅಂತ ಸಣ್ಣದೊಂದು ಮಾತ್ರೆ ಕೊಡ್ತೀನಿ. ಗಾಬರಿ ಆಗುವುದೇನೂ ಬೇಡ' ಎಂದರು.

ಡಾಕ್ಟರ್ ಹೇಳಿದ್ದನ್ನು ಕೇಳಿಸಿಕೊಂಡ ತಿಮ್ಮನಾಯ್ಕರಿಗೆ ಅಷ್ಟೇ ಸಾಕಾಯಿತು. ಮನಸ್ಸಿಗೆ ನೆಮ್ಮದಿ ಮೂಡಿತು. 'ನಾನು ಅಲ್ಲೇ ಹೇಳಿದ್ನೆಲ್ಲ. ಏನೂ ಆಗಿಲ್ಲ ಅಂತ..' ಎಂದು ವಿಶ್ವಾಸದಿಂದ ತಪಾಸಣೆಯ

ಮೇಜಿನಿಂದ ಏಳಲು ಯತ್ನಿಸಿದರು. ಅದನ್ನು ಗಮನಿಸಿದ ಡಾಕ್ಟರು 'ಅವಸರ ಮಾಡಬೇಡಿರಿ ಯಜಮಾನರೇ, ಇದ್ದಾರಲ್ಲ ನಿಮ್ಮ ಮೊಮ್ಮಗ ಮತ್ತು ಇವರು..' ಎಂದು ಹೇಳಿದರು. 'ನಿಮ್ಮ ಮಗ ಅದೇ ಪಿಚ್ಚರ್ ತಗೀತಾರಲ್ಲ.. ಬರ್ತಾರ ಯಾವಾಗಾದರೂ..?' ಎಂದು ವಿಚಾರಿಸಿದರು. ರಾಮಣ್ಣನ ಹೆಸರು ಕೇಳುತ್ತಿದ್ದಂತೆ, ತಿಮ್ಮನಾಯ್ಕರು ಉದಾಸೀನದಿಂದ 'ಅವರಿಗೆ ಪುರುಸೊತ್ತು ಸಿಗಬೇಕಲ್ಲ ಸಾರ್' ಎಂದು ರಾಗ ಎಳೆದರು. ಮಗನ ಬಗ್ಗೆ ಬಹುವಚನ ಬಳಸಿ ಮಾತಾಡಿದ್ದರ ಹಿಂದೆ ಅಸಮಾಧಾನದ ಛಾಯೆಯನ್ನು ಗ್ರಹಿಸಿದ ವೈದ್ಯರು ಆ ವಿಷಯವನ್ನು ಲಂಬಿಸಲಿಲ್ಲ. ಆಸ್ಪತ್ರೆ ಕಾವಲುಗಾರನಿಗೂ, ಆ ವೇಳೆಗೆ ತಪಾಸಣೆಯ ಕೋಣೆಯ ಬಳಿ ತಡವಾಗಿ ಬಂದುದಕ್ಕೆ ತಲೆ ತಗ್ಗಿಸಿಕೊಂಡು ನಿಂತಿದ್ದ ನರ್ಸ್‌ಗೂ ಇನ್ನೇನೋ ಸೂಚನೆ ಕೊಟ್ಟು ತಮ್ಮ ನಿವಾಸಕ್ಕೆ ವಾಪಸಾದರು.

ಲಿಂಗರಾಜು, ವಾಸನಾಯ್ಕರ ಕೈಯಾಸರೆಯಲ್ಲಿ ತಿಮ್ಮನಾಯ್ಕರು ಕಾರಿನ ಬಳಿ ಸಾರಿ ಹಿಂದಿನ ಸೀಟಿನಲ್ಲಿ ಕುಳಿತುಕೊಂಡರು. ಅವರ ಪಕ್ಕದಲ್ಲಿಯೇ ಲಿಂಗರಾಜು ಕುಳಿತುಕೊಂಡ. ಬಾಡಿಗೆ ಕಾರಿನ ಚಾಲಕ ಏನನ್ನೂ ಮಾತನಾಡದೆ ಊರಿನತ್ತ ತಿರುಗಿಸಿದ. ಡಾಕ್ಟರ್ ಹೇಳಿದ ಭರವಸೆಯ ಮಾತಿನಿಂದ ಉತ್ತೇಜಿತನಾದ ಲಿಂಗರಾಜು ಕಾರನ್ನು ಪೇಟೆಯ ಕಿಣಿ ಹೋಟಲ ಬಳಿ ನಿಲ್ಲಿಸಲು ಹೇಳಿದನು. 'ಅಜ್ಜ, ಸ್ವಲ್ಪ ಹಾಲು ಕುಡಿತೀಯ, ಇಲ್ಲ ಸ್ಪೆಷಲ್ ಕಾಫಿ ತಂದು ಕೊಡಲಾ' ಎಂದು ಉಪಚರಿಸುತ್ತ ಅಲ್ಲಿ ಕೆಳಕ್ಕೆ ಇಳಿದನು. ಅವನ ಸೂಚನೆಯಂತೆ ವಾಸನಾಯ್ಕರೂ ಕೆಳಕ್ಕೆ ಇಳಿದರು. ಕಾರಿನ ಚಾಲಕನಿಗೆ ಏನನ್ನಾದರೂ ಕುಡಿಯಲೇಬೇಕು ಎಂಬ ಒತ್ತಡ ಇದ್ದುದರಿಂದ ಅವನು ಇವನ ಕರೆಯನ್ನು ನಿರೀಕ್ಷೆ ಮಾಡದೆ ಹೋಟಲು ಪ್ರವೇಶಿಸಿದ್ದನು.

ಮೂವರೂ ನಿರಾಳವಾಗಿ ಉಪಾಹಾರ ಮುಗಿಸಿ, ಕಾರಿನಲ್ಲಿಯೇ ಕುಳಿತಿದ್ದ ತಿಮ್ಮನಾಯ್ಕರಿಗೆ ಹಾಲು ಕುಡಿಸಿ ಊರಿನತ್ತ ಮುಖ ಮಾಡಿದರು. ಪೇಟೆ ಬಿಡುತ್ತಿದ್ದಂತೆ ಅಜ್ಜನ ಪಕ್ಕ ಕುಳಿತಿದ್ದ ಲಿಂಗರಾಜ 'ನೀವು ಡಾಕ್ಟರ ಹತ್ರ ನಮ್ಮ ಚಿಗಪ್ಪನ ವಿಷ್ಯ ಹೇಳಿದ್ದು ನನಗೇನೂ ಸರಿ ಕಾಣಿಸಲಿಲ್ಲ ಮಾವ' ಎಂದು ಮುಂದಿನ ಸೀಟಿನಲ್ಲಿ ಕುಳಿತಿದ್ದ ವಾಸನಾಯ್ಕರ ಕಡೆ ಕತ್ತು ಚಾಚಿ ಆಕ್ಷೇಪಿಸಿದನು. 'ಅದರಲ್ಲಿ ಏನು ತಪ್ಪೋ ಮಾರಾಯ. ದೊಡ್ಡ ಮನುಷ್ಯರ ಕಡೆಯೋರು ಅಂತ ಗೊತ್ತಾದರೆ ಸರ್ಕಾರಿ ಅಧಿಕಾರಿಗಳು ಉದಾಸೀನ ಮಾಡಾದಿಲ್ಲ ಅಂತ ಹೇಳ್ದೆ ಅಷ್ಟೆ. ಎಷ್ಟಾದರೂ ಅವನು ನಿಮ್ಮ ಚಿಗಪ್ಪನೇ ಅಲ್ವೇ..' ಎಂದು ವಾಸನಾಯ್ಕರು ಸಮಜಾಯಿಶಿ ಕೊಟ್ಟರು. 'ಅವರ ಹೆಸರು ಹೇಳಿದರೆ ಕೆಲಸ ಆಗಾದಾದ್ರೆ ಸರಿ ಮಾವ. ಇಲ್ಲಿನ ಡಾಕ್ಟರಿಗೆ ಅವರ ವಿಷ್ಯಾನೋ ಗೊತ್ತಿರ್ಲಿಲ್ಲ. ಸುಮ್ಮನೆ ನೀವು ಅಂಗೈ ತೋರಿಸಿದ ಹಾಗೆ ಆಯ್ತು. ಅಷ್ಟೆ' ಎಂದ. 'ಗೊತ್ತಿಲ್ದೆ ಏನೋ.. ಪೇಪರ್‌ನಲ್ಲಿ ನೋಡಿದೀನಿ ಅಂತ ಅವರೇ ಹೇಳಿದರಲ್ಲ.. ಅಷ್ಟಕ್ಕೂ ಅವನು ನಿಮ್ಮ ಊರಿನ ಹೆಸರನ್ನೇ ಇಟ್ಕೊಂಡಿದಾನಲ್ಲ. ಇಲ್ಲದೆ ಇದ್ದಿದ್ರೆ ನಿಮ್ಮ ಹಳ್ಳೂರಿನ ಹೆಸರು ಯಾರಿಗೆ ಗೊತ್ತಾಗ್ತಿತ್ತು. ಹಳ್ಳೂರು ರಾಮಣ್ಣ ಅಂದ್ರೆ ಸಾಕು, ಒಂದು ಕ್ಷಣ ಜನ ಯೋಚ್ನೆ ಮಾಡ್ತಾರೆ.. ನನಗೂ ಅವನ್ನ ನೋಡಿ ಎಷ್ಟೋ ವರ್ಷ ಆದ್ವು..' ಎಂದು ಅವರು ಸಮರ್ಥನೆ ನೀಡತೊಡಗಿದರು. ಅದನ್ನು ಮುಂದುವರಿಸಲು ಲಿಂಗರಾಜ ಇಷ್ಟಪಡಲಿಲ್ಲ. ಅವನು ಸುಮ್ಮನಾಗಿದ್ದನ್ನು ಗಮನಿಸಿದ ವಾಸನಾಯ್ಕರೂ ಮಾತಾಡಲಿಲ್ಲ. ಪೇಟೆಯಿಂದ ಹತ್ತು ಕಿಲೋಮೀಟರ್ ದೂರದ ಮನೆ ಸೇರುವಷ್ಟರಲ್ಲಿ ಶಿವಮೊಗ್ಗಕ್ಕೆ ಹೋಗಿದ್ದ ಯಲ್ಲನಾಯ್ಕರು ಬಂದು ಬಟ್ಟೆ ಬದಲಿಸಿ ಜಗುಲಿಯಲ್ಲಿ ಕುಳಿತಿದ್ದರು. ಪೇಟೆಗೆ ಹೋಗಿದ್ದವರ ನಿರೀಕ್ಷೆಯಲ್ಲಿಯೇ ಇದ್ದರು. ತಿಮ್ಮನಾಯ್ಕರನ್ನು ಹಿಂದಿನಂತೆಯೇ ನಿಧಾನವಾಗಿ ನಡೆಸಿಕೊಂಡು ಜಗುಲಿ ಪಕ್ಕದ ಕೋಣೆಯಲ್ಲಿ ಮಲಗಿಸಲು ತಾವೂ ಕೈಹಾಕಿದ್ದಲ್ಲದೆ, ಮಗನಿಂದ ಡಾಕ್ಟರು ಹೇಳಿದ್ದುದನ್ನು ಕೇಳಿದರು. 'ಅವ್ವ ಹೇಳಿದ್ದು ಕೇಳಿ ತುಂಬ

ಗಾಬರಿಯಾಗಿತ್ತು ಭಾವ, ಸದ್ಯ ಹೆಚ್ಚೇನೂ ಅನಾಹುತ ಆಗಲಿಲ್ಲವಲ್ಲ' ಎಂದು ವಾಸನಾಯ್ಕರೊಂದಿಗೆ ಹೇಳಿ ಸಮಾಧಾನಪಟ್ಟುಕೊಂಡರು.

ತಿಮ್ಮನಾಯ್ಕರಿಗೆ ಹೆಚ್ಚಿನ ಅನಾಹುತ ಆಗಲಿಲ್ಲವೆಂಬ ಸಮಾಧಾನ ಮೂಡಿದ್ದರಿಂದ ಮನೆಯಲ್ಲಿ ಗೆಲುವು ನೆಲೆಸಿತು. ಮನೆಯ ಅಳಿಯ ವಾಸನಾಯ್ಕರು ಈಚೆಗೆ ಬಂದಿರಲಿಲ್ಲ. ಅವರ ಗೌರವಾರ್ಥ ಔತಣದ ಸಿದ್ಧತೆಯೂ ನಡೆಯಿತು. ವಾಡಿಕೆಯಂತೆ ಒಡ್ಡಿಯಿಂದ ಸಳಗವೊಂದನ್ನು ಹೊರತೆಗೆದು ಸ್ವಚ್ಛಗೊಳಿಸುವ ಕೆಲಸಕ್ಕೆ ಲಿಂಗರಾಜನೇ ಮುಂದಾದನು. ಅವ್ವನ ನೆರವಿನಿಂದ ಅದನ್ನು ಕೊಯ್ದು ತಿಪ್ಪುಳ ತೆಗೆದು ಬೆಂಕಿಯಲ್ಲಿ ಸುಟ್ಟು ನೀರಿನಲ್ಲಿ ಸ್ವಚ್ಛಗೊಳಿಸಿ ಒಳಮನೆಯಲ್ಲಿ ಬಾಳೆಎಲೆಯ ಮೇಲೆ ಹದವಾದ ತುಂಡುಗಳಾಗಿ ಕೊಚ್ಚುವುದರಲ್ಲಿ ನಿರತನಾದನು. ಇತ್ತ ಜಗುಲಿಯಲ್ಲಿ ಯಲ್ಲನಾಯ್ಕರು ವಾಸನಾಯ್ಕರೊಂದಿಗೆ ಮಾತಿನಲ್ಲಿ ತೊಡಗಿದ್ದರು. ತಿಮ್ಮನಾಯ್ಕರ ಆರೋಗ್ಯ ಸ್ಥಿತಿಯಿಂದ ಆರಂಭವಾದ ಮಾತು ಅವತ್ತಿನ ಶಿವಮೊಗ್ಗ ಭೇಟಿ, ವಾಸನಾಯ್ಕರ ಮನೆ ಬೇಸಾಯದ ಗತಿ ಸ್ಥಿತಿಯ ವಿವರಗಳನ್ನು ತಿಳಿಯುವವರೆಗೆ ವಿಸ್ತರಿಸಿತ್ತು. ತಿಮ್ಮನಾಯ್ಕರ ಮನೆಯಂತೆ ಬೇಸಾಯವೇ ಮುಖ್ಯ ಕಸುಬಾಗಿದ್ದ ವಾಸನಾಯ್ಕರು ತಮ್ಮ ಮನೆ ವಿಚಾರಗಳನ್ನೂ ಹೇಳಿಕೊಂಡರು. ಜಗುಲಿಯಲ್ಲಿ ನೆಂಟ ಭಾವರಿಬ್ಬರೂ ಬೇಸಾಯಕ್ಕೆ ಸಂಬಂಧಿಸಿ ಮಾತಿನಲ್ಲಿ ತೊಡಗಿದ್ದುದನ್ನು ಕೇಳುತ್ತ ಹಾಸುಗೆಯಲ್ಲಿ ಮಲಗಿದ್ದ ತಿಮ್ಮನಾಯ್ಕರು ನಿಧಾನವಾಗಿ ಎದ್ದು ಕುಳಿತು ಅಲ್ಲಿಂದಲೇ ಮಾತಿನಲ್ಲಿ ಸೇರಿಕೊಂಡರು.

ಕೋಳಿ ಸಾರು, ಅದಕ್ಕೆ ಹೊಂದಿಕೆಯಾಗಿ ಅಕ್ಕಿ ರೊಟ್ಟಿಯನ್ನು ಮಾಡಿದ ಮೇಲೆ ಎಲ್ಲರನ್ನೂ ಊಟಕ್ಕೆ ಎಬ್ಬಿಸಿದ ಲಿಂಗರಾಜು. ಯಲ್ಲನಾಯ್ಕರ ಜೊತೆಗೆ ಕುಳಿತಿದ್ದ ವಾಸನಾಯ್ಕರು ಕೈ ತೊಳೆದುಕೊಳ್ಳಲು ಎದ್ದರು. ಇಬ್ಬರೂ ಚೌಕಿ ಕಡಿಮಾಡಿಗೆ ಹೊಂದಿಕೊಂಡ ಬಚ್ಚಲು ಮನೆಯಲ್ಲಿ ಬಿಸಿ ನೀರಿನಲ್ಲಿ ಕೈಕಾಲು ತೊಳೆದುಕೊಂಡು ಬಂದರು. ಕೋಣೆಯಲ್ಲಿ ಮಂಚದ ಮೇಲೆ ಕುಳಿತಿದ್ದ ತಿಮ್ಮನಾಯ್ಕರಿಗೆ ಮಂಚದ ಪಕ್ಕದಲ್ಲಿ ಊಟಕ್ಕೆ ಚಿಕ್ಕದೊಂದು ಕಾಲುಮಣೆ ಇತ್ತು. ನಿತ್ಯವೂ ಅದರ ಮೇಲೆ ತಟ್ಟೆ ಇಟ್ಟುಕೊಂಡು ಊಟ ಮುಗಿಸುತ್ತಿದ್ದರು. ತಾವೂ ನಂಟರ ಜೊತೆ ಒಳಮನೆಯಲ್ಲಿ ಬೆಂಕಿ ಒಲೆಯ ಹಿತಕರ ವಲಯದಲ್ಲಿ ಕುಳಿತುಕೊಳ್ಳಲು ಬಯಸಿದರೂ ಬಲಗಾಲಿನ ನೋವು ಇದ್ದ ಕಾರಣ ಅದಕ್ಕೆ ಯಾರೂ ಒಪ್ಪಲಿಲ್ಲ. 'ಹಂಗಾರೆ ನೀವು ಒಳಗೆ ಹೋಗಿ ಊಟ ಮಾಡಿ' ಎಂದು ಹೇಳಿ ಹಾಸುಗೆಯ ಮೇಲೆ ಒರಗಿಕೊಂಡರು. ಅವರ ಉಪಚಾರಕ್ಕೆ ಮಗಳು ಈರಮ್ಮ ಬಂದಿದ್ದವಳು ಅಡುಗೆ ಮನೆಯಿಂದ ದೊಡ್ಡ ತಟ್ಟೆಯಲ್ಲಿ ಬಿಸಿ ರೊಟ್ಟಿಯನ್ನೂ ಕೋಳಿ ಸಾರನ್ನೂ ಹಾಕಿಕೊಂಡು ತಂದು ಊಟ ಮಾಡಿಸುವ ಸನ್ನಾಹದಲ್ಲಿದ್ದಳು. ನಂಟರನ್ನು ಕರೆದುಕೊಂಡು ಯಲ್ಲನಾಯ್ಕರು ಅಡುಗೆ ಮನೆಯನ್ನು ಹೊಕ್ಕರು.

ವಿಶಾಲವಾಗಿದ್ದ ಅಡುಗೆ ಮನೆಯ ಒಂದು ಬದಿಗೆ ಆರು ಜನ ಒಟ್ಟಿಗೆ ಕುಳಿತು ಊಟ ಮಾಡುವಷ್ಟು ವಿಶಾಲವಾದ ಜಾಗ ಇತ್ತು. ಯಲ್ಲನಾಯ್ಕರ ಮಡದಿ ಪಾರ್ವತಮ್ಮ ಕಟ್ಟಿಗೆ ಒಲೆಯ ಪಕ್ಕದಲ್ಲಿ ಕುಳಿತು ಅಕ್ಕಿ ರೊಟ್ಟಿಯನ್ನು ಮಾಡಿ ಹಂಚಿನ ಮೇಲೆ ಬೇಯಿಸಿ ನಂತರ ಕೆಂಡದ ಮೇಲೆ ಸುಟ್ಟು ಕೊಡುತ್ತಿದ್ದರು. ತಿಮ್ಮನಾಯ್ಕರ ಉಪಚಾರಕ್ಕೆ ಮಗಳು ಈರಮ್ಮ ನಿಂತಿದ್ದರಿಂದ ಗಂಗಮ್ಮನೇ ನಂಟರಿಗೆ ಬಡಿಸಲು ನಿಂತರು. ಲಿಂಗರಾಜ ಕಾಲುಮಣೆಗಳ ಎದುರು ಊಟದ ತಟ್ಟೆಗಳನ್ನು ಇಟ್ಟು ಬಡಿಸಲು ನೆರವಾಗುತ್ತಿದ್ದನು. 'ನೀನು ಕೂತುಗಾ ತಮ್ಮ' ಎಂದು ಗಂಗಮ್ಮನೇ ಅವನನ್ನು ಒತ್ತಾಯಪಡಿಸಿ ಮೂವರ ತಟ್ಟೆಗೂ ಬಿಸಿಬಿಸಿ ರೊಟ್ಟಿಯನ್ನು ಬಡಿಸಿದರು. ಆ ವೇಳೆಗೆ ರೊಟ್ಟಿ ಸುಟ್ಟು ಮುಗಿಸಿದ್ದ ಪಾರ್ವತಮ್ಮ ತಪ್ಪಲೆಯಲ್ಲಿ ಹಬೆಯಾಡುತ್ತಿದ್ದ ಕೋಳಿ

ಸಾರನ್ನು ತಂದು ಮೂವರಿಗೂ ಬಡಿಸಿದಳು. ಔಪಚಾರಿಕ ಕುಶಲ ಸಂಭಾಷಣೆಯ ಮಧ್ಯೆ 'ಅಂತೂ ಮಾವಯ್ಯನ ಹೆಳೆಯಲ್ಲಿ ನೀನು ಬಂದಂಗಾತು ಅಣ್ಣಯ್ಯ' ಎಂದು ಆಕೆ ವಾಸನಾಯ್ಕರನ್ನು ಉದ್ದೇಶಿಸಿ ಹೇಳಿದಾಗ 'ಬರಲೇಬೇಕಲ್ಲ ಮಾರಾಯ್ತಿ, ಈಗೀಗ ಎಂತ ಸುದ್ದಿ ಬಂದ್ರೂ ಉದಾಸ್ನ ಮಾಡಂಗಿಲ್ಲ' ಎಂದು ಹೇಳುತ್ತಾ ರೊಟ್ಟಿಯನ್ನು ಮುರಿದು ಸಾರಿನಲ್ಲಿ ಹೊರಳಿಸತೊಡಗಿದರು. ಅಕ್ಕಿ ರೊಟ್ಟಿ, ಕೋಳಿ ಸಾರು ತಟ್ಟೆಯ ಮೇಲೆ ಬಿದ್ದಾಗ ಯಲ್ಲನಾಯ್ಕರು 'ತಮ್ಮ, ಎಲ್ಲಾ ಮುಗಿದು ಹೋಯ್ತೇನೋ..' ಎಂದು ಇಂಗಿತವಾಗಿ ಲಿಂಗರಾಜನತ್ತ ನೋಡಿದರು. ಅದನ್ನು ತಕ್ಷಣ ಗ್ರಹಿಸಿದ ಅವನು 'ಇರಬೇಕು ಅಂತ ಕಾಣುತ್ತೆ' ಎಂದು ತಕ್ಷಣವೇ ಎದ್ದು ಒಳಮನೆಯ ಕಪಾಟಿನಲ್ಲಿ ಇಟ್ಟಿದ್ದ ಉದ್ದನೆಯ ಸೀಸೆಯೊಂದನ್ನು ಹಿಡಿದು ಬಂದನು. ಎರಡು ಗಾಜಿನ ಲೋಟಗಳನ್ನು ತೊಳೆದು ತಂದು ಅವರಿಬ್ಬರ ತಟ್ಟೆಯ ಬಳಿ ಇಟ್ಟು ವರ್ಣಮಯ ದ್ರವವಿದ್ದ ಸೀಸೆಯ ಮುಚ್ಚಳ ತೆಗೆದನು. 'ಸ್ವಲ್ಪ ಸ್ವಲ್ಪ ಮಾರಾಯ.. ನಾನು ಜಾಸ್ತಿ ತಗಾಳದಿಲ್ಲ..' ಎಂದು ವಾಸನಾಯ್ಕರು ಹೇಳಿದ್ದನ್ನು ಔಪಚಾರಿಕವೆಂದು ತಿಳಿದ ಅವನು ಉದಾರವಾಗಿಯೇ ಅವರ ಲೋಟಕ್ಕೆ ಸುರಿದನು. ಅದಕ್ಕೆ ನೀರನ್ನು ಬೆರೆಸಿಕೊಂಡು ಭಾವ ನಂಟರಿಬ್ಬರೂ ಒಮ್ಮೆಗೆ ಎತ್ತಿದರು. ಯಲ್ಲನಾಯ್ಕರು ಒಂದೆರಡು ಗುಟುಕು ಹೀರಿ ಲೋಟವನ್ನು ತಟ್ಟೆಯ ಪಕ್ಕದಲ್ಲಿ ಇರಿಸಿಕೊಂಡರೆ ವಾಸನಾಯ್ಕರು ಎತ್ತಿದ ಲೋಟವನ್ನು ಪೂರ್ತಿ ಮುಗಿಸಿಯೇ ಕೆಳಗಿಟ್ಟು ಎಡಗೈಯಿಂದ ಎರಡೂ ಕಡೆ ಒರೆಸಿಕೊಂಡರು.

ರೊಟ್ಟಿ ಮುಗಿಯುತ್ತಿದ್ದಂತೆ ತಟ್ಟೆಗೆ ಅನ್ನ ಬಡಿಸಿಕೊಂಡ ವಾಸನಾಯ್ಕರು ಬಾಯಿಗೆ ಸಿಕ್ಕಿದ ಬಿಡುವಿನಲ್ಲಿ 'ಅಂತೂ ಮಗನ್ನ ನಿಮ್ಮಂತೆ ಅಪ್ಪಟ ರೈತಾಪಿಗೆ ಇಳಿಸಿಬಿಟ್ಟಿರಿ. ಲಿಂಗರಾಜು ಪ್ರಯತ್ನ ಮಾಡಿದ್ದರೆ ಕೆಲಸಕ್ಕೆ ಹೋಗಬಹುದಿತ್ತಲ್ಲ..' ಎಂದರು. ಅದು ಮಾತು ಮುಂದುವರಿಸಲು ಕೊಟ್ಟ ಸೂಚನೆಯಾಗಿ ಯಲ್ಲನಾಯ್ಕರು 'ಅವನಿಗೆ ಎಲ್ಲಾ ಬಿಟ್ಟಿದ್ದೀನಿ. ನಮ್ಮ ರಾಮಣ್ಣನ ಮನೆಗೇ ಓದಲು ಕಳಿಸಿದ್ದೆ. ಅಲ್ಲಿ ಇದ್ದನಲ್ಲ ಹತ್ತು ವರ್ಷ. ಅವನಿಗೆ ಬೆಂಗಳೂರು ಅಂದರೆ ವಾಕರಿಕೆ ಬರೋವಷ್ಟು ಬೇಜಾರಂತೆ. ಊರಲ್ಲೇ ಕೆಲಸ ಮಾಡಿದರೆ ನೆಮ್ಮದಿಯಿಂದ ಇರಬಹುದು ಅಂತ ತೀರ್ಮಾನ ಮಾಡಿ ಬಂದು ಬಿಟ್ಟ. ಡಿಪ್ಲೊಮಾ ಮಾಡಿದ್ದಾನೆ ಹೌದು. ಇಲ್ಲಿ ಅಪ್ಪಯ್ಯ, ಅವ್ವ ಇಬ್ಬರೂ ಇದ್ದಾರಲ್ಲ. ಇರೋದು ಎರಡು ಎಕರೆ ಗದ್ದೆ, ಅದರಲ್ಲೇ ಅಪ್ಪಯ್ಯ ಅಡಿಕೆ ತೋಟ ಮಾಡಿದ. ಅಕ್ಕಪಕ್ಕ ಒತ್ತುವರಿ ಮಾಡಿಕೊಂಡು ಏನೇನೋ ಮಾಡಬೇಕಾಗಿದೆ. ಅವನು, ರಾಮಣ್ಣ, ಊರು ಕಡೆ ಸಂಪರ್ಕ ಕಳಕೊಂಡು ಬಹಾಳ ವರ್ಷವೇ ಆಯ್ತಲ್ಲ.....' ಎಂದರು ಸುದೀರ್ಘವಾಗಿ.

'ಹೌದಲ್ಲ, ಬಾಳ ವರ್ಷ ಇವನು ರಾಮಣ್ಣನ ಮನೇಲೇ ಇದ್ನಲ್ಲ ಇವನು.. ನಾವೆಲ್ಲ ಇವನೂ ಅವನ ಹಾಗೆ ಬೆಂಗಳೂರಲ್ಲೇ ಕೆಲಸ ಹಿಡಿತಾನೆ ಅಂದುಕೊಂಡಿದ್ದೊ. ಈಗೇನು ಕಡಿಮೆ ಆಗಿರೋದು. ದೇವರು ಕೊಟ್ಟ ಅನುಕೂಲ ಇದ್ದೇ ಇದೆ. ಇರಲಿ ಬಿಡಿ. ಆದರೆ, ಮಾವಯ್ಯ, ಅತ್ತೆಮ್ಮನ್ನ ನೋಡೋಕಾದ್ರೂ ರಾಮಣ್ಣ ಬಂದು ಹೋಗ್ತಾ ಇರಬೇಕಿತ್ತು..' ಎಂದು ಹೇಳುತ್ತಾ ವಾಸನಾಯ್ಕರು ಎರಡನೇ ಸಲಕ್ಕೆ ಲಿಂಗರಾಜು ಕಡೆ ನೋಡಿದರು. ಅದನ್ನು ಗ್ರಹಿಸಿದ ಲಿಂಗರಾಜು ಸೀಸೆಯಿಂದ ಎರಡನೇ ಸಲಕ್ಕೆ ಬೊಗ್ಗಿಸಿದನು. ಅದಕ್ಕೆ ಸ್ವಲ್ಪವೇ ನೀರು ಹಾಕಿಸಿಕೊಂಡು ಒಂದೇ ಗುಟುಕಿಗೆ ಪೂರೈಸಿ ತಟ್ಟೆಯಲ್ಲಿದ್ದ ಅನ್ನಕ್ಕೆ ಹುಳಿಸಾರನ್ನು ಕೇಳಿ ಹಾಕಿಸಿಕೊಂಡರು.

ಸಂತೃಪ್ತಿಯಿಂದ ಊಟ ಮುಗಿಸಿ ಜಗುಲಿಗೆ ಬಂದ ಅವರಿಗೆ ಬಾಳೆ ಹಣ್ಣಿನ ಚಿಪ್ಪು ಮತ್ತು ಎಲೆ ಅಡಿಕೆ ತಟ್ಟೆ ಎದುರಾಯಿತು. ಒಂದೊಂದು ಬಾಳೆ ಹಣ್ಣನ್ನು ತಿಂದವರು ಬೆಟ್ಟೆ ಅಡಿಕೆಯನ್ನು ಆಯ್ದುಕೊಂಡು ಎಲೆಗೆ ತೆಳುವಾಗಿ ಸುಣ್ಣ ಲೇಪಿಸಿ ಸುರುಳಿಯಾಗಿ ಸುತ್ತಿ ಬಾಯಲ್ಲಿ ಅಡಕಿಕೊಂಡರು. ಅಡಿಕೆ ಮತ್ತು ಸುಣ್ಣಮಿಶ್ರಿತ

ಎಲೆಯೊಂದಿಗೆ ಸೇರಿದ ಲಾಲಾರಸ ಹಣೆ, ಕುತ್ತಿಗೆಯಲ್ಲಿ ಬೆವರು ಬರುವಷ್ಟು ಸಂವೇದಿಯಾಯಿತು. 'ಣಾಣು ಟಂಬಾಕು ಹಾಕಾಡಿಳ್ಳ' ಎಂದು ವಾಸನಾಯ್ಕರು ಬಾಯಲ್ಲಿ ತುಂಬಿಕೊಳ್ಳುತ್ತಿದ್ದ ತಾಂಬೂಲರಸವನ್ನು ಸವಿದರು. ಸ್ವಲ್ಪ ಹೊತ್ತಿಗೆ ತಾಂಬೂಲ ಚರ್ವಣವನ್ನು ಮುಗಿಸಿ ನೀರಿನಿಂದ ಬಾಯಿ ಮುಕ್ಕಳಿಸಿಕೊಂಡರು. ನಂಟರ ತಾಂಬೂಲ ಸೇವೆ ಮುಗಿಯುವ ಹೊತ್ತಿಗೆ ಪಕ್ಕದ ಕೋಣೆಯಲ್ಲಿ ಮಲಗಲು ಹಾಸಿಗೆ ಸಿದ್ಧವಾಗಿದ್ದನ್ನು ಲಿಂಗರಾಜ ತಿಳಿಸಿದನು. ವರ್ಣಮಯ ದ್ರಾವಣದ ಪ್ರಭಾವದಿಂದ ಸಂತೃಪ್ತರಾದ ವಾಸನಾಯ್ಕರು 'ಬ್ಯಾಡ ತಮ್ಮ, ಬಾಡಿಗೆ ಕಾರು ಮಾಡಿಕ್ಯಂಡು ಬಂದಿದೀವಿ. ಎಷ್ಟು ದೂರ.. ಹದಿನೈದು ಮೈಲು ಅಷ್ಟೆ. ನಿಮ್ಮತ್ರೆದು ಊಟ ಆದ ಕೂಡ್ಲೆ ಹೊಂಟು ಬಿಡ್ತೀವಿ. ನಮ್ಮ ಡ್ರೈವರ್‌ಗೆ ಊಟಕ್ಕೆ ಹಾಕಿ ಬಿಡು' ಎಂದರು. ಡ್ರೈವರ್ ಎಲ್ಲರಿಗಿಂತಲೂ ಮೊದಲೇ ಊಟ ಮಾಡಿದ್ದನು. ಅಷ್ಟು ಹೊತ್ತಿಗೆ ಈರಮ್ಮನೂ ಊಟ ಮುಗಿಸಿ ಬಂದರು. ಮನೆಯಲ್ಲಿದ್ದ ಎಲ್ಲರಿಗೂ ಜ್ವಾಕೆ ಜ್ವಾಕೆ ಅಂತ ಹೇಳಿ ತಂದಿದ್ದ ಬಾಡಿಗೆ ಕಾರಿನಲ್ಲಿ ಕುಳಿತರು. ಹೊರಡುವ ಮೊದಲು ಯಲ್ಲನಾಯ್ಕರತ್ತ ತಿರುಗಿ 'ಇಂಥ ಹೊತ್ತಲ್ಲಾದ್ರೂ ರಾಮಣ್ಣ ಊರಿಗೆ ಬಂದು ಹೋಗ್ತಾನೇನೋ ಸುದ್ದಿ ಕಳಿಸಿ ನೋಡಿ. ಎಷ್ಟೆಂದರೂ ಋಣಾನುಬಂಧ ಕಳಕೋಬಾರದು ನೋಡಿ' ಎಂದವರು 'ಎಲ್ಲಿ ನಿಮ್ಮ ನಾಗರಾಜು. ಹೊಸನಗರದ ಹತ್ರ ಜಯನಗರ ಶಾಲೆಗೆ ವರ್ಗವಾಗಿತ್ತು ಅಂತ ಕೇಳಿದ್ದೆ, ಅಲ್ಲೇ ಮನೆ ಮಾಡಿದಾನೇನೋ..' ಎಂದು ಕೇಳಿದರು. 'ಅಲ್ಲೇ ಬಾಡಿಗೆ ಮನೆ ಮಾಡಿ ಸಂಸಾರ ಕರ್ಕೊಂಡು ಹೋಗಿದಾನೆ. ಎರಡು ದಿನ ಕೂಡಕೂಡ ರಜೆ ಸಿಕ್ಕಿದಾಗ ಬತ್ತಾನೆ' ಎಂದು ಯಲ್ಲನಾಯ್ಕರು ಹೇಳಿದರು. ಮತ್ತೊಮ್ಮೆ 'ಬರ್ತೇವೆ ಬರ್ತೇವೆ' ಎಂದು ಹೇಳುತ್ತಾ ಅವರು ಹಿಂದಿನ ಸೀಟಿನ ಬಾಗಿಲು ತೆಗೆದು ಈರಮ್ಮನನ್ನು ಮೊದಲು ಹತ್ತಿಸಿದರು. ನಂತರ ಹತ್ತಿ ಬಾಗಿಲು ಹಾಕಿಕೊಂಡರು. ಮನೆಯವರೆಲ್ಲ ಕಾರು ಕತ್ತಲಿನಲ್ಲಿ ಕಣ್ಮರೆಯಾಗುವವರೆಗೂ ನಿಂತು ನಂತರ ಒಳಬಂದು ಮುಂಬಾಗಿಲು ಹಾಕಿಕೊಂಡರು.

* * *

ಅಧ್ಯಾಯ–2

# ಯಲ್ಲನಾಯ್ಕರ ಸ್ವಗತ

ವಾಸನಾಯ್ಕರು ರಾತ್ರಿಯೇ ಹೊರಟು ಹೋದರೂ ಅವರು ಆಡಿದ್ದ ಮಾತುಗಳು ಯಲ್ಲನಾಯ್ಕರಲ್ಲಿ ನೆನಪಿನ ತರಂಗಗಳನ್ನು ಎಬ್ಬಿಸತೊಡಗಿದವು. ಮಲಗುವ ಕೋಣೆಗೆ ಹೋದರು. ಅಂಗಿ ತೆಗೆಯದೆ ಹಾಗೆಯೇ ಮಂಚದ ಮೇಲೆ ಉರುಳಿಕೊಂಡರು. ರಾಮಣ್ಣನ ಪ್ರಸ್ತಾಪ ಅವರನ್ನು ಬಾಲ್ಯದ ದಿನಗಳಿಗೆ ಕೊಂಡೊಯ್ದಿತು. ತನಗಿಂತ ನಾಲ್ಕು ವರ್ಷ ಚಿಕ್ಕವನಾಗಿದ್ದ ರಾಮಣ್ಣನನ್ನು ಊರಿನ ಶಾಲೆಗೆ ಅಪ್ಪಯ್ಯ ಕಳಿಸುವಾಗ ಸಾಹಸ ಪಡುತ್ತಾ ಇದ್ದುದು ನೆನಪಿಗೆ ಬಂತು. ಮನೆಯಿಂದ ಎರಡು ಕಿಲೋಮೀಟರ್ ದೂರವಿದ್ದ ಏಕೋಪಾಧ್ಯಾಯ ಶಾಲೆಗೆ ಅವನು ಸೇರಿದಾಗ ತಾನು ಆ ಶಾಲೆಯಿಂದ ನಿರ್ಗಮಿಸಿ ಊರಿಂದ ಹತ್ತು ಕಿಲೋಮೀಟರ್ ದೂರದ ಪೇಟೆಯ ಮಾಧ್ಯಮಿಕ ಶಾಲೆಗೆ ಸೇರಿದ್ದ. ಆದ್ದರಿಂದ ಅಕ್ಕಪಕ್ಕದ ಮನೆಯ ಹುಡುಗರೊಂದಿಗೆ ರಾಮಣ್ಣನನ್ನು ಕಳಿಸುತ್ತಿದ್ದರು. ರಾಮಣ್ಣ ಆರಂಭದಲ್ಲಿ ಶಿಸ್ತಿನಿಂದಲೇ ಇದ್ದ. ಅವನು ಮೂರನೇ ತರಗತಿಗೆ ಬರುವಷ್ಟರಲ್ಲಿ ಊರಲ್ಲಿ ಅವನ ವಯಸ್ಸಿನ ಹುಡುಗರ ಜೊತೆ ಎತ್ತು, ದನ ಕಾಯುತ್ತಾ ಸುತ್ತಾಡುವ ಅಭ್ಯಾಸ ಬೆಳೆಸಿಕೊಂಡಿದ್ದ. ಮನೆಯಿಂದ ಶಾಲೆಯ ಹೊತ್ತಿಗೆ ಹೊರಡುತ್ತಿದ್ದ. ಆದರೆ, ಶಾಲೆ ಬಿಟ್ಟು ಮನೆಯ ಕೆಲಸಗಳಿಗೆ

ಉಳಿದುಕೊಂಡಿದ್ದ ಅವನ ವಾರಿಗೆಯ ಹುಡುಗರೊಟ್ಟಿಗೆ ಸೇರಿ ಕೆರೆಯ ಕಡೆಯೋ, ತೋಟದ ಕಡೆಯೋ ಹೋಗಿ ಆಟದಲ್ಲಿ ಮುಳುಗಿರುತ್ತಿದ್ದ. ಶಾಲೆಯ ಗಿರಿಯಪ್ಪ ಮೇಷ್ಟರು ಅನೇಕ ಸಲ ಹೇಳಿ ಕಳಿಸಿ ಅದರಿಂದ ಯಾವ ಪ್ರಯೋಜನವೂ ಆಗದೆ ಇದ್ದಾಗ ಅವನ ಹೆಸರನ್ನು ಹಾಜರಿ ಪುಸ್ತಕದಿಂದ ತೆಗೆದುಹಾಕಿದ್ದರು. ಅದು ತಡವಾಗಿ ಅಪ್ಪಯ್ಯನಿಗೆ ಗೊತ್ತಾಯಿತು. ಮನೆಯಿಂದ ಹೊರಡುತ್ತಿದ್ದರೂ ಶಾಲೆಗೆ ಹೋಗದೆ ಊರಲ್ಲಿ ವಾರಿಗೆಯ ಹುಡುಗರ ಜೊತೆ ಸೇರಿ ಕಾಡುಹರಟೆಯಲ್ಲಿ ಪಳಗಿದ್ದ ರಾಮಣ್ಣನನ್ನು ಸರಿದಾರಿಗೆ ತರುವುದಕ್ಕೆ ಸಾಮ, ದಾನಕ್ಕಿಂತಲೂ ದಂಡದ ಮಾರ್ಗವನ್ನು ಹಿಡಿದು ಚೆನ್ನಾಗಿ ಬಾರಿಸಿ ಶಾಲೆಗೆ ಗದುಮಿದ್ದು ನಂತರ ಊರಲ್ಲಿ ಸುದ್ದಿಯಾಯಿತು.

ಒಮ್ಮೆ ಹಾದಿ ಬಿಟ್ಟಂತೆ ಕಂಡಿದ್ದ ರಾಮಣ್ಣ ಮತ್ತೆ ಶಾಲೆಯ ವಿಷಯದಲ್ಲಿ ಎಡವಲಿಲ್ಲ. ಪೇಟೆಯಲ್ಲಿ ಹೈಸ್ಕೂಲು ಮುಗಿಸಿದ. ಮುಂದಿನ ಪದವಿ ಅಧ್ಯಯನಕ್ಕೆ ಶಿವಮೊಗ್ಗಕ್ಕೆ ಹೋದವನು ತಾನೇ ಮುನ್ನುಗ್ಗಿ ಸರ್ಕಾರಿ ಹಾಸ್ಟಲಿನಲ್ಲಿ ಪ್ರವೇಶ ಗಿಟ್ಟಿಸಿಕೊಂಡು ಕಾಲೇಜು ಸೇರಿದ. ಕಾಲೇಜು ಸೇರಿದ ಕೆಲವೇ ದಿನಗಳಲ್ಲಿ ಅವನು ತನ್ನ ಹೆಸರಿನಲ್ಲಿದ್ದ 'ನಾಯ್ಕ' ಎಂಬುದನ್ನು ಕೈ ಬಿಟ್ಟು ಊರಿನ ಹೆಸರನ್ನು ಮೊದಲಿಗೆ ಸೇರಿಸಿಕೊಂಡಿದ್ದ. ದಸರಾ ರಜೆಗೆ ಬಂದಾಗ ಅಪ್ಪಯ್ಯ 'ಅದ್ಯಾಕೋ ಮಾರಾಯ, ಅಪ್ಪ ಅವ್ವ ಇಟ್ಟ ಹೆಸರು ಬ್ಯಾಡ ಅಂತ ನೀನು ಹೊಸದಾಗಿ ಊರಿನ ಹೆಸರನ್ನೂ ಸೇರಿಸ್ಗಂಡಿದೀಯಾ..?' ಎಂದು ಕೇಳಿದ್ದ. ಅದಕ್ಕೆ ಅವನು 'ನನಗೆ ಈ ಜಾತಿ ಸೂಚಕ ಹೆಸರುಗಳಲ್ಲಿ ನಂಬಿಕೆ ಇಲ್ಲ ಅಪ್ಪಯ್ಯ. ಅದಕ್ಕೇ ಹಳ್ಳೂರು ರಾಮಣ್ಣ ಅಂತ ಹೆಸರು ಬದಲಾಯಿಸಿಕೊಂಡಿದೀನಿ.. ಇದರಿಂದ ನಾನು ಯಾವ ಜಾತಿ ಅಂತ ಹೆಸರಿನ ಮೇಲೆ ಯಾರೂ ತಿಳಕೊಳ್ಳಾಕೆ ಆಗಾದಿಲ್ಲ. ನಾವೀಗ ಜಾತ್ಯಾತೀತ ಸಂವಿಧಾನದಲ್ಲಿ ನಂಬಿಕೆ ಇಟ್ಟುಕೊಂಡ ಜನ. ನಮ್ಮ ಹೆಸರು ಕೂಡ ಜಾತ್ಯಾತೀತವಾಗಿರಬೇಕು..' ಎಂದು ವಿವರಣೆ ನೀಡಿದ್ದ.

ತನ್ನ ಓದು ಪೇಟೆಯಲ್ಲಿ ಎಸ್ಸೆಸ್ಸೆಲ್ಸಿ ಹಂತಕ್ಕೆ ಬಂದು ನಿಂತು ಹೋಗಿದ್ದರಿಂದ ಕುಟುಂಬದಲ್ಲಿಯೇ ಕಾಲೇಜು ಮೆಟ್ಟಲು ಹತ್ತಿದ ರಾಮಣ್ಣನ ಮಾತಿಗೆ ಯಾರೂ ತಿರುಗಿ ಹೇಳುವಂತಿರಲಿಲ್ಲ. ಅವನ ಓದಿಗೆ ದುಡ್ಡು ಹೊಂದಿಸಲು ಅಪ್ಪಯ್ಯನ ಜೊತೆಗೆ ತಾನು ಬೇಸಾಯದ ಕೆಲಸಕ್ಕೆ ನಿಂತ ಮೇಲೆಯೂ ಕಷ್ಟವಾಗುತ್ತಿತ್ತು. ಸರ್ಕಾರಿ ಹಾಸ್ಟಲಿನಲ್ಲಿ ಇದ್ದರೂ ರಾಮಣ್ಣನ ಪುಸ್ತಕ, ಬಟ್ಟೆಗಳಿಗಾಗಿ ತಿಂಗಳ ತಿಂಗಳ ದುಡ್ಡು ಹೊಂದಿಸಬೇಕಾಗುತ್ತಿತ್ತು. ಇದ್ದ ಅತ್ಯಲ್ಪ ಜಮೀನಿನಲ್ಲಿ ಬೆಳೆಯುತ್ತಿದ್ದ ಬತ್ತ ವರ್ಷದ ಊಟಕ್ಕೆ ಸಾಕಾಗುವಷ್ಟಿತ್ತು. ಮನೆಯ ಮೇಲು ಖರ್ಚು ಮತ್ತು ಅವನ ವಿದ್ಯಾಭ್ಯಾಸಕ್ಕೆ ದುಡ್ಡು ಹೊಂದಿಸುವುದು ನಿಜಕ್ಕೂ ಕಷ್ಟವಾಗುತ್ತಿತ್ತು. ಮಳೆಗಾಲದಲ್ಲಿ ಗದ್ದೆ ಕೆಲಸ ಮುಗಿದ ಮೇಲೆ ಬೇರೆಯವರ ಮನೆಗೆ ಕೂಲಿ ಆಳಾಗಿ ಹೋಗುವುದು ತನಗೂ ಅನಿವಾರ್ಯವಾಗಿತ್ತು. ಅದರಲ್ಲಿಯೂ ಮಳೆಗಾಲದಲ್ಲಿ ಊರಲ್ಲಿ ದುಡ್ಡು ಯಾರಲ್ಲಿಯೂ ಇರುತ್ತಿರಲಿಲ್ಲ. ಅಂಥ ಹೊತ್ತಿನಲ್ಲಿ ರಾಮಣ್ಣನ ಕಾಗದ ಬಂದರೆ ಅಪ್ಪಯ್ಯ ಮನೆ ಬಿಟ್ಟು ನೆಂಟರ ಮನೆಗಳಿಗೆಲ್ಲ ಎಡತಾಕಿ ಕೈಗಡವಾಗಿ ದುಡ್ಡು ತಂದು ಮನಿಯಾರ್ಡರ್ ಮಾಡುತ್ತಿದ್ದ. ಅವನು ಓದಿ ಒಳ್ಳೆ ಕೆಲಸ ಹಿಡಿದರೆ ಮನೆಗೆ ಸಹಾಯಕ್ಕೆ ಆಗುತ್ತಾನೆ ಅಂತ ಅಪ್ಪಯ್ಯ ತುಂಬ ಆಸೆ ಇಟ್ಟುಕೊಂಡಿದ್ದ. ಅದನ್ನು ನಂಟರ ಮನೆಗಳಲ್ಲಿಯೂ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ.

ಪದವಿಯ ಅಂತಿಮ ವರ್ಷದ ಪರೀಕ್ಷೆ ಮುಗಿಸಿ ಬಂದ ರಾಮಣ್ಣ ತಾನು ಎಲ್ಲಾದರೂ ಕೆಲಸಕ್ಕೆ ಪ್ರಯತ್ನ ಪಡುವ ಮಾತು ಹೇಳಿದಾಗ ಅಪ್ಪಯ್ಯನಿಗೂ ಅವ್ವನಿಗೂ ಹಿಡಿಸಲಾರದ ಹಿಗ್ಗು. ಅವನ ರಿಜಲ್ಟು ಬಂದ ದಿನ ಅವರಿಬ್ಬರೂ ಸಂಭ್ರಮಪಟ್ಟು ಪಾಯಸ ಮಾಡಿ ಸವಿದಿದ್ದರು. ಒಂದೇ ಪ್ರಯತ್ನಕ್ಕೆ ಡಿಗ್ರಿ

ಪಡೆದವರು ಆಗ ಊರಲ್ಲಿ ಮಾತ್ರವಲ್ಲ, ಸುತ್ತಮುತ್ತಲ ಹಳ್ಳಿಗಳಲ್ಲಿಯೂ ಇರಲಿಲ್ಲ. 'ತಿಮ್ಮನಾಯ್ಕರ ಮಗ ರಾಮನಾಯ್ಕ ಒಂದೇ ಸಲಕ್ಕೆ ಡಿಗ್ರಿ ಪಾಸು ಮಾಡಿದಾನಂತೆ' ಎಂದು ನಂಟರಿಷ್ಟರೆಲ್ಲ ಸಂಭ್ರಮ ಪಟ್ಟಿದ್ದರು. ಅವನು ಡಿಗ್ರಿಯ ಕೊನೆ ವರ್ಷದಲ್ಲಿದ್ದಾಗ ಮಸರೂರು ಮಾರಮ್ಮನಿಗೆ ಅಪ್ಪಯ್ಯ ಹರಕೆ ಕಟ್ಟಿಕೊಂಡಿದ್ದನಂತೆ, ರಿಜಲ್ಟು ಬಂದ ಮೇಲೆ ಅದನ್ನು ಅಪ್ಪಯ್ಯ ಹೇಳಿಕೊಂಡಿದ್ದ. ಅದನ್ನು ಕೇಳಿಸಿಕೊಂಡಿದ್ದ ರಾಮಣ್ಣ 'ಅಲ್ಲಿ ಕಷ್ಟ ಪಟ್ಟೋನು ನಾನು. ಇಲ್ಲಿ ಬಾಡು ತಿಂದು ಮಜಾ ಮಾಡಾಕೆ ಮಸರೂರು ಮಾರಮ್ಮನ ಹೆಸರು' ಎಂದು ಹೇಳಿ ಅಪ್ಪಯ್ಯನಿಗೆ ಬೇಜಾರು ಮಾಡಿದ್ದ. 'ಅರೆ, ನಾವು ನಿನಗೆ ಒಳ್ಳೇದಾಗ್ತದೆ ಅಂತ ಹರಕೆ ಮಾಡಿಕ್ಯಂಡರೆ ಅದನ್ನೇ ಹಂಗುಸ್ತೀಯಲ್ಲೋ' ಎಂದು ಅಪ್ಪಯ್ಯ ಹೇಳಿದಾಗ 'ಏನಾರು ಮಾಡಿಕೊಳ್ಳಿ, ಈ ಹರಕೆ ಗಿರಕೇ ತೀರಿಸಾಕೆ ಅಂತ ನನ್ನ ಹತ್ರ ದುಡ್ಡು ಕೇಳಬೇಡಿ ಮತ್ತೆ' ಎಂದು ಜೋರು ಮಾಡಿದ್ದ. 'ಅಲ್ವೋ ಮಾರಾಯ, ಇನ್ನೂ ಕೆಲಸವೇ ಸಿಕ್ಕಿಲ್ಲ.. ಆಗಲೇ ಇಷ್ಟೊಂದು ಜೋರು ಮಾಡ್ತೀಯಲ್ಲೋ' ಎಂದು ತಾನೂ ಅದಕ್ಕೆ ಧ್ವನಿ ಸೇರಿಸಿದ್ದ.

ಡಿಗ್ರಿ ಪರೀಕ್ಷೆ ಮುಗಿಸಿ ಬಂದ ರಾಮಣ್ಣ ಮನೆಯಲ್ಲಿ ಕೆಲವೇ ವಾರ ಇದ್ದ. ಮೊದಲೆಲ್ಲ ರಜೆಗೆ ಬಂದವನು ಬಟ್ಟೆ ಬದಲಿಸಿ ತಾವು ಕೆಲಸ ಮಾಡುತ್ತಿದ್ದ ಕಡೆ ಬಂದು ಕೆಲಸಕ್ಕೆ ಕೈ ಹಾಕುತ್ತಿದ್ದ. ಗದ್ದೆ ಹೂಡಲು ಬರುತ್ತಿರಲಿಲ್ಲವಾದರೂ ಬೇಲಿ ಕಟ್ಟುವಾಗ, ಕಣದಲ್ಲಿ ಒಕ್ಕಲು ಮಾಡುವಾಗ, ನಿರಗು ತೆಗೆದು ಬತ್ತ ಒಟ್ಟು ಮಾಡುವಾಗ ಸೇರಿಕೊಳ್ಳುತ್ತಿದ್ದ. ಅವನು ಕೆಲಸದ ಜಾಗಕ್ಕೆ ಬರುತ್ತಾನೆ ಎಂದರೆ ಊರಿನ ಹುಡುಗರೂ ಬಂದು ಸೇರುತ್ತಿದ್ದರು. ಅವರಿಗೆಲ್ಲ ಏನೇನೋ ಕತೆ ತರ ಹೇಳುತ್ತಿದ್ದ. ಸಿನಿಮಾ ಕತೆಗಳನ್ನು ವರ್ಣನೆ ಮಾಡುತ್ತಿದ್ದ. ಪುಸ್ತಕ ಓದಬೇಕು ಎನ್ನುತ್ತಿದ್ದ. 'ಕತೆ, ಕಾದಂಬರಿ ಪುಸ್ತಕಗಳನ್ನು ಓದಬೇಕ್ರಯ್ಯ' ಎಂದು ತನ್ನ ವಾರಿಗೆಯವರಾಗಿದ್ದು ಮಾಧ್ಯಮಿಕ ಶಾಲೆಗೆ ಶರಣು ಹೊಡೆದು ಊರಿನಲ್ಲಿ ನೆಲೆ ನಿಂತಿದ್ದವರನ್ನು ಉದ್ದೇಶಿಸಿ ಹೇಳುತ್ತಿದ್ದ. ಅವನು ಮನೆಯಲ್ಲಿದ್ದಾಗ ಒಂದು ತರ ಸಂಭ್ರಮದ ವಾತಾವರಣವೇ ಇರುತ್ತಿತ್ತು. ರಜೆ ಮುಗಿಸಿ ಹೊರಟಾಗ ಮನೆಯೆಲ್ಲ ಬಿಕೋ ಎನಿಸುತ್ತಿತ್ತು. ಅಷ್ಟು ಚಟುವಟಿಕೆಯಲ್ಲಿ ಇರುತ್ತಿದ್ದವನು ಕೊನೆಯ ಪರೀಕ್ಷೆ ಮುಗಿಸಿ ಬಂದವನು ಯಾರೊಂದಿಗೂ ಬೆರೆಯದೆ ತನ್ನಷ್ಟಕ್ಕೆ ಇರುತ್ತಿದ್ದ. ಪೇಟೆಯಿಂದ 'ಪೋಸ್ಟ್ ಬಂತಾ' ಎಂದು ಎದುರು ನೋಡುತ್ತಿದ್ದ. ಮನೆಯಲ್ಲಿ ಹಂಗಾಮಿನ ಕೆಲಸದ ಸಂದರ್ಭವಾಗಿದ್ದರೂ ಕೋಣೆಯಲ್ಲಿ ಕುಳಿತೋ. ಮಲಗಿಯೋ, ಏನನ್ನಾದರೋ ಓದುತ್ತಲೋ ತನ್ನಷ್ಟಕ್ಕೆ ಇದ್ದವನನ್ನು ಮಾತಾಡಿಸುವುದಕ್ಕೆ ಅವ್ವನೂ ಮನಸ್ಸು ಮಾಡುತ್ತಿರಲಿಲ್ಲ. ಊಟಕ್ಕೆ ಬಂದರೆ ಅವನಿಗೆ ಬಡಿಸುವುದರಲ್ಲಿ ಶಿಸ್ತು ಇರಬೇಕಿತ್ತು. ತಟ್ಟೆಯನ್ನು ಇಟ್ಟ ನಂತರ ಕ್ರಮಬದ್ಧವಾಗಿ ಬಡಿಸಬೇಕಿತ್ತು. ಅವನು ಮಧ್ಯೆ ಮಧ್ಯೆ ಕುಡಿಯದಿದ್ದರೂ ತಟ್ಟೆಯ ಪಕ್ಕದಲ್ಲಿ ಕುಡಿಯುವ ನೀರಿನ ಲೋಟ ಇಡಬೇಕಿತ್ತು. ಸ್ವಲ್ಪ ಹೆಚ್ಚು ಕಡಿಮೆಯಾದರೆ ಸಿಡುಕುತ್ತಾ ಇದ್ದ. ಅವನು ಊಟ ಮುಗಿಸಿ ಹೋಗುವವರೆಗೆ ಅವ್ವನಿಗೂ ತುದಿಕಾಲ ಮೇಲೆ ನಿಂತಂತೆ ಆಗುತ್ತಿತ್ತು.

'ಇದ್ಯಾಕೆ ಇವನು ಹಿಂಗಾದ' ಎಂದು ಅಪ್ಪಯ್ಯ ತನ್ನಷ್ಟಕ್ಕೆ ಹೇಳಿಕೊಳ್ಳುವ ಪರಿಸ್ಥಿತಿ ಇದ್ದಾಗ ಅದೊಂದು ದಿನ ಪೋಸ್ಟಿನಲ್ಲಿ ಬಂದ ಕಾಗದ ನೋಡಿ 'ನಾನು ಇವತ್ತೇ ಶಿವಮೊಗ್ಗಕ್ಕೆ ಹೋಗ್ತೀನಿ. ಒಂದು ಕೆಲಸ ಸಿಗೋ ಹಾಗೆ ಕಾಣ್ತದೆ, ಪ್ರಯತ್ನ ಮಾಡಬೇಕು' ಎಂದು ಗಡಿಬಿಡಿಯಲ್ಲಿ ಬಟ್ಟೆ ಬರೆಯನ್ನೆಲ್ಲ ಒಂದು ಚೀಲಕ್ಕೆ ತುಂಬಿಕೊಂಡು ಹೊರಟ. ಎಷ್ಟು ಬೇಕಾಗುತ್ತೋ ಎಂದು ಅಪ್ಪಯ್ಯ ಕೇಳಿದರೆ 'ಎಷ್ಟು ಅಂತ ಹೇಳಲಿ. ಕೆಲಸ ಹುಡುಕೋದಕ್ಕೆ ಅಂತ ಹೋಗ್ತಾ ಇದೀನಿ. ಒಂದು ತಿಂಗಳೋ, ಎರಡು ತಿಂಗಳೋ ರೂಮು ಮಾಡಿಕೊಂಡು ಹೋಟಲಲ್ಲಿ ಊಟ ಮಾಡಿಕೊಂಡು ಇರಬೇಕಾಗ್ತದೆ. ಈಗಿನ ದುಬಾರಿ ದಿನಗಳಲ್ಲಿ ಎಷ್ಟು ಸಾವಿರ ಇದ್ದರೂ ಸಾಲದು. ಎಷ್ಟಾಗುತ್ತೋ ಅಷ್ಟು ಕೊಡು' ಎಂದು ಹೇಳಿದ. ಅಪ್ಪಯ್ಯ ಮನೆಯಲ್ಲೆಲ್ಲ

ತಡಕಾಡಿ ದುಡ್ಡು ಕೊಟ್ಟಿದ್ದ.

ಮನೆಯಿಂದ ಒಂದು ಮೈಲಿಯಷ್ಟು ನಡೆದರೆ ಸರ್ಕಾರಿ ರಸ್ತೆ. ಪ್ರತಿ ಸಲ ಬಂದಾಗಲೂ ತಾನೇ ರಸ್ತೆವರೆಗೆ ಅವನ ಚೀಲವನ್ನು ಒಯ್ದು ಕೊಡುತ್ತಾ ಇದ್ದುದು. ಆ ಸಲವೂ ಹಾಗೆಯೇ ರಸ್ತೆಯವರೆಗೆ ಜೊತೆಯಾದರೆ ದಾರಿಯಲ್ಲಿ ಅವನು ಮಾತೇ ಆಡಲಿಲ್ಲ. ತಾನೇ ವಿಚಾರಿಸುತ್ತಿದ್ದರೆ ಆಂ ಹುಂ ಎಂದಷ್ಟೇ ಹೇಳುತ್ತಿದ್ದ. ರಸ್ತೆ ತಲುಪಿದ ಮೇಲೆ 'ಇನ್ನು ನೀನು ಹೋಗು. ಹೇಗೂ ಬಸ್ಸು ಬರುತ್ತಲ್ಲ, ನಾನು ಹತ್ತಿಕೊಂಡು ಹೋಗ್ತೀನಿ' ಎಂದು ಬಲವಂತವಾಗಿ ಕಳುಹಿಸಿದ. ಏನೋ ಬೇಜಾರು ಮಾಡಿಕೊಂಡಿದಾನೆ. ಕೆಲಸ ಸಿಗೋ ಬಗ್ಗೆ ಯೋಚನೆ ಮಾಡ್ತಾ ಇರಬೇಕು ಅಂತ ತಾನೇ ಸಮಾಧಾನ ಮಾಡಿಕೊಂಡು ಹಿಂದಕ್ಕೆ ಬಂದಿದ್ದಾಯಿತು.

ಹಾಗೆ ಶಿವಮೊಗ್ಗ ಸೇರಿದವನು ಎರಡು ಮೂರು ವಾರವಾದರೂ ಕಾಗದ ಬರೆಯಲಿಲ್ಲ. ಓದುವುದಕ್ಕೆ ಅಂತ ವರ್ಷಗಟ್ಟಲೆ ಹೊರಗಡೆ ಇದ್ದವನಾದ್ದರಿಂದ ಮನೆಯಲ್ಲಿ ಅವನ ಕಾಗದ ಬರದೆ ಇರುವುದಕ್ಕೆ ಆತಂಕವೇನೂ ಇರಲಿಲ್ಲ. ಅಪ್ಪಯ್ಯ ಪೇಟೆಗೆ ಹೋಗಿದ್ದಾಗ ಅಲ್ಲಿ ಗುರುತಿನವರು ಸಿಕ್ಕಿ 'ನಿಮ್ಮ ಹುಡುಗನಿಗೆ ಭದ್ರಾವತಿ ಆಚೆ ಯಾವುದೋ ಊರಲ್ಲಿ ಹೈಸ್ಕೂಲು ಮೇಷ್ಟ್ರ ಕೆಲಸ ಸಿಕ್ಕಿದೆಯಂತೆ. ನಮ್ಮ ಹುಡುಗ ಶಿವಮೊಗ್ಗಕ್ಕೆ ಹೋದಾಗ ಸಿಕ್ಕಿದ್ದನಂತೆ. ಕಾಲೇಜಿನಲ್ಲಿ ಗೆಣೆಕಾರರಂತಲ್ಲ. ಹಿಂಗೆ ಊರು ಕಡೆ ಹೋದಾಗ ಹೇಳಿ ಅಂತ ತಿಳಿಸಿದನಂತೆ' ಎಂದು ಹೇಳಿದಾಗ ಅದಕ್ಕೆ ಖುಷಿ ಪಡಬೇಕೋ, ಅವನು ತಮಗೆ ತಿಳಿಸದೆ ಬೇರೆಯವರ ಮೂಲಕ ಹೇಳಿದ್ದಕ್ಕೆ ವ್ಯಥೆ ಪಡಬೇಕೋ ಗೊತ್ತಾಗದೆ ಮನೆಗೆ ಬಂದಿದ್ದ. ಮನೆಯಲ್ಲಿ ಅಂತೂ ಅವನಿಗೆ ಕೆಲಸ ಸಿಕ್ಕಿದೆಯಂತಲ್ಲ, ಈ ಸಲ ಮಳೆಗಾಲದ ಮಾರಿ ಜಾತ್ರೆಗೆ ಹರಕೆ ತೀರಿಸಿ ಬಿಡಾನ. ಅವನಿಗೆ ರಜೆ ಇದ್ದರೆ ಬರಲಿ. ಅವನು ಬರದೆ ಇದ್ರೆ ನಾವೇ ಹರಕೆ ತೀರಿಸಿದರಾಯಿತು' ಎಂದು ಸಮಾಧಾನ ಪಟ್ಟುಕೊಂಡಿದ್ದರು.

ಅದು ಭದ್ರಾವತಿಯ ಆಚೆ ಕಲ್ಲಿಹಾಳ ಅಂತೇನೋ ಊರಂತೆ. ಖಾಸಗಿ ಹೈಸ್ಕೂಲು. ಅಲ್ಲಿ ಮೇಷ್ಟರಾಗಿ ಸೇರಿಕೊಂಡ ರಾಮಣ್ಣ ಕೆಲವೇ ತಿಂಗಳಲ್ಲಿ ತುಂಬ ಜನಪ್ರಿಯತೆ ಪಡೆದ ಮೇಷ್ಟರಾಗಿ ಹೋದ. ಅಲ್ಲಿದ್ದಾಗಲೇ ಪತ್ರಿಕೆಗಳಲ್ಲಿ ಅವನ ಹೆಸರು ಕಾಣಿಸಿಕೊಳ್ಳತೊಡಗಿತು. ಭಾನುವಾರದ ವಿಶೇಷ ಪುರವಣಿಗಳಲ್ಲಿ 'ಹಳ್ಳೂರು ರಾಮಣ್ಣ' ಹೆಸರಿನಲ್ಲಿ ಕತೆಗಳೋ, ಕವನಗಳೋ ಪ್ರಕಟವಾಗುತ್ತಿದ್ದವು. ಪೇಟೆ ಕಡೆ ಹೋದಾಗ 'ನಿಮ್ಮ ತಮ್ಮನ ಕಥೆ ನಿನ್ನೆ ಪೇಪರಿನಲ್ಲಿ ನೋಡಿದೆ. ಚೆನ್ನಾಗಿ ಬರ್ದಿದಾನೆ. ಅಂತೂ ನಿಮ್ಮ ಊರಿನ ಹೆಸರನ್ನು ಇಡೀ ರಾಜ್ಯಕ್ಕೆ ಪರಿಚಯ ಮಾಡಿಕೊಟ್ಟ ನೋಡಿ..' ಎಂದು ಗುರುತಿನವರು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದರು. ಅದನ್ನು ಕೇಳುತ್ತಿದ್ದಾಗ ತನಗೂ ಸಂತೋಷವೇ. ಸ್ವಂತ ತಮ್ಮ, ರಾಜ್ಯದಲ್ಲಿ ಹೆಸರು ಪಡೆಯುತ್ತಿದ್ದಾನೆ. ಅದರಲ್ಲೂ ನಮ್ಮವರಲ್ಲಿ ಯಾರೂ ಮಾಡದ ಸಾಧನೆ ಇದು, ಕತೆ, ಕವನ ಬರೆಯುವ ಮೂಲಕ ದೊಡ್ಡ ಮನುಷ್ಯನಾಗುತ್ತಿದ್ದಾನೆ ಎಂದು ಹೆಮ್ಮೆಯಾಗುತ್ತಿತ್ತು. ತಮ್ಮನ ಬಗ್ಗೆ ಅಭಿಮಾನ ಮೂಡುತ್ತಿತ್ತು. ಅಪ್ಪಯ್ಯನಿಗೂ ಸಂಭ್ರಮ. ಅವನು ಆಗಾಗ ಮನೆಗೆ ಬರದೆ ಇದ್ದರೂ, ಮನೆಗಾಗಿ ದುಡ್ಡು ಕೊಡದೆ ಇದ್ದರೂ ಏನೋ ಸಾಧನೆ ಮಾಡುತ್ತಿದ್ದಾನಲ್ಲ ಎಂಬ ಸಂತೋಷ. 'ನಮ್ಮ ಜನರಲ್ಲೇ ಹಿಂಗೆ ಕತೆ ಗಿತೆ ಬರಿಯೋರು ಯಾರೂ ಇರ್ಲಿಲ್ಲ. ನಮ್ಮ ಹುಡುಗ ಅಂಥದ್ದನ್ನು ಸಾಧಿಸ್ತಾ ಇದ್ದಾನೆ' ಎಂಬ ಅಭಿಮಾನ ಅಪ್ಪಯ್ಯನಲ್ಲಿ ಬೆಳೆಯಿತು. ನಂತರು ಇಷ್ಟರು ಮಾತ್ರವಲ್ಲ, ಪೇಟೆಯಲ್ಲಿ ಎದುರಾಗುತ್ತಿದ್ದ ಪರಿಚಿತರಲ್ಲಿ ಪತ್ರಿಕೆಗಳನ್ನು ಗಮನಿಸುತ್ತಿದ್ದವರು 'ಏನು ನಾಯ್ಕರೇ, ನಿಮ್ಮ ಹುಡುಗ ದೊಡ್ಡ ಸಾಹಿತಿ ಆಗಿದ್ದಾನಲ್ಲ' ಎಂದು ಹೇಳುತ್ತಿದ್ದುದು ಅವನ ಸಂತೋಷವನ್ನು ಹೆಚ್ಚಿಸುತ್ತಿತ್ತು.

ರಾಮಣ್ಣನ ಕೀರ್ತಿಯ ಬಗ್ಗೆ ಮನೆಗೆ ಸುದ್ದಿ ಬರುತ್ತಿದ್ದುದು ಎಷ್ಟೋ ಅಷ್ಟೆ. ಅವನ ದರ್ಶನ ಮನೆಯವರಿಗೆ ಆದುದು ಹೈಸ್ಕೂಲಿನಲ್ಲಿ ವಾರ್ಷಿಕ ಪರೀಕ್ಷೆಗಳು ಮುಗಿದು ಬೇಸಗೆ ರಜೆ ಬಂದಾಗಲೇ. ಆಗ ದೊಡ್ಡದೊಂದು ಸೂಟುಕೇಸು ಹಿಡಿದು ಬಸ್ಸಿನಲ್ಲಿ ಬಂದಿದ್ದ. ಅವನು ಬರುವ ದಿನವನ್ನು ಪುಣ್ಯಾತ್ಮ ಕಾಗದ ಬರೆದು ತಿಳಿಸಿದ್ದರಿಂದ ತಾನೇ ಬಸ್ ನಿಲ್ಲುವ ಜಾಗಕ್ಕೆ ಹೋಗಿ ಕರೆದು ತಂದಿದ್ದ. 'ಇಷ್ಟು ದೊಡ್ಡ ಬ್ಯಾಗ್ ನಮ್ಮೂರಲ್ಲಿ ಯಾರೂ ನೋಡಿಲ್ಲ ಬಿಡು' ಎಂದು ತಾನು ಅಭಿಮಾನದಿಂದ ಹೇಳಿದ್ದಕ್ಕೆ 'ಅದನ್ನೇನು ನೋಡಾದು. ನನ್ನ ಕೊಳೆ ಬಟ್ಟೆ, ಒಂದಿಷ್ಟು ಪುಸ್ತಕ ಇದಾವೆ' ಎಂದು ಮುಖಕ್ಕೆ ಹೊಡೆದಂತೆ ಹೇಳಿದ್ದ. 'ಅಷ್ಟಕ್ಕೆಲ್ಲ ಎಂತಕ್ಕೆ ಬೇಜಾರು ಮಾರಾಯ' ಎಂದು ತಾನೇ ಸಮಾಧಾನಪಟ್ಟುಕೊಳ್ಳಬೇಕಾಗಿತ್ತು. ಸರ್ಕಾರಿ ರಸ್ತೆಯಿಂದ ಮನೆಗೆ ಬರುವ ದಾರಿಯಲ್ಲಿ ಇಬ್ಬರೇ ಬರುತ್ತಿದ್ದರೂ ಅವನು ಸುತ್ತಮುತ್ತ ಹೊಸಬನಂತೆ ನೋಡುತ್ತಾ ಇದ್ದುದು ಬೇಜಾರು ತಂದಿತ್ತು. ಮನೆಯಲ್ಲಿ ಅಪ್ಪಯ್ಯ ಅವ್ವನ ಬಗ್ಗೆ, ಗದ್ದೆ ಕೆಲಸದ ಬಗ್ಗೆ ಏನಾದರೂ ವಿಚಾರಿಸಬಹುದಾ ಎಂದು ತಾನು ನಿರೀಕ್ಷೆ ಮಾಡಿದ್ದು ವ್ಯರ್ಥವಾಗಿತ್ತು. ತನ್ನದೇ ಲೆಕ್ಕಾಚಾರದಲ್ಲಿ ಮುಳುಗಿದ್ದವನಂತೆ ಸುತ್ತಮುತ್ತ ನೋಡುತ್ತ ಮನೆಗೆ ಬಂದ. ಮನೆಯ ನಾಯಿ ಬೊಗುಳಿತಾದರೂ ಅದನ್ನು ಗದರಿಸಿದಾಗ ಸುಮ್ಮನಾಗಿ ಗುರುತು ಹಿಡಿದು ಬಾಲ ಅಲ್ಲಾಡಿಸಿ ಸ್ವಾಗತಿಸಿತ್ತು.

ಅವ್ವ ಸಂಭ್ರಮದಿಂದ ತಂದಿದ್ದ ನೀರನ್ನು ಕಾಲಿಗೆ ಹಾಕಿಕೊಂಡ ರಾಮಣ್ಣ ಎಂದಿನಂತೆಯೇ ಮಾತಾಡಿದ. 'ತುಂಬ ಸೊರಗಿ ಹೋಗಿದೀಯಲ್ಲ ಅವ್ವ' ಎಂದು ವಿಚಾರಿಸಿಕೊಂಡಾಗ ಅವ್ವನಿಗೆ ಗಂಟಲು ತುಂಬಿ ಬಂದಿರಬೇಕು.. 'ನೀನ್ಯಾಕೋ ಇಷ್ಟು ಕಪ್ಪಗಾಗಿದಿಯಲ್ಲ, ಅದೇನು ಬಯಲುಸೀಮೆಯಾ?' ಎಂದು ಕಕ್ಕುಲತೆಯಿಂದ ಮಾತಾಡಿಸಿದಳು. 'ಊಟಕ್ಕೇನು ಮಾಡಿಕೊಂಡಿದ್ದೆ, ಹೋಟಲಾ..?' ಎಂದು ಅವ್ವ ಕೇಳಿದಾಗ 'ಮೊದಲು ಕೆಲವು ದಿನ ಹೋಟಲಿಗೆ ವರ್ತನೆ ಮಾಡಿಕ್ಯಂಡಿದ್ದೆ. ಆಮೇಲೆ ಇನ್ನೊಬ್ಬ ಮೇಷ್ಟರು ನನ್ನ ರೂಮಿಗೆ ಬಂದ ಮೇಲೆ ಇಬ್ಬರೂ ಅನ್ನ ಮಾಡಿಕೊಳ್ತಾ ಇದ್ದೆವು. ಹೋಟಲಿಂದ ಸಾರು ತರ್ತಾ ಇದ್ದೆವು' ಎಂದು ನಗುತ್ತಾ ಮಾತಾಡಿದ. ಅಷ್ಟಕ್ಕೆ ಸಮಾಧಾನಗೊಂಡ ಅವ್ವ ಸಂಭ್ರಮಪಡುತ್ತಾ ಒಳಗೆ ಹೊರಗೆ ಓಡಾಡಿ ಅವನನ್ನು ಉಪಚರಿಸಿದ್ದೇ ಉಪಚರಿಸಿದ್ದು. ಅಪ್ಪಯ್ಯ ಗದ್ದೆಗೆ ಹೋದವನು ಬಂದಾಗ ಸುಮಾರು ಒಂದು ವರ್ಷದಿಂದ ಮನೆಯಿಂದ ದೂರ ಇದ್ದ ಅಸಮಾಧಾನವನ್ನು ನಗುತ್ತಲೇ ಮಾತಾಡಿಸಿ ನಿವಾರಿಸಿಬಿಟ್ಟಿದ್ದ. ರಾಮಣ್ಣನ ಮಾತಿನ ಧಾಟಿಯೂ ಬದಲಾಗಿತ್ತು. ಶುದ್ಧ ಕನ್ನಡದಲ್ಲಿ ಶಾಲೆಯ ಮೇಷ್ಟರು ಪಾಠ ಮಾಡುವ ರೀತಿಯಲ್ಲಿತ್ತು.

'ಅದೇನೊ ಮಾರಾಯ, ಪೇಪರ್ನಲ್ಲಿ ಬರೀತಿಯಂತೆ.. ಎಷ್ಟು ಕೊಡ್ತಾರೆ ಅದಕ್ಕೆಲ್ಲ' ಎಂದು ಅಪ್ಪಯ್ಯ ವಿಚಾರಿಸಿಕೊಂಡಾಗ ಅದಕ್ಕೆ ನಗುತ್ತಲೇ ಉತ್ತರಿಸಿದ ರಾಮಣ್ಣ 'ಅದಕ್ಕೆಲ್ಲ ದುಡ್ಡೆಲ್ಲಿ ಕೊಡ್ತಾರಪ್ಪ. ಸದ್ಯ ನಾವು ಬರೆದದ್ದನ್ನು ಪ್ರಿಂಟು ಮಾಡ್ತಾರಲ್ಲ. ಅದೇ ದೊಡ್ಡ ಮರ್ಯಾದೆ' ಎಂದ. 'ಅವಾಗವಾಗ ಅಷ್ಟಿಷ್ಟು ಕೊಡ್ತಾರೆ. ಒಂದು ಕತೆಗೆ ಒಂದು ಪತ್ರಿಕೆಯೋರು ಮೂವತ್ತು ರೂಪಾಯಿ ಕೊಡ್ತಾರೆ. ಇನ್ನೊಂದು ಪತ್ರಿಕೆಯೋರು ಎಷ್ಟು ಕೊಡ್ತಾರೋ ಇನ್ನೂ ಗೊತ್ತಾಗಿಲ್ಲ. ಅವರು ಕೊಡ್ತಾರೆ ಅಂತ ಗ್ಯಾರಂಟೀನೂ ಇಲ್ಲ' ಎಂದು ಇನ್ನಷ್ಟು ವಿವರಣೆ ನೀಡಿದ್ದ. 'ಇರಲಿ ಬಿಡು, ಮೂವತ್ತು ರೂಪಾಯಿ ಅಂದರೆ ಸುಮಾರೇ ಆಯ್ತಲ್ಲ, ಪರವಾಯಿಲ್ಲ' ಎಂದು ಅಪ್ಪಯ್ಯ ಸಮಾಧಾನ ತಾಳಿದ್ದ.

ಅವನು ಬಂದ ದಿನವೆಲ್ಲ ಮನೆಯಲ್ಲಿ ಸಡಗರದ ವಾತಾವರಣ. ಮರುದಿನದಿಂದ ಎಂದಿನಂತೆ ಅಪ್ಪಯ್ಯನೊಟ್ಟಿಗೆ ಕೆಲಸಕ್ಕೆ ಹೊರಟಾಗ ಅವನೇನೂ ಜೊತೆ ಸೇರಲಿಲ್ಲ. ಬೆಳಗ್ಗೆ ತಡವಾಗಿ ಎದ್ದು ಅವ್ವನಿಂದ ಕಾಫಿ ಮಾಡಿಸಿ ಕುಡಿದು ತಾನು ತಂದಿದ್ದ ಪುಸ್ತಕ ಬಿಚ್ಚಿ ಓದುತ್ತಿದ್ದ. ಕಣ್ಣುಕಣ್ಣಿನ ಪಂಚೆ ಉಟ್ಟು ಹೊರಗಡೆ

ಸುತ್ತಾಡುತ್ತಿದ್ದ. ಊರಿನ ವಾರಿಗೆಯವರು ಬಂದರೆ ಅವರೊಂದಿಗೆ ದೊಡ್ಡ ದನಿಯಲ್ಲಿ ಮಾತಾಡುತ್ತಿದ್ದ. ಚಿಕ್ಕವನಾಗಿದ್ದಾಗ ಅವನನ್ನು ಶಾಲೆಯಿಂದ ತಪ್ಪಿಸಿ ಆಟಕೂಟಗಳಲ್ಲಿ ಒಂದು ವರ್ಷ ಹಾಳು ಮಾಡಿದ್ದ ಒಂದಿಬ್ಬರು ಆ ವೇಳೆಗಾಗಲೇ ಮದುವೆಯಾಗಿದ್ದು ಒಂದೊಂದು ಮಕ್ಕಳ ತಂದೆಯೂ ಆಗಿದ್ದರಿಂದ ಅವರೊಂದಿಗೆ ರಾಮಣ್ಣ ವಿಶೇಷ ಸಲುಗೆ ಪ್ರಕಟಿಸುತ್ತಿದ್ದ. ಅವನ ವಾರಿಗೆಯವರಲ್ಲಿ ಅನೇಕರು ಶಾಲೆ ಬಿಟ್ಟ ದಿನದಿಂದಲೂ ಪುಸ್ತಕಗಳಿಂದ ದೂರವೇ ಇದ್ದರು. ಅವರಿಗೆಲ್ಲ ತಾನು ತಂದಿದ್ದ ಪುಸ್ತಕಗಳಲ್ಲಿ ಒಂದೊಂದನ್ನು ಕೊಟ್ಟು ಓದಲು ಹಚ್ಚಿದ್ದ. 'ನಾನು ಈಗ ಕೆಲಸ ಮಾಡ್ತಿದೀನಲ್ಲ, ಆ ಶಾಲೆಯಲ್ಲಿ ಹುಡುಗರಿಂದ ವಾರ್ಷಿಕೋತ್ಸವಕ್ಕೆ ನಾಟಕ ಮಾಡಿಸಿದ್ದೆ. ಇಲ್ಲಿ ನನಗೆ ಒಂದು ತಿಂಗಳು ರಜೆ ಇದೆ. ನಿಮ್ಮಲ್ಲಿ ಕೆಲವರು ಮುಂದೆ ಬಂದರೆ ಇಲ್ಲೂ ಒಂದು ನಾಟಕ ಮಾಡಿಸಿ ಬಿಡೋಣ' ಎಂದು ಅವನು ಹೇಳುತ್ತಿದ್ದಾಗ ಅದನ್ನು ಬಾಯಿ ಬಿಟ್ಟು ಕೇಳುತ್ತಿದ್ದವರು 'ನಾವು ನಾಟಕದಲ್ಲಿ ಪಾಲ್ಟು ಮಾಡಾದಾ..?' ಎಂದು ಬೆರಗಾಗುತ್ತಿದ್ದರು.

ನೆಂಟನಂತೆ ಬಂದಿದ್ದ ರಾಮಣ್ಣ ಅವ್ವನಿಂದ ಚೆನ್ನಾಗಿ ಉಪಚಾರ ಮಾಡಿಸಿಕೊಂಡು ಒಂದು ತಿಂಗಳಲ್ಲಿ ಶಾಲೆಯ ಪುನರಾರಂಭವೆಂದು ವಾಪಸಾಗಿದ್ದ. ಅಲ್ಲಿ ಎಷ್ಟು ದಿನ ಇದ್ದನೋ... ಮೂರು ತಿಂಗಳಾದ ಮೇಲೆ ಶಂಕರಘಟ್ಟದಿಂದ ತಿಮ್ಮನಾಯ್ಕರ ಹೆಸರಿಗೆ ಕಾಗದವೊಂದು ಬಂತು. ಅದರಲ್ಲಿ ರಾಮಣ್ಣ ತಾನು ಹೈಸ್ಕೂಲು ಮೇಷ್ಟರಾಗಿಯೇ ಉಳಿಯಲಾರೆ, ಇನ್ನೂ ಹೆಚ್ಚಿನ ಸ್ಥಾನಕ್ಕಾಗಿ ಹೆಚ್ಚು ಓದಬೇಕಾಗಿದೆ ಎಂದು ಬರೆದಿದ್ದ. 'ಹೈಸ್ಕೂಲು ಕೆಲಸಕ್ಕೆ ರಾಜೀನಾಮೆ ನೀಡಿ ಕಾಲೇಜು ಸೇರಿಕೊಂಡಿದ್ದೇನೆ. ಒಂದು ವರ್ಷ ಕೆಲಸ ಮಾಡಿದ್ದೆನಲ್ಲ, ಆ ಸಂಬಳ ಸದ್ಯಕ್ಕೆ ಸಾಕಾಗುತ್ತದೆ. ಬೇಕಾದರೆ ಬ್ಯಾಂಕಿನಲ್ಲಿ ಸಾಲ ಪಡೆದು ಓದುತ್ತೇನೆ, ನಿಮ್ಮ ಆಶೀರ್ವಾದ ಇರಲಿ' ಎಂದು ಪತ್ರ ಮುಗಿಸಿದ್ದ.

ಅವನ ಕಾಗದವನ್ನು ಓದಿದ ಅಪ್ಪಯ್ಯ 'ಇದೆಂಥ ಮಳ್ಳುತನವೋ.. ಕೆಲಸ ಸಿಗಾದೆ ಕಷ್ಟ. ಅದ್ರಲ್ಲೂ ಇಂವ ಸಿಕ್ಕಿದ ಕೆಲ್ಸ ಬಿಟ್ಟು ಮತ್ತೆ ಓದ್ತೀನಿ ಅಂತ ಹೋಗಿದ್ದಾನಲ್ಲ. ಅದೇನು ಓದಿ ಯಾವ ಅಮಲ್ದಾರಿಕೆ ಮಾಡ್ತಾನೊ..' ಎಂದು ನಿರಾಸೆಯಿಂದ ಕೈ ಚೆಲ್ಲಿದ. 'ಅವನು ವಾಪಸು ಹೋಗುವಾಗ ಇವಳ ಕೈಯಲ್ಲಾದರೂ ದುಡ್ಡು ಕೊಡ್ತಾನೇನೋ ಅಂತ ಮಾಡಿದ್ದೆ. ಒಂದು ಬಿಲ್ಲೇನೂ ಇಡದೆ ಹಂಗೆ ಹೋಗಿದ್ದಾಗಲೇ ಗೊತ್ತಾಗಿತ್ತು. ಇವನಿಂದ ನಮಗೆ ಏನೂ ಆಗಾದಿಲ್ಲ ಅಂತ. ಹೋಗಲಿ ಬಿಡು, ಎಲ್ಲೋ ಚೆನ್ನಾಗಿದ್ದರೆ ಆತು, ಅಷ್ಟೆ' ಎಂದು ಅಪ್ಪಯ್ಯ ಹೇಳಿಕೊಳ್ಳುವಾಗ ಗಂಟಲು ಉಬ್ಬಿ ಮಾತು ಅರ್ಧಕ್ಕೆ ನಿಂತಿತ್ತು.

'ಅಲ್ಲ... ಹುಡುಗ ಒಂದು ತಿಂಗಳು ಇಲ್ಲೇ ಇದ್ನಲ್ಲ. ಒಂದು ಹೆಜ್ಜೆ ಅಕ್ಕನ ಮನೆಗಾದ್ರೂ ಹೋಗಿ ಬಂದ್ನಾ. ಈರವ್ವ ಎಷ್ಟೊಂದು ಆಸೆ ಪಡ್ತಾ ಇದ್ಲು ಇವನು ಅಲ್ಲಿಗೆ ಹೋಗಿದ್ರೆ..' ಎಂದು ಗಂಗಮ್ಮ ನಿಟ್ಟುಸಿರು ಬಿಟ್ಟರು. ಜೊತೆಗೆ 'ಅದಕ್ಕೆ ಅಂತಾರಲ್ಲ ಗಂಡು ಮಕ್ಕಳೂ ಒಂದೆ ಗಂಡು ನಾಯಿನೂ ಒಂದೆ ಅಂತ... ಇಲ್ಲಿ ಇಂವ ಮೂಗಿಗೆ ಕವಡೆ ಕಟ್ಟಿಕೊಂಡು ಗದ್ದೆ, ತೋಟದ ಕೆಲಸ ಮಾಡ್ತಾ ಇದಾನೆ. ಅಣ್ಣ ಅಂತ ಕ್ರಿಯಾ ಬ್ಯಾಡವಾ.. ಅವನ ಹತ್ರ ಸರಿಯಾಗಿ ಮಾತೂ ಆಡ್ತಿರಲಿಲ್ಲ. ಅದೇನು ಪುಸ್ತಕಾನೋ. ಯಾವಾಗಲೂ ಹಿಡಕೊಂಡೇ ಇರೋನು. ಹೊತ್ತುಹೊತ್ತಿಗೆ ಕಾಪಿ– ಊಟ ತಿಂಡಿ ಬೀಳ್ತಾ ಇದ್ರೆ ಈಗಿನ ಹುಡುಗರು ಹಿಂಗೆ ಏನೋ...' ಎಂದು ತನ್ನತ್ತ ನೋಡಿ ಅವ್ವ ಹನಿಗಣ್ಣಾಗಿದ್ದಳು. 'ಅದಕ್ಯಾಕೆ ಬೇಜಾರು ಮಾಡ್ತೀಯಾ ಅವ್ವ. ನನಗೆ ಮುಂದೆ ಓದೋದು ಹಣೇಲಿ ಬರೆದಿರಲಿಲ್ಲ. ಅವನಿಗೆ ಬರೆದಿತ್ತು, ಅಷ್ಟೆ. ನಾನು ಎಸ್ಸೆಸ್ಸೆಲ್ಸಿ ಪಾಸಾಗಿದ್ದರೆ ಇಲ್ಲೇ ಎಲ್ಲಾದರೂ ಓದಲು ಮುಂದೆ ಹೋಗ್ತಿದ್ದೆ. ಯಾವಾಗ ಫೇಲಾದೆನೋ, ಓದೋ ಆಸಕ್ತೀನೇ ಹೋಗಿ ಗದ್ದೆ ಕೆಲಸಕ್ಕೆ ಬಂದ್ನೆಲ್ಲ. ಅವನಿಗೆ ಅದೃಷ್ಟ ಇತ್ತು, ಪಾಸಾಗ್ತಾ ಹೋದ. ಈಗ ನೋಡು ನಮಿಗೆ ಕಷ್ಟ ಆಗುತ್ತೆ ಅಂತ

ಅವನೇ ಒಂದು ವರ್ಷ ಕೆಲಸ ಮಾಡಿ ದುಡ್ಡು ಮಾಡಿಕೊಂಡು ಮುಂದೆ ಓದಾಕೆ ಹೋಗಿದಾನೆ. ಅಲ್ದೆ, ಅವನು ಈಗ ಕತೆ ಬರಿಯೋ ಕವಿ. ಅವನಿಗೆ ಪೇಟೆ ಜನ ಎಷ್ಟು ಮರ್ಯಾದೆ ಕೊಡ್ತಾರೆ ಗೊತ್ತಾ. 'ಹಳ್ಳೂರು ರಾಮಣ್ಣ ನನ್ನ ತಮ್ಮ' ಅಂತ ಹೇಳಿದಾಗ ನನಗೂ ಮರ್ಯಾದೆ ಕೊಡ್ತಾರೆ. ಅವನು ದೊಡ್ಡ ಮನುಷ್ಯಾ ಆಗೇ ಆಗ್ತಾನೆ ನೋಡ್ತಾ ಇರು' ಎಂದು ತಾನು ಸಮಾಧಾನ ಪಡಿಸಿದ್ದ.

'ಅವನದ್ದು ಇರಲಿ, ಹೇಗೂ ದೊಡ್ಡ ಮನುಷ್ಯ ಆಗ್ತಾನೆ ಅಂತ ಹೇಳ್ತೀಯಲ್ಲ. ಆಗಲಿ. ನಾವು ಹೋದ ವರ್ಷ ಹೇಳಿದ್ದಕ್ಕೆ 'ರಾಮು ಬರ್ಲಿ' ಅಂತ ಹೇಳ್ತಾ ಇದ್ದೆ ನೀನು. ನನಗೂ ಇಬ್ರೂ ಗಂಡು ಮಕ್ಕಳಿಗೆ ಒಟ್ಟಿಗೆ ಮಾಡಿದ್ರೆ ಒಂದೇ ಮೈಯಲ್ಲಿ ಎಲ್ಲಾ ಪೂರೈಸುತ್ತೇ ಅಂತಾನು ಇತ್ತು. ನನಗೂ ಕೈಯಲ್ಲಾಗಲ್ಲ, ವಯಸ್ಸಾಯ್ತು. ಈ ವರ್ಷ ನಿನಗೆ ಹೆಣ್ಣು ನೋಡಾನ. ಆಗಲೇ ಕೆಲವರು ವಿಚಾರಿಸಿದ್ದಾರೆ. ತಾರಾನುಕೂಲ ಬಂದರೆ ಈ ವರ್ಷ ಆಗೇ ಬಿಡ್ಲಿ. ನಾನೂ ಎಷ್ಟೂ ಅಂತ ಮಾಡ್ಲಿ' ಎಂದು ಅವ್ವ ತನ್ನ ಮದುವೆಯ ಪ್ರಸ್ತಾಪವನ್ನೂ ಮಾಡಿದಳು. ಅಲ್ಲಿಯೇ ಇದ್ದ ಅಪ್ಪಯ್ಯನೂ ಅದನ್ನೆಲ್ಲ ಕೇಳಿಸಿಕೊಂಡಿದ್ದ.

ಒಂದೆರಡು ತಿಂಗಳಲ್ಲಿ ಹಳೆಯ ಸಂಬಂಧದ ಪಾರ್ವತಿಯ ಜನ್ಮನಕ್ಷತ್ರ, ಗಣಕೂಟ ಕೂಡಿ ಬಂದು ಮದುವೆಯ ಪ್ರಸ್ತಾಪ ಗಟ್ಟಿಯಾಯಿತು. ಮುಹೂರ್ತದ ದಿನವೂ ನಿಗದಿಯಾಯಿತು. ಶಂಕರಘಟ್ಟ ಎಷ್ಟು ದೂರ, ಒಂದು ಚಣ ಬಂದು ಹೋಗಬಹುದಿತ್ತು. ಅಪ್ಪಯ್ಯ ಕಾಗದ ಬರೆದಿದ್ದ. ಲಗ್ನ ಪತ್ರಿಕೆಯನ್ನೂ ಕಳಿಸಿದ್ದ. ಮದುವೆಯ ದಿಬ್ಬಣ ಹೊರಡುವ ಹೊತ್ತಿಗೆ ಅವನಿಂದ ಬಂದ ಕಾಗದದಲ್ಲಿ 'ಪರೀಕ್ಷೆಯ ಒತ್ತಡದಿಂದ ಅಣ್ಣಯ್ಯನ ಮದುವೆ ಬರಲಾಗುತ್ತಿಲ್ಲ' ಎಂದು ಬರೆದಿದ್ದ. ಅಪ್ಪಯ್ಯ 'ಆಗಲಿ ಬಿಡಿ, ಅಷ್ಟಾದರೂ ತಿಳಿಸಿದನಲ್ಲ' ಎಂದು ಬಂದಿದ್ದ ನಂಟರನ್ನೇ ಸಮಾಧಾನ ಮಾಡಿದ್ದ. 'ಅವನು ಮೊದಲಿಂದಲೂ ಹಾಗೇನೆ. ತನ್ನದೇ ಒಂದು ದಾರಿ. ಅಣ್ಣಯ್ಯನ ಮದುವೆಗಾದ್ರೂ ಬರಲಾಗದಂಥದ್ದು ಅದೆಂಥ ಪರೀಕ್ಷೇನೋ ಮಾರಾಯ' ಎಂದು ತನಗೆ ಬಲಗೊಡೆಯನಾಗಿ ತಲೆಗೆ ಮುಂಡಾಸು ಸುತ್ತಿಕೊಂಡಿದ್ದ ವಾಸಭಾವ ಹೇಳಿದ್ದ. 'ಇಂಥ ಸಂದರ್ಭಕ್ಕೂ ಬರಲಿಲ್ಲ ಅಂದ್ರೆ ಎಂಥ ಹುಡುಗನೋ ಇದು' ಎಂದು ಈರಮ್ಮನೂ ಬೇಜಾರು ಮಾಡಿಕೊಂಡಳು. 'ಮದುಮಗನಿಗೆ ಕಳಸ ಹಿಡಿದೋಳು, ಹಂಗೆ ಕಣ್ಣೀರು ಹಾಕಬಾರದೇ ತಂಗಿ' ಎಂದು ಮದುವೆಗೆ ಬಂದಿದ್ದ ಹಿರಿಯರೊಬ್ಬರು ಲಘುವಾಗಿ ಗದರಿಸಿಕೊಂಡರು. ಮದುವೆ ದಿಬ್ಬಣ ನಿರಾತಂಕವಾಗಿ ಸಾಗಿತ್ತು.

ಅಪರೂಪಕ್ಕೆ ಬರುತ್ತಿದ್ದ ಅವನ ಕಾಗದಗಳಲ್ಲಿ ಪರೀಕ್ಷೆ, ಕ್ಷೇತ್ರ ಕಾರ್ಯದ ತಿರುಗಾಟ, ಬೆಂಗಳೂರಿಗೆ ಕಮ್ಮಟಕ್ಕೆ ಹೋಗುವುದು, ಕವಿಗೋಷ್ಠಿಯಲ್ಲಿ ಪದ್ಯ ಓದುವ ಅವಕಾಶ ಎಂದೆಲ್ಲ ವಿಷಯಗಳು ಇರುತ್ತಿದ್ದವು. ಒಂದೆರಡು ಸಲ ಹಣಕ್ಕೂ ಬರೆದಿದ್ದ. ಎರಡು ವರ್ಷ ಹಾಗೆಯೇ ಕಳೆದ ಮೇಲೆ 'ಅಂತೂ ನನಗೆ ಎಂಎ ಡಿಗ್ರಿ ಸಿಕ್ಕಿತು' ಎಂದು ಬರೆದಿದ್ದ. ಅದಾಗಿ ಒಂದು ತಿಂಗಳಿಗೆ 'ಸರ್ಕಾರಿ ಕಾಲೇಜಿನಲ್ಲಿ ಲೆಕ್ಚರರ್ ಕೆಲಸಕ್ಕೆ ಆಯ್ಕೆಯಾಗಿದೆ. ಹಾಸನದ ಕಡೆ ತಾಲ್ಲೂಕು ಕೇಂದ್ರದ ಕಾಲೇಜಿಗೆ ಹಾಕಿದ್ದಾರೆ' ಎಂಬ ಪತ್ರ ಬಂದಿತ್ತು. 'ಅಂತೂ ನಮ್ಮ ರಾಮು ಕಾಲೇಜು ಮೇಷ್ಟರಾದ' ಎಂದು ಅಪ್ಪಯ್ಯ ಮತ್ತೊಮ್ಮೆ ಅಭಿಮಾನದಿಂದ ನಂಟರು–ಪರಿಚಿತರು, ಬಂಧುಗಳೊಂದಿಗೆ ಹೇಳಿಕೊಂಡು ಸಂಭ್ರಮ ಪಟ್ಟ. 'ಕೆಲಸಕ್ಕೆ ಸೇರಿಕೊಳ್ಳುವ ಮೊದಲು ಊರಿಗೆ ಬಂದು ಹೋಗ್ತೀನಿ' ಎಂದು ಅವನು ಬರೆದ ಕಾಗದ ಮನೆಯಲ್ಲಿ ಹರ್ಷದ ಹೊನಲನ್ನು ಹರಿಸಿತ್ತು.

ಕೆಲಸಕ್ಕೆ ಸೇರಿದ ಎರಡು ವರ್ಷಗಳವರೆಗೆ ವರ್ಷಕ್ಕೆ ಒಂದು ಸಲವಾದರೂ ಬಂದು ಎರಡು ವಾರ ಇದ್ದು ಹೋಗುತ್ತಿದ್ದ ರಾಮಣ್ಣ. ಅವನು ಅಪರೂಪಕ್ಕೆ ಬಂದಾಗಲೂ ಅವ್ವ 'ಅಡಿಗೆ ಮಾಡಿಕೊಂಡು ಕಷ್ಟಪಡ್ತೀಯಲ್ಲೋ' ಎಂದು ಮರುಗುತ್ತಿದ್ದಳು. ಅಪ್ಪಯ್ಯನೂ ಸೂಚನೆ ಕೊಡುತ್ತಿದ್ದ. ಓದು ಮುಗಿದು,

ಕೆಲಸವೂ ಸಿಕ್ಕಿದ ಮೇಲೆ ಮದುವೆ ಅಂತ ಆದರೆ ಎಲ್ಲ ಒಂದು ಹದಕ್ಕೆ ಬರುತ್ತೆ ಅನ್ನುವ ಯೋಚನೆ ಅಪ್ಪಯ್ಯನದು. ಅವನು ಹೈಸ್ಕೂಲು ಮೇಷ್ಟರಾಗಿದ್ದ ದಿನಗಳಲ್ಲೇ ರಾಮಣ್ಣನ ಸಂಪಾದನೆಯ ವಿಷಯ ಅಪ್ಪಯ್ಯನಿಗೆ ಗೊತ್ತಾಗಿತ್ತು. ಕಾಲೇಜು ಮೇಷ್ಟರಾದ ಮೇಲೆ ಸಂಪಾದನೆ ಎಷ್ಟೆಂದು ಕುತೂಹಲಕ್ಕೂ ವಿಚಾರಿಸಿರಲಿಲ್ಲ. 'ಎಲ್ಲೋ ಒಂದು ಕಡೆ ಕೆಲಸ ಸಿಕ್ಕಿದೆ. ಹಬ್ಬಗಳಿದ್ದಾಗ ಬಂದು ಹೋದರೆ ನಮಗೂ ಸಮಾಧಾನ' ಎಂದು ಆಗಾಗ ಹೇಳುತ್ತಿದ್ದ. ಅಪ್ಪಯ್ಯನ ವಾರಿಗೆಯವರು ರಾಮಣ್ಣನ ಕೀರ್ತಿಯನ್ನು ಕೇಳಿದ್ದರು. ಅವನು ಹಳೆಯ ಸಂಬಂಧಿಗಳೂ ಆಸಕ್ತಿ ತಾಳಿದ್ದರು. ಒಳ್ಳೇ ಕಡೆ ಸಂಬಂಧವಾದರೆ ಅನುಕೂಲವಾಗುತ್ತಿತ್ತು ಎಂಬ ನಿರೀಕ್ಷೆಯೂ ಇದ್ದಿರಬೇಕು. 'ಸದ್ಯ ನಮ್ಮ ಜನರಲ್ಲಿ ಇಷ್ಟು ಓದಿ ಕಾಲೇಜು ಮೇಷ್ಟ್ರು ಆದವರೇ ಇಲ್ಲ' ಎಂದು ಅವನು ಹೇಳುತ್ತಾ ಇದ್ದುದು ಗೊತ್ತಾಗುತ್ತಿತ್ತು. ಹಳೆಯ ನಂಟರು ಮನೆಗೆ ಬಂದರೆ ಅವರನ್ನು ರಾತ್ರಿ ಉಳಿಯಲು ಒತ್ತಾಯ ಮಾಡುತ್ತಿದ್ದ ಅಪ್ಪಯ್ಯ ಅವರು ಬೆಳಗ್ಗೆ ಹೋಗುವಾಗ 'ಯಾವುದಕ್ಕೂ ಅವನು ಒಂದು ಮಾತು ನಮಗೆ ಹೇಳಿದರೆ ನಾವು ಮತ್ತೆ ಮುಂದುವರಿಯಬಹುದು' ಎಂದು ಆಶಾಭಾವನೆ ಮೂಡಿಸುತ್ತಿದ್ದ. ಅಪ್ಪಯ್ಯನೇ ಕೆಲವೊಮ್ಮೆ ಕಾಗದ ಬರೆದೂ ಸೂಚಿಸುತ್ತಿದ್ದ. ಓದಿ ಕೆಲಸದಲ್ಲಿರುವ ಮಗ, ದೊಡ್ಡ ಕವಿಯೂ ಆಗಿರುವುದರಿಂದ ಅವನಿಗೆ ಓದಿದ ಹುಡುಗಿಯನ್ನೇ ತರಬೇಕು ಎಂಬ ಅಂದಾಜು ಅಪ್ಪಯ್ಯನಲ್ಲಿತ್ತು. ಅದನ್ನು ನಂಟರಲ್ಲಿ ಹೇಳಿಯೂ ಇದ್ದ.

ಅವತ್ತು ಮಧ್ಯಾಹ್ನ ರಾಮಣ್ಣನಿಂದ ಒಂದು ದೊಡ್ಡ ಕವರು ಬಂತು. ಮಧ್ಯಾಹ್ನದ ಊಟ ಮುಗಿಸಿ ಎಲೆ ಅಡಿಕೆ ಹಾಕಿಕೊಳ್ಳುತ್ತಾ ಇದ್ದಾಗ ಅದನ್ನು ಬಿಡಿಸಿ ಅಪ್ಪಯ್ಯ ಓದತೊಡಗಿದ. ಮುಖದಲ್ಲಿ ಸಣ್ಣ ಬದಲಾವಣೆಗಳು ಹತ್ತಿರವೇ ಕುಳಿತು ನೋಡುತ್ತಿದ್ದ ತನಗೆ ಕಾಣತೊಡಗಿದವು. ಅಪ್ಪಯ್ಯ ಸಮಾಧಾನದ ಮನುಷ್ಯ. ಕಾಗದವನ್ನು ಪೂರ್ತಿ ಓದಿ ಮಡಿಚಿ ಇಟ್ಟವನು ಮಾತೇ ಆಡದೆ ತನ್ನ ಕೈಗೆ ಕೊಟ್ಟ. ಅದನ್ನು ಬಿಡಿಸಿ ಓದತೊಡಗಿದಾಗ ಅಪ್ಪಯ್ಯನ ಹುಬ್ಬುಗಳು ಗಂಟಿಕ್ಕುತ್ತಿದ್ದುದಕ್ಕೆ ಕಾರಣ ಸಿಕ್ಕಿತು. ರಾಮಣ್ಣ ತನ್ನ ಮದುವೆಯ ಬಗ್ಗೆ ಬರೆದಿದ್ದ. ಅದಕ್ಕೆ ದೊಡ್ಡದೊಂದು ಹಿನ್ನೆಲೆಯನ್ನೂ ನೀಡಿದ್ದ. 'ನಾವು ಜಾತಿಮತಗಳ ಕಟ್ಟುಪಾಡಿಗೆ ಒಳಗಾಗಿದ್ದು ಇನ್ನು ಸಾಕು. ನಮ್ಮದು ಈಗ ಜಾತ್ಯಾತೀತ ದೇಶ. ಸಮಾಜದಲ್ಲಿ ಬದಲಾವಣೆ ತರಬೇಕಿದ್ದರೆ ನನ್ನಂಥವರು ಮುಂದೆ ನುಗ್ಗಬೇಕು. ನನ್ನನ್ನು ಒಬ್ಬ ಹುಡುಗಿ ಇಷ್ಟಪಟ್ಟಿದ್ದಾಳೆ. ನಾಲ್ಕು ವರ್ಷಗಳಿಂದ ಪರಿಚಯ. ಅವರ ಮನೆಯಲ್ಲಿಯೂ ವಿರೋಧ ಇದೆ. ಆದರೆ ಅವಳಿಗೆ ಹದಿನೆಂಟು ತುಂಬಿದೆ. ಅವಳ ನಿರ್ಧಾರಕ್ಕೆ ಯಾರೂ ಆಕ್ಷೇಪ ಹೇಳುವಂತಿಲ್ಲ. ನಾವಿಬ್ಬರೂ ಪರಸ್ಪರ ಒಪ್ಪಿಕೊಂಡು ಗೆಳೆಯರ ಸಮ್ಮುಖದಲ್ಲಿ ಮದುವೆ ಆಗಿದ್ದೇವೆ. ನಿಮ್ಮೆಲ್ಲರ ಆಶೀರ್ವಾದ ಕೋರುತ್ತೇವೆ' ಎಂಬ ವಿವರಣೆ ಇದ್ದ ಪತ್ರ.

ನೀರು ತುಂಬಿದ ಕೃಷಿಹೊಂಡದಂತಿದ್ದ ಮನೆಯಲ್ಲಿ ಒಮ್ಮೆಗೆ ಎಮ್ಮೆಕೋಣಗಳ ದಂಡು ನುಗ್ಗಿ ತಿಳಿನೀರನ್ನೆಲ್ಲ ಬಗ್ಗಡ ಮಾಡಿದಂತಾಯಿತು. ಹೆಚ್ಚು ಆಘಾತವಾಗಿದ್ದು ಅಪ್ಪಯ್ಯನಿಗೆ. ಅವ್ವ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿರಲಿಲ್ಲ. 'ಯಾರಂತೆ, ಯಾವ ಜಾತಿಯಂತೆ' ಎಂದು ಅವಳು ಕೇಳಿದರೂ ಅವನ ಕಾಗದದಲ್ಲಿ ಆ ಪ್ರಶ್ನೆಗಳಿಗೆ ಉತ್ತರ ಇರಲಿಲ್ಲ. ಶಾಲೆಗೆ ಹೋಗುತ್ತಿದ್ದ ನಾಗರಾಜ, ಲಿಂಗರಾಜ ಬೆರಗಾಗಿ ನಮ್ಮ ಮಾತುಗಳನ್ನು ಕೇಳಿಸಿಕೊಂಡಿದ್ದರು. ಅಪರೂಪಕ್ಕೆ ಬಂದಾಗಲೂ ಅವನನ್ನು ಲಿಂಗರಾಜ ಹಚ್ಚಿಕೊಂಡಿದ್ದ. ಅವನಿಗೆ ಹೊಸ ಚಿಕ್ಕಮ್ಮ ಬಂದ ಸಂಗತಿ ಸಂಭ್ರಮಕ್ಕೆ ಕಾರಣವಾಗಿತ್ತು. 'ಮತ್ತೆ ವಾಲಗ, ದಿಬ್ಬಣ, ಚಪ್ಪರ, ಧಾರೆ ಇವೆಲ್ಲ ಎಲ್ಲಿ ಮಾಡಿಕ್ಯಂಡ ಚಿಕ್ಕಪ್ಪ' ಎಂದು ಅವನು ಕುತೂಹಲ ತೋರಿಸಿದ್ದಕ್ಕೆ ನಮ್ಮಲ್ಲಿ ಉತ್ತರ ಇರಲಿಲ್ಲ. ಯಾರಿಗೂ ಏನನ್ನೂ ಹೇಳದಿದ್ದರೂ ಊರಿಗೆ ಸುದ್ದಿ ಮುಟ್ಟಿತ್ತು. ಒಬ್ಬೊಬ್ಬರೇ ಮನೆಗೆ ಬರಲಾರಂಭಿಸಿದರು. ಕೆಳಗಿನ ಮನೆ

ರಂಗಣ್ಣನೇ ಮೊದಲು ಬಂದವನು. 'ಎಲ್ಲಂತೆ, ಯಾರಂತೆ, ಹೆಣ್ಣು ಯಾವ ಜಾತಿಯಂತೆ' ಎಂಬ ಪ್ರಶ್ನೆಗಳಿಗೆ ಉತ್ತರ ಇರಲಿಲ್ಲ. 'ಇಂಥವೆಲ್ಲ ಆಗ್ತಾನೆ ಇರ್ತಾವೆ ಬಿಡು ತಿಮ್ಮಯ್ಯ. ಅವನು ತಪ್ಪೇನೂ ಮಾಡಿಲ್ಲ. ಬಂದು ಹಿಂಗಿಂಗೆ ಮದುವೆ ಆಗ್ತಾ ಇದೀನಿ ಅಂದಿದ್ರೆ ನೀವೇನು ಬ್ಯಾಡ ಅಂತಿದ್ರಾ.. ಅವನಿಗೆ ಏನು ಅವಸರ ಇತ್ತೋ.. ಅಲ್ಲಿ ಪರಿಸ್ಥಿತಿ ಹೆಂಗಿತ್ತೋ.. ಆದರೇನು ಈಗ, ನಿಮಗೆ ಒಂದಿಷ್ಟು ಖರ್ಚು ಕಡಿಮೆ ಆತು ಅಂದ್ಕಳ್ಳಿ. ಅವನಿಗೆ ಹೆಂಡತಿ ಕರ್‍ಕಂಡು ಬರಾಕೆ ಬರೀರಿ. ಇಲ್ಲಿ ಒಂದು ಆರತಿ ಅಂತ ಮಾಡಿ ಕಳಿಸಿದರೆ ಆತು..' ಎಂದು ಅವನು ಸಮಾಧಾನ ಮಾಡಿದ್ದಕ್ಕೆ ಆ ವೇಳೆಗೆ ಬಂದಿದ್ದ ಊರಿನವರು ದನಿಗೂಡಿಸಿದರು. 'ಅಲ್ಲ... ಅವನು ಯಾರನ್ನಾದ್ರೂ ಮದುವೆ ಆಗಲಿ, ಆದರೆ ಅಪ್ಪ ಅವ್ವ ಬದುಕಿದಾರೆ ಅಂತನಾದ್ರೂ ತಿಳ್ಕಾಬಾರದಾ... ನಾವೇನು ಬ್ಯಾಡ ಅಂತಿದ್ದೆವಾ.. ಮೊದ್ಲೂಲು ಒಂದು ಮಾತು ಕೇಳಿದ್ರೆ ನಾವೂ ಮದುವೆ ಹೊತ್ತಿಗೆ ಹೋಗಿ ನಾಲ್ಕು ಅಕ್ಕಿ ಕಾಳು ತಲೆ ಮೇಲೆ ಹಾಕ್ತಿದ್ವಿ. ಅವನ ಬಾಸಿಂಗ ನೋಡೋಕೂ ಸವಡು ಮಾಡ್ಲಿಲ್ಲಲ್ಲ...' ಎಂದು ಅಪ್ಪಯ್ಯ ಬೇಜಾರು ಮಾಡಿಕೊಂಡ.

ಊರಿನ ಜನರಷ್ಟೇ ಅಲ್ಲ, ಸುದ್ದಿ ಈರವ್ವನಿಗೂ ತಿಳಿಯಿತು. ಅವಳು ತಕ್ಷಣವೇ ಹೊರಟು ಬಂದಳು. 'ಹಿಂಗೆ ಅವನು ಯಾರಿಗೂ ಹೇಳದೆ ಕೇಳದೆ ಮದುವೆ ಮಾಡಿಕ್ಯಂಡ ಅಂದ್ರೆ ಏನೋ ತುರ್ತು ಸಂದರ್ಭ ಇರಲೇಬೇಕು. ನೀವಿಬ್ರೂ ಅವನಿರೋವಲ್ಲಿಗೆ ಹೋಗಿ ಬರ್ರಿ' ಎಂದು ತನಗೆ ಹೇಳಿ ವಾಸಭಾವನನ್ನೂ ಜೊತೆಗೆ ಹೊರಡುವಂತೆ ಒತ್ತಾಯಿಸಿದಳು. 'ನಾವ್ಯಾಕೆ ಅಷ್ಟು ಅವಸರ ಮಾಡಿ ಹೋಗಬೇಕು' ಎಂದು ವಾಸ ಭಾವ ಹೇಳಿದ್ದಕ್ಕೆ 'ನಿಮಗೆ ಗೊತ್ತಾಗಲ್ಲ. ಅಲ್ಲೇನು ತೊಂದರೆ ಇದೆಯೋ.. ಇಲ್ಲದಿದ್ರೆ ಹಿಂಗೆ ನಮ್ಮನ್ನೆಲ್ಲ ಬಿಟ್ಟು ಅವನು ಯಾಕೆ ಮದುವೆ ಮಾಡಿಕೊಳ್ತಿದ್ದ' ಎಂದು ಹಠ ಮಾಡಿದಳು. ಅಪ್ಪಯ್ಯ ಅವಳ ಮಾತನ್ನು ಲಕ್ಷ್ಯ ಮಾಡಲಿಲ್ಲ. 'ಅಂತದ್ದೇನೂ ಇರ್ಲಿಕ್ಕಿಲ್ಲ ಬಿಡು ತಂಗಿ. ಸಂದರ್ಭ ಏನೇ ಆಗಿರಲಿ. ಅವನಿಗೆ ದೊಡ್ಡ ದೊಡ್ಡೋರ ಪರಿಚಯ ಇರ್‍ತಿದೆ. ಅವನೂ ದೊಡ್ಡ ಮನುಷ್ಯಾನೇ.. ಈ ನಮ್ಮ ಹಳ್ಳಿ ಮನೆಗೆ ದೊಡ್ಡೋರ್‍ನೆಲ್ಲ ಹೆಂಗೆ ಕರ್‍ಕಾ ಬರಾದು ಅಂತ ಅವನು ಯೋಚನೆ ಮಾಡಿರಬಹುದು. ನಾವು ಅವನಿಗೆ ಬಂದು ಹೋಗು ಅಂತ ಕಾಗದ ಬರೆದು ಹಾಕನ' ಎಂದು ಸಮಾಧಾನ ಪಡಿಸಿದ ಮೇಲೆ ಸುಮ್ಮನಾದಳು.

ಅದಾಗಿ ಒಂದು ವಾರಕ್ಕೆ ರಾಮಣ್ಣ ಹೆಂಡತಿಯನ್ನು ಕರೆದುಕೊಂಡು ಬಂದ. ಕಾಗದ ಬರೆದು ಸುದ್ದಿ ಕೊಟ್ಟಿರಲಿಲ್ಲ. ಅನಿರೀಕ್ಷಿತವಾಗಿ ಬಂದರೂ ಮನೆಯಲ್ಲಿ ಮಾತ್ರವಲ್ಲದೆ, ಊರಿನಲ್ಲಿಯೂ ಅವನ ನಿರೀಕ್ಷೆ ಇದ್ದ ಕಾರಣ ತಕ್ಷಣವೇ ಎಲ್ಲ ಸೇರಿ ಆರತಕ್ಷತೆಗೆ ಸಿದ್ಧತೆ ನಡೆಸಿದರು. ಅವರು ಬೆಳಗಿನ ಬಸ್ಸಿಗೆ ಬಂದಿದ್ದರು. ಮನೆ ಬದಿಯೆಲ್ಲ ಸುತ್ತಾಡಿದರು. ತೆಳ್ಳಗೆ ಬೆಳ್ಳಗೆ ಇದ್ದ ಹುಡುಗಿ. ಮಂಜುಳ ಅಂತ ಹೆಸರು. ಬ್ರಾಹ್ಮಣರ ಪೈಕಿಯಂತೆ. ಇವನೊಟ್ಟಿಗೆ ಶಂಕರಘಟ್ಟದಲ್ಲಿ ಸಹಪಾಠಿ. ಅಪ್ಪ ಇಲ್ಲ. ಒಬ್ಬ ತಂಗಿ ಇದ್ದಾಳೆ. ಅಣ್ಣನ ಆಸರೆಯಲ್ಲಿ ಓದುತ್ತಿದ್ದಳಂತೆ. ಇವನಿಗೆ ಕೆಲಸ ಸಿಕ್ಕಿದ ಮೇಲೆ ಕಾಗದ ಪತ್ರದ ಸಂಪರ್ಕ ಹೆಚ್ಚಾಗಿ ಮದುವೆ ಮಾಡಿಕೊಳ್ಳಲು ನಿರ್ಧಾರ ಮಾಡಿದರಂತೆ. ಅಷ್ಟು ವಿವರಗಳನ್ನು ಅವನು ಮನೆಗೆ ಬಂದ ತಕ್ಷಣವೇ ಹೇಳಿದ. ಮನೆ ಒಳಗೆ ಬರುತ್ತಿದ್ದಂತೆಯೇ ಆಕೆ ಹಿರಿಯರಿಗೆ ನಮಸ್ಕರಿಸಿ ಮನಸ್ಸನ್ನು ಗೆದ್ದುಬಿಟ್ಟಳು. ಎಲ್ಲರೊಂದಿಗೆ ಸ್ನೇಹದಿಂದ ಮಾತಾಡುತ್ತಾ ಮನೆ ಒಳಗೆಲ್ಲ ಸುತ್ತಾಡಿದಳು. ಅವಳ ಸರಳ ನಡವಳಿಕೆ ಎಲ್ಲರಿಗೂ ಹಿಡಿಸಿದ್ದರಿಂದ ರಾಮಣ್ಣ ತಪ್ಪೇನೂ ಮಾಡಲಿಲ್ಲ ಎನ್ನಿಸಿತು. ಅವತ್ತೇ ಸಂಜೆಗೆ ಊರಿನವರೆಲ್ಲ ಸೇರಿ ಜಗುಲಿಯಲ್ಲಿ ಆರತಕ್ಷತೆಗೆ ಇಬ್ಬರನ್ನೂ ಕೂರಿಸಿ ಅಕ್ಷತೆ, ಆರತಿಯ ಶಾಸ್ತ್ರ ಮಾಡಿದರು. ಸಾಕಷ್ಟು ಮೊತ್ತವೂ ಮದುಮಕ್ಕಳಿಗೆ ಉಡುಗೊರೆಯಾಗಿ ಸೇರಿತು. ಸುದ್ದಿ ತಿಳಿದು ಈರವ್ವನೂ ವಾಸ ಭಾವನೊಂದಿಗೆ ಬಂದು ಹೊಸ ಅತ್ತಿಗೆಯನ್ನು

ಕಂಡು ಅವಳ ಸರಳತೆಗೆ ಮಾರು ಹೋದಳು. ಹೊಸ ಚಿಕ್ಕಮ್ಮ ನಾಗರಾಜನಿಗಿಂತಲೂ ಲಿಂಗರಾಜನಿಗೆ ಹೆಚ್ಚು ಇಷ್ಟವಾದಳು..

* * *

ಅಧ್ಯಾಯ– 3

# ಲಿಂಗರಾಜನ ಕನಸು

ರಾಮಣ್ಣನ ಹೆಸರು ಕೇಳಿದರೆ ಲಿಂಗರಾಜನಿಗೆ ಮೈಯಲ್ಲಿ ಮುಳ್ಳು ಎದ್ದಂತಾಗುತ್ತಿತ್ತು. ಆಸ್ಪತ್ರೆಯಲ್ಲಿ ವಾಸ ಮಾವ ರಾಮಣ್ಣನ ಪ್ರಸ್ತಾಪ ಮಾಡಿದಾಗ ಬಹುಕಾಲದಿಂದ ಮರೆತುಹೋಗಿದ್ದ ಘಟನೆಗಳು ನೆನಪಿಗೆ ಬರತೊಡಗಿದವು.

ಚಿಕ್ಕವನಾಗಿದ್ದಾಗ ಅವನಿಗೆ ರಾಮಣ್ಣ ಸಲುಗೆಯ ಚಿಕ್ಕಪ್ಪ. ಅವನು ಊರ ಶಾಲೆಯಲ್ಲಿ ನಾಲ್ಕನೇ ತರಗತಿ ಮುಗಿಸಿ ಬೇಸಗೆ ರಜೆಯಲ್ಲಿದ್ದಾಗ ರಾಮಣ್ಣ ಊರಿಗೆ ಬಂದಿದ್ದ. ಒಬ್ಬನೇ ಬಂದಿದ್ದ. ತಾನು ಮುಂದೆ ಹೋಗುವುದಿದ್ದರೆ ಸರ್ಕಾರಿ ರಸ್ತೆಯ ಮೂಲಕ ಹತ್ತು ಕಿಲೋಮೀಟರ್ ದೂರದ ಪೇಟೆಗೆ ಹೋಗಬೇಕು. ಒಳಹಾದಿಯಲ್ಲಿ ಅವರಿವರ ಗದ್ದೆ, ತೋಟ, ಹಕ್ಕಲಿನ ಬೇಲಿಗಳನ್ನು ದಾಟಿ, ಗದ್ದೆ ಹರಗಳ ಅಂಚಿನ ಸಣ್ಣ ಹಳ್ಳ ತೊರೆಗಳನ್ನೂ ಹಾದು ನಡುವೆ ಸಿಗುವ ಕಾಡು, ಬಯಲಿನ ಹಾದಿಯಲ್ಲಿ ಸಾಗಿದರೆ ದೂರ ಕೊಂಚ ಕಡಿಮೆ ಆಗುತ್ತಿತ್ತು. ಆಗಷ್ಟೆ ಹತ್ತಕ್ಕೆ ಕಾಲಿರಿಸಿದ್ದ ತನಗೆ ಊರಿಂದ ಜೊತೆಗಾರರಿದ್ದರೆ ಹೋಗಬಹುದೆನಿಸಿತ್ತು. ತನಗಿಂತ ಎರಡು ತರಗತಿ ಮುಂದಿದ್ದ ಅಣ್ಣ ನಾಗರಾಜ ಅವ್ವನ ತವರಿನಲ್ಲಿ ಶಾಲೆ ಹತ್ತಿರ ಇದೆ ಎಂದು ಅಲ್ಲಿಗೆ ಹೋಗಿದ್ದ. ಇವನನ್ನೂ ಅಲ್ಲಿಗೇ ಕಳುಹಿಸಲು ಅಪ್ಪಯ್ಯ ಯಲ್ಲನಾಯ್ಕರೇ ಒಪ್ಪಿರಲಿಲ್ಲ. ಇಬ್ಬರೂ ಮಕ್ಕಳನ್ನು ನಂಟರ ಆಶ್ರಯದಲ್ಲಿ ಬಿಡಲು ಅವರಿಗೆ ಮನಸ್ಸಿರಲಿಲ್ಲ. ಆ ಸಂದರ್ಭದಲ್ಲಿಯೇ ರಾಮಣ್ಣ ಬಂದಿದ್ದ.

ಮೊದಲು ಬೇಸಗೆ ರಜೆಗೆ ಬಂದಾಗ ಕೈಯಲ್ಲಿ ಪುಸ್ತಕ ಹಿಡಿದು ತನ್ನಷ್ಟಕ್ಕೆ ಓದಿಕೊಳ್ಳುತ್ತಲೋ, ವಾರಿಗೆಯವರು ಬಂದಾಗ ದೇಶವಿದೇಶಗಳ ವಿದ್ಯಮಾನಗಳನ್ನು ಚರ್ಚೆ ಮಾಡುತ್ತಲೋ ಇರುತ್ತಿದ್ದವನು ಈ ಸಲ ಅದನ್ನೆಲ್ಲ ಬಿಟ್ಟು ಅವ್ವನೊಂದಿಗೆ ಸುಖ ಕಷ್ಟ ಮಾತಾಡಲು ಆರಂಭಿಸಿದ್ದ. ಪಾರ್ವತಮ್ಮನೊಂದಿಗೂ ವಿಶ್ವಾಸದಿಂದ ಮಾತಾಡುತ್ತಿದ್ದ. ಬರುವಾಗ ಅಪ್ಪಯ್ಯನಿಗೂ, ಅಣ್ಣನಿಗೂ ಚಳಿಗಾಲಕ್ಕೆಂದು ಎರಡು ಸ್ವೆಟರ್‌ಗಳನ್ನೂ ತಂದಿದ್ದ. ಅವು ಇಬ್ಬರಿಗೂ ದೊಗಳೆಯೆನಿಸಿದರೂ ರಾಮಣ್ಣ ತಂದು ಕೊಟ್ಟದ್ದೆಂಬ ಅಭಿಮಾನದಲ್ಲಿ ಅವನ್ನು ಹಾಕಿಕೊಂಡು ಸುತ್ತಾಡಿ ಒಳಗಡೆ ಎತ್ತಿಟ್ಟಿದ್ದರು. ಅವನು ವಾಪಸಾಗಲು ಎರಡು ದಿನ ಇದೆ ಎನ್ನುವಾಗ 'ಮಂಜು ಬಸಿರಿ. ಆಗಲೇ ಏಳು ತಿಂಗಳಾಯಿತು. ಹೆರಿಗೆಗೆ ಎಲ್ಲಿಗೆ ಹೋಗುವುದು ಎಂಬ ಚಿಂತೆ ಅವಳದು' ಎಂದು ತನ್ನ ಸಮಸ್ಯೆಯನ್ನು ಅವ್ವನಲ್ಲಿ ಹೇಳಿಕೊಂಡ. 'ಅದಕ್ಯಾಕೆ ಯೋಚ್ನೆ ಮಾಡ್ತೀಯೋ... ನಿನಗಾಗಿ ಮನೆ ಬಿಟ್ಟು ಬಂದ ಮಗಳು. ನಾವೇ ಬಾಣಂತನ ಮಾಡ್ತೀವಿ.. ಇಲ್ಲಿಗೇ ಕರ್ಕಂಡು ಬಾ' ಎಂದು ಅಜ್ಜಿ ಗಂಗಮ್ಮ ಧೈರ್ಯ ತುಂಬಿದರು. 'ಅಂಥ ಹೊತ್ತಲ್ಲಿ ಇಲ್ಲಿಗೇ ಬರ್ತೀವಿ' ಎಂದು ಹೇಳಿದವನು, ಅಲ್ಲೇ ಇದ್ದ ತನ್ನನ್ನು ನೋಡಿ 'ನೀನ್ಯಾಕೆ ನಮ್ಮಲ್ಲೇ ಬಂದು ಅಲ್ಲಿಯೇ ಸ್ಕೂಲಿಗೆ ಹೋಗಬಾರದು. ಇಲ್ಲಿ ಐದನೇ ಕ್ಲಾಸಿಗೆ ಅಂದರೆ ಪೇಟೆಗೆ ಹೋಗಬೇಕಲ್ಲ. ಬಂದು ನಮ್ಮಲ್ಲೇ ಇರು. ಮನೆ ಹತ್ರ ಇದ್ದ ಸ್ಕೂಲಿಗೆ ಸೇರಿಸ್ತೀನಿ. ಮಂಜುಗೂ ಅಷ್ಟಿಷ್ಟು ಸಹಾಯ ಆಗುತ್ತೆ..' ಅಂದ.

ರಾಮಣ್ಣ ಹೇಳಿದ ಮಾತು ಯಲ್ಲನಾಯ್ಕರ ಕಿವಿಗೂ ಬಿತ್ತು. ಅಜ್ಜ ತಿಮ್ಮನಾಯ್ಕರಿಗೂ ಅದು ಸರಿ

ಎನಿಸಿತು. ಪಾರ್ವತಿಗೆ ಮಾತ್ರ ಮನಸ್ಸಿರಲಿಲ್ಲ. ಹಿರಿಯ ಮಗ ತವರಲ್ಲಿ ಓದುತ್ತಿದ್ದ ಸಮಾಧಾನವಿದ್ದರೂ ಎರಡನೆಯವನನ್ನು ದೂರದ ಹಾಸನಕ್ಕೆ ಕಳಿಸುವ ಬಗ್ಗೆ ಯೋಚನೆಗೀಡಾದಳು. 'ಮಗನಿಗೆ ಮುಂದೆ ಅನುಕೂಲವಾಗುತ್ತೆ ಅನ್ನೋದನ್ನೂ ನೋಡಬೇಕು.. ಇಲ್ಲಿ ಇದ್ದರೆ ದಿನಾ ಎಂಟು ಹತ್ತು ಮೈಲಿ ನಡಕೊಂಡು ಹೋಗಬೇಕಲ್ಲ ಇಸ್ಕೂಲಿಗೆ' ಎಂದು ಅಪ್ಪಯ್ಯ ಹೇಳಿ ಒಪ್ಪಿಸಿದ. ಅದರ ಪರಿಣಾಮ ಅನಿರೀಕ್ಷಿತವಾಗಿ ಲಿಂಗರಾಜು ಟಿಸಿ ಹಿಡಿದು ಚಿಕ್ಕಪ್ಪನೊಟ್ಟಿಗೆ ಹಾಸನಕ್ಕೆ ಬಸ್ಸು ಹತ್ತಿದ್ದ. ಅವನ ಬಟ್ಟೆಗಳನ್ನು ಸಣ್ಣದೊಂದು ಟ್ರಂಕಿನಲ್ಲಿ ಸೇರಿಸಿ ಅಪ್ಪಯ್ಯನೇ ಸರ್ಕಾರಿ ರಸ್ತೆಯವರೆಗೆ ತಂದು ಕೊಟ್ಟ. ಬಸ್ಸು ಬಂದಾಗ ಚಿಕ್ಕಪ್ಪನೇ ಟ್ರಂಕನ್ನು ಎತ್ತಿ ಬಸ್ಸಿಗೆ ಹಾಕಿದ. ಬಸ್ಸು ಹತ್ತಿದ ಮೇಲೆ ಕೆಳಗೆ ನಿಂತಿದ್ದ ಅಪ್ಪಯ್ಯ ಕಣ್ಣಲ್ಲಿ ನೀರು ತುಂಬಿಕೊಂಡದ್ದನ್ನು ಕಂಡು ತನಗೂ ಕಣ್ಣೀರು ಬಂದಿತ್ತು. ಅದನ್ನು ತಡೆದುಕೊಳ್ಳುವುದು ಸುಲಭವಿರಲಿಲ್ಲ. ಅದನ್ನು ನೋಡಿದ ಚಿಕ್ಕಪ್ಪ 'ಛೇ ಛೇ.. ಹಂಗ್ಯಾಕೆ ಮಾಡ್ತೀಯೋ.. ನೀನು ನಮ್ಮ ಮನೆಗೆ ಬರ್‍ತೀಯಲ್ಲ. ಅದೂ ಮನೆಯೇ..' ಎಂದು ಸಮಾಧಾನ ಮಾಡುತ್ತಾ ಬೆನ್ನು ಸವರಿದ್ದರಿಂದ ಕಣ್ಣೀರು ಸ್ವಲ್ಪ ಹೊತ್ತಿಗೆ ನಿಂತು ಹೋಗಿತ್ತು.

ಶಿವಮೊಗ್ಗದಲ್ಲಿ ಬಸ್ಸು ಇಳಿದು ಇನ್ನೊಂದು ಬಸ್ಸು ಹತ್ತಬೇಕಿತ್ತು. ತಾನು ಶಿವಮೊಗ್ಗವನ್ನು ನೋಡುತ್ತಾ ಇದ್ದುದು ಅದೇ ಮೊದಲು. ಟ್ರಂಕು ಹಿಡಿದುಕೊಂಡು ಸರ್ಕಾರಿ ಬಸ್ಸು ಬರುವ ಕಡೆ ನಿಂತು ಕಾಯುತ್ತಿದ್ದಾಗ ರಾಮಣ್ಣನನ್ನು ಗುರುತು ಹಿಡಿದು ಯಾರೋ ಮಾತಾಡಿಸಿದರು. ಇಬ್ಬರ ನಡುವೆ ನಡೆಯುತ್ತಿದ್ದ ಮಾತುಕತೆ ಅರ್ಧ ಇಂಗ್ಲಿಷಿನಲ್ಲಿಯೂ ಇದ್ದುದರಿಂದ ತನಗೆ ಹೆಚ್ಚೇನೂ ಅರ್ಥವಾಗಲಿಲ್ಲ. ಸರಿಸುಮಾರು ರಾಮಣ್ಣನವರಷ್ಟೇ ವಯಸ್ಸಿನ ಅವರು ಮೊದಲು ಸ್ನೇಹಪರವಾಗಿಯೇ ನಗುನಗುತ್ತಾ ಮಾತಾಡಿದರು. 'ಹಾಸನದಲ್ಲಿ ಎಲ್ಲಿ ಮನೆ? ನಮ್ಮ ನೆಂಟರೂ ಅಲ್ಲಿದ್ದಾರೆ. ನಾನು ಅಪರೂಪಕ್ಕೆ ಬರಬಹುದು' ಎಂದು ಅವರು ಹೇಳಿದ್ದಕ್ಕೆ 'ಇಲ್ಲ ಇಲ್ಲ, ನಾನು ಹಾಸನದಲ್ಲಿಲ್ಲ. ಅಲ್ಲಿಂದ ಒಳಗಡೆ ಇಪ್ಪತ್ತು- ಮೂವತ್ತು ಮೈಲಿ ಆಚೆ ತಾಲ್ಲೂಕು ಕೇಂದ್ರದಲ್ಲಿದ್ದೇನೆ. ಅಲ್ಲಿ ಮನೆ. ಬರುವ ಮೊದಲು ಕಾಗದ ಹಾಕಿದರೆ ನಾನೇ ಹಾಸನಕ್ಕೆ ಬಂದು ಕಾಣುತ್ತೇನೆ' ಎಂದು ರಾಮಣ್ಣ ಹೇಳಿದ. ಮತ್ತೆ ಅವರು ಇಂಗ್ಲಿಷಿನಲ್ಲಿ ಏನೋ ಕೇಳಿದರು. ಅದಕ್ಕೆ ರಾಮಣ್ಣ ಇಂಗ್ಲಿಷಿನಲ್ಲೇ ಅದಕ್ಕೆ ಪ್ರತಿಯಾಗಿ ಹೇಳಿದ. ಅದು ಸರಿ ಹೋಗಲಿಲ್ಲವೋ ಏನೋ, ಅವರು ಕನ್ನಡದಲ್ಲೇ 'ನೀವು ಹಾಗೆ ಹೇಳಿದರೆ ಹೇಗೆ? ನಾನು ನಮ್ಮ ಮಿಸೆಸ್ ಒಡವೆ ಬ್ಯಾಂಕಿನಲ್ಲಿಟ್ಟು ತಂದು ಕೊಟ್ಟಿದ್ದು.. ನನ್ನ ಪರಿಸ್ಥಿತಿಯನ್ನೂ ಅರ್ಥ ಮಾಡಿಕೊಳ್ಳಿ' ಎಂದರು. ರಾಮಣ್ಣ ಇಂಗ್ಲಿಷಿನಲ್ಲಿಯೇ ಮುಂದುವರಿದರು. ಅವರೂ ಇಂಗ್ಲಿಷಿನಲ್ಲಿಯೇ ಜೋರುಜೋರಾಗಿ ವಾದಿಸತೊಡಗಿದರು. ಇಬ್ಬರ ಮುಖದಲ್ಲೂ ಬೆವರು ಕಿತ್ತು ಹೋಗುವಷ್ಟು ಉದ್ವೇಗದಲ್ಲಿ ಹೊರಬರುತ್ತಿದ್ದ ಮಾತುಗಳು. ಬಾಯಲ್ಲಿ ಎಂಜಲು ಹೊರಗೆಲ್ಲ ಚಿಮ್ಮುವಷ್ಟು ರಭಸವಾಗಿ ಮಾತಿನ ಚಕಮಕಿ. ಹಾಸನದ ಕಡೆಯ ಬಸ್ಸಿಗಾಗಿ ಸುತ್ತ ಕಾದು ನಿಂತವರು ಇವರತ್ತ ತಿರುಗಿ ನೋಡುವಷ್ಟು ರಭಸವಾಗಿ ನಡೆಯುತ್ತಿದ್ದ ಇಂಗ್ಲಿಷಿನಲ್ಲಿ ಚರ್ಚೆ. ಅಷ್ಟರಲ್ಲಿ ಬಸ್ಸು ಬಂದು ಅವರಿಬ್ಬರ ಬಿರುಸಾದ ಮಾತಿಗೆ ತೆರೆ ಬಿತ್ತು. ಆತ ಇಂಗ್ಲೀಷಿನಲ್ಲಿಯೇ ಏನನ್ನೋ ಹೇಳುತ್ತಾ ನಿರ್ಗಮಿಸಿದರು. ಅವರ ಕಡೆಗೂ ನೋಡದೆ, ತನ್ನ ಕಡೆಗೂ ನೋಡದೆ ಬಸ್ಸು ಹತ್ತಿದ ರಾಮಣ್ಣ ಖಾಲಿ ಇದ್ದ ಜಾಗದಲ್ಲಿ ಕುಳಿತುಕೊಂಡ. ಟ್ರಂಕು ಹಿಡಿದು ಅವರನ್ನು ಹಿಂಬಾಲಿಸಿದ ತನ್ನನ್ನು ಪಕ್ಕದಲ್ಲಿಯೇ ಕುಳಿತುಕೊಳ್ಳಲು ಹೇಳಿದ ರಾಮಣ್ಣ ಸ್ವಲ್ಪ ಹೊತ್ತು ಏನನ್ನೂ ಮಾತನಾಡಲಿಲ್ಲ. ಕಂಡಕ್ಟರ್ ಬಂದಾಗಲೇ ಅವರು ಬಾಯಿ ಬಿಟ್ಟದ್ದು.

ಶಿವಮೊಗ್ಗವನ್ನೇ ಮೊದಲ ಸಲಕ್ಕೆ ನೋಡಿದ ಲಿಂಗರಾಜನಿಗೆ ದೂರದ ಬಸ್ ಪ್ರಯಾಣವೂ ಬದುಕಿನಲ್ಲಿಯೇ ಮೊದಲಿನದಾಗಿತ್ತು. ಅವತ್ತು ಶಿವಮೊಗ್ಗದಿಂದ ಹೊರಟು ಭದ್ರಾವತಿ, ತರೀಕೆರೆ, ಬೀರೂರು,

ಕಡೂರಿನಲ್ಲಿ ನಿಲ್ಲಿಸಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಾ ಮಧ್ಯೆ ಮಧ್ಯೆ ಕಾಫಿ ತಿಂಡಿ ಊಟಕ್ಕಾಗಿ ನಿಲ್ಲಿಸುತ್ತಾ ಹಾಸನ ಸೇರುವಷ್ಟರಲ್ಲಿ ಸಂಜೆಯ ಇಳಿಬಿಸಿಲು ನೆರಳನ್ನು ಉದ್ದ ಮಾಡಿತ್ತು. ಹಾಸನ ಬಸ್ ನಿಲ್ದಾಣದಿಂದ ಇನ್ನೊಂದು ಖಾಸಗಿ ಬಸ್ ಹಿಡಿದು ಹೊಳೇನರಸೀಪುರಕ್ಕೆ ಬಂದು ಸೇರುವಷ್ಟರಲ್ಲಿ ಸಂಜೆಯಾಗಿತ್ತು. ರಾಮಣ್ಣನನ್ನು ಬೆಳಗಿನಿಂದಲೂ ಕಾದಿದ್ದ ಮಂಜುಳ ಚಿಕ್ಕಮ್ಮ ಬಾಗಿಲು ತೆಗೆದು ಜೊತೆಗೆ ಬಂದಿದ್ದ ಲಿಂಗರಾಜನನ್ನು ನೋಡಿದವಳೇ 'ನೀನೂ ಬಂದ್ಯೇನೋ.. ಎಲ್ಲಾ ಚೆನ್ನಾಗಿದ್ದಾರ ಮನೆಯಲ್ಲಿ. ಜೊತೆಗೆ ಇನ್ಯಾರು ಬಂದಿದ್ದಾರೆ..?' ಎಂದು ಹಿಂದೆ ಹಿಂದೆ ನೋಡಿದ್ದಳು. ಅದಕ್ಕೆ ರಾಮಣ್ಣನೇ 'ಇನ್ಯಾರಾದ್ರೂ ಯಾಕೆ, ಅವನನ್ನ ಇಲ್ಲೇ ಇದ್ದು ಓದಿಕೋ ಅಂತ ನಾನೇ ಕರ್ಕಂಡು ಬಂದೆ. ಅಲ್ಲಾದರೆ ಎಂಟು ಹತ್ತು ಮೈಲು ನಡೆದು ಶಾಲೆಗೆ ಹೋಗಬೇಕಿತ್ತು. ಐದಕ್ಕೆ ಬಂದಿದ್ದಾನೆ. ಇಲ್ಲಿದ್ರೆ ನಿಮಗೂ ಅಲ್ಪಸ್ವಲ್ಪ ಸಹಾಯ ಆಗುತ್ತೆ ಅಂತ...' ಎಂದು ಅರ್ಧಕ್ಕೆ ನಿಲ್ಲಿಸಿದನು. ಅಂದರೆ, ಅವನು ಅಲ್ಲಿಂದ ಬರುವಾಗಲೇ ಮಂಜುಳ ಚಿಕ್ಕಮ್ಮನಿಗೆ ಹೇಳಿ ಬಂದಿರಲಿಲ್ಲ ಎಂಬುದಷ್ಟೆ ಲಿಂಗರಾಜನಿಗೆ ಅರ್ಥವಾಯಿತಾದರೂ ಅದಕ್ಕೆ ಅವನು ಹೆಚ್ಚಿನ ಮಹತ್ವ ಕೊಡಲಿಲ್ಲ. ತಂದಿದ್ದ ಟ್ರಂಕನ್ನು ಎಲ್ಲಿ ಇಟ್ಟುಕೊಳ್ಳುವುದೆಂದು ಅವನು ಸುತ್ತ ನೋಡುತ್ತಿದ್ದಾಗ ರಾಮಣ್ಣನೇ ಅವನಿಗೆ ಹಜಾರದ ಒಂದು ಮೂಲೆಯನ್ನು ತೋರಿಸಿ ಅಲ್ಲಿ ಇಟ್ಟುಕೊಳ್ಳುವಂತೆ ಹೇಳಿದನು. ರಸ್ತೆಗೆ ಹೊಂದಿಕೊಂಡಿದ್ದ ತಾರಸಿ ಮನೆಯಲ್ಲಿ ಒಳಗೆ ಪ್ರವೇಶಿಸುತ್ತಲೇ ಕಿರಿದಾದ ವರಾಂಡದಂಥ ಜಾಗ, ಒಳಗೆ ದೊಡ್ಡದೊಂದು ಹಜಾರ. ಅದರ ಒಂದು ಮೂಲೆಯಲ್ಲಿ ಓದು ಬರಹಕ್ಕೆ ಕುರ್ಚಿ ಮೇಜು. ಅದರ ಎದುರು ಮೂಲೆಯ ಜಾಗದಲ್ಲಿ ಟ್ರಂಕನ್ನು ಇಟ್ಟುಕೊಳ್ಳುವಂತೆ ರಾಮಣ್ಣ ನಿರ್ದೇಶಿಸಿದನು. ಹಜಾರದ ಒಂದು ಪಕ್ಕದಲ್ಲಿ ಒಂದು ಮಲಗುವ ಕೋಣೆ, ಅದಕ್ಕೆ ಹೊಂದಿಕೊಂಡಂತೆ ಚಿಕ್ಕದೊಂದು ಅಡುಗೆ ಮನೆ. ಹಜಾರದ ಮತ್ತೊಂದು ಮೂಲೆಗೆ ಹೊಂದಿಕೊಂಡಂತೆ ಕಕ್ಕಸು ವ್ಯವಸ್ಥೆಯೂ ಒಳಗಡೆಯೇ ಇದ್ದ ಸ್ನಾನದ ಮನೆ. ನೆಲಕ್ಕೆ ಕೆಂಪು ಬಣ್ಣದ ಸಿಮೆಂಟ್ ಹಾಸನ್ನು ನೋಡಿ ಲಿಂಗರಾಜನಿಗೆ ಬೆರಗಾಯಿತು. ಊರಿನ ಮನೆಯ ಜಗುಲಿಯನ್ನು ಅಜ್ಜಿಯೋ, ಅವ್ವನೋ ವಾರಕ್ಕೊಮ್ಮೆ ಸಗಣಿ ನೀರಲ್ಲಿ ಬಳಿದು ನಯಗೊಳಿಸುತ್ತಾ ಇದ್ದುದರಿಂದ ಅಲ್ಲಿನ ಜಗುಲಿ ನೆಲಕ್ಕಿಂತ ಕೆಂಪು ಬಣ್ಣದ ಸಿಮೆಂಟ್ ಗಾರೆಯ ಜಗುಲಿ ಲಿಂಗರಾಜನಿಗೆ ವೈಭವೋಪೇತವಾಗಿ ಕಂಡಿತ್ತು.

ಏಳು ತಿಂಗಳ ಬಸಿರಿಯಾಗಿದ್ದರೂ ಮನೆಯ ಕೆಲಸಗಳನ್ನು ನಿರ್ವಹಿಸಿಕೊಳ್ಳುತ್ತಿದ್ದ ಮಂಜುಳ ಲಿಂಗರಾಜು ಆಗಮನಕ್ಕೆ ಅಸಮಾಧಾನ ವ್ಯಕ್ತಪಡಿಸಲಿಲ್ಲ. ಅವನನ್ನು ಚೆನ್ನಾಗಿ ಮಾತನಾಡಿಸುತ್ತ ಮನೆಯ ಪಕ್ಕದಲ್ಲಿಯೇ ಇದ್ದ ದಿನಸಿ, ತರಕಾರಿ ಅಂಗಡಿಯಿಂದ ಸಣ್ಣಪುಟ್ಟ ಸಾಮಾನುಗಳನ್ನು ತರಿಸಿಕೊಳ್ಳತೊಡಗಿದಳು. ಅವನ ಆಗಮನ ಅವಳಿಗೆ ಸಹಕಾರಿಯಾಗಿಯೂ ಇತ್ತು. ಮನೆಯ ಹತ್ತಿರ ಇದ್ದ ಸರ್ಕಾರಿ ಶಾಲೆಗೆ ಐದನೇ ತರಗತಿಗೆ ಸೇರಿಸಲಾಗಿತ್ತು. ಬೆಳಗ್ಗೆ ಹೋಗಿ ಮಧ್ಯಾಹ್ನ ಬಂದು ಊಟ ಮಾಡಿ ಹೋಗುವಷ್ಟು ಹತ್ತಿರವಿದ್ದ ಶಾಲೆ. ಹಳ್ಳಿಯ ಶಾಲೆಯಲ್ಲಿ ನಾಲ್ಕರವರೆಗೆ ಓದಿದ್ದ ಲಿಂಗರಾಜನಿಗೆ ತಾಲ್ಲೂಕು ಕೇಂದ್ರದಲ್ಲಿದ್ದ ಸರ್ಕಾರಿ ಶಾಲೆಗೆ ಹೊಂದಿಕೊಳ್ಳುವುದಕ್ಕೆ ಕಷ್ಟವೇನೂ ಆಗಲಿಲ್ಲ. ಮನೆಯಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಡುತ್ತಾ ಶಾಲೆಗೆ ಹೋಗಿ ಬರುತ್ತಿದ್ದ ಲಿಂಗರಾಜನಿಗೆ ಮೊದಲ ದಿನಗಳಲ್ಲಿ ಬಾಧಿಸುತ್ತಿದ್ದ ಊರಿನ ನೆನಪು ಕ್ರಮೇಣ ನಿವಾರಣೆಯಾಯಿತು. ಇಂಗ್ಲಿಷ್ ಅಕ್ಷರಗಳನ್ನು ಜೋಡಿಸಿ ಓದುವುದು, ಕೂಡಿ, ಕಳೆಯುವ, ಅಂಕಗಣಿತಗಳು, ಸಮಾಜ ಶಾಸ್ತ್ರ, ವಿಜ್ಞಾನದ ಪಾಠಗಳು, ಕನ್ನಡ ಪದ್ಯಗಳು ಅವನನ್ನು ಸದಾ ಎಚ್ಚರದ ಸ್ಥಿತಿಯಲ್ಲಿಟ್ಟಿದ್ದವು.

ಮನೆಗೆ ಕನ್ನಡ ಪತ್ರಿಕೆಯೊಂದು ಬರುತ್ತಿತ್ತು. ರಾಮಣ್ಣ ಅದರ ಮೇಲೆ ಕಣ್ಣಾಡಿಸಿ ಮುಖಕ್ಷೌರ, ಸ್ನಾನ ಮುಗಿಸಿ ಕಾಲೇಜಿಗೆ ಹೊರಡಲು ಸನ್ನದ್ಧನಾಗುತ್ತಿದ್ದನು. ಸಂಜೆ ವೇಳೆಗೆ ಬರುತ್ತಿದ್ದ ರಾಮಣ್ಣ ಮನೆಗೆ ಏನಾದರೂ ಸಾಮಾನು ಬೇಕಿದ್ದರೆ ತಾನೇ ಪೇಟೆಯ ಕಡೆಗೆ ಹೋಗಿ ತರುತ್ತಿದ್ದನು. ಪೇಟೆಯಿಂದ ವಾಪಸು ಬಂದವನು ಸ್ವಲ್ಪ ಹೊತ್ತು ಪತ್ರಿಕೆ ಓದಿ ನಾಳೆಯ ಪಾಠಕ್ಕೆ ಸಿದ್ಧತೆ ಮಾಡಿಕೊಳ್ಳಲು ಗಂಭೀರವಾಗಿ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಿದ್ದನು. ಅವನು ಓದುತ್ತಾ ಗುರುತು ಹಾಕಿಕೊಳ್ಳುವಾಗ ಅದಕ್ಕೆ ಅಡ್ಡಿಯಾಗುವಂಥ ಸದ್ದುಗದ್ದಲ ಅಡುಗೆ ಮನೆಯಿಂದ ಬರುತ್ತಿದ್ದರೆ ತಾಳ್ಮೆ ಕಳೆದುಕೊಂಡು ರೇಗುತ್ತಾ ಇದ್ದುದನ್ನು ಒಂದೆರಡು ಸಲ ಕೇಳಿಸಿಕೊಂಡಿದ್ದ ಲಿಂಗರಾಜು ಚಿಕ್ಕಪ್ಪ ಓದಿಗೆ ಕುಳಿತಾಗ ತಾನೂ ಕೆಳಗಡೆ ಚಾಪೆ ಹಾಕಿಕೊಂಡು ಏನಾದರೂ ಓದುತ್ತಿದ್ದನು. ಇಲ್ಲವೇ ಶಾಲೆಯಿಂದ ಕೊಡುವ ಮನೆಪಾಠಗಳನ್ನು ಮಾಡಿಕೊಳ್ಳುತ್ತಿದ್ದನು.

ಊರು ಬಿಟ್ಟು ಬಂದು ಸುಮಾರು ಒಂದು ತಿಂಗಳವರೆಗೂ ಲಿಂಗರಾಜನಿಗೆ ರಾಮಣ್ಣನ ವರ್ತನೆಯಲ್ಲಿ ವಿಶೇಷವೇನೂ ಕಂಡಿರಲಿಲ್ಲ. ಅದೊಂದು ದಿನ ರಾಮಣ್ಣ ಒಬ್ಬರು ಗೆಳೆಯರನ್ನು ಕರೆದುಕೊಂಡು ಬಂದಿದ್ದ. ಇಬ್ಬರೂ ಒಳಗೆ ಬಂದು ಹಜಾರದಲ್ಲಿ ಕುರ್ಚಿಯ ಮೇಲೆ ಕುಳಿತು ಮಾತಾಡುತ್ತಿದ್ದಾಗ ಅಡುಗೆ ಮನೆಯಲ್ಲಿದ್ದ ಮಂಜುಳಾ ಲಿಂಗರಾಜುವನ್ನು ಕರೆದಳು. ಒಳಗೆ ಹೋದವನು ಅವಳ ಆಣತಿಯಂತೆ ಸಣ್ಣದೊಂದು ಸ್ಟೀಲಿನ ತಟ್ಟೆಯಲ್ಲಿ ಎರಡು ಕಾಫಿ ಲೋಟಗಳನ್ನು ಇರಿಸಿಕೊಂಡು ಹುಷಾರಾಗಿ ತಂದು ರಾಮಣ್ಣನಿಗೂ, ಜೊತೆಗೆ ಬಂದಿದ್ದ ಅತಿಥಿಗೂ ನೀಡಿದನು. ಸಂಜೆ ವೇಳೆಗೆ ರಾಮಣ್ಣನಿಗೆ ಕಾಫಿ ಕೊಡುವಾಗ ಚಿಕ್ಕಮ್ಮ ತನಗೂ ಕಾಫಿ ಕೊಡುತ್ತಾ ಇದ್ದುದು ಅವತ್ತು ಮರೆತಂತೆ ಕಂಡಿತ್ತು. ಕಾಫಿಯನ್ನು ನಿರೀಕ್ಷೆ ಮಾಡಿದ್ದ ಲಿಂಗರಾಜು ಸುಮ್ಮನೆ ಚಾಪೆಯಲ್ಲಿ ಕುಳಿತು ಅಡುಗೆ ಮನೆಯ ಕಡೆ ಒಂದೆರಡು ಸಲ ನೋಡಿ ನಿರಾಶನಾದನು. ಮರೆತಿರಬಹುದು ಎಂದುಕೊಂಡು ಎದ್ದು ಅಡುಗೆ ಮನೆಯ ಕಡೆಗೂ ಹೋಗಿ ಬಂದನು. ಮಂಜುಳಾ ಅವನು ಬಂದದ್ದನ್ನು ಗಮನಿಸಲಿಲ್ಲ. ಅಡುಗೆ ಮನೆಯ ಮೂಲೆಯ ನಲ್ಲಿಯಲ್ಲಿ ಪಾತ್ರೆ ತೊಳೆಯುವದರಲ್ಲಿ ಮಗ್ನಳಾಗಿದ್ದಳು. ಅಲ್ಲಿಗೆ ಹೋಗಿದ್ದಕ್ಕೆ ಲಿಂಗರಾಜು ಸ್ಟೀಲಿನ ಲೋಟದಲ್ಲಿ ನೀರನ್ನು ಬಗ್ಗಿಸಿಕೊಂಡು ಕುಡಿದು ಲೋಟವನ್ನು ಅಲ್ಲಿಯೇ ಇಟ್ಟು ಬಂದನು. ತನ್ನನ್ನು ನಿರ್ಲಕ್ಷಿಸಿದ ಭಾವ ಅವನಲ್ಲಿ ಮೂಡಿತು. ಅಪಮಾನವೆನ್ನಿಸಿ ಕಣ್ಣಲ್ಲಿ ನೀರು ತುಂಬಿತು. ಮೆಲ್ಲಗೆ ಒರೆಸಿಕೊಂಡು ಪುಸ್ತಕದಲ್ಲಿ ತಲೆ ಹುದುಗಿಸಿಕೊಳ್ಳಲು ಪ್ರಯತ್ನ ನಡೆಸಿದನು. ತಮ್ಮ ಮಾತುಕತೆ ಮುಗಿದ ಮೇಲೆ ರಾಮಣ್ಣನ ಜೊತೆ ಬಂದಿದ್ದ ಅತಿಥಿ ಹೊರಡಲು ಎದ್ದರು. ಇವನತ್ತ ನೋಡಿ 'ಏನು ಮರಿ, ಎಷ್ಟನೇ ಕ್ಲಾಸು..?' ಎಂದು ಉಪಚಾರಕ್ಕೆ ಕೇಳಿದರು. ಇವನು ತಕ್ಷಣಕ್ಕೆ ಬಂದ ವಿಚಾರಣೆಗೆ ತಡಬಡಾಯಿಸಿ ಎದ್ದು ನಿಂತನು. 'ಪರವಾಯಿಲ್ಲ ಕೂತುಕೋ' ಎಂದು ನಯವಾಗಿ ಹೇಳಿ ರಾಮಣ್ಣನತ್ತ ತಿರುಗಿದರು. 'ಐದನೇ ಕ್ಲಾಸಿಗೆ ಸೇರಿದ್ದಾನೆ. ನಮ್ಮೂರಿನ ಹುಡುಗ' ಎಂದು ಹೇಳಿ ರಾಮಣ್ಣ ಅತಿಥಿಯನ್ನು ಮನೆಯಿಂದ ಹೊರಗಡೆಗೆ ಕರೆದೊಯ್ದನು. 'ನಮ್ಮೂರಿನ ಹುಡುಗ' ಎಂದು ಪರಿಚಯಿಸಿದ್ದು ಲಿಂಗರಾಜನಿಗೆ ಕುದಿನೀರು ಚೆಲ್ಲಿದಂತೆ ಆಯಿತು. 'ನಮ್ಮ ಅಣ್ಣನ ಮಗ' ಎಂದು ಹೇಳದೆ 'ನಮ್ಮೂರಿನ ಹುಡುಗ' ಎಂದು ಹೇಳಿದ್ದು ತನ್ನನ್ನು ಮನೆಯ ಒಳಗಿನಿಂದ ಹೊರಕ್ಕೆ ತಳ್ಳಿದಂತೆ ಆಯಿತು. ಸುಮ್ಮನೆ ನಿಂತವನು ಅವರು ಬಾಗಿಲು ದಾಟುತ್ತಿದ್ದಂತೆ ಚಾಪೆಯ ಮೇಲೆ ಕುಳಿತನು. ಪುಸ್ತಕಗಳ ಮೇಲೆ ಯಾಂತ್ರಿಕವಾಗಿ ಕಣ್ಣಾಡಿಸತೊಡಗಿದನು.

ಸ್ವಲ್ಪ ಹೊತ್ತಿಗೆ ಮನೆಗೆ ಬಂದ ರಾಮಣ್ಣ ಎಂದಿನಂತೆ ಬಟ್ಟೆ ಬದಲಿಸಿ ಓದಿಗೆ ಕುಳಿತನು. ನಿತ್ಯವೂ ಅವನು ತನ್ನನ್ನು ವಿಚಾರಿಸಿಕೊಳ್ಳುತ್ತಿರಲಿಲ್ಲ. ಆದರೆ ಅವತ್ತು ಚಿಕ್ಕಪ್ಪ ತನ್ನಲ್ಲಿ ಮಾತನಾಡಬೇಕಿತ್ತು ಎಂಬ ನಿರೀಕ್ಷೆ

ಲಿಂಗರಾಜನಲ್ಲಿ ಮೂಡಿತು. ಆದರೆ, ರಾಮಣ್ಣ ಮಾತಾಡಲಿಲ್ಲ. ಅವನ ಇರುವಿಕೆಯನ್ನೇ ನಿರ್ಲಕ್ಷಿಸಿದಂತೆ ತನ್ನಷ್ಟಕ್ಕೆ ಓದಿಕೊಳ್ಳುತ್ತಾ ಗುರುತು ಹಾಕಿಕೊಳ್ಳುತ್ತಾ, ಮಧ್ಯೆ ಮಧ್ಯೆ ಎದ್ದು ಅಡುಗೆ ಮನೆಗೆ ಹೋಗಿ ಚಿಕ್ಕಮ್ಮನೊಂದಿಗೆ ಮೆಲ್ಲಗೆ ಮಾತನಾಡುತ್ತಾ ವಾಪಸು ಬರುತ್ತಿದ್ದ ವರ್ತನೆ ವಿಚಿತ್ರ ಎನಿಸಿತು. ರಾತ್ರಿ ಊಟವೂ ಯಾಂತ್ರಿಕವಾಗಿ ನಡೆಯಿತು. ಅವನು ಹಜಾರದ ಒಂದು ಮೂಲೆಯಲ್ಲಿ ಟ್ರಂಕು ಇಟ್ಟುಕೊಂಡ ಜಾಗದಲ್ಲಿ ಕಟ್ಟಿನ ಚಾಪೆಯ ಮೇಲೆ ತೆಳುವಾದ ತಡಿಯನ್ನು ಹಾಸಿಕೊಂಡು ಮಲಗುತ್ತಿದ್ದ. ರಾಮಣ್ಣ ಮಲಗಲು ಹೋಗುವ ಮೊದಲು ಇವನತ್ತ ತಿರುಗಿ 'ಹೆಂಗೈತೋ ಇಸ್ಕೂಲು.. ಯಾರಾದ್ರೂ ಫ್ರೆಂಡ್ಸು ಅಂತ ಆಗಿದಾರ...? ಎಂದು ಎಂದಿನ ಸಹಜವಾದ ಧ್ವನಿಯಲ್ಲಿ ವಿಚಾರಿಸಿಕೊಂಡನು. ಅಷ್ಟಕ್ಕೆ ತುಂಬ ಖುಷಿಯಾದ ಲಿಂಗರಾಜು ಚಿಕ್ಕಪ್ಪ ಊರಲ್ಲಿ ಮಾತಾಡುವಂತೆ ಸಲಿಗೆ ಪ್ರಕಟಿಸಿದ್ದಕ್ಕೆ ಉತ್ಸಾಹಗೊಂಡನು. 'ಆಗಿದಾರೆ ಚಿಕ್ಕಪ್ಪ... ಒಂದಿಬ್ರು..' ಎಂದನು. 'ಹುಷಾರು, ಇಲ್ಲಿ ಹುಡುಗರು ಊರಿನಂತಲ್ಲ. ಹೆಚ್ಚು ಹಚ್ಚಿಕೋಬ್ಯಾಡ' ಎಂದು ಎಚ್ಚರಿಕೆ ಹೇಳಿ ಕೋಣೆ ಹೊಕ್ಕನು. ಅಷ್ಟು ಹೊತ್ತಿಗಾಗಲೇ ಕೆಲಸ ಮಾಡಿದ ಸುಸ್ತಿನಿಂದ ಬಸಿರಿ ಒಳ ಸೇರಿದ್ದಳು. ಚಿಕ್ಕಪ್ಪ ಮಾತಾಡಿಸಿದ್ದಕ್ಕೆ ಅದುವರೆಗೆ ಒಳಗೊಳಗೆ ನರಳುತ್ತಿದ್ದ ಲಿಂಗರಾಜ ನಿರಾಳವಾದನು. ರಾಮಣ್ಣ ಕೋಣೆ ಸೇರುತ್ತಲೇ ಹಾಸಿಗೆಯಲ್ಲಿ ಅಡ್ಡಾಗಿ ಮೈಮೇಲೆ ಹೊದಿಕೆಯನ್ನು ಎಳೆದುಕೊಂಡನು.

ಮರುದಿನವೂ ಸಂಜೆ ಹೊತ್ತಿಗೆ ನಿನ್ನೆ ಬಂದಿದ್ದವರನ್ನೇ ರಾಮಣ್ಣ ಕರೆತಂದಿದ್ದನು. ಇಬ್ಬರೂ ಒಳಗೆ ಸೇರಿಕೊಂಡು ಮಾತಾಡಲು ಆರಂಭಿಸಿದರು. ರಾಮಣ್ಣ ಮೇಜಿನ ಮೇಲೆ ಬರೆದುಕೊಳ್ಳುತ್ತಾ ಮಧ್ಯೆ ಮಧ್ಯೆ ಮಾತಾಡುತ್ತಿದ್ದನು. 'ಹಳ್ಳಿ ವಾತಾವರಣದಲ್ಲಿ ಪೂರ್ತಿ ಕತೆ ನಡೆಯಬೇಕು. ಒಂದೇ ಸಲಕ್ಕೆ ಶೂಟಿಂಗ್ ಮುಗಿದು ಬಿಡಬೇಕು. ಆಮೇಲೆ ಪೋಸ್ಟ್ ಪ್ರೊಡಕ್ಷನ್ ಕೆಲಸ ಇರುತ್ತೆ. ಅದಕ್ಕೆ ಇಬ್ರೂ ಬೆಂಗಳೂರಿಗೆ ಹೋದರೆ ಆಯಿತು..' ಎಂದು ಜೊತೆಗೆ ಬಂದಿದ್ದವನು ಹೇಳಿದ್ದಕ್ಕೆ ರಾಮಣ್ಣ 'ಅದಕ್ಕೆ ಬೆಂಗಳೂರಿನಲ್ಲೇ ವ್ಯವಸ್ಥೆ ಇದೆಯಾ?' ಎಂದು ಕೇಳಿದನು. 'ಏನು ಮೇಷ್ಟ್ರೇ ಹಿಂಗಂತೀರಿ.. ಬೆಂಗಳೂರಿನಲ್ಲಿ ಯಾವ ವ್ಯವಸ್ಥೆ ಇಲ್ಲ.. ಎಲ್ಲಾ ಸೌಲಭ್ಯವೂ ಇದೆ. ಆದ್ರೂ ನಮ್ಮವರಿಗೆ ಮದ್ರಾಸು, ಬಾಂಬೆ ಮೋಹ ಹೋಗಿಲ್ಲ. ಹೊಸದಾಗಿ ತುಂಬ ಜನ ಮುಂದೆ ಬರ್ತಾ ಇದಾರೆ. ಅನುಕೂಲಗಳೂ ಆಗ್ತಿವೆ' ಎಂದು ಸಮಜಾಯಿಶಿ ನೀಡಿದ್ದನು. ಅವರು ನಿನ್ನೆಯಿಂದಲೂ ಆಡುತ್ತಿದ್ದ ಮಾತುಗಳ ತಲೆ ಬುಡ ಅರ್ಥವಾಗದೆ ಸುಮ್ಮನೆ ನೋಡುತ್ತಿದ್ದ ಲಿಂಗರಾಜನಿಗೆ ಅವತ್ತು ತಾನೇ ಕಾಫಿ ತಂದುಕೊಟ್ಟ ಚಿಕ್ಕಮ್ಮ 'ಅಂತೂ ಸಿನಿಮಾ ಮಾಡೋದಕ್ಕೆ ತೀರ್ಮಾನ ಮಾಡಿಬಿಟ್ರಾ..' ಎಂದು ಹೇಳಿದ್ದು ಏನೋ ರಹಸ್ಯವೊಂದು ತೆರೆದುಕೊಂಡಂತಾಯಿತು. ಚಿಕ್ಕಮ್ಮ ತನಗೂ ಕಾಫಿ ಕೊಟ್ಟಿದ್ದರಿಂದ ಲಿಂಗರಾಜನಿಗೆ ಖುಷಿಯೂ ಆಯಿತು. ಅವರ ಮಾತುಕತೆಗಳ ಕಡೆಗೆ ನಿಗಾ ವಹಿಸಿದನು. ಮಂಜುಳಾ ಸಿನಿಮಾ ಪ್ರಸ್ತಾಪ ಮಾಡಿದಾಗ ಆತ 'ಮೇಷ್ಟ್ರು ಕತೆ ಅಷ್ಟು ಚೆನ್ನಾಗಿದೆ ಮೇಡಂ. ಒಂದು ಕೈ ನೋಡೇ ಬಿಡಾನ ಅಂತ ಕೇಳಿದೆ. ಇವರೂ ಮನಸ್ಸು ಮಾಡ್ತಾ ಇದಾರೆ. ಅದನ್ನೇ ಲೆಕ್ಕ ಹಾಕ್ತಾ ಇದೀವಿ' ಎಂದನು. ಅದಕ್ಕೆ ರಾಮಣ್ಣ 'ರೀ, ನಾರಾಯಣರಾವ್, ಅಷ್ಟೆಲ್ಲ ದುಡ್ಡು ಹಾಕೋರು ಬೇಕಲ್ಲ.. ನನಗೇನೋ ಹೊಸ ಕ್ಷೇತ್ರ ಅಂತ ಆಸಕ್ತಿ ಇದೆ. ಮುಂದೆ ಹೇಗೋ ಏನೋ ಅಂತ ಅನ್ನಿಸ್ತಿದೆ' ಎಂದು ಆತಂಕ ವ್ಯಕ್ತಪಡಿಸಿದನು. ನಾರಾಯಣರಾವ್ 'ಏನೂ ಆಗಲ್ಲ ಮೇಷ್ಟ್ರೆ, ಮೊದಲು ಮುನ್ನುಗ್ಗಿ. ಹೊಸ ನೀರು ಬಂದರೆ ಹಳೆ ನೀರು ಸ್ವಲ್ಪ ಜಾಗ ಬಿಟ್ಟುಕೊಡಲೇ ಬೇಕಾಗುತ್ತೆ. ನೀವು ಹೇಳಿದ ಆರ್ಟಿಸ್ಟ್‌ಗಳನ್ನು ಕರೆತರೋದನ್ನು ನನಗೆ ಬಿಡಿ. ಆದರೆ ನೀವು ಕತೇನ ಎಷ್ಟು ಬಿಗಿಯಾಗಿ ಮಾಡ್ತೀರ ನೋಡಿ. ಡೈರೆಕ್ಷನ್ನು ನಿಮ್ದೇ. ಹೊಸದೃಷ್ಟಿ ಇದ್ದರೆ ಖಂಡಿತಾ ಗೆಲವು ಸಿಗುತ್ತೆ...' ಎಂದು ವಿಶ್ವಾಸ ಪ್ರಕಟಿಸಿದನು. 'ಏನೋ ನಿಮ್ಮ ಸಾಹಸ. ಇವರ ಮೈ ಮೇಲೆ ಬರಬಾರದು

ನೋಡಿ. ನಾನು ಬೇರೆ ಮೂರು ನಾಲ್ಕು ತಿಂಗಳು ಇಲ್ಲಿ ಇರಲ್ಲ..' ಎಂದು ಚಿಕ್ಕಮ್ಮ ಹೇಳಿದಾಗ ಆತನೇ ಸಲಿಗೆ ವಹಿಸಿ 'ಎಲ್ಲಿಗೆ ಹೋಗ್ತೀರಿ ಮೇಡಂ, ಮೂರು ನಾಲ್ಕು ತಿಂಗಳು..' ಎಂದವನು ತಕ್ಷಣವೇ ಪರಿಸ್ಥಿತಿಯನ್ನು ಅರಿತವನಂತೆ 'ಹೌದಲ್ಲ ಮತ್ತೆ.., ನೀವು ಹೋಗಿ ಬಿಟ್ರೆ ಮೇಷ್ಟ್ರ ಗತಿ ಏನು?' ಎಂದನು. 'ಅದು ಹೇಗೋ ಆಗುತ್ತೆ, ಅವರು ಮೊದಲಿಂದಲೂ ಸ್ವಂತ ಅಡುಗೆ ಮಾಡಿಕೊಂಡು ರೂಢಿ ಇದ್ದೋರು.. ಏನೂ ತೊಂದರೆ ಆಗೋದಿಲ್ಲ' ಎಂದು ಹೇಳಿ ನಿಧಾನವಾಗಿ ಅಡುಗೆ ಮನೆ ಕಡೆ ತಿರುಗಿದರು. ಅವರ ಮಾತಿನಿಂದ ಚಿಕ್ಕಮ್ಮ ಹೆರಿಗೆಗೆ ನಾಲ್ಕು ತಿಂಗಳು ಹೋಗುವುದು ಲಿಂಗರಾಜನಿಗೆ ಗೊತ್ತಾಯಿತು. ಚಿಕ್ಕಮ್ಮ ಇಲ್ಲದಿದ್ದಾಗ ತಾನು ಎಲ್ಲಿಗೆ ಹೋಗುವುದು? ಊರಿಗಾ..? ಎಂದು ಅವನಿಗೆ ಪ್ರಶ್ನೆಯಾಯಿತು. ಅದಕ್ಕೆ ಪರಿಹಾರವೆಂಬಂತೆ ರಾಮಣ್ಣನೇ 'ಇಬ್ರೂ ಇರ್ತೀವಲ್ಲ. ಅದೇನೂ ಸಮಸ್ಯೆಯಲ್ಲ' ಎಂದು ಹೇಳಿದ್ದು ಸಮಾಧಾನವಾಯಿತು.

ರಾಮಣ್ಣ ನಿತ್ಯವೂ ಸಂಜೆ ಹೊತ್ತಿಗೆ ನಾರಾಯಣರಾವ್ ಜೊತೆ ಬರುವುದು, ಚರ್ಚೆ ನಡೆಸುವುದು ಮುಂದುವರಿಯಿತು. ಕೆಲವೊಮ್ಮೆ ಇನ್ನೂ ಒಬ್ಬಿಬ್ಬರು ಜೊತೆಗೆ ಸೇರುತ್ತಿದ್ದರು. ದಿನವೂ ಸಿನಿಮಾ ಕುರಿತಾಗಿಯೇ ಮಾತುಕತೆ. 'ದೂರ ಹೋಗೋದೇನೂ ಬೇಡ. ಈ ಜಿಲ್ಲೆಯಲ್ಲೇ ಯಾವುದಾದರೂ ಹಳ್ಳಿ ಆರಿಸಿಕೊಂಡು ಅಲ್ಲಿಯೇ ಶೂಟಿಂಗ್ ಮುಗಿಸಿಬಿಡೋಣ. ಸದ್ಯದಲ್ಲಿ ಜಾತ್ರೆ ತೇರು ಎಲ್ಲಾದರೂ ನಡೀತಿದ್ದರೆ ಅಂಥ ಹಳ್ಳಿ ನನ್ನ ಕತೆಗೆ ಅನುಕೂಲ. ಇಲ್ಲಿ ಕಲಾವಿದರಿದ್ದರೆ ಅವರಿಗೆ ಅವಕಾಶ ಕೊಟ್ಟಂತೆ ಆಗುತ್ತೆ. ಅವರು ದುಡ್ಡು ನಿರೀಕ್ಷೆ ಮಾಡೋದಿಲ್ಲ. ಬದಲಾಗಿ ಸಂದರ್ಭ ಬಂದರೆ ದುಡ್ಡು ಹಾಕಲೂಬಹುದು..' ಎಂದು ರಾಮಣ್ಣ ಆರಂಭದಲ್ಲಿಯೇ ಹೇಳಿದ್ದ. ಅದರ ಸುತ್ತಲೇ ಚರ್ಚೆ ನಡೆಯುತ್ತಿತ್ತು. ಲಿಂಗರಾಜನಿಗೆ ಚಿಕ್ಕಪ್ಪ ಸಿನಿಮಾ ಮಾಡಲು ಹೊರಟಿದ್ದು ಸಂಭ್ರಮದ ವಿಷಯವಾಯಿತು. ತನ್ನ ಓದಿನ ಮಧ್ಯೆ ಸಿನಿಮಾ ಮಾತುಕತೆಗಳಿಗೆ ಗಮನ ಹೆಚ್ಚಾಯಿತು. ಮನೆಗೆ ಬರುತ್ತಿದ್ದವರಿಗೆ ಸಂಜೆ ಕಾಫಿ ಕೊಡುವ ಕೆಲಸವನ್ನು ಅವನು ಖುಷಿಯಿಂದ ಮಾಡುತ್ತಿದ್ದನು.

ಮುಂದೆ ಕೆಲವೇ ದಿನಗಳಲ್ಲಿ ಚಿಕ್ಕಮ್ಮನನ್ನು ಕರೆದೊಯ್ಯಲು ಅವರ ಅಣ್ಣ ಬಂದರು. ಸ್ವಂತ ನಿರ್ಧಾರದಿಂದ ತಂಗಿ ಮಾಡಿಕೊಂಡ ಮದುವೆಗೆ ಪ್ರಾರಂಭದ ಕೆಲವು ತಿಂಗಳು ಮುನಿಸಿಕೊಂಡಿದ್ದರೂ ಆಕೆ ಬಸಿರಿಯಾದ ನಂತರ ಅದನ್ನೆಲ್ಲ ಮರೆತು ತಾಯಿಯ ಒತ್ತಾಯದಿಂದ ಹೆರಿಗೆಗೆ ಕರೆಯಲು ಬಂದಿದ್ದರು. ಆ ಬಗ್ಗೆ ಕೆಲವು ತಿಂಗಳಿಂದ ಪತ್ರವ್ಯವಹಾರ ನಡೆಯುತ್ತಿದ್ದಿರಬೇಕು. ಲಿಂಗರಾಜು ಬಂದ ಶುರುವಿನಲ್ಲಿ ಚಿಕ್ಕಮ್ಮ ಆಗಾಗ 'ಊರಿಂದ ಅಣ್ಣನ ಕಾಗದ ಬಂದಿದೆ' ಎಂದೋ, 'ಅಮ್ಮ ನೆನೆಸಿಕೊಳ್ಳುತ್ತಾಳಂತೆ' ಎಂದೋ, 'ತಂಗಿ ಕಮಲ ಕಾಲೇಜು ಬಿಟ್ಟು ಮನೆಯಲ್ಲಿ ಉಳಿದುಕೊಂಡಿದ್ದಾಳೆ' ಎಂದೋ ಹೇಳುತ್ತಿದ್ದುದನ್ನು ಕೇಳಿಸಿಕೊಳ್ಳುತ್ತಿದ್ದ. ಚಿಕ್ಕಮ್ಮ ಹೇಳುತ್ತಾ ಇದ್ದುದನ್ನು ರಾಮಣ್ಣ ಆಸಕ್ತಿಯಿಂದ ಕೇಳಿಸಿಕೊಳ್ಳುತ್ತಾ ಆಕೆಯ ತವರಿನವರು ತೋರಿಸುತ್ತಿದ್ದ ಪ್ರೀತಿ ವಿಶ್ವಾಸವನ್ನು ಮೆಚ್ಚಿಕೊಳ್ಳುತ್ತಿದ್ದ. 'ನಿಜಕ್ಕೂ ನಿನ್ನ ಅಣ್ಣ ದೊಡ್ಡ ಮನುಷ್ಯ ಮಂಜು. ಋಣಾನುಬಂಧವನ್ನು ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ ನೋಡು ನಿಮ್ಮ ಅಣ್ಣ, ಅಮ್ಮ, ತಂಗಿ ಇವರೆಲ್ಲ. ಇಂಥ ದೊಡ್ಡ ಮನಸ್ಥಿತಿ ಇದ್ದರೆ ಜಾತ್ಯಾತೀತ ಸಮಾಜ ನಿರ್ಮಾಣ ಕಷ್ಟವೇನೂ ಆಗಲಾರದು, ಗ್ರೇಟ್... ನಿಮ್ಮವರು' ಎಂದು ಮುಕ್ತವಾಗಿ ಹೊಗಳುತ್ತಿದ್ದ. ಈ ಮಾತುಗಳನ್ನು ಲಿಂಗರಾಜು ಬೆರಗಿನಿಂದ ಕೇಳಿಸಿಕೊಳ್ಳುತ್ತಿದ್ದ. ಮಂಜುಳೆಯ ಅಣ್ಣ ವಿಘ್ನೇಶ್ವರ ಭಟ್ಟರು ನಗುನಗುತ್ತಲೇ ಮಾತಾಡುವ ಸರಳ ಸ್ವಭಾವದವರು. ಸರ್ಕಾರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದು ಕತೆ, ಕವನ ಬರೆದು ಪತ್ರಿಕೆಗಳಲ್ಲಿ ಜನಪ್ರಿಯರಾಗಿರುವ ದೊಡ್ಡ ವ್ಯಕ್ತಿಯನ್ನು ತಂಗಿ ಸಂಗಾತಿಯನ್ನಾಗಿ ಆಯ್ಕೆ ಮಾಡಿಕೊಂಡ ಬಗ್ಗೆ ಅಭಿಮಾನ

ಇದ್ದವರಂತೆ ಕಂಡರು. ಅವರು ಮನೆಗೆ ಬಂದಾಗ ಸಂಜೆ. ರಾಮಣ್ಣ ಇನ್ನೂ ಬಂದಿರಲಿಲ್ಲ. ಮಂಜುಳ ಸಂಭ್ರಮದಿಂದ ಅಣ್ಣನನ್ನು ಬರಮಾಡಿಕೊಂಡು ಮನೆಯಲ್ಲೆಲ್ಲ ಲಗುಬಗೆಯಿಂದ ಓಡಾಡಿಕೊಂಡು ಮಾತಾಡುತ್ತಿದ್ದರು. ಲಿಂಗರಾಜನನ್ನು 'ನಮ್ಮವರ ಅಣ್ಣನ ಮಗ, ಓದಲಿಕ್ಕೆ ಅಂತ ಬಂದಿದ್ದಾನೆ' ಎಂದು ಪರಿಚಯಿಸಿದಾಗ ವಿಘ್ನೇಶ್ವರ ಭಟ್ಟರು 'ಒಳ್ಳೇದು ಒಳ್ಳೇದು.. ಓದಬೇಕು, ಓದಿ ನಿಮ್ಮ ಚಿಕ್ಕಪ್ಪನಂತೆ ದೊಡ್ಡ ಮನುಷ್ಯನಾಗಬೇಕು' ಎಂದು ಗಟ್ಟಿಯಾಗಿ ನಕ್ಕರು. ದೊಡ್ಡದಾಗಿ ನಕ್ಕ ಅವರ ಬಾಯನ್ನು ನೋಡಿದ ಲಿಂಗರಾಜನಿಗೆ ಅವರು ತುಂಬ ಎಲೆ ಅಡಿಕೆ ಹಾಕುತ್ತಿದ್ದವರಂತೆ ಕಂಡರು. ಊರಲ್ಲಿಯೂ ಎಲೆಅಡಿಕೆ ಹಾಕುವವರ ಹಲ್ಲುಗಳಂತೆಯೇ ಭಟ್ಟರ ಹಲ್ಲುಗಳೂ ಇದ್ದುದನ್ನು ಕುತೂಹಲದಿಂದ ಅವನು ನೋಡಿದ್ದ.

ಅಣ್ಣ ತಂಗಿ ಮಾತಾಡುತ್ತಿದ್ದಾಗ ರಾಮಣ್ಣ ಬಂದರು. ಅದೇ ಮೊದಲ ಸಲ ಮುಖತಃ ನೋಡಿರಬೇಕು. ಚಿಕ್ಕಮ್ಮನ ಕಡೆ ಪ್ರಶ್ನಾರ್ಥಕವಾಗಿ ನೋಡುತ್ತಿದ್ದಂತೆ ಅವರು ವಿಘ್ನೇಶ್ವರ ಭಟ್ಟರನ್ನು 'ನಮ್ಮ ಅಣ್ಣ' ಎಂದು ಹೇಳಿದಾಗ ರಾಮಣ್ಣ ಸೌಜನ್ಯದಿಂದ ನಮಸ್ಕರಿಸಿದರು. ತಮ್ಮ ಕೋಣೆಗೆ ಹೋಗಿ ಲಗುಬಗೆಯಿಂದ ಬಟ್ಟೆ ಬದಲಿಸಿಕೊಂಡು ಬಂದರು. ತಾಯಿ, ತಂಗಿಯರ ಯೋಗಕ್ಷೇಮವನ್ನು ವಿಚಾರಿಸಿಕೊಂಡರು. ಪಕ್ಕದಲ್ಲಿ ಕೂರಿಸಿಕೊಂಡರು. ಊರು ಮನೆಯ ವಿಚಾರ, ಭಟ್ಟರ ತೋಟದ ಬೇಸಾಯದ ವಿಚಾರಗಳನ್ನು ಔಪಚಾರಿಕವಾಗಿ ಪ್ರಸ್ತಾಪಿಸಿದರು. ಅವರು ಕೇಳದಿದ್ದರೂ ತಮ್ಮ ಕಾಲೇಜಿನ ಸಂಗತಿಗಳನ್ನೂ, ಪಾಠ ಪ್ರವಚನ ವಿಷಯಗಳನ್ನೂ ಹೇಳಿಕೊಂಡರು. ಮಧ್ಯೆ ಮಧ್ಯೆ ಎದ್ದು ಅಡುಗೆ ಮನೆಗೆ ಹೋಗಿ ಚಿಕ್ಕಮ್ಮನಿಗೆ ಸೂಚನೆ ಕೊಟ್ಟು ಬರುತ್ತಿದ್ದರು. ಇವರು ಮಾತನಾಡುತ್ತಿದ್ದಾಗ ನಾರಾಯಣರಾವ್ ಬಂದರು. ಅವರನ್ನೂ ಭಟ್ಟರಿಗೆ ಗೌರವದಿಂದ ಪರಿಚಯಿಸಿ ತಾವು ಒಟ್ಟಿಗೆ ಸೇರಿ ಮಾಡಹೊರಟ ಸಿನಿಮಾ ಬಗ್ಗೆಯೂ ಹೇಳಿದರು. ಹಳ್ಳಿಯಲ್ಲಿದ್ದು ಊರು ಬದಿ ಪಟ್ಟಣಕ್ಕೆ ಬರುತ್ತಿದ್ದ ಟೆಂಟ್ ಸಿನಿಮಾ ನೋಡಿ ಸಂತೋಷಪಡುತ್ತಿದ್ದ ಭಟ್ಟರಿಗೆ ತಮ್ಮ ತಂಗಿಯ ಗಂಡನೇ ಅಂಥ ಸಿನಿಮಾ ತೆಗೆಯುವುದಕ್ಕೆ ಮುಂದಾಗಿರುವುದಕ್ಕೆ ಆಶ್ಚರ್ಯವಾಗಿರಬೇಕು. ತಂಬೂಲ ಹಾಕಿದ್ದ ಅವರು ತಕ್ಷಣ ಹೊರಗೆ ಬಂದು ರಸ್ತೆಯ ಆಚೆಯ ಚರಂಡಿಯಲ್ಲಿ ಉಗುಳಿ ಬಂದರು. ಉತ್ಸಾಹದಿಂದ ಸಿನಿಮಾ ಮಾಡುವ ಬಗ್ಗೆ ತಿಳಿಯಲು ಮುಂದಾದರು. 'ಹೀರೋ ಯಾರು.. ಹಿರೋಯಿನ್ ಯಾರು.. ಮಧ್ಯೆ ಮಧ್ಯೆ ಫೈಟಿಂಗ್ ಎಷ್ಟಿರುತ್ತವೆ..?' ಎಂಬಂಥ ವಿವರಗಳನ್ನು ತಿಳಿಯಬಯಸಿದರು. ನಾರಾಯಣರಾವ್ ಅವರ ಮಾತಿಗೆ 'ನಮ್ಮದು ಅಂಥ ಸಿನಿಮಾ ಅಲ್ಲ, ಭಟ್ರೆ, ಇದು ಸಾಹಿತ್ಯ ಕೃತಿಯನ್ನು ಆಧರಿಸಿ ಮಾಡುವುದು. ಇಲ್ಲಿ ಕತೆಯೇ ಪ್ರಧಾನ. ಇಲ್ಲಿ ಒಬ್ಬ ನಾಯಕ, ಅವನಿಗೆ ನಾಯಕಿ ಅಂತ ಇರಲ್ಲ. ಒಂದು ಊರೇ ಇಲ್ಲಿ ನಾಯಕನ ಹಾಗೆ ಇರುತ್ತೆ. ಊರಿನಲ್ಲಿ ನಡೆಯುವ ವಿದ್ಯಮಾನಗಳು, ಈ ಕಾಲಘಟ್ಟದಲ್ಲಿ ಹೇಗೆ ಕಲಾತ್ಮಕವಾಗಿ ಬಿಂಬಿಸಬಹುದು ಎಂಬುದರ ಪ್ರಯತ್ನ ನಮ್ಮದು...' ಎಂದು ಸಾಧ್ಯವಾಗುವಷ್ಟೂ ಸರಳವಾಗಿ ವಿವರಿಸಲು ಪ್ರಯತ್ನಿಸಿದರು. 'ಹೋ... ನಿಮ್ಮದು ಒಂದು ಊರಿನ ಕತೆಯೋ..' ಎಂದು ಯಕ್ಷಗಾನದ ಧಾಟಿಯಲ್ಲಿ ಪ್ರಶ್ನಿಸಿದರು ಭಟ್ಟರು. 'ಅಲ್ಲ, ಅಲ್ಲ .. ಒಂದು ಸಾಮಾಜಿಕ ಸಮಸ್ಯೆಯನ್ನು ಎತ್ತಿಕೊಂಡು ಅದಕ್ಕೆ ಪರಿಹಾರವನ್ನು ಸೂಚಿಸುವ ಪ್ರಯತ್ನ. ಊರು ಮುಖ್ಯ ಪಾತ್ರದಂತೆ ಇರುತ್ತದೆ.. ಇದು ಮೇಷ್ಟ್ರದ್ದೇ ಕತೆ. ಅದನ್ನೇ ಚಿತ್ರದಲ್ಲಿ ತೋರಿಸುವುದು ನಮ್ಮ ಉದ್ದೇಶ. ಮೇಷ್ಟ್ರೇ ಡೈರೆಕ್ಟರು. ಅವರ ಮೊದಲ ಚಿತ್ರ ಅಂದ್ರೆ ಅದಕ್ಕೆ ಸರ್ಕಾರದ ವಿಶೇಷ ಸಬ್ಸಿಡಿ ಅಂತ ಸಿಗುತ್ತೆ. ಅಷ್ಟರಲ್ಲೇ ಮುಗಿಸಬಹುದು ಅಂತ ನಮ್ಮ ಅಂದಾಜು..' ಎಂದು ನಾರಾಯಣರಾವ್ ಇನ್ನಷ್ಟು ವಿವರಗಳನ್ನು ಹೊರಹಾಕಿದರು.

ಊರೇ ಮುಖ್ಯ ಪಾತ್ರದಲ್ಲಿರುತ್ತದೆ ಎಂದುದಕ್ಕೆ ಸುಮ್ಮನಾದ ಭಟ್ಟರು ಮತ್ತೆ ಕೆದಕಲು ಹೋಗಲಿಲ್ಲ. ಇಬ್ಬರೂ ಮಾತು ಆಡುವುದನ್ನು ಕೇಳಿಸಿಕೊಳ್ಳತೊಡಗಿದರು. ಶೂಟಿಂಗ್ ನಿಗದಿಪಡಿಸುವ ಅಂತಿಮ ಹಂತಕ್ಕೆ ಬಂದಿದ್ದ ಮಾತುಕತೆ. ರಾತ್ರಿ ಒಂಬತ್ತರ ಸುಮಾರಿಗೆ ನಾರಾಯಣರಾವ್ ಹೊರಡುವುದಕ್ಕೆ ಎದ್ದಾಗ ರಾಮಣ್ಣ 'ನಾಳೆ ಮಂಜು ಹೋಗ್ತಾರೆ... ನಾವು ಶುರು ಮಾಡಿಕೊಂಡರೆ ಅವರು ವಾಪಸು ಬರುವುದರೊಳಗೆ ಒಂದು ಹಂತಕ್ಕೆ ಬರಬಹುದು' ಎಂದರು. 'ಹೌದು.. ಹೌದು' ಎನ್ನುತ್ತಾ ಭಟ್ಟರಿಗೂ ಮಂಜುಳೆಗೂ ಹೇಳಿ ನಿರ್ಗಮಿಸಿದರು.

* * *

ಅಧ್ಯಾಯ–4

# ಕೂಸು ಕಮಲಿ

ಮಂಜುಳೆ ಹೆರಿಗೆಗೆ ಹೋಗುವುದಕ್ಕೂ ದಸರೆ ರಜೆ ಆರಂಭವಾಗುವುದಕ್ಕೂ ಸರಿಯಾಯಿತು. ಲಿಂಗರಾಜು ಊರಿಗೆ ಹೋಗುವ ತವಕದಲ್ಲಿದ್ದ. ಹಾಸನಕ್ಕೆ ಬಂದು ಅಲ್ಲಿಂದ ಶಿವಮೊಗ್ಗ ತಲುಪಿ ಮುಂದೆ ಊರಿಗೆ ಬಸ್ಸು ಹಿಡಿದು ಹೋಗುವಷ್ಟು ತಿಳಿವಳಿಕೆ ಬಂದಿಲ್ಲವೆಂದು ಗ್ರಹಿಸಿದ ರಾಮಣ್ಣ 'ಒಂದೆರಡು ದಿನ ಇರು ಮಾರಾಯ, ನಮ್ಮ ಸ್ನೇಹಿತರೊಬ್ಬರು ಶಿವಮೊಗ್ಗಕ್ಕೆ ಹೋಗುತ್ತಿದ್ದಾರೆ. ಅವರು ನಿನ್ನನ್ನು ಶಿವಮೊಗ್ಗದಲ್ಲಿ ಊರುಕಡೆ ಬಸ್ಸಿಗೆ ಹತ್ತಿಸುತ್ತಾರೆ. ಅಲ್ಲಿಂದ ಇಳಿದು ನೀನು ಹೋಗ್ತೀಯಲ್ಲ' ಎಂದು ಕೇಳಿದ್ದ. ಪೇಟೆಯಿಂದ ಬಸ್ಸಿನಲ್ಲಿ ಒಬ್ಬನೇ ಬರುವ ಅಭ್ಯಾಸ ಇದ್ದ ಲಿಂಗರಾಜನಿಗೆ ಶಿವಮೊಗ್ಗದಿಂದ ಬರುವ ಬಸ್ಸಿನಲ್ಲಿ ಬಂದು ಮನೆ ಸೇರುವುದು ಕಷ್ಟ ಎನಿಸಿರಲಿಲ್ಲ. ಅದನ್ನೇ ಹೇಳಿದ. 'ಹಂಗಾದರೆ ಸರಿಯಾಯ್ತು ಬಿಡು. ಕಳಿಸಲು ವ್ಯವಸ್ಥೆ ಮಾಡ್ತೀನಿ' ಎಂದು ಹೇಳಿದ. ಮೂರುದಿನಗಳಲ್ಲಿ ಅದಕ್ಕೆ ವ್ಯವಸ್ಥೆಯಾಯಿತು. ಬೆಳಗ್ಗೆ ಮುಂಚೆ ಮನೆಯಿಂದ ಹೊರಟವರು ಹಾಸನಕ್ಕೆ ಬಂದು ಅಲ್ಲಿಂದ ಬಸ್ಸಿನಲ್ಲಿ ಶಿವಮೊಗ್ಗ ಸೇರುವಾಗ ಮಧ್ಯಾಹ್ನವಾಗಿತ್ತು. ಪೇಟೆಯ ಮಾರ್ಗವಾಗಿ ಹೋಗುವ ಖಾಸಗಿ ಬಸ್ಸನ್ನು ಹಿಡಿದು ಕಂಡಕ್ಟರನಲ್ಲಿ ವಿಚಾರಿಸಿ ಲಿಂಗರಾಜನನ್ನು ಕೂರಿಸಿ ರಾಮಣ್ಣನ ಸ್ನೇಹಿತ ನಿರ್ಗಮಿಸಿದ್ದ. ಸ್ವತಂತ್ರ ಹಕ್ಕಿಯಂತೆ ಹಗುರಾದ ಲಿಂಗರಾಜ ಊರನ್ನು ಸೇರುವ ತವಕದಿಂದ ಉಲ್ಲಸಿತನಾದ. ರಾಮಣ್ಣ ಕಾಗದ ಹಾಕಿ ತಿಳಿಸಿದ್ದರಿಂದ ಸರ್ಕಾರಿ ರಸ್ತೆಯ ಬಸ್ ನಿಲುಗಡೆ ಜಾಗದಲ್ಲಿ ಯಲ್ಲನಾಯ್ಕರು ಕಾದಿದ್ದರು. ಅವರನ್ನು ನೋಡುತ್ತಲೇ ಲಿಂಗರಾಜನ ಮುಖ ಅರಳಿತು. ಖುಷಿಯಿಂದ ಅಪ್ಪನ ಜೊತೆ ಸೇರಿಕೊಂಡ.

ರಸ್ತೆಯ ಅಕ್ಕಪಕ್ಕ ಮನೆಗಳೆದ್ದು ಅದಕ್ಕೊಂದು ಸಣ್ಣ ಪೇಟೆಯ ಸ್ವರೂಪ ಬಂದಿದ್ದನ್ನು ಅವನು ಗಮನಿಸಿದ. ಶಿವಮೊಗ್ಗ, ಹಾಸನದ ಮೂಲಕ ಹಾದು ಬರುವಾಗ ದೊಡ್ಡ ದೊಡ್ಡ ಮನೆಗಳನ್ನು ನೋಡಿದವನಿಗೆ ಊರಿನ ಸರ್ಕಾರಿ ರಸ್ತೆಯ ಅಕ್ಕಪಕ್ಕ ಇದ್ದ ಮನೆಗಳು ಸಣ್ಣದಾಗಿ ಕಳಾಹೀನವಾಗಿ ಕಂಡಿದ್ದವು. ರಸ್ತೆಯಿಂದ ಒಳಹಾದಿಯಲ್ಲಿ ಕ್ರಮಿಸುವಾಗ ಊರಿನ ಆಪ್ತವಲಯಕ್ಕೆ ಬಂದ ಆತ್ಮೀಯ ಭಾವ ಅವನನ್ನು ಆವರಿಸಿತು. ತಂದೆಯೊಂದಿಗೆ ಮೊದಲಿನಿಂದ ಸಲುಗೆ ಇರಲಿಲ್ಲವಾದ್ದರಿಂದ ಅವನು ದಾರಿ ಕ್ರಮಿಸುವಾಗ ಏನನ್ನೂ ಕೇಳುವ ಪ್ರಶ್ನೆ ಇರಲಿಲ್ಲ. ಯಲ್ಲನಾಯ್ಕರೇ ಅವನ ವಾಸ್ತವ್ಯದ ಅನುಭವಗಳನ್ನು ಪರಿಚಯ ಮಾಡಿಕೊಳ್ಳಲು ಪ್ರಶ್ನೆಗಳನ್ನು ಹಾಕಿದರು. ಇವನಿಗೆ ಎಲ್ಲಿ ಮಲಗುವುದಕ್ಕೆ ಜಾಗ ಕೊಟ್ಟಿದ್ದಾರೊ ಎಂಬ ಅಳುಕು ಅವರಲ್ಲಿ ಇದ್ದಿರಬೇಕು, ಅದಕ್ಕೆ ಮನೆ ಎಷ್ಟಿದೆ ಎಂದು ಕೇಳಿದರು. ಅವನು ಮಲಗುವ ಜಾಗ ಎಲ್ಲಿ

ಎಂಬುದನ್ನು ತಿಳಿದುಕೊಂಡರು. ಮೊದಲೇ ಭಟ್ಟರ ಹೆಣ್ಣು, ಮಡಿ ಹುಡಿ ಏನಾದರೂ ಐತೋ ಎಂಬುದನ್ನೂ ಪ್ರಶ್ನೆ ಕೇಳಿ ತಿಳಿದುಕೊಳ್ಳಲೆತ್ನಿಸಿದರು. ಊಟಕ್ಕೆ ಎಂಥ ತಟ್ಟೆ. ಉಂಡ ಗಂಗಾಳವನ್ನು ಇವನೇ ತೊಳೆದಿಡಬೇಕೋ ಎಂದೆಲ್ಲ ವಿಚಾರಿಸಿಕೊಂಡರು. ರಾಮಣ್ಣನ ಮನೆಯಲ್ಲಿ ಮಗ ಪಂಕ್ತಿಭೇದ ಅನುಭವಿಸುತ್ತಿಲ್ಲ, ಮಂಜುಳಾ ಮನೆಗೆ ಹೊಂದಿಕೊಂಡಿದ್ದಾಳೆ ಎಂಬುದನ್ನು ಮನವರಿಕೆ ಮಾಡಿಕೊಂಡರು. ಆದರೂ ಮಗನತ್ತ ತಿರುಗಿ ಮೇಲಿನಿಂದ ಕೆಳಗಿನವರೆಗೆ ನೋಡಿ 'ಯಾಕೋ ಸೊರಗಿದ್ದೀಯಾ..?' ಎಂದು ಕೇಳಿದರು. ಅವರಿಗೇ ಅದು ಉಪಚಾರಕ್ಕಾಗಿ ಹೊರಬಂದ ಮಾತು ಎನಿಸಿತು. ಲಿಂಗರಾಜು ಹೋಗಿ ಮೂರು ತಿಂಗಳಷ್ಟೆ ಆಗಿದ್ದು ಅಷ್ಟರಲ್ಲಿ ಅವನೇನೂ ಹೆಚ್ಚು ಸೊರಗಿಲ್ಲ, ಬದಲಾಗಿ ಪೇಟೆಯ ವಾತಾವರಣದಲ್ಲಿ ಕೊಂಚ ಬಣ್ಣ ಬಂದಿದ್ದಾನೆ ಎಂಬುದು ಮನದಟ್ಟಾಯಿತು.

ಅಪ್ಪ ಮಕ್ಕಳು ಮನೆಗೆ ಬಂದಾಗ ಎಂದಿನಂತೆ ನಾಯಿಗಳ ಸ್ವಾಗತವಾಯಿತು. ಲಿಂಗರಾಜನನ್ನು ಗುರುತು ಹಿಡಿದ ನಾಯಿಗಳು ಬಾಲ ಅಲ್ಲಾಡಿಸಿ ಬರಮಾಡಿಕೊಂಡವು. ನಾಗರಾಜ ಆಗಲೇ ದಸರಾ ರಜದ ನಿಮಿತ್ತ ಬಂದು ಮನೆಯಲ್ಲಿ ಹಳಬನಾಗಿದ್ದ. ಅವನು ಓದಿಗಾಗಿ ಸೋದರ ಮಾವನ ಮನೆಗೆ ಹೋದಂದಿನಿಂದಲೂ ಒಂಟಿತನವನ್ನೇ ಅನುಭವಿಸುತ್ತಿದ್ದ ಲಿಂಗರಾಜನಿಗೆ ತಾನೂ ಮನೆಯಿಂದ ಹೊರ ಹೋಗಿ ಮೂರುತಿಂಗಳ ನಂತರ ವಾಪಸಾಗುತ್ತಿರುವುದು ಸಂಭ್ರಮದ ಭಾವಕ್ಕೆ ಕಾರಣವಾಗಿತ್ತು. ಇಬ್ಬರೂ ಸ್ವಲ್ಪ ಹೊತ್ತಿಗೆ ಎಂದಿನ ಸಲುಗೆಯ ಧಾಟಿಗೆ ಮರಳಿದರು. ತಿಮ್ಮನಾಯ್ಕರು ಮೊಮ್ಮಗನನ್ನು ಚಿಕಿತ್ಸಕ ದೃಷ್ಟಿಯಿಂದ ನೋಡಿದರೂ ಅವನಲ್ಲಿ ಸುಧಾರಣೆಯೇ ಕಂಡಿದ್ದರಿಂದ ಸಮಾಧಾನಗೊಂಡರು. ಗಂಗಮ್ಮನಿಗೂ ಹೊಸ ಸೊಸೆಯ ಬಗ್ಗೆ ಅನುಮಾನವೇ ಇತ್ತು. ಲಿಂಗರಾಜನನ್ನು ನೋಡಿದ ಮೇಲೆ ಅವನು ರಾಮಣ್ಣನ ಮನೆಯಲ್ಲಿ ಅವಜ್ಞೆಗೆ ಒಳಗಾಗಿಲ್ಲವೆಂದು ಸಮಾಧಾನವಾಯಿತು. ಅದನ್ನೇ ಪಾರ್ವತಮ್ಮನೊಂದಿಗೂ ಹೇಳಿಕೊಂಡು 'ಪರವಾಗಿಲ್ಲ. ಅವಳೂ ಚೆನ್ನಾಗಿ ಹೊಂದಿಕೊಂಡಿದಾಳೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದಾಗ ಅದನ್ನು ಒಪ್ಪಿಕೊಳ್ಳದಿರಲು ಕಾರಣಗಳು ಹೊಳೆಯಲಿಲ್ಲ. 'ಎಲ್ಲೋ ಓದಿ ಬುದ್ಧಿವಂತನಾಗುತ್ತಾನಲ್ಲ, ಪೇಟೆ ಸ್ಕೂಲು.. ಇಂಗ್ಲಿಷು ಪಂಗ್ಲಿಷು ಚೆನ್ನಾಗಿ ಕಲಿಯಬಹುದು' ಎಂಬ ಭಾವವೂ ಅವಳಲ್ಲಿ ಬಲವಾಗಿತ್ತು. 'ಬಂದ್ಯಾ, ಬ್ಯಳಿಗ್ಗೇನೇ ಬಸ್ಸಿಗೆ ಹತ್ತಿರಬೇಕು. ಬಚ್ಚಲಿಗೆ ಹೋಗಿ ಕೈಕಾಲು ಮಖ ತೊಳ್ಕಾ ಬಾ. ಉಣ್ಣು' ಎಂದು ಸ್ವಾಗತಿಸಿದಳು. ಓದಲು ಹೊರಟಾಗ ಚಿಕ್ಕದೊಂದು ಟ್ರಂಕನ್ನು ಒಯ್ದಿದ್ದ ಲಿಂಗರಾಜನಿಗೆ ಊರಿಗೆ ಬರುವಾಗ ಅವನ ಬಟ್ಟೆಗಳನ್ನು ತುಂಬಿಕೊಳ್ಳಲು ಸಣ್ಣದೊಂದು ಚರ್ಮದಂತೆ ಕಾಣುವ ಪ್ಲಾಸ್ಟಿಕ್ ಚೀಲವನ್ನು ರಾಮಣ್ಣ ಕೊಟ್ಟಿದ್ದನು. ಅದು ಪ್ರಾಯಶಃ ಅವನು ಕಾಲೇಜಿನಲ್ಲಿ ಓದುವಾಗ ಕೊಂಡಿದ್ದಿರಬೇಕು. ಹಳತಾಗಿದ್ದರೂ ಲಿಂಗರಾಜನ ಎರಡು ಜೊತೆ ಬಟ್ಟೆ, ಒಂದೆರಡು ಪುಸ್ತಕಗಳನ್ನು ತುಂಬಿಕೊಳ್ಳಲು ಸೂಕ್ತವಾಗಿತ್ತು. ತಂದಿದ್ದ ಆ ಚೀಲವನ್ನು ಮಮತೆಯಿಂದ ತೆಗೆದುಕೊಂಡ ಪಾರ್ವತಮ್ಮ ಕುತೂಹಲದಿಂದ ಒಳಗೆ ಕಣ್ಣಾಡಿಸಿ ಅವನ ಬಟ್ಟೆಗಳನ್ನು ಹೊರಕ್ಕೆ ತೆಗೆದಳು. ಪುಸ್ತಕಗಳನ್ನು ಅದರಲ್ಲೇ ಇಟ್ಟು ಜಗುಲಿಯಲ್ಲಿ ಗೋಡೆಗೆ ಹೊಡೆದಿದ್ದ ಮಿಕದ ಕೊಂಬಿಗೆ ನೇತು ಹಾಕಿದಳು.

ಮನೆಯ ಹೊರಗಿದ್ದ ಬಚ್ಚಲು ಮನೆಗೆ ಹೋಗಿ ಕೈಕಾಲು ಮುಖ ತೊಳೆದುಕೊಂಡು ಬಂದ ಲಿಂಗರಾಜ ಅಡುಗೆ ಒಲೆಯ ಪಕ್ಕದಲ್ಲಿ ಮಣೆ ಹಾಕಿ ಕುಳಿತುಕೊಂಡನು. ಅವನೊಟ್ಟಿಗೆ ನಾಗರಾಜನೂ ಸೇರಿದನು. ಸಂಜೆಯ ಹೊತ್ತಾದರೂ ಇಬ್ಬರೂ ಹುಡುಗರಿಗೆ ಪಾರ್ವತಮ್ಮ ಅನ್ನ ಸಾರು ಬಡಿಸಿದಳು. ಊಟಕ್ಕೆ ಕುಳಿತವನನ್ನು ಒಂದು ಕಡೆ ಅಜ್ಜಿಯೂ, ಇನ್ನೊಂದು ಕಡೆ ಅವ್ವನೂ ಪ್ರಶ್ನಿಸಿ ಮಂಜುಳೆಯ ನಡವಳಿಕೆಗಳನ್ನು

ಅರಿತುಕೊಂಡಳು. ಇಬ್ಬರಿಗೂ ಅವಳು ಮನೆಗೆ ಹೊಂದಿಕೊಂಡಿದ್ದಾಳೆ, ಲಿಂಗರಾಜನನ್ನು ಕಡೆಗಣಿಸಿಲ್ಲ. ಹೊತ್ತಿಗೆ ಹೊತ್ತಿಗೆ ಅನ್ನ ಹಾಕಿದ್ದಾಳೆ. ಮನೆ ಚಾಕರಿಗಳನ್ನೇ ಮಾಡಿಸಿಕೊಳ್ಳುತ್ತಿಲ್ಲ ಎಂಬುದು ಮನವರಿಕೆಯಾಗಿ ಸಮಾಧಾನವಾಯಿತು. ಒಬ್ಬರಾದ ನಂತರ ಒಬ್ಬರಂತೆ ಎಡೆಬಿಡದೆ ಕೇಳುತ್ತಿದ್ದ ಪ್ರಶ್ನೆಗಳಿಗೆ ಕಿರಿಕಿರಿ ಅನುಭವಿಸಿದ ಲಿಂಗರಾಜು 'ಇನ್ನೂ ಎರಡು ವಾರ ರಜ ಐತಲ್ಲ.. ಈಗಲೇ ಎಲ್ಲಾ ಮುಗಿಸಿಬಿಡ್ತೀರ' ಎಂದು ಅಜ್ಜಿಗೂ, ಅವ್ವನಿಗೂ ಹೇಳಿದಾಗ ಹುಡುಗನ ಮಾತಿಗೆ ಪರಸ್ಪರ ಮುಖ ನೋಡಿಕೊಂಡು ಮುಚ್ಚುನಗೆಯೊಂದಿಗೆ ಸುಮ್ಮನಾದರು. 'ಅದಕ್ಕೆ ಯಾಕೆ ಹಂಗೆ ಗುರಾಸ್ತಿಯಾ.. ನಂಗೂ ಬಂದ ದಿನ ಹಿಂಗೇ ಕೇಳ್ತಾರೆ. ಅತ್ತೆ ಸರ್‍ಯಾಗಿ ಉಣ್ಣಾಕೆ ಇಕ್ತಾಳೋ ಇಲ್ಲೋ ಅಂತ' ಎಂದು ನಾಗರಾಜನೂ ದನಿಗೂಡಿಸಿದನು. ಅಜ್ಜಿ, ಅವ್ವ ಇಬ್ಬರೂ ಸುಮ್ಮನಾದರು. ಸ್ವಲ್ಪ ಹೊತ್ತು ಮೌನ ನೆಲೆಸಿತು. ಅದರಿಂದ ಲಿಂಗರಾಜನಿಗೆ ಕಿರಿಕಿರಿಯಾಯಿತು. 'ಒಂಚೂರು ಕುಡಿಯಾಕೆ ನೀರು ಕೊಡವ್ವ' ಎಂದು ಹೇಳಿ ಪರಿಸ್ಥಿತಿಯನ್ನು ಸಹಜ ಸ್ಥಿತಿಗೆ ತಂದನು.

ದಸರೆಯ ರಜೆಯಲ್ಲಿ ಅವರಿಗೆ ಹೆಚ್ಚಿನ ಕೆಲಸ ಇರಲಿಲ್ಲ. ಅವರಿಗೆ ಇದ್ದುದ್ದೇ ಎರಡು ಎಕರೆ ಗದ್ದೆ. ಅದರಲ್ಲಿಯೇ ಸ್ವಲ್ಪ ಭಾಗಕ್ಕೆ ಅಡಿಕೆ ಹಾಕಿದ್ದರು. ತೋಟದಲ್ಲಿ ಕಳೆ ಕೀಳುವ ಕೆಲಸದಲ್ಲಿ ಒಂದೆರಡು ದಿನ ಕಳೆದವು. ಮನೆಯ ಸುತ್ತ ಓಡಾಡುತ್ತಾ ಮನೆಯ ಹಿಂದೆ ಅನತಿ ದೂರದಲ್ಲಿದ್ದ ಊರ ಕೆರೆಯಲ್ಲಿ ಗಾಳ ಹಾಕಿ ಮೀನು ಹಿಡಿಯುವ ಸಾಹಸಕ್ಕೆ ಮುಂದಾದರು. ಉದ್ದನೆಯ ಚಳವೆ ಹುಡುಕಿ ಅದಕ್ಕೆ ಪ್ಲಾಸ್ಟಿಕ್ಕಿನ ಟ್ವೊಯಿನ್ ದಾರ ಕಟ್ಟಿ ತುದಿಯ ಗಾಣಕ್ಕೆ ಎರೆ ಹುಳ ಚುಚ್ಚಿಸಿ ನೀರಲ್ಲಿ ಇಳಿಬಿಟ್ಟು ಕಾದರು. ಬೇಸಗೆಯಲ್ಲಿ ಬಹುಮಟ್ಟಿಗೆ ಬತ್ತಿ ಹೋಗಿ ಮಳೆಗಾಲದಲ್ಲಿ ತುಂಬಿಕೊಳ್ಳುತ್ತಿದ್ದ ಆ ಕೆರೆಯಲ್ಲಿ ದೊಡ್ಡ ಮೀನುಗಳೇನೂ ಇರುತ್ತಿರಲಿಲ್ಲ. ಸಣ್ಣ ಜಾತಿಯ ಕೊರವ, ಕುಂಚು ಮೀನುಗಳು ಇರುತ್ತಿದ್ದವು. ಕುಂಚಿನ ಮೀನುಗಳನ್ನು ಸೆಳೆಯಲು ಬೀರೆ ಹುಳು ಕಟ್ಟಬೇಕೆಂದು ನಾಗರಾಜ ಹೇಳಿದ್ದನ್ನು ಅನುಸರಿಸಿ ಗೊಬ್ಬರದ ಗುಂಡಿಯಲ್ಲಿ ಹುಡುಕಿದರು. ಸಿಕ್ಕಿದ ಬೀರೆಹುಳುಗಳನ್ನು ಗೆರೆಟೆಯಲ್ಲಿ ಮಣ್ಣು ತುಂಬಿಕೊಂಡು ಕೆರೆ ದಂಡೆಗೆ ಹೋಗಿ ಬೀರೆಹುಳುಗಳ ಬೆನ್ನಿಗೆ ಚುಚ್ಚಿ ಕೆರೆ ಮಧ್ಯಕ್ಕೆ ಎಸೆದರು. ಬೆನ್ನಿನ ಭಾಗಕ್ಕೆ ಗಾಳ ಚುಚ್ಚಿಕೊಂಡಿದ್ದರಿಂದ ಪಾರಾಗಲು ಅದು ನೀರಲ್ಲಿ ಹೆಣಗಾಡುತ್ತಿದ್ದರೆ, ಅದನ್ನು ನುಂಗುವುದಕ್ಕೆ ದೊಡ್ಡ ಜಾತಿಯ ಮೀನುಗಳು ಬರುವುದು ನಾಗರಾಜನಿಗೆ ಗೊತ್ತಿತ್ತು. ಎರೆಹುಳು ಕಟ್ಟಿ ನೀರೊಳಕ್ಕೆ ಗಾಳ ಮುಳುಗಿಸಿ ಕಾಯುವುದಕ್ಕಿಂತ ಬೀರೆ ಹುಳು ಕಟ್ಟಿ ಕಾಯುವುದು ಲಿಂಗರಾಜನಲ್ಲಿ ಹುರುಪು ಮೂಡಿಸಿತ್ತು. ಅಣ್ಣ ತಮ್ಮ ಇಬ್ಬರೂ ಮಾತಿಗೆ ವಿರಾಮ ಕೊಟ್ಟು ಕೆರೆಯತ್ತಲೇ ನೋಡುತ್ತಿದ್ದಂತೆ ಹಠಾತ್ತನೆ ಚಳವೆ ಜಗ್ಗಿತು. ಹುಡುಗರಿಬ್ಬರೂ ಉತ್ಸಾಹದಿಂದ ಬಿದಿರ ಚಳವೆಯನ್ನು ಎತ್ತಿ ದಂಡೆಯ ಕಡೆಗೆ ಎಸೆದರು. ದೊಡ್ಡದೊಂದು ಕುಂಚಿನ ಮೀನು ಬೀರೆಹುಳವನ್ನು ನುಂಗಿ ಗಾಳಕ್ಕೆ ಸಿಕ್ಕಿತ್ತು. ದಂಡೆಯ ಮೇಲೆ ಬಿದ್ದು ಹೊರಳಾಡುತ್ತ ಕೆರೆಯ ಕಡೆಗೆ ಧಾವಿಸುತ್ತಿದ್ದ ಅದನ್ನು ತಕ್ಷಣವೇ ಹಿಡಿದು ಗಂಟಲಿಗೆ ಸಿಕ್ಕಿಕೊಂಡಿದ್ದ ಗಾಳವನ್ನು ನಿಧಾನವಾಗಿ ಬಿಚ್ಚಿಕೊಂಡರು. ಸ್ವಲ್ಪಹೊತ್ತು ಮುಲುಗುಟ್ಟಿದ ಮೀನು ನಿಶ್ಚಲವಾಗಿ, ಹುಡುಗರ ಶಿಕಾರಿ ಸಾಹಸಕ್ಕೆ ಸಾಕ್ಷಿಯಾಯಿತು. ಹುರುಪಿನಿಂದ ಇನ್ನೊಂದು ಬೀರೆಹುಳುವನ್ನು ಕಟ್ಟಿ ಇನ್ನೊಂದು ಕಡೆ ಎಸೆದು ಕಾಯುತ್ತ ಕುಳಿತರು. ಮೊದಲ ಸಲಕ್ಕೆ ದೊಡ್ಡದೊಂದು ಮೀನು ಹಿಡಿದ ಸಂಭ್ರಮ ಇಬ್ಬರಲ್ಲೂ ಮನೆ ಮಾಡಿತ್ತು. ಬಿಸಿಲು ಚುರುಗುಟ್ಟುತ್ತಿದ್ದರೂ ಅದನ್ನು ಲಕ್ಷಿಸದೆ ಕೆರೆಯತ್ತ ದೃಷ್ಟಿ ಇಟ್ಟು ಇನ್ನೊಂದು ಮೀನು ಗಾಳ ಕಚ್ಚುವ ನಿರೀಕ್ಷೆಯಲ್ಲಿದ್ದರು. ಹುಡುಗರ ತಾಳ್ಮೆ ಮೀರುವಷ್ಟು ಹೊತ್ತಾದರೂ ಯಾವ ಜಲಚರವೂ ಗಾಳವನ್ನು ಕಚ್ಚಲಿಲ್ಲ. ಕಟ್ಟಿದ್ದ ಬೀರೆಹುಳು ನಿಶ್ಚಲವಾಗಿ ತೇಲುತ್ತಿತ್ತು. 'ಹುಳ ಆಡಲ್ಲ ಅಂದ್ರೆ,

ಯಾವ ಮೀನೂ ಬರಲ್ಲ' ಎಂದು ನಾಗರಾಜ ಅನುಭವದ ಮಾತು ಹೇಳಿದ. ಹೊಟ್ಟೆಯ ಹಸಿವೂ ತೋರಿದ್ದರಿಂದ ಗಾಳವನ್ನು ಮೇಲಕ್ಕೆ ಎಳೆದುಕೊಂಡು ಹಿಡಿದಿದ್ದ ಮೀನನ್ನು ಎತ್ತಿಕೊಂಡು ಮನೆಗೆ ವಾಪಸಾದರು. ಹುಡುಗರಿಬ್ಬರು ಮೀನು ಶಿಕಾರಿ ಮಾಡಿ ತಂದದ್ದನ್ನು ಅಜ್ಜಿಯೇ ಮೊದಲು ನೋಡಿ ಮೆಚ್ಚುಗೆಯ ಮಾತಾಡಿದ್ದು ಪಾರ್ವತಮ್ಮನಿಗೂ ಖುಷಿಯ ಸಂಗತಿಯಾಯಿತು. ಅವತ್ತು ರಾತ್ರಿಯ ಊಟಕ್ಕೆ ಮೀನು ಸಾರು ಬಡಿಸುವಾಗ ಹುಡುಗರ ಸಾಹಸ ಅಜ್ಜನಿಗೂ, ಅಪ್ಪಯ್ಯನಿಗೂ ಗೊತ್ತಾಯಿತು.

ದಸರೆಯ ರಜೆ ಮುಗಿಯುವ ಹಂತಕ್ಕೆ ಬಂದಾಗ ಒಂದು ಸಂಜೆ ಅನಿರೀಕ್ಷಿತವಾಗಿ ರಾಮಣ್ಣ ಬಂದ. ಮಂಜುಳೆಗೂ ಹೆರಿಗೆಯಾದ ಸುದ್ದಿ ತಂದಿದ್ದ. 'ಗಂಡು ಮಗುವಾಗಿದೆ. ಶಿರಸಿಗೆ ಹೋಗಿದ್ದೆ. ಶಿಶು ಬಾಣಂತಿ ಚೆನ್ನಾಗಿದ್ದಾರೆ. ನನಗೂ ಹಾಸನ ಜಿಲ್ಲೆಯಿಂದ ತುಮಕೂರಿಗೆ ವರ್ಗವಾಗಿದೆ. ಲಿಂಗರಾಜನ ಟಿಸಿಯನ್ನೂ ತಂದು ಬಿಟ್ಟಿದ್ದೇನೆ. ತುಮಕೂರಿನಲ್ಲಿ ಮನೆಯನ್ನೂ ಹುಡುಕಿ ಬಂದಿದ್ದೇನೆ. ನಾಳೆ ಇಲ್ಲಿಂದ ಶಿವಮೊಗ್ಗದ ಮೇಲಾಸಿ ಹೋಗೋದಷ್ಟೆ' ಎಂದು ಹೇಳಿದ. 'ಸೊಸೆಗೆ ಹೆರಿಗೆ ಆಯಿತು ಅಂದ್ರೆ ನಮಗೂ ಸೂತಕ ಆಯ್ತಲ್ಲ' ಎಂದು ಗಂಗಮ್ಮ ಹೇಳಿದರೆ, 'ಅದೆಲ್ಲ ಹಳೆ ಕಂದಾಚಾರ ಅವ್ವ.. ಎಲ್ಲೋ ಹೆರಿಗೆ ಆದ್ರೆ ಇಲ್ಲೆಲ್ಲ ಎಂತ ಸೂತ್ಕ. ನೀವು ಹತ್ತು ಹನ್ನೊಂದು ದಿನ ಗೌಲು ತಿನ್ನಾದು ಬಿಡಾದು. ಮಡಿವಾಳ್ತಿ ಕರೆಸಿ ಚೌಳು ಹಾಕಿಸಾದು.. ಇಂಥವೆಲ್ಲ ಬೇಡ.. ಅವ್ಳು ಅಲ್ಲಿ ಒಳ್ಳೆ ಆಸ್ಪತ್ರೇಲಿ ಇದ್ದಾಳೆ. ಚೆನ್ನಾಗಿ ನೋಡ್ಕತಾರೆ. ನಮ್ಮ ಬೀಗರಿಗೆ ವಿಶ್ವಾಸ ಬಂದೈತೆ. ಒಬ್ರೇ ಎರಡು ಮೂರು ತಿಂಗಳು ಹೆಂಗೆ ಇರ್ತೀರಿ ಕೈ ಸುಟ್ಕೊಂಡು ಅಂತ ನಮ್ಮ ಬಾವ, ಅದೇ ಮಂಜು ಅಣ್ಣ ಹೇಳ್ತಾ ಇದ್ರು.. ಏನಾದ್ರೂ ಮಾಡಣ ಅಂತಲೂ ಹೇಳಿದಾರೆ..' ಎಂದು ಸೊಸೆಯ ಬಾಣಂತನದ ಬಗ್ಗೆ ಚಿಂತಿತರಾಗಿದ್ದ ಗಂಗಮ್ಮನಿಗೆ ಸಮಾಧಾನವಾಗುವಂತೆ ಹೇಳಿದ. ಮನೆಗೊಂದು ಗಂಡು ಮಗುವಿನ ಆಗಮನ ಆ ಸಂಜೆ ಹೊತ್ತಲ್ಲಿ ಸಂಭ್ರಮ ತಂದಿತು. ರಾತ್ರಿಯ ಊಟಕ್ಕೆ ಪಾಯಸ ಮತ್ತು ಮರುದಿನ ಬೆಳಗ್ಗೆಯೇ ವಾಪಸಾಗಲಿದ್ದ ರಾಮಣ್ಣನಿಗಾಗಿ ಒಡ್ಡಿಯಲ್ಲಿದ್ದ ಹುಂಜಕ್ಕೆ ಮರಣ ದಂಡನೆ ವಿಧಿಸಿದ್ದರಿಂದ ಅಕ್ಕಿ ರೊಟ್ಟಿಯ ಜೊತೆ ಬಿಸಿಬಿಸಿ ವ್ಯಂಜನದ ವ್ಯವಸ್ಥೆಯೂ ಆಯಿತು. ಊಟಕ್ಕೆ ತಿಮ್ಮನಾಯ್ಕರ ಜೊತೆ ಯಲ್ಲನಾಯ್ಕರೂ, ರಾಮಣ್ಣನೂ ಕುಳಿತರೆ, ನಾಗರಾಜ– ಲಿಂಗರಾಜರು ಅಡುಗೆ ಒಲೆಯ ಬಿಸಿ ಶಾಖದ ವಲಯದಲ್ಲಿ ಕುಳಿತು ರಾತ್ರಿ ಊಟ ಮುಗಿಸಿದರು. ಲಿಂಗರಾಜನ ಬಟ್ಟೆಗಳನ್ನು ಪಾರ್ವತಮ್ಮ ಒಗೆದು ಮಡಿ ಮಾಡಿ ಇಟ್ಟಿದ್ದರಿಂದ ಹೆಚ್ಚಿನ ಸಿದ್ಧತೆಯೇನೂ ಇರಲಿಲ್ಲ. ಬೆಳಗ್ಗೆ ಎದ್ದವನು ನಿತ್ಯವಿಧಿಗಳನ್ನು ಪೂರೈಸಿ ಅಜ್ಜಯ್ಯನಿಗೂ ಅಜ್ಜಿಗೂ ಕಾಲಿಗೆ ಬಿದ್ದು ಲಿಂಗರಾಜು ರಾಮಣ್ಣನನ್ನು ಹಿಂಬಾಲಿಸಿದನು.

ಬಸ್ ಹಿಡಿಯಲು ಸರ್ಕಾರಿ ರಸ್ತೆಯವರೆಗೆ ನಡೆದು ಹೋಗುವಾಗ ಅವರೊಂದಿಗೆ ಯಲ್ಲನಾಯ್ಕರೂ ನಾಗರಾಜನೂ ಕಳಿಸಲು ಬಂದರು. ಅಣ್ಣನೊಟ್ಟಿಗೆ ಎರಡು ವಾರಗಳಿಂದ ಆಡಿ ಮೆರೆದಿದ್ದ ಲಿಂಗರಾಜನಿಗೆ ಊರು ಬಿಟ್ಟು ಹೋಗುವುದು ಯಾತನೆಯ ಸಂಗತಿಯಾದರೂ ಅದನ್ನು ತೋರಿಸಿಕೊಳ್ಳದೆ ನಡೆದಿದ್ದ. ಬಸ್ ನಿಲುಗಡೆಯ ಸ್ಥಳಕ್ಕೆ ಬಂದು ಕಾಯುತ್ತಿದ್ದಾಗ ಪೇಟೆಗೆ ಹೋಗಲು ಬಂದಿದ್ದ ಊರಿನ ಇಬ್ಬರು ಯುವಕರು ರಾಮಣ್ಣನನ್ನು ಮಾತಾಡಿಸಿ 'ಪೇಪರ್‌ನಲ್ಲಿ ಸುದ್ದಿ ಬಂದಿತ್ತು.. ಹಳ್ಳೂರು ರಾಮಣ್ಣ ನಿರ್ದೇಶನದಲ್ಲಿ ಚಿತ್ರ ನಿರ್ಮಾಣ ಅಂತ.. ಅದು ನೀನಾ ರಾಮಣ್ಣ' ಎಂದು ವಿಚಾರಿಸಿದರು. ಅದರಲ್ಲಿ ತೊಡಗಿಕೊಂಡಿದ್ದ ರಾಮಣ್ಣನಿಗೆ ಸುದ್ದಿ ಇಲ್ಲಿಯವರೆಗೂ ಬಂದಿರುವುದಕ್ಕೆ ಖುಷಿಯಾಯಿತು. 'ಹೌದು ಮಾರಾಯ.. ಕೆಲವು ಸ್ನೇಹಿತರು ಮುಂದೆ ಬಂದು ಮಾಡಿಸ್ತಾ ಇದಾರೆ. ನಂದೇ ಕತೆ ಇಟ್ಕಂಡು ಮಾಡ್ತಾ ಇದೀವಿ... ಇಷ್ಟರಲ್ಲೇ ಮುಗೀಬೇಕಿತ್ತು. ನನಗೆ ವರ್ಗ ಆಗಿ ಕೆಲವು ದಿನ ಓಡಾಟ ಆತು. ಕಾಲೇಜಿನಲ್ಲಿ ಕೆಲಸ ಮಾಡ್ತಾ ಪಿಚ್ಚರ್ರೂ

ಆಗಬೇಕು ಅಂದ್ರೆ ರಜ ಹಾಕಬೇಕು... ಅದೇ ತೊಂದ್ರೆ' ಎಂದು ಉತ್ಸಾಹದಿಂದ ಹೇಳಿದ. ತಮ್ಮೂರಿನವನೊಬ್ಬ ಸಿನಿಮಾ ತೆಗೆಯುತ್ತಾನೆ ಎಂಬುದೇ ಸಡಗರದ ಸಂಗತಿಯಾಗಿ ಯುವಕರಿಬ್ಬರು ಬೆರಗಿನಿಂದ ರಾಮಣ್ಣನನ್ನು ಮಾತಾಡಿಸತೊಡಗಿದರು. ಹೀರೋ, ಹಿರೋಯಿನ್, ವಿಲ್ಲನ್ ಪಾತ್ರಗಳನ್ನು ಯಾರು ಯಾರು ಮಾಡುತ್ತಿದ್ದಾರೆ ಎಂಬ ಕುತೂಹಲವನ್ನು ತಣಿಸಿಕೊಳ್ಳಲು ತುದಿಗಾಲ ಮೇಲೆ ನಿಂತಿದ್ದರು. ಅಷ್ಟರಲ್ಲಿ ಶಿವಮೊಗ್ಗದ ಬಸ್ಸು ಬಂದಿದ್ದರಿಂದ 'ಮತ್ತೆ ಬರ್ತೀನಲ್ಲ.. ಆವಾಗ ಮಾತಾಡಣ' ಎಂದು ರಾಮಣ್ಣ ಲಿಂಗರಾಜನನ್ನು ಮುಂದೆ ಬಿಟ್ಟು ಬಸ್ ಹತ್ತಿದ.

ಅವರು ಶಿವಮೊಗ್ಗದಲ್ಲಿ ಬಸ್ಸಿಳಿದು ಸರ್ಕಾರಿ ಬಸ್ ನಿಲ್ದಾಣಕ್ಕೆ ಬಂದರು. ಬೆಂಗಳೂರಿಗೆ ಹೋಗುವ ಎಲ್ಲಾ ಬಸ್ಸುಗಳೂ ತುಮಕೂರಿನಲ್ಲಿ ನಿಲ್ಲುತ್ತಿದ್ದವಾದ್ದರಿಂದ ಯಾವ ಹೊತ್ತಿನಲ್ಲಿಯೂ ಬಸ್ಸಿಗಾಗಿ ಕಾಯಬೇಕಿರಲಿಲ್ಲ. ಅವರು ಬಂದಾಗ ಬೆಂಗಳೂರು ಕಡೆಯ ಬಸ್ಸು ಹೊರಡಲು ಸಿದ್ಧವಾಗಿತ್ತು. ಆದರೆ, ರಾಮಣ್ಣ ಹತ್ತುವ ಅವಸರ ತೋರಿಸಲಿಲ್ಲ. ಯಾರಿಗೋ ಕಾಯುವವನಂತೆ ನಿಲ್ದಾಣದ ಒಳಗೆ ಬರುವ ಬಸ್ಸುಗಳತ್ತ ನೋಡುತ್ತಿದ್ದ. ಅವನನ್ನು ಅನುಸರಿಸಿ ಲಿಂಗರಾಜ ನಿಲ್ದಾಣದ ಸುತ್ತಲಿನ ಚಟುವಟಿಕೆಗಳನ್ನು ಗಮನಿಸತೊಡಗಿದ. ಒಂದಲ್ಲ ಒಂದು ಬಸ್ಸು ನಿಲ್ದಾಣದಿಂದ ಹೊರಕ್ಕೆ ಹೋಗುತ್ತಿತ್ತು. ಹೋದ ಬಸ್ಸಿನ ಜಾಗಕ್ಕೆ ಇನ್ನೊಂದು ಬಸ್ಸು ನಿಲ್ಲುತ್ತಿತ್ತು. ಪ್ರಯಾಣಿಕರನ್ನು ಕರೆಯಲು ತಾವು ಹೋಗುತ್ತಿದ್ದ ಸ್ಥಳಗಳ ಹೆಸರುಗಳನ್ನು ಕೂಗುತ್ತಿದ್ದ ಕಂಡಕ್ಟರುಗಳನ್ನೂ ಬೆರಗಿನಿಂದ ನೋಡುತ್ತಿದ್ದ. ರಾಮಣ್ಣ 'ಇಲ್ಲಿ ಕುಳಿತಿರು ಮಾರಾಯ.. ನಾನೊಂದು ಹೆಜ್ಜೆ ಆ ಕಡೆ ಹೋಗಿ ಬರ್ತೀನಿ' ಎಂದು ನಿಲ್ದಾಣದ ಕಲ್ಲುಬೆಂಚಿನ ಮೇಲೆ ಇವನನ್ನು ಕೂರಿಸಿ ನಿಲ್ದಾಣದ ಆಚೆ ಕಡೆ ಹೊರಗಿನಿಂದ ಬಸ್ಸು ಬಂದು ನಿಲ್ಲುವ ಜಾಗದತ್ತ ನಡೆದ. ಅವನು ಹೋಗುವುದನ್ನೇ ನೋಡುತ್ತ ಲಿಂಗರಾಜು ರಾಮಣ್ಣ ತಂದಿದ್ದ ಚೀಲವನ್ನೂ, ತನ್ನ ಬಟ್ಟೆ ಪುಸ್ತಕವಿದ್ದ ಚೀಲವನ್ನೂ ಗಟ್ಟಿಯಾಗಿ ಹಿಡಿದುಕೊಂಡು ಕುಳಿತುಕೊಂಡ. ಹೋದ ಸ್ವಲ್ಪ ಹೊತ್ತಿಗೆ ವಾಪಸು ಬಂದ ರಾಮಣ್ಣ 'ಆ ಬಸ್ಸು ಇಲ್ಲೇ ಬರುತ್ತಂತೆ' ಎಂದು ತನ್ನಷ್ಟಕ್ಕೆ ಹೇಳಿಕೊಂಡ. ಅದರ ತಲೆಬುಡ ಗೊತ್ತಾಗದ ಲಿಂಗರಾಜ ಚಿಕ್ಕಪ್ಪನ ಕಡೆ ನೋಡಿದ. ಅವನ ದೃಷ್ಟಿ ತನ್ನತ್ತ ತಿರುಗಿದ್ದನ್ನು ಗಮನಿಸಿದ ರಾಮಣ್ಣ 'ಶಿರಸಿ ಕಡೆಯಿಂದ ಬರೋ ಬಸ್ಸು ಇಲ್ಲೇ ಬೆಂಗಳೂರು ಸ್ಟಾಪ್ ಹತ್ರಾನೆ ಬಂದು ನಿಲ್ಲೋದಂತೆ..' ಎಂದು ಸಮಜಾಯಿಶಿ ಕೊಟ್ಟ. ಅದೂ ಕೂಡ ಲಿಂಗರಾಜನಿಗೆ ಅರ್ಥವಾಗಲಿಲ್ಲ. ಅಷ್ಟು ಹೊತ್ತಿಗೆ ಬಸ್ಸೊಂದು ಬಂದು ನಿಂತಿತು. ಅದರಿಂದ ಇಳಿದ ವಿಘ್ನೇಶ್ವರ ಭಟ್ಟರು 'ಆಗಲೇ ಬಂದಿದ್ದೀರಾ... ಒಳ್ಳೇದಾಯ್ತು.. ಒಳ್ಳೇದಾಯ್ತು. ಒಳಗೆ ಹೋಗಿ ಕಮಲ ಅಲ್ಲೇ ಇದಾಳೆ ಸೀಟು ಹಿಡ್ಕಂಡು' ಎಂದು ರಾಮಣ್ಣನತ್ತ ಬಂದರು. ಲಿಂಗರಾಜನನ್ನೂ ನೋಡಿ 'ರಜಾ ಮುಗಿಸಿ ಬಂದ್ಯೇನೋ ಮರಿ' ಎಂದು ವಿಶ್ವಾಸ ಪ್ರಕಟಿಸಿದರು. ಆಗ ಲಿಂಗರಾಜನಿಗೆ ರಾಮಣ್ಣನ ಚಡಪಡಿಕೆ ಅರ್ಥವಾಯಿತು. ಊರಿಗೆ ಬರುವ ಮೊದಲು ಶಿರಸಿಗೆ ಹೋಗಿದ್ದವನು ತಮ್ಮನ್ನು ಶಿವಮೊಗ್ಗದಲ್ಲಿ ಸೇರಿಕೊಳ್ಳಲು ವಿಘ್ನೇಶ್ವರ ಭಟ್ಟರಿಗೆ ಹೇಳಿದ್ದಕ್ಕೆ ಅವರ ಬರವಿಗಾಗಿ ಬಸ್ ನಿಲ್ದಾಣದಲ್ಲಿ ಓಡಾಡುತ್ತಿದ್ದ ಎಂದುಕೊಂಡ. ಭಟ್ಟರು ಹೇಳಿದಂತೆ ಇಬ್ಬರೂ ಬಸ್ಸು ಹತ್ತಿದರು. ಅಲ್ಲಿ ಮೂರು ಜನರ ಸೀಟಿನಲ್ಲಿ ಮಂಜುಳಾ ಚಿಕ್ಕಮ್ಮನಂತೆಯೇ ಮುಖ ಲಕ್ಷಣವಿದ್ದ ಯುವತಿಯೊಬ್ಬರು ಕುಳಿತಿದ್ದು ಆಕೆಯ ಪಕ್ಕದಲ್ಲಿ ರಾಮಣ್ಣ ಕುಳಿತುಕೊಂಡ. ಲಿಂಗರಾಜನನ್ನೂ ತನ್ನ ಪಕ್ಕದಲ್ಲಿಯೇ ಕೂರಿಸಿಕೊಂಡ. ಭಟ್ಟರೂ ಜೊತೆಗೆ ಬರುತ್ತಾರೇನೋ ಎಂದು ಲಿಂಗರಾಜ ಅಂದುಕೊಂಡಿದ್ದ. ಆದರೆ, 'ಹಂಗಾದ್ರೆ ನಾ ಬತ್ತಿ ಕೂಸೆ' ಎಂದು ಅವರು ಆ ಯುವತಿಗೆ ಹೇಳಿ ಬಸ್ಸಿನಿಂದ ಕೆಳಕ್ಕೆ ಇಳಿದ ಕಾರಣ ತಾನು ಅಂದುಕೊಂಡಿದ್ದಂತೆ ಭಟ್ಟರು ಬರುವುದಿಲ್ಲ ಎಂಬುದು

ಗೊತ್ತಾಯಿತು. ಸೀಟಿನಲ್ಲಿ ಕುಳಿತು ಚೀಲವನ್ನು ಕಾಲಿನ ಬುಡದಲ್ಲಿ ಇಟ್ಟುಕೊಂಡ ಮೇಲೆ ರಾಮಣ್ಣ ಇವನತ್ತ ತಿರುಗಿ 'ಈ ಅಕ್ಕನೂ ನಮ್ಮೊಟ್ಟಿಗೆ ಇರ್ತಾರೋ.. ನಿಮ್ ಚಿಕ್ಕಮ್ಮ ಪಾಪು ಕರ್ಕೊಂಡು ಬರೋವರ್ಗೆ' ಎಂದು ಪರಿಚಯಿಸಿದ. ಸೀಟಿನ ಮೂಲೆಯಲ್ಲಿ ಕುಳಿತಿದ್ದ ಕಮಲ 'ಲಿಂಗರಾಜ ಅಲ್ವೇನೋ, ರಜ ಮುಗಿತೇನೋ' ಎಂದು ಬೆಳ್ಳಗಿದ್ದ ಹಲ್ಲುಗಳನ್ನು ಪ್ರದರ್ಶಿಸಿದಳು. ಅದಕ್ಕೆ ಏನು ಹೇಳಬೇಕೆಂದೂ ತೋಚದೆ ಹಳ್ಳಿಗನ ಬೆಪ್ಪುತನ ಪ್ರದರ್ಶಿಸಿದ. 'ಈಗಷ್ಟೆ ಊರಿಂದ ಬಂದಿದಾನಲ್ಲ, ಸಂಕೋಚ ಇರುತ್ತೆ ಬಿಡು' ಎಂದು ರಾಮಣ್ಣ ಸಮಜಾಯಿಶಿ ನೀಡಿದ.

ಅವರು ಒತ್ತೊತ್ತಾಗಿ ಕುಳಿತುಕೊಂಡೇ ಪ್ರಯಾಣ ಮಾಡಿದರು. ಮಧ್ಯೆ ಊಟಕ್ಕೆ ನಿಲ್ಲಿಸಿದಾಗ ರಾಮಣ್ಣ ಕೆಳಕ್ಕೆ ಇಳಿದು ಹೋಗಿ ಹಣ್ಣುಗಳನ್ನು ಕೊಂಡು ತಂದಿದ್ದ. ಪ್ರಯಾಣಕಾಲದಲ್ಲಿ ತಾನೇನೂ ತಿನ್ನುವುದಿಲ್ಲ ಎಂದು ಕಮಲ ಹಣ್ಣುಗಳನ್ನು ಮುಟ್ಟಲಿಲ್ಲ. ಲಿಂಗರಾಜ ಎರಡು ಬಾಳೆ ಹಣ್ಣು ತಿಂದಿದ್ದ. ತುಮಕೂರಿಗೆ ಬಂದಾಗ ಸಂಜೆಯಾಗಿತ್ತು. ಬಸ್ಸಿಂದ ಇಳಿದು ರಾಮಣ್ಣ ಬಾಡಿಗೆಗೆ ಹಿಡಿದಿದ್ದ ಮನೆಗೆ ರಿಕ್ಷಾ ಹಿಡಿದು ಹೋದರು. ಸೋಮೇಶ್ವರ ಬಡಾವಣೆ ಎಂದು ರಾಮಣ್ಣ ರಿಕ್ಷಾದವನಿಗೆ ಹೇಳಿದ್ದರಿಂದ ಲಿಂಗರಾಜು ಅದು ಹಾಸನದಂತೆ ದೂರದ ಊರಿಗೆ ಹೋಗುತ್ತಿರಬೇಕೆಂದು ಅನ್ನಿಸಿತ್ತು. ಆದರೆ ಸ್ವಲ್ಪ ಹೊತ್ತಿಗೆ ಅವರು ರಾಮಣ್ಣನ ನಿರ್ದೇಶನದಂತೆ ನಗರದಲ್ಲಿಯೇ ಇನ್ನೊಂದು ಬಡಾವಣೆ ಎನಿಸುವ ಸ್ಥಳದಲ್ಲಿದ್ದ ಮನೆಯ ಹತ್ತಿರ ಬಂದಿದ್ದರು. ಅದು ಎರಡು ಪ್ರತ್ಯೇಕ ಕೋಣೆ ಇದ್ದ ದೊಡ್ಡ ಮನೆ. ಹೊಸದಾಗಿ ಕಟ್ಟಿದ್ದಿರಬೇಕು. ಬಣ್ಣದ ವಾರ್ನಿಶ್ ವಾಸನೆ ಹೊಡೆಯುತ್ತಿತ್ತು. ದೊಡ್ಡ ಹಜಾರ. ಅದಕ್ಕೆ ಹೊಂದಿಕೊಂಡ ಎರಡು ಕೋಣೆಗಳು. ತೆರೆದ ಅಡುಗೆ ಮನೆ. ಸ್ನಾನಕ್ಕೆ ಪ್ರತ್ಯೇಕ ಕೋಣೆ. ಒಂದು ಮಲಗುವ ಕೋಣೆಯಲ್ಲಿ ಶೌಚಾಲಯ ವ್ಯವಸ್ಥೆ. ಮನೆಯನ್ನು ಸುತ್ತಾಡಿದ ಕಮಲ 'ಎಷ್ಟು ಚೆನ್ನಾಗಿದೆ ಮನೆ ಭಾವಾ' ಎಂದು ಬೆರಗಿನಿಂದ ಉದ್ಗಾರ ತೆಗೆದಿದ್ದಳು. 'ಎಷ್ಟು ಚೆನ್ನಾಗಿದ್ದರೇನು.. ಇದು ಬಾಡಿಗೆ ಮನೆ..' ಎಂದು ರಾಮಣ್ಣ ಹೇಳಿದ. 'ನೀವು ಇಂಥದ್ದೇ ಮನೆ ಕಟ್ಟೇರಿ ಬಿಡಿ ಬಾವಾ. ಅಕ್ಕ ಹೇಳ್ತಾ ಇದ್ಲು... ಸಿನಿಮಾ ತೆಗೆಯೋರೆಲ್ಲ ಎಂತೆಂಥ ಮನೆ ಕಟ್ತಾರೆ ಅಂತ. ನೀವೂ ತೆಗೀತಾ ಇದೀರಂತಲ್ಲ ಸಿನಿಮಾನ' ಎಂದು ಅವಳು ಹೇಳಿದಾಗ ರಾಮಣ್ಣ ದೊಡ್ಡದಾಗಿ ನಗುತ್ತಾ ಅವಳ ಬೆನ್ನ ಮೇಲೆ ಲಘುವಾಗಿ ಗುದ್ದಿದ. ಅದಕ್ಕೆ ಅವಳು ತುಂಬ ನೋವು ಪಟ್ಟಂತೆ 'ಅಯ್ಯೋ.. ಎಷ್ಟು ಜೋರಾಗಿ ಹೊಡೆದ್ರಲ್ಲ..' ಎಂದು ನರಳಿದಂತೆ ಲಿಂಗರಾಜನಿಗೆ ತೋರಿತು.

ತಂದಿದ್ದ ಸಾಮಾನುಗಳನ್ನು ಅಲ್ಲಲ್ಲಿ ಜೋಡಿಸಿಟ್ಟರು. ಅಷ್ಟರಲ್ಲಿ ಸಾಕಷ್ಟು ರಾತ್ರಿಯೂ ಆಗಿದ್ದರಿಂದ ರಾಮಣ್ಣ ಪಕ್ಕದ ಅಂಗಡಿಗೆ ಹೋಗಿ ತರಕಾರಿ ತಂದ. ಕಮಲ ಅನ್ನಕ್ಕಿಟ್ಟಳು. ತರಕಾರಿ ಹೆಚ್ಚಿ ಬಿಸಿ ಬಿಸಿ ಸಾರು ಮಾಡಿದಳು. ಪ್ರಯಾಣದಿಂದ ಬಳಲಿದ್ದ ಲಿಂಗರಾಜನಿಗೆ ಬಿಸಿ ಅನ್ನದೊಂದಿಗೆ ಕಮಲ ಬಡಿಸಿದ್ದ ಬೇಳೆ ಹಾಕಿದ್ದ ತರಕಾರಿ ಸಾರು ತುಂಬ ರುಚಿಯಾಗಿತ್ತು. ಊಟ ಮುಗಿಸಿ ಮೊದಲಿನ ಅಭ್ಯಾಸದಂತೆ ತಟ್ಟೆಯನ್ನು ಅಡುಗೆ ಮನೆಯ ಕಟ್ಟೆಯ ಮೇಲೆ ಇಡಲು ಹೋದಾಗ ಕಮಲ 'ಇನ್ನು ಮೇಲೆ ನಿನ್ನ ತಟ್ಟೆ ನೀನೇ ತೊಳೆದು ಬಿಡು ಲಿಂಗ್ರಾಜು. ಎಲ್ರೂ ಅವರವ್ರ ತಟ್ಟೆ ತೊಳೆದು ಇಟ್ರೆ ಎಷ್ಟೋ ಕೆಲಸ ಹಗುರ ಆಗುತ್ತಲ್ವ..' ಎಂದು ನಗುತ್ತಾ ಹೇಳಿದಳು. ಅದನ್ನು ರಾಮಣ್ಣನೂ ಕೇಳಿಸಿಕೊಂಡ. 'ಹೌದು ಕಮಲ.. ನೀನು ಹೇಳೋದು ಸರಿಯೇ. ಹೀಗೆ ನಮ್ಮ ಮಹಿಳೆಯರು ಶ್ರಮವಿಭಜನೆಯನ್ನು ಮನೆಯಿಂದಲೇ ಅನುಷ್ಠಾನಕ್ಕೆ ತರಬೇಕು ನೋಡು..' ಎಂದು ಮೆಚ್ಚುಗೆ ವ್ಯಕ್ತಪಡಿಸಿ ಊಟ ಮುಗಿದಾಗ ತಾನೇ ತಟ್ಟೆಯನ್ನು ತೊಳೆದು ಇಟ್ಟ.

ಮರುದಿನವೇ ರಾಮಣ್ಣ ಲಿಂಗರಾಜನನ್ನು ಹತ್ತಿರದ ಸರ್ಕಾರಿ ಶಾಲೆಗೆ ಸೇರಿಸಿದ. ಮನೆಯಿಂದ ನಡೆದು ಹೋಗುವಷ್ಟು ದೂರದಲ್ಲಿದ್ದ ಶಾಲೆ. 'ಹಿಂದೆ ಇದ್ದ ಸ್ಕೂಲು ಮನೆ ಹತ್ರಾನೆ ಇತ್ತು. ಇಲ್ಲಿ ಸ್ವಲ್ಪ ದೂರ ನಡೀಬೇಕು. ಇಪ್ಪತ್ತು ನಿಮಿಷ ಇದ್ದಂಗೇ ಹೊಂಟು ಬಿಡು' ಎಂದು ರಾಮಣ್ಣ ಹೇಳಿದ್ದ. ಅದರಂತೆ ಲಿಂಗರಾಜ ಸ್ಕೂಲಿಗೆ ಹೋಗುವ ಸಮಯವನ್ನು ಗೊತ್ತುಪಡಿಸಿಕೊಂಡಿದ್ದ. ರಾಮಣ್ಣ ಎಂಟು ಗಂಟೆಗೆಲ್ಲ ಕಾಲೇಜಿಗೆ ಹೊರಟು ಬಿಡುತ್ತಿದ್ದ. ಕಮಲ ಆ ವೇಳೆಗೆ ಅವನಿಗೆ ಬೆಳಗಿನ ತಿಂಡಿಯನ್ನೂ ಮಾಡಿ ಮಧ್ಯಾಹ್ನದ ಊಟಕ್ಕೆ ಬಾಕ್ಸ್ ಕೂಡ ಸಿದ್ಧಪಡಿಸುತ್ತಿದ್ದಳು. ಬೆಳಗಿನ ಕೆಲಸಗಳು ಬೇಗ ಮುಗಿಯುವುದಕ್ಕೆ ರಾಮಣ್ಣನೂ ಅಡುಗೆ ಮನೆಯಲ್ಲಿ ಸಹಾಯ ಮಾಡುತ್ತಿದ್ದ. ಲಿಂಗರಾಜನಿಗೂ ಪಾತ್ರೆ ತೊಳೆದುಕೊಡುವ ಕೆಲಸವನ್ನು ಕಮಲ ಕಲಿಸಿದ್ದಳು. ಚಿಕ್ಕಮ್ಮ ಇದ್ದಾಗ ತನ್ನ ಹಾಸುಗೆಯನ್ನಷ್ಟೆ ಸುತ್ತಿ ಎತ್ತಿಟ್ಟು ಶಾಲೆಗೆ ಹೊರಡುವ ಸಿದ್ಧತೆ ನಡೆಸುತ್ತಿದ್ದ ಲಿಂಗರಾಜು ಇಲ್ಲಿ ಬೆಳಗ್ಗೆ ಎದ್ದವನು ಮನೆಯ ಕಸವನ್ನೂ ಹೊಡೆದು, ಬೀದಿ ಬಾಗಿಲಿಗೆ ನೀರು ಚಿಮುಕಿಸುತ್ತಿದ್ದನು. ಅದನ್ನೆ ಮಾಡುವಂತೆ ಕಮಲ ಅನುನಯದಿಂದ ಹೇಳಿದ್ದಳು. ಅದೊಂದು ಬೆಳಗ್ಗೆ ಅವಳು ಮುಂದಿನ ಬಾಗಿಲಿಗೆ ರಂಗೋಲಿ ಹಾಕುತ್ತ 'ನೀನು ಹಾಕ್ತೀಯೇನೋ' ಎಂದು ಪಕ್ಕದಲ್ಲೇ ನಿಂತು ನೋಡುತ್ತಿದ್ದ ಲಿಂಗರಾಜನಲ್ಲಿ ಕೇಳಿದಳು. ಇವನು 'ಇಲ್ಲ ಅಕ್ಕ..' ಎಂದು ಹೇಳಿದನಾದರೂ ಕುತೂಹಲದಿಂದ ರಂಗೋಲಿ ಪುಡಿಯನ್ನು ಹಿಡಿದು ಬೆರಳ ಸಂದಿಯಿಂದ ಬಿಡುತ್ತಾ ತೆಳುವಾದ ಅಡ್ಡ ಗೆರೆಯನ್ನು ಹಾಕಿದನು. ಅದನ್ನು ಕಂಡವಳೇ 'ಎಷ್ಟು ಚೆನ್ನಾಗಿ ಎಳೆ ಬಿಡ್ತೀಯಲ್ಲೋ ಲಿಂಗ್ರಾಜು... ಹಿಂಗೆ ಅಡ್ಡ ಉದ್ದ ಎಳೆ ಬಿಟ್ರೆ ದಿನಾ ಒಂದೊಂದು ಹೊಸಾ ರಂಗೋಲಿ ಬಿಡಬಹುದು.. ಇನ್ನು ಮೇಲೆ ಬೆಳಗ್ಗೆ ನೀನೇ ರಂಗೋಲಿ ಬಿಡು..' ಎಂದು ಒಪ್ಪಿಸಿದಳು. ಮರುದಿನದಿಂದ ಅವನು ಮನೆ ಬಾಗಿಲು ಸಾರಿಸಿ ರಂಗೋಲಿ ಬಿಡುವ ಕೆಲಸವನ್ನೂ ಮಾಡುತ್ತಿದ್ದನು. ಮೊದಲಲ್ಲಿ ತನ್ನ ಲೋಟ ತಟ್ಟೆಯನ್ನಷ್ಟೆ ತೊಳೆದಿಡುತ್ತಿದ್ದ ಲಿಂಗರಾಜನಿಗೆ ಕಮಲ ಪ್ರೀತಿಯಿಂದ ರಮಿಸುತ್ತಾ ಎಲ್ಲ ಪಾತ್ರೆಗಳನ್ನೂ ತೊಳೆದುಕೊಡುವ ಕೆಲಸವನ್ನೂ ಹಚ್ಚಿದ್ದಳು. ಅದಕ್ಕೆ ಅವಳು ಕೊಟ್ಟ ಕಾರಣ 'ಎಷ್ಟು ಚೆನ್ನಾಗಿ ಲೋಟ ತಟ್ಟೆ ತೊಳೆಯುತ್ತೀಯಾ..' ಎಂಬ ಮೆಚ್ಚುಗೆಯ ಮಾತು. ಅದರಿಂದ ಸ್ವಲ್ಪ ಮಟ್ಟಿಗೆ ಉಬ್ಬಿ ಹೋಗಿದ್ದ ಲಿಂಗರಾಜು ಮನೆಯ ಒಳಗಿನ ಕಸ ಹೊಡೆಯುವುದನ್ನೂ, ಪಾತ್ರೆ ತೊಳೆಯುವುದನ್ನೂ ಖುಷಿಯಿಂದಲೇ ಮಾಡುತ್ತಿದ್ದನು. ಕಮಲ ಬಂದ ಮೇಲೆ ಕಸ ಹೊಡೆದು, ಪಾತ್ರೆ ತೊಳೆಯುವ ಕೆಲಸಕ್ಕೆ ಹೊರಗಿನ ಆಳನ್ನು ನೇಮಿಸಬೇಕೇನೋ ಎಂದು ಆತಂಕಗೊಂಡಿದ್ದ ರಾಮಣ್ಣನಿಗೆ ಆ ಯೋಚನೆಯೇ ಬಾರದಂತೆ ಕಮಲ ಲಿಂಗರಾಜನನ್ನೇ ಅಣಿಗೊಳಿಸಿದ್ದು ನಿರಾಳವೆನಿಸಿತ್ತು. ಅದಕ್ಕಾಗಿ ಲಿಂಗರಾಜ ಎದುರುಗಡೆ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಕಮಲಳನ್ನು ತುಂಬಾ ಮೆಚ್ಚುಗೆಯಿಂದ ಹೊಗಳಿದ್ದನು. 'ಅಯ್ಯೋ ಮನೆ ಅಂದ ಮೇಲೆ ಎಲ್ಲಾ ಕೆಲಸ ಮಾಡೋದರಲ್ಲಿ ಏನು ತಪ್ಪಿದೆ ಬಾವಾ. ಅಲ್ಲದೆ ಅವನು ಏನು ಹೊರಗಿನವನೇ.. ನಮ್ಮನೆ ಕೆಲಸ ಅಂತ ಮಾಡ್ತಾನೆ ಬಿಡಿ. ಆದರೆ, ಅವನಿಗೆ ಅದು ಬಲವಂತದ ಕೆಲಸ ಅಂತ ಅನ್ನಿಸಬಾರದು ಅಷ್ಟೆ..' ಎಂದು ಅವಳೂ ನಗುತ್ತಾ ರಾಮಣ್ಣನ ಮೆಚ್ಚುಗೆಯನ್ನು ಸ್ವೀಕರಿಸಿದ್ದಳು.

ರಾಮಣ್ಣ ಕೆಲವು ದಿನ ಬೆಳಗಿನ ಏಳು ಗಂಟೆಗೆಲ್ಲ ಮನೆ ಬಿಡುತ್ತಿದ್ದನು. ತಡರಾತ್ರಿ ವಾಪಸಾಗುತ್ತಿದ್ದನು. ಆ ದಿನಗಳಲ್ಲಿ ಬೆಳಗಿನ ಕೆಲಸದ ಒತ್ತಡ ಇರುತ್ತಿರಲಿಲ್ಲ. ಆದರೆ ರಾಮಣ್ಣನಿಗಾಗಿ ಕಮಲ ರಾತ್ರಿ ಹೊತ್ತು ಕಾದಿರುತ್ತಿದ್ದಳು. ಎಷ್ಟೋ ದಿನ ಲಿಂಗರಾಜು ಮಲಗಿದ ಮೇಲೆಯೇ ರಾಮಣ್ಣ ಬರುತ್ತಿದ್ದನು. 'ಅದ್ಯಾಕೆ ಅಕ್ಕ, ಚಿಕ್ಕಪ್ಪ ಲೇಟಾಗಿ ಬರೋದು' ಎಂದು ಲಿಂಗರಾಜು ಕುತೂಹಲ ತಡೆಯದೆ ಕೇಳಿದಾಗ 'ನಿಮ್ಮ ಚಿಕ್ಕಪ್ಪ ಪಿಚ್ಚರ್ ತಗೀತಿದ್ದಾರಂತೆ. ಅದಕ್ಕೆ ಬೆಳಗ್ಗೆ ಹೋಗಿ ಮಧ್ಯರಾತ್ರಿಗೆ ಬರೋದು. ನನ್ನನ್ನೂ ಶೂಟಿಂಗ್ ತೋರಿಸೋಕೆ

ಕರ್ಕೊಂಡು ಹೋಗಿ ಅಂತ ಕೇಳ್ತಾ ಇದೀನಿ.. ಇನ್ನೂ ಕರ್ಕೊಂಡೇ ಹೋಗಿಲ್ಲ, ನೋಡು' ಎಂದು ದೂರು ಹೇಳಿದಳು. ಲಿಂಗರಾಜನಿಗೆ ಹಿಂದಿನ ಊರಲ್ಲಿದ್ದಾಗ ಮನೆಗೆ ಬರುತ್ತಿದ್ದ ನಾರಾಯಣರಾವ್ ನೆನಪು ಬಂದಿತು. ಅಲ್ಲಿ ಮಾತಾಡಿಕೊಳ್ಳುತ್ತಿದ್ದಂತೆ ಸಿನಿಮಾ ತೆಗೆಯಲು ಆರಂಭ ಮಾಡಿದ್ದಾರೆ ಎಂದುಕೊಂಡನು.

ಆ ದಿನಗಳಲ್ಲಿ ರಾಮಣ್ಣ ಮನೆಯಲ್ಲಿ ಹೆಚ್ಚು ಇರುತ್ತಿರಲಿಲ್ಲ. ಅವನು ಸಿನಿಮಾ ಶೂಟಿಂಗ್‌ಗೆ ಹೋಗಿದ್ದಾಗ ತುಮಕೂರಿನ ಮನೆ ಹುಡುಕಿಕೊಂಡು ನಾರಾಯಣರಾವ್ ಒಮ್ಮೆ ಬಂದಿದ್ದರು. ಅವರೊಂದಿಗೆ ಚಂದ್ರಣ್ಣ ಅಂತ ಇನ್ನೊಬ್ಬರು ಬಂದಿದ್ದರು. ಸಂಜೆ ಹೊತ್ತಿಗೆ ಬಂದಿದ್ದ ಅವರಿಬ್ಬರೂ ರಾಮಣ್ಣನಿಗಾಗಿ ರಾತ್ರಿ ಹತ್ತು ಗಂಟೆಯವರೆಗೂ ಕಾದಿದ್ದರು. ಕಮಲ 'ಜಾಸ್ತಿ ಕೆಲಸ ಇದ್ರೆ ಅಲ್ಲೆಲ್ಲೋ ಉಳಿದುಕೊಳ್ತಾರೆ. ಎರಡು ಮೂರು ದಿನ ಬರೋದೇ ಇಲ್ಲ..' ಎಂದು ಹೇಳಿದ ಮೇಲೆ ಅವರಿಬ್ಬರೂ ಗೊಣಗಿಕೊಂಡು ಹೋಗಿದ್ದರು.

ಕೆಲವು ತಿಂಗಳ ನಂತರ ಒಂದು ಬೆಳಗ್ಗೆ ಲಿಂಗರಾಜು ಶಾಲೆಗೆ ಹೊರಟು ನಿಂತಿದ್ದ. ಆಗಲೇ ರಾಮಣ್ಣ ಕೂಡ ಬೆಂಗಳೂರಿಗೆ ಹೊರಡುವುದಾಗಿ ಹೇಳಿ ಸಿದ್ಧರಾದರು. ಹೋಗುವಾಗ 'ಪಿಚ್ಚರ್ ರಿಲೀಸ್ ಮಾಡಿಸಬೇಕು.. ಅದಕ್ಕೆ ಒಂದು ವಾರ ಬರೋಕೆ ಆಗಲ್ಲ' ಎಂದು ಕಮಲ ಹತ್ತಿರ ಹೇಳಿದರು. 'ಹೋಗಿ ಬನ್ನಿ ಬಾವಾ.. ಅಂತೂ ನನಗೆ ಶೂಟಿಂಗ್ ತೋರಿಸದೇನೇ ಪಿಚ್ಚರ್ ಮುಗಿಸಿಬಿಟ್ರಲ್ಲ.. ಹೋಗಿ ಬನ್ನಿ, ನಮಗೆ ಇಬ್ರೇ ಇದ್ದು ರೂಢಿಯಾಗಿದೆಯಲ್ಲ' ಎಂದು ಕಮಲ ಹೇಳಿದ್ದಳು. ಅವಳ ಧ್ವನಿಯಲ್ಲಿದ್ದ ಬೇಸರವನ್ನು ಗುರುತಿಸಿದ ರಾಮಣ್ಣ ತಕ್ಷಣವೇ ಮನೆಯೊಳಕ್ಕೆ ಬಂದು ತಮ್ಮ ಕೋಣೆಗೆ ಹೋದರು. ಅಲ್ಲಿಂದಲೇ ಕಮಲಳನ್ನು ಕೂಗಿ ಕರೆದರು. ಓದುತ್ತಿದ್ದ ಪೇಪರ್ ಮಡಿಚಿ ಕಮಲ ಒಳಗೆ ಹೋದಾಗ ಬಾಗಿಲನ್ನು ಅರ್ಧಕ್ಕೆ ಮುಚ್ಚಿದ ರಾಮಣ್ಣ 'ಇಷ್ಟಕ್ಕೆಲ್ಲ ಬೇಜಾರು ಮಾಡಿಕೊಳ್ಳಬೇಡ ಕಮಲ.. ಯಾಕೆ ಕಣ್ಣೀರು.. ಛೇ ಛೇ..' ಎಂದು ಸಮಾಧಾನ ಪಡಿಸುತ್ತಾ ಇದ್ದುದು ಹೊರಗೆ ನಿಂತಿದ್ದ ಲಿಂಗರಾಜನಿಗೆ ಕೇಳಿಸಿತು. 'ಬೇಗ ಬಂದುಬಿಡ್ತೀನಿ.. ಇನ್ನೇನು ಮುಂದಿನ ವಾರ ನಿಮ್ಮಕ್ಕನೂ ಬರ್ತಾಳೆ' ಎಂದು ಹೇಳಿದ್ದೂ ಕೇಳಿಸಿತು. ಚಿಕ್ಕಮ್ಮ ಪಾಪು ಜೊತೆ ಬರುತ್ತಾಳೆಂಬ ಸುದ್ದಿ ಕೇಳಿ ಲಿಂಗರಾಜನಿಗೆ ಸಮಾಧಾನವಾಯಿತು.

* * *

ಅಧ್ಯಾಯ–5

# ಬೂದಿ ಮಂತ್ರ

ತಿಮ್ಮನಾಯ್ಕರಿಗೆ ಹುಷಾರು ತಪ್ಪಿದ ಸುದ್ದಿ ಜಯಪುರದ ಹೈಸ್ಕೂಲಿನಲ್ಲಿ ಮೇಷ್ಟರಾಗಿದ್ದ ನಾಗರಾಜನಿಗೆ ತಕ್ಷಣವೇ ಸಿಕ್ಕಿತು. ಅವನಿಗೆ ಫೋನ್ ಮಾಡಿ ತಿಳಿಸಿದ್ದ ಲಿಂಗರಾಜ 'ಅಷ್ಟೇನೂ ಗಾಬರಿ ಪಡುವಂಥದ್ದಿಲ್ಲ' ಎಂದಿದ್ದ. ಆದರೂ ಆ ವಾರದ ಕೊನೆಗೆ ಅವನಿಗೆ ಬಿಡುವಾಗಲಿಲ್ಲ. ಮುಂದಿನ ಶನಿವಾರದ ಶಾಲೆ ಮುಗಿಸಿ ಹೆಂಡತಿ ರಾಜೇಶ್ವರಿಯೊಂದಿಗೆ ಬಂದ. ಬರುವಾಗ ಪೇಟೆಯಿಂದ ಒಂದಿಷ್ಟು ಸೇಬು, ಮೂಸಂಬಿ ಹಣ್ಣುಗಳನ್ನು ತಂದಿದ್ದ. ಜಗುಲಿಯ ಕೋಣೆಯಲ್ಲಿ ಮಲಗಿದ್ದ ಅಜ್ಜನ ಬಳಿ ಹೋಗಿ ಮುಖ ತೋರಿಸಿದ ನಾಗರಾಜನನ್ನು ನೋಡಿದ ನಾಯ್ಕರು 'ಎಲ್ಲಾ ಚೆನ್ನಾಗಿದೀರೇನೋ' ಎಂದು ಅವನ ಕ್ಷೇಮವನ್ನೇ ವಿಚಾರಿಸಿದರು. 'ನಾವು ಚೆನ್ನಾಗಿದ್ದೀವಿ ಅಜ್ಜಾ.. ನಮಗೆ ಒಂಥರ ಗಾಬರಿ ಆಗಿತ್ತು, ನಿನ್ನ ಪೇಟೆಗೆ ಕರ್ಕೊಂಡು ಹೋಗಬೇಕಾಯ್ತು ಅಂತ ಕೇಳಿ' ಎಂದು ಅವತ್ತಿನ ಘಟನೆಯನ್ನು ನೆನಪಿಸಿದ. ಗಂಗಮ್ಮನೂ, ಪಾರ್ವತಮ್ಮನೂ ಎದುರಿಗೆ ನಿಂತು ಆ ದಿನ ಸಂಜೆ ನಡೆದ ಘಟನೆಯನ್ನು ಬಣ್ಣಿಸಿದರು. ನಡುನಡುವೆ ತಿಮ್ಮನಾಯ್ಕರೂ ಹೇಳಿಕೊಂಡರು. 'ಪ್ಯಾಟೆ

ಡಾಕುಟ್ರು ಏನೋ ಮಾತ್ರೆ ಕೊಟ್ರಪ್ಪ. ಆದರೂ ಬಲಗಾಲು ಇನ್ನೂ ಸ್ವಲ್ಪ ನೋಯ್ತಾ ಐತೆ' ಎಂದು ಕಾಲನ್ನು ತೆಗೆದು ತೋರಿಸಿದರು. ಆಗಲೇ ಎಂಬತ್ತನ್ನು ಮೀರಿದ್ದ ಅಜ್ಜಯ್ಯನ ಸಪೂರವಾಗಿದ್ದ ಕಾಲನ್ನು ನಾಗರಾಜ ಸರಿಯಾಗಿ ನೋಡಿದ್ದು. ರೈತಾಪಿ ಕೆಲಸದಲ್ಲಿಯೇ ಇದ್ದ ಅಜ್ಜ ಈಚಿನ ವರ್ಷಗಳಲ್ಲಷ್ಟೆ ಬೇಸಾಯದ ಕೆಲಸಗಳಿಂದ ದೂರ ಉಳಿದಿದ್ದ. ಮನೆಯ ಬದಿಯಲ್ಲಿ ಎತ್ತು ಕರುಗಳನ್ನು ನೋಡಿಕೊಳ್ಳುತ್ತಿದ್ದ. ಲಿಂಗರಾಜ ಬೆಂಗಳೂರಿನಿಂದ ವಾಪಸು ಬಂದ ಮೇಲಂತೂ ಬೇಸಾಯದ ಎಲ್ಲ ಕೆಲಸಗಳನ್ನೂ ಅವನೇ ಅಪ್ಪಯ್ಯನೊಂದಿಗೆ ನೋಡಿಕೊಳ್ಳುತ್ತಾ ಇದ್ದುದು ನಾಗರಾಜನಿಗೆ ಗೊತ್ತಿದ್ದ ಸಂಗತಿಯಾಗಿತ್ತು.

ಇದ್ದುದೇ ಎರಡು ಎಕರೆ ಗದ್ದೆ. ಒಂದು ಎಕರೆಯಷ್ಟು ಜಾಗದಲ್ಲಿ ಅಡಿಕೆ ತೋಟ ಎಬ್ಬಿಸಿದ್ದರು. ತಿಮ್ಮನಾಯ್ಕರಂತೆ ಯಲ್ಲನಾಯ್ಕರೂ ಕಷ್ಟಜೀವಿಯಾಗಿದ್ದರಿಂದ ತಮ್ಮ ಜಮೀನಿನಲ್ಲಿ ಎಷ್ಟು ಸಾಧ್ಯವೋ ಅಷ್ಟು ಬೆಳೆ ತೆಗೆಯಲು ಕಸರತ್ತು ನಡೆಸುತ್ತಾ ಇದ್ದವರು. ಮನೆಯ ನಿರ್ವಹಣೆ ಮತ್ತು ಮಕ್ಕಳಿಬ್ಬರ ವಿದ್ಯಾಭ್ಯಾಸಕ್ಕಾಗಿ ದುಡಿಮೆಯನ್ನು ಹೆಚ್ಚಿಸಿಕೊಳ್ಳಲು ಯಲ್ಲನಾಯ್ಕರು ಸಾಧ್ಯವಿದ್ದಷ್ಟೂ ಪ್ರಯತ್ನ ನಡೆಸಿದ್ದರು. ಇದ್ದ ಅಲ್ಪ ಹೊಲದಲ್ಲಿ ಊರಿಗೆ ಮೊದಲನೆಯವರಾಗಿ ರೇಷ್ಮೆ ಬೆಳೆಯನ್ನೂ ಅವರು ಹಾಕಿದ್ದರು. ತಾನಂತೂ ಸೋದರ ಮಾವನ ಮನೆಯಲ್ಲಿದ್ದು ಹೈಸ್ಕೂಲು ಮುಗಿಸಿದವನು ಮುಂದೆ ಸರ್ಕಾರದ ಹಾಸ್ಟಲುಗಳಲ್ಲಿದ್ದು ಶಿಕ್ಷಣ ಮುಂದುವರಿಸಿದ್ದನು. ಶಿವಮೊಗ್ಗದಲ್ಲಿ ಪದವಿ ಪಡೆದ ಮೇಲೆ ಕೆಲಸಕ್ಕೆ ನಡೆಸಿದ ಪ್ರಯತ್ನಗಳು ಫಲ ನೀಡದ ಕಾರಣ ಖಾಸಗಿ ಪಾಠ ಹೇಳಿ ಹಣ ಸಂಪಾದಿಸಿ ಶಿಕ್ಷಕ ತರಬೇತಿ ಪದವಿಯನ್ನೂ ಪಡೆದಿದ್ದನು. ಅದರಲ್ಲಿ ಗಳಿಸಿದ ಅಂಕಗಳಿಂದ ಅವನಿಗೆ ಹೈಸ್ಕೂಲು ಉಪಾಧ್ಯಾಯನ ಕೆಲಸ ಸಿಕ್ಕಿದ್ದರಿಂದ ನಿರಾಳವಾಗಿತ್ತು. ಲಿಂಗರಾಜು ಬಂದು ಮನೆಯ ಕೆಲಸಕ್ಕೆ ನಿಂತ ಮೇಲೆ ಅವನ ವ್ಯವಹಾರಕ್ಕೂ ಅಷ್ಟಿಷ್ಟು ನೆರವಾಗುವ ಸ್ಥಿತಿಗೆ ಬಂದಿದ್ದನು. ಅಣ್ಣ ತಮ್ಮಂದಿರ ಮಧ್ಯೆ ವಿಶ್ವಾಸ ಇತ್ತು. ಅಗತ್ಯ ಇದ್ದಾಗಲೆಲ್ಲ ಪರಸ್ಪರ ಮಾತಾಡಿಕೊಳ್ಳುತ್ತಿದ್ದರು. ಹಳ್ಳಿಗಳನ್ನೆಲ್ಲ ಸಂಪರ್ಕ ಜಾಲಕ್ಕೆ ಒಳಪಡಿಸುವ ಸರ್ಕಾರದ ಯೋಜನೆ ಅನ್ವಯ ಅವರ ಮನೆಗೂ ದೂರವಾಣಿ ಸಂಪರ್ಕ ಸಿಕ್ಕಿತ್ತು. ಅದು ಹಳೆಯದಾಗಿ ಮೊಬೈಲ್ ಕ್ರಾಂತಿಯಾಗಿದ್ದು ಅವರ ಮಧ್ಯೆ ನಿಕಟ ಸಂಪರ್ಕಕ್ಕೆ ನೆರವಾಗಿತ್ತು. ಗದ್ದೆಯಲ್ಲಿ ವರ್ಷದ ಊಟಕ್ಕೆ ಆಗುವಷ್ಟು ಬತ್ತ ಬೆಳೆಯುತ್ತಿದ್ದರು. ಅಡಿಕೆ ತೋಟದಲ್ಲೇ ಯಲ್ಲನಾಯ್ಕರು ಹೆಚ್ಚು ಕಾಲ ಕಳೆಯುತ್ತಾ ಇದ್ದ ಕಾರಣ ಬಾಳೆ, ಮೆಣಸು, ಯಾಲಕ್ಕಿ ಮೊದಲಾದ ಉತ್ಪನ್ನಗಳೂ ಖರ್ಚಿಗೆ ಸಿಗುತ್ತಿದ್ದವು. ಲಿಂಗರಾಜ ಆ ಸೀಮೆಯ ವಾಡಿಕೆಯಂತೆ ಒತ್ತುವರಿಯ ಹಕ್ಕಲಿನಲ್ಲಿ ಶುಂಠಿಯನ್ನು ಹಾಕಿ ಅದರಲ್ಲಿಯೂ ಹಣ ಗಳಿಸಬಹುದೆಂದು ಕಂಡಿದ್ದನು. ಸ್ವಂತದ ಜಾಗ ಇಲ್ಲದ ಕಾರಣ ಊರಿನವರ ಹಕ್ಕಲುಗಳನ್ನು ಗುತ್ತಿಗೆಗೆ ಪಡೆದು ಶುಂಠಿ ಬೆಳೆ ಹಾಕುವ ಪದ್ಧತಿಯನ್ನೂ ಆರಂಭಿಸಿದ್ದನು. ಇದರಿಂದ ಸ್ವಂತದ ಅನುಕೂಲಗಳಿಗೆ ಹಣ ಒದಗುತ್ತಿತ್ತು. ತುರ್ತು ಸಂದರ್ಭಗಳಲ್ಲಿ ಬಾಡಿಗೆ ಕಾರಿನಲ್ಲಿ ಹೋಗುವುದಕ್ಕೂ ಧೈರ್ಯ ಮಾಡುವಷ್ಟು ಸುಭದ್ರತೆ ಬಂದಿತ್ತು. ಅದಕ್ಕೆ ನಾಗರಾಜನ ಬೆಂಬಲವೂ ಇತ್ತು.

ಕೋಣೆಯಿಂದ ಹೊರಬಂದು ಅವನು ಜಗುಲಿಯಲ್ಲಿ ಕುರ್ಚಿಯ ಮೇಲೆ ಕುಳಿತುಕೊಂಡಾಗ ಅವನ ಹತ್ತಿರ ಬಂದ ಅಜ್ಜಿ ಗಂಗಮ್ಮ ಪಿಸುದನಿಯಲ್ಲಿ 'ರಾಮಣ್ಣನ ಪೋನು (ನಂಬರ್) ನಿನ್ನ ಹತ್ರನಾದ್ರೂ ಇದ್ಯೇನೋ... ಅವನಿಗೂ ಒಂದು ಮಾತು ಹೇಳಬೇಕಿತ್ತು' ಎಂದರು. ಚಿಕ್ಕಪ್ಪ ರಾಮಣ್ಣ ಮನೆಯಷ್ಟೇನು, ಊರಿನ ಸಂಪರ್ಕವನ್ನೇ ಕಳೆದುಕೊಂಡು ಹಲವು ವರ್ಷಗಳೇ ಆಗಿದ್ದು ನಾಗರಾಜನ ಗಮನಕ್ಕೂ ಬಂದಿತ್ತು. 'ಗೊತ್ತಿಲ್ಲ ಅಜ್ಜಿ.. ಲಿಂಗ್ರಾಜು ಹತ್ರ ಹೇಳಬೇಕಿತ್ತು' ಎಂದನು. 'ಅವನ ಹತ್ರ ಹೇಳಿದ್ರೆ ಉರಿದು ಬೀಳ್ತಾನೆ..

ನಮಿಗ್ಯಾಕೆ ದೊಡ್ಡೋರ ಸಾವಾಸ ಅಂತ ಅವತ್ತೇ ನಿಮ್ ವಾಸಮಾವ ಬಂದಿದ್ದಾಗ ಹೇಳ್ತಿದ್ದ' ಎಂದು ರಾಮಣ್ಣನ ವಿಷಯದಲ್ಲಿ ಲಿಂಗರಾಜು ತಾಳಿದ್ದ ಅಸಮಾಧಾನವನ್ನು ಹೊರಹಾಕಿದರು.

ನಾಗರಾಜನಿಗೂ ಚಿಕ್ಕಪ್ಪನ ಜೊತೆಗಿದ್ದ ತನ್ನ ಒಡನಾಟದ ದಿನಗಳು ನೆನಪಿಗೆ ಬಂದವು. ಅವು ಲಿಂಗರಾಜು ರಾಮಣ್ಣನ ಜೊತೆ ತುಮಕೂರಿನಲ್ಲಿದ್ದ ದಿನಗಳು.

ಲಿಂಗರಾಜ ಆಗಲೇ ಹೈಸ್ಕೂಲುವರೆಗೆ ಬಂದಿದ್ದ. ಅಲ್ಲಿಗೆ ಹೋಗಿ ಮೂರು ವರ್ಷಗಳೇ ಕಳೆದಿದ್ದವು. ಬೇಸಗೆ ರಜೆ ಆರಂಭವಾಗಿ ತಾನು ಊರಿಗೆ ಬಂದಿದ್ದಾಗ ಆಗ ರೇಷ್ಮೆ ಹಾಕಿದ್ದ ಅಪ್ಪಯ್ಯ ರೇಷ್ಮೆಗೂಡು ಮಾರುವುದಕ್ಕೆ ರಾಮನಗರಕ್ಕೆ ಹೋಗಿದ್ದ ಸಂದರ್ಭ. 'ರಾಮನಗರಕ್ಕೆ ಅಂದ್ರೆ ಬೆಂಗಳೂರಿಗೆ ಹೋಗಿ ಅಲ್ಲಿಂದ ಹೋಗಾದಂತೆ. ವಾಪಸು ಬರೋವಾಗ ತುಮಕೂರಿನಲ್ಲಿ ಇಳಿದು ರಾಮಣ್ಣನ ಮನೆಯಲ್ಲಿ ಲಿಂಗ್ರಾಜನ್ನೂ ನೋಡ್ಕಂಡು ಬರಾನ' ಎಂದು ಹೇಳಿ ತನ್ನನ್ನೂ ಗೂಡಿನ ವ್ಯಾಪಾರಕ್ಕೆ ಹೊರಡಿಸಿದ್ದ. ತಾವು ಬರುವುದನ್ನು ತಿಳಿಸಿ ರಾಮಣ್ಣನಿಗೂ ಕಾಗದ ಬರೆದಿದ್ದ. ಅದರಂತೆ ರೇಷ್ಮೆಗೂಡನ್ನು ರಾಮನಗರದಲ್ಲಿ ಮಾರಾಟ ಮಾಡಿ ಬೆಂಗಳೂರು ಮೂಲಕ ತುಮಕೂರಿಗೆ ಬಂದಾಗ ಬಸ್ ನಿಲ್ದಾಣದಲ್ಲಿ ಕಾದಿದ್ದ ರಾಮಣ್ಣ ತಮ್ಮಿಬ್ಬರನ್ನೂ ಮನೆಗೆ ಕರೆದೊಯ್ದಿದ್ದ. ಆ ವೇಳೆಗಾಗಲೇ ರಾಮಣ್ಣ ಎರಡು ಸಿನಿಮಾ ಮಾಡಿದ್ದ. ಅವಕ್ಕೆ ಒಂದಲ್ಲ ಒಂದು ಪ್ರಶಸ್ತಿ ಬಂದಿದ್ದವು. ಚಿಕ್ಕಪ್ಪ ತೆಗೆದಿದ್ದ ಸಿನಿಮಾ ನೋಡುವ ಮನಸ್ಸಿದ್ದರೂ ಅವುಗಳಲ್ಲಿ ಒಂದು ಸಿನಿಮಾ ಕೂಡ ಶಿವಮೊಗ್ಗದಲ್ಲಿ ಬಿಡುಗಡೆ ಆಗಿರಲಿಲ್ಲ. ಪತ್ರಿಕೆಗಳಲ್ಲಿ ಹಳ್ಳೂರು ರಾಮಣ್ಣ ಅಂತ ಬರುತ್ತಿತ್ತು. ಅವರ ಭಾಷಣಗಳ ವರದಿಗಳು ಬರುತ್ತಿದ್ದವು. ಲಿಂಗರಾಜನನ್ನು ಕರೆದೊಯ್ದು ಮೊದಲ ವರ್ಷವಷ್ಟೆ ಊರು ಕಡೆ ಬಂದಿದ್ದ ರಾಮಣ್ಣ ನಂತರದ ವರ್ಷಗಳಲ್ಲಿ ಗೆಳೆಯರ ಜೊತೆ ಹಾಕಿ ಅವನನ್ನು ಊರಿಗೆ ಕಳಿಸುತ್ತಿದ್ದ. ಹೈಸ್ಕೂಲು ಹಂತಕ್ಕೆ ಬಂದಿದ್ದ ಲಿಂಗರಾಜು ನಂತರ ತಾನೊಬ್ಬನೇ ಬಸ್ಸಿನಲ್ಲಿ ಬಂದು ಹೋಗುತ್ತಿದ್ದ.

ತುಮಕೂರಿನಲ್ಲಿ ರಾಮಣ್ಣನ ಮನೆಗೆ ಹೋದಾಗ ಅಲ್ಲಿ ಮಂಜುಳ ಚಿಕ್ಕಮ್ಮನೂ ಆಕೆಯ ತಂಗಿ ಕಮಲಕ್ಕನೂ ಇದ್ದರು. ರಾಮಣ್ಣನ ಮಗನಿಗೆ ಎರಡೂವರೆ ವರ್ಷವಾಗಿದ್ದು ಅದು ಚಿಕ್ಕಮ್ಮನನ್ನು ಹಚ್ಚಿಕೊಂಡಿತ್ತು. ಕೆಲವು ದಿನಗಳ ಮಟ್ಟಿಗೆ ಇರಲೆಂದು ಮಂಜುಳೆಯ ತಾಯಿಯೂ ಬಂದಿದ್ದರು. ಎರಡು ಕೋಣೆಗಳ ಮನೆಯಲ್ಲಿ ಹೊರಗಡೆಯ ಹಜಾರ ವಿಶಾಲವಾಗಿ ಇತ್ತು. ಅವತ್ತಿಗೆ ಹಜಾರದಲ್ಲಿ ಮಲಗುತ್ತಿದ್ದ ಲಿಂಗರಾಜನ ಪಕ್ಕದಲ್ಲಿ ಯಲ್ಲನಾಯ್ಕರಿಗೂ, ನಾಗರಾಜನಿಗೂ ಮಲಗುವ ವ್ಯವಸ್ಥೆ ಆಯಿತು. ಮನೆಯ ಇಕ್ಕಟ್ಟನ್ನು ನೋಡಿದ ಯಲ್ಲನಾಯ್ಕರು ಮರುದಿನ ಬೆಳಗ್ಗೆಯೇ ಎದ್ದು ಶಿವಮೊಗ್ಗಕ್ಕೆ ಹೊರಟರು. ಬೇಸಗೆ ರಜೆ ಇರುವುದರಿಂದ ನಾಗರಾಜನಿಗೆ ಕೆಲವು ದಿನ ಇದ್ದು ಹೋಗುವಂತೆ ಮಂಜುಳ ಹೇಳಿದಾಗ ಯಲ್ಲನಾಯ್ಕರು ಅದಕ್ಕೆ ಸಮ್ಮತಿಸಿದ್ದರು. ಹಾಗಾಗಿ ನಾಗರಾಜ ಉಳಿದುಕೊಂಡಿದ್ದ. 'ವಾರ ಇದ್ದು ಬರ್ತಾ ಬರ್ತಾ ಲಿಂಗ್ರಾಜುನ್ನೂ ಕರ್ಕ ಬಾ' ಎಂದು ಯಲ್ಲನಾಯ್ಕರು ಹೇಳಿದ್ದರು.

ತುಮಕೂರಿನಲ್ಲಿ ಆಗಲೇ ಮೂರು ವರ್ಷ ಕಳೆದಿದ್ದ ಲಿಂಗರಾಜನಿಗೆ ಸೋಮೇಶ್ವರ ಬಡಾವಣೆಯಿಂದ ಕ್ಯಾತ್ಸಂದ್ರಕ್ಕೆ ಹೋಗಿ ಸಿದ್ಧಗಂಗಾ ಮಠ ನೋಡಿ ಬರುವಷ್ಟು ಊರಿನ ಬಳಕೆಯಾಗಿತ್ತು. ಮನೆಯ ಸುತ್ತಮುತ್ತಲ ದಿನಸಿ ಅಂಗಡಿಗಳಿಗೆ ಹೋಗಿ ಚಿಕ್ಕಮ್ಮ ಹೇಳುತ್ತಿದ್ದ ಸಾಮಾನುಗಳನ್ನು ತಂದು ಕೊಡುವುದು ಅಭ್ಯಾಸವಾಗಿತ್ತು. ಚಿಕ್ಕಮ್ಮ ಬಾಣಂತನಕ್ಕೆ ಹೋದಾಗ ಅಡುಗೆ ಮಾಡಲು ಬಂದಿದ್ದ ಕಮಲ ಪ್ರಾರಂಭ ಮಾಡಿಸಿದ್ದ ಪಾತ್ರೆಗಳನ್ನು ತೊಳೆಯುವ ಪದ್ಧತಿ ಮುಂದುವರಿದಿತ್ತು. ಚಿಕ್ಕಮ್ಮ ಬಾಣಂತನ ಮುಗಿಸಿ ಮೂರು ತಿಂಗಳಲ್ಲಿ ಬಂದಾಗ ಲಿಂಗರಾಜ ಮನೆಯ ಹೊರಗಿನ ಬಾಗಿಲು ತೊಳೆದು ರಂಗೋಲಿ ಹಾಕುವುದನ್ನು ನೋಡಿ 'ಪರವಾಗಿಲ್ಲ

ಕಣೋ.. ಕಮಲಿಗಿಂತಲೂ ಚೆನ್ನಾಗಿ ರಂಗೋಲಿ ಹಾಕ್ತೀ' ಎಂದು ಹೊಗಳಿ ಆ ಕೆಲಸವನ್ನೂ ಕಾಯಂ ಮಾಡಿದ್ದಳು. ಮನೆಗೆ ಅಪ್ಪಯ್ಯ, ಅಣ್ಣ ಇಬ್ಬರೂ ಬಂದದ್ದನ್ನು ನೋಡಿ ಖುಷಿಪಟ್ಟಿದ್ದ ಲಿಂಗರಾಜು ಚಿಕ್ಕಪ್ಪನ ಮನೆಯಲ್ಲಿ ತಾನು ಪಾತ್ರೆ ತೊಳೆಯುತ್ತಾ, ಮನೆಯ ಕಸ ಹೊಡೆಯುತ್ತಾ ಇರುವುದನ್ನು ನೋಡಿದರೆ ಎಂದು ಗಾಬರಿಯಾಗಿದ್ದ. ಆದರೆ ಅವತ್ತು ರಾತ್ರಿಯೇ ಮಂಜುಳ ಲಿಂಗರಾಜನನ್ನು ಕೋಣೆಗೆ ಕರೆದು 'ನಿಮ್ಮಪ್ಪ ಅಣ್ಣ ಇರೋವರೆಗೂ ಪಾತ್ರೆ ತೊಳಿಯೋದು, ಕಸ ಹೊಡಿಯೋದು ಮಾಡಬೇಡ. ಅವನ್ನೆಲ್ಲ ಕಮಲ ಮಾಡ್ತಾಳೆ' ಎಂದಿದ್ದಳು.

ಯಲ್ಲನಾಯ್ಕರನ್ನು ಬಸ್ ನಿಲ್ದಾಣದವರೆಗೂ ಕಳಿಸಲು ಮಕ್ಕಳಿಬ್ಬರೂ ಬಂದರು. ಶಿವಮೊಗ್ಗದ ಬಸ್ ಹತ್ತಿದ ಯಲ್ಲನಾಯ್ಕರು ನಾಗರಾಜನಿಗೆ ಇಬ್ಬರಿಗೂ ಊರಿಗೆ ಬರುವಷ್ಟು ಬಸ್ ಚಾರ್ಜು ಕೊಟ್ಟರು. 'ಚಿಕ್ಕಪ್ಪ ಯಾವಾಗ ಕಳಿಸ್ತಾನೋ ಆವಾಗ ಬರ್ರಿ.. ನೀನು ಮನೆ ಕೆಲಸ ಏನು ಹೇಳಿದರೂ ಮಾಡಬೇಕು ಲಿಂಗ್ರಾಜು. ಅವರೇ ಓದಿಸ್ತಾ ಇದಾರಲ್ಲ. ಅಷ್ಟೋ ಇಷ್ಟೋ ಕೈಲಾದ್ದು ಮಾಡು. ಈಗ ವಿದ್ಯೆ ಕಲಿತು ಎಲ್ಲಾದ್ರೂ ನೌಕರಿ ಹಿಡೀದೆ ಬೇರೆ ಮಾರ್ಗ ಇಲ್ಲ' ಎಂದು ಉಪದೇಶಿಸಿದ್ದರು. ಅದನ್ನು ಕೇಳಿದ ಲಿಂಗರಾಜನಿಗೆ ಈಗಾಗಲೇ ಮಾಡುತ್ತಿರುವುದನ್ನು ಹೇಳಿಬಿಡಲೇ ಎಂಬ ಚಪಲವಾಯಿತು. ಆದರೂ ತಡೆದುಕೊಂಡ. ಊರಿನ ಪದ್ಧತಿಯಂತೆ 'ಜ್ವಾಕೆ... ಜ್ವಾಕೆ' ಎಂದು ಅಪ್ಪಯ್ಯ ಹೇಳಿದ್ದನ್ನು ಕೇಳಿ ಬಸ್ ಹೊರಡಲು ನಿಲ್ದಾಣದಿಂದ ಮನೆಯತ್ತ ಕಾಲು ಹಾಕಿದರು.

'ಚಿಕ್ಕಪ್ಪ ಮಾಡಿದ ಸಿನಿಮಾ ನೋಡಿದಿಯೇನೋ.. ಅವನು ಮಾಡಿದ್ದಕ್ಕೆಲ್ಲ ಅವಾರ್ಡು ಬಂದಿದಾವಲ್ಲ' ನಾಗರಾಜ ಕುತೂಹಲ ತೋರಿಸಿದ.

'ಏನು ಸಿನಿಮಾನೋ ಏನೋ... ಇಲ್ಲಂತೂ ಯಾರಿಗೂ ತೋರಿಸಿಲ್ಲ... ಅವು ಇಲ್ಲೆಲ್ಲೂ ರಿಲೀಸೇ ಆಗಿಲ್ಲಂತೆ..' ಎಂದ ಲಿಂಗರಾಜು ನಿರುತ್ಸಾಹದಿಂದ.

'ಪೇಪರ್‌ನಲ್ಲಿ ಬರ್ತಾ ಇರ್ತಾವಲ್ಲ.. ಅಲ್ಲೆಲ್ಲೋ ಅವಾರ್ಡು ಬಂತು.. ಇಲ್ಲೆಲ್ಲೋ ಅವಾರ್ಡು ಬಂತು ಅಂತ. ಚಿಕ್ಕಪ್ಪಗೆ ಒಳ್ಳೇ ದುಡ್ಡಾಗಿರಬೇಕು.. ಅಲ್ವ?' ಎಂದು ನಾಗರಾಜ ಕೇಳಿದ.

'ದುಡ್ಡು ಆಯ್ತೊ ಬಿಡ್ತೊ ಗೊತ್ತಿಲ್ಲ. ಆದರೆ, ಚಿಕ್ಕಪ್ಪನಿಗೆ ತಗೊಂಡ ದುಡ್ಡು ಯಾಕೆ ಇನ್ನೂ ಕೊಟ್ಟಿಲ್ಲ ಅಂತ ಅವನ ಸ್ನೇಹಿತರು ತುಂಬ ಕೆಟ್ಟ ಕೆಟ್ಟ ಕಾಗದ ಬರೀತಾ ಇದಾರೆ. ಸಿನಿಮಾದಿಂದ ದುಡ್ಡು ಬಂದಿದ್ರೆ ಅವರಿಗೆಲ್ಲ ಕೊಡ್ತಿದ್ದನೇನೋ..' ಎಂದ ಲಿಂಗರಾಜ.

'ಸ್ನೇಹಿತರು ಕಾಗದ ಬರೀತಾರೆ ಅಂತ ನಿಂಗೆ ಹೆಂಗೆ ಗೊತ್ತೊ.. ಸುಮ್ನೆ ಸುಳ್ ಸುಳ್ ಹೇಳಬ್ಯಾಡ' ನಾಗರಾಜನಿಗೆ ಆಘಾತವೇ ಆಗಿತ್ತು.

'ನಾನ್ಯಾಕೆ ಸುಳ್ ಹೇಳಲಿ. ನಾವು ಹೊಳೇನರಸೀಪುರದಲ್ಲಿ ಇದ್ದೆವಲ್ಲ. ಅಲ್ಲಿ ನಾರಾಯಣರಾವ್ ಅಂತ ಸಿನಿಮಾ ತೆಗೆಯೋ ಮಾತುಕತೆಗೆ ಬರ್ತಾ ಇದ್ರು. ಚಿಕ್ಕಪ್ಪ ವರ್ಗಾ ಮಾಡಿಸಿಕೊಂಡು ಈ ಕಡೆ ಬಂದ್ನಲ್ಲ. ಆವಾಗಲೂ ಹುಡುಕಿಕೊಂಡು ಬಂದಿದ್ದರು. ಅವರ ಜೊತೆ ಇನ್ನೊಬ್ಬರು, ಅವರೂ ಕಾಲೇಜು ಮೇಷ್ಟ್ರಂತೆ, ಬಂದಿದ್ದರು. ಅವರು ಬಂದಾಗಲೆಲ್ಲ ಚಿಕ್ಕಪ್ಪ ಸಿಗ್ತಾನೆ ಇರ್ಲಿಲ್ಲ. ಅವರು ಆಮೇಲೆ ಪೋಸ್ಟ್ ಕಾರ್ಡು ಬರೆದಿದ್ದರು. ಕಾರ್ಡು ಮಾರಾಯ. ಚಿಕ್ಕಪ್ಪನ ಪತ್ರ ಅಂತ ಎತ್ತಿಡಾಕೆ ಹೋದ್ರೆ ಅದ್ರಲ್ಲಿ ರೆಡ್ ಇಂಕಿನಲ್ಲಿ ಏನೋ ಇದ್ದೈಲ್ಲ ಅಂತ ನೋಡಿದೆ. 'ನೀನು ದೊಡ್ಡ ಮೋಸಗಾರ.. ಇಂಥ ಮೋಸ ಯಾರಿಗೂ ಮಾಡಬ್ಯಾಡ' ಅಂತ ಬರೆದು ಅಂಡರ್ ಲೈನ್ ಮಾಡಿದ್ದು ನೋಡಿದೆ. ಕಾಗದ ಅಲ್ಲೇ ಇಟ್ಟೆ. ಚಿಕ್ಕಪ್ಪ ಕಾಗದ ನೋಡಿದವನು ಸುಮ್ನೆ

ಎತ್ತಿಟ್ಟುಕೊಂಡ. ನಾರಾಯಣರಾವ್ ಅಂತ ಹೇಳ್ತಾ ಇದ್ನೆಲ್ಲ, ಅವರ ಹೆಸರನ್ನೇ ಮುಂದೆ ಹೇಳ್ತಾ ಇರಲಿಲ್ಲ' ಎಂದು ಲಿಂಗರಾಜ ನೆನಪು ಮಾಡಿಕೊಂಡ.

'ಕಾಗದ ಪೂರ್ತಿ ಓದಿದೆಯಾ.. ಹಂಗೆ ಕಂಡೋರ ಕಾಗದ ಓದ್ತಾರೇನೋ..?'

'ಏಯ್, ನಂಗೇನು ಮಳ್ಳಾ.. ಬೇರೆಯೋರ ಕಾಗದ ಓದಾಕೆ? ಅದು ಕಾರ್ಡಲ್ಲಿ ಇತ್ತಲ್ಲ, ಅದರಲ್ಲಿ ಮೋಸಗಾರ ಅಂತೆಲ್ಲ ಇತ್ತಲ್ಲ. ಅದಕ್ಕೆ ಏನು ವಿಷಯ ಅಂತ ಓದಿದೆ. ಪೂರ್ತಿ ಓದಿದೆ. ಅದು ಚಂದ್ರಣ್ಣ ಅನ್ನೋವರ ಕಾಗದ. ಅಲ್ಲೆಲ್ಲೋ ಕಾಲೇಜಲ್ಲಿ ಪಾರ್ಟ್ ಟೈಂ ಲೆಕ್ಚರರ್ ಅಂತೆ. ಚಿಕ್ಕಪ್ಪನ ತರಾನೆ ಕಥೆ ಗಿತೆ ಬರೆಯೋರಂತೆ. ಇವರು ತಮ್ಮ ಕತೇನಾ ಸಿನಿಮಾ ಮಾಡ್ತಾರೆ ಅಂತ ಗೊತ್ತಾದಾಗ ತಮ್ಮದೂ ಒಂದು ಕಥೆ ಯಾವಾಗಾದರೂ ಸಿನಿಮಾ ಮಾಡಬಹುದು ಅಂತ ಆಸೆಯಿಂದ ಇದ್ದರಂತೆ. ಇವರು ಸಿನಿಮಾ ಶೂಟಿಂಗ್ ಶುರು ಮಾಡಾದಕ್ಕೆ ಅಂತ ಅವರ ಹತ್ರಾನೂ ದುಡ್ಡು ಕೇಳಿದ್ರಂತೆ. 'ನನಗೆ ಕಷ್ಟ ಇತ್ತು, ಆದರೂ ಸ್ನೇಹಿತರ ಹತ್ರ ಈಸ್ಕೊಂಡು ಐದು ಸಾವಿರ ಕೊಟ್ಟೆ. ನಿನಗೆ ಸಿನಿಮಾ ಮುಗಿದು, ಅದಕ್ಕೆ ಅವಾರ್ಡು ಬಂದಿದೆಯಲ್ಲ. ಈಗಲಾದ್ರೂ ನನ್ನ ದುಡ್ಡು ಕೊಡಬಾರದಾ.. ಎಂಥ ಮೋಸಗಾರ ನೀನು' ಅಂತ ಏಕವಚನದಲ್ಲಿ ಬೈದು ರೆಡ್ ಇಂಕಿನಲ್ಲಿ ಅಂಡರ್ ಲೈನ್ ಮಾಡಿದ್ರು..' ಲಿಂಗರಾಜು ಸಾಕಷ್ಟು ವಿವರಣೆಯನ್ನು ಕೊಟ್ಟ.

'ಏನೋ ಮರೆತಿರಬಹುದು. ಚಿಕ್ಕಪ್ಪ ಹಂಗೆಲ್ಲ ಯಾರಿಗಾದ್ರೂ ಮೋಸ ಮಾಡ್ತಾರ, ಅಷ್ಟೊಂದು ಒಳ್ಳೇ ಹೆಸರು ಬಂದಿದೆಯಲ್ಲ'

'ಅದೇ ನನಗೂ ಅನುಮಾನ. ಅಂಥ ಕಾಗದ ಅದೊಂದೇ ಅಲ್ಲ. ನಾನೇ ನೋಡಿದ ಹಾಗೆ ಮೂರು ಕಾಗದ ಅಂಥವೇ ಆಗಾಗ ಬರ್ತಾ ಇದ್ವೊ. ಎಲ್ಲವೂ ಬೇರೆಯವರೂ ಓದಲಿ ಅನ್ನೋ ಹಂಗೆ ಪೋಸ್ಟ್ ಕಾರ್ಡು. ಚಂದ್ರಣ್ಣನಿಗೆ ಐದು ಸಾವಿರ. ನಾರಾಯಣರಾವ್ ಅನ್ನೋವರಿಗೆ ಹತ್ತು ಸಾವಿರ ಅಂತೆ. ಅದ್ಯಾರೋ ಪದ್ಮಜಾ ಅಂತೆ, ಅವರೂ ಅಂಥದ್ದೇ ಕಾಗದ ಬರೆದಿದ್ದರು. ಅದೂ ದುಡ್ಡಿನ ತಗಾದೆಯೇ. ಎಷ್ಟು ಅಂತ ಬರೆದಿರಲಿಲ್ಲ. ಅವರು ಮಾತ್ರ ರೆಡ್ ಇಂಕಿನಲ್ಲಿ ಅಂಡರ್‌ಲೈನ್ ಮಾಡಿರಲಿಲ್ಲ. ನನಗನ್ನುತ್ತೆ ಚಿಕ್ಕಪ್ಪ ಯಾರಿಗೂ ದುಡ್ಡು ವಾಪಸು ಕೊಟ್ಟೇ ಇಲ್ವೇನೋ ಅಂತ..' ಎಂದು ಲಿಂಗರಾಜ ವಿವರಣೆ ನೀಡಿದ್ದ.

'ಏನೋಪ್ಪ, ನಮಗ್ಯಾಕೆ ಬಿಡು, ದೊಡ್ಡೋರ ವಿಚಾರ. ನೀನು ಅವನಿಗೆ ಬಂದ ಕಾಗದ ಓದಿರಬಹುದು ಅಂತ ಚಿಕ್ಕಪ್ಪನಿಗೆ ಅನುಮಾನ ಏನಾದರೂ ಬಂದಿದೆಯಾ.. ಹುಷಾರು ಮಾರಾಯ' ಎಂದು ನಾಗರಾಜ ಎಚ್ಚರಿಕೆ ಹೇಳಿದ.

'ಇಲ್ಲ ಇಲ್ಲ.. ಅವನಿಗೆ ಅನುಮಾನ ಹ್ಯಾಗೆ ಬರುತ್ತೆ? ಅವನಿಗೆ ಬರೋ ಪೋಸ್ಟ್ ಎಲ್ಲ ಕಮಲಕ್ಕನೇ ನೋಡ್ತಾಳೆ. ಅವಳು ಚಿಕ್ಕಮ್ಮ ಬಾಣಂತನದಿಂದ ಬರೋವರೆಗೆ ಇರ್ತಾಳೆ ಅಂತ ಹೇಳಿದ್ದ. ಆದರೆ ಎರಡು ವರ್ಷ ಕಳೆದರೂ ಅವಳನ್ನು ಕಳಿಸೇ ಇಲ್ಲ. 'ಇರು, ಇಲ್ಲೇ ಎಲ್ಲಾದ್ರೂ ಕೆಲಸ ನೋಡೋಣ' ಅಂತ ಹೇಳ್ತಾ ಇದಾನೆ. ಅವಳ ವಿಷಯದಲ್ಲೇ ಚಿಕ್ಕಮ್ಮನಿಗೂ ಚಿಕ್ಕಪ್ಪನಿಗೂ ಜೋರು ಜಗಳ ನಡೆಯುತ್ತೆ. ಕಮಲಕ್ಕ ಮಾತ್ರ ಮಗೂನ ತುಂಬ ಜೋಪಾನ ಮಾಡ್ತಾ ಇರ್ತಾಳೆ. ಅದನ್ನು ತುಂಬ ಹಚ್ಚಿಕೊಂಡಿದಾಳೆ. ಈಗ ಅವರಮ್ಮ ಬಂದಿದಾರಲ್ಲ, ಈ ಸಲವಾದ್ರೂ ಕಮಲಕ್ಕ ಊರಿಗೆ ವಾಪಸು ಹೋಗಬಹುದೇನೋ ನೋಡಬೇಕು..' ಎಂದು ಹೇಳುವಷ್ಟರಲ್ಲಿ ಮನೆ ಹತ್ತಿರವಾಗಿ ಮಾತನ್ನು ನಿಲ್ಲಿಸಿದರು.

ರಾಮಣ್ಣ ಅವತ್ತು ಬೆಳಗ್ಗೆಯೇ ಹೋಗಿದ್ದವನು ಇವರು ಬಸ್ ನಿಲ್ದಾಣದಿಂದ ವಾಪಸು ಬರುವಷ್ಟರಲ್ಲಿ ಮನೆಗೆ ಬಂದಿದ್ದ. ಇಬ್ಬರನ್ನೂ ನೋಡಿ 'ಬಿಟ್ ಬಂದ್ರಾ.. ಎಕ್ಸ್‌ಪ್ರೆಸ್ ಬಸ್ಸಿಗೆ ಕೂರಿಸಿ ಬರಬೇಕಿತ್ತು' ಎಂದು

ಹೇಳಿದ. 'ಅದೇ ಇರಬೇಕು.. ಬಿಳಿ ಬಸ್ಸು.. ರಾಜಹಂಸ ಅಂತ ಇತ್ತು' ಎಂದು ಲಿಂಗರಾಜು ಹೇಳಿದಾಗ 'ಹಂಗಾದ್ರೆ ಅದು ಲಕ್ಷುರಿ ಬಸ್ಸು. ಜಾಸ್ತಿ ಚಾರ್ಜು ತಗೊಳ್ತಾರೆ. ಅದಕ್ಯಾಕೆ ಹತ್ತಿಸಿದ್ರಿ. ಕೆಂಪು ಬಸ್ಸಿಗೆ ಕೂರಿಸಿದ್ರೆ ಆಗ್ತಿತ್ತು. ಅರ್ಧ ಗಂಟೆ ತಡವಾಗಿ ಹೋದರೆ ಏನಂತೆ..' ಎಂದು ಹೇಳಿದ. ಅದನ್ನೆಲ್ಲ ಅವನು ಯಾಕೆ ಹೇಳುತ್ತಿದ್ದಾನೆಂದು ಹುಡುಗರಿಗೆ ಸಮಸ್ಯೆಯಾಯಿತು. 'ಅದನ್ನೆಲ್ಲ ಯಾಕೆ ಹೇಳ್ತಾ ಇದೀರಿ ಈಗ. ಈಗೇನು ಪ್ರಯೋಜನ.. ಅವರು ಹೋಗಿ ಆಯ್ತಲ್ಲ. ಅಷ್ಟಿದ್ದವರು ನೀವೇ ಒಂದು ಹೆಜ್ಜೆ ಹೋಗಿ ನಿಮ್ಮಣ್ಣನ್ನ ಬಸ್ಸು ಹತ್ತಿಸಿ ಬರಬೇಕಿತ್ತು' ಎಂದು ಒಳಗಿನ ಕೋಣೆಯಲ್ಲಿ ಕುಳಿತಿದ್ದ ಮಂಜುಳಾ ಗದರಿಕೊಂಡಳು. 'ಅದೂ ಸರಿನೇ ಬಿಡು' ಎಂದು ಮೆಲ್ಲನೆ ಹೇಳಿಕೊಂಡ ರಾಮಣ್ಣ ಅಡುಗೆ ಮನೆ ಪ್ರವೇಶಿಸಿ 'ನನಗೆ ತಿಂಡಿ ಹಾಕಿಕೊಡು ಕಮಲಾ.. ಸ್ಪೆಷಲ್ ಕ್ಲಾಸು ಇಟ್ಟುಕೊಂಡಿದೀನಿ. ಸಂಜೆ ಬರೋದು ತಡವಾಗುತ್ತೆ' ಎಂದ.

ಹುಡುಗರಿಬ್ಬರೂ ಹೊರಗಿನಿಂದ ಒಳಬಂದವರು ಬಚ್ಚಲಿಗೆ ಹೋಗಿ ಕಾಲು ತೊಳೆದುಕೊಂಡರು. ನಗರವಾಸದ ಪದ್ಧತಿಯನ್ನು ಮೂರುವರ್ಷಗಳಿಂದ ತಿಳಿದಿದ್ದ ಲಿಂಗರಾಜ ಅಣ್ಣ ನಾಗರಾಜನ ನಡವಳಿಕೆ ಚಿಕ್ಕಮ್ಮನಿಗಾಗಲೀ, ಕಮಲಕ್ಕನಿಗಾಗಲೀ ಸಹ್ಯವಾಗುವಂತೆ ನೋಡಿಕೊಳ್ಳುವ ಎಚ್ಚರಿಕೆ ವಹಿಸಿದ್ದ. ಊರು ಬದಿಯ ನೆಂಟರ ಮನೆಗಳ ಒಡನಾಟವಷ್ಟೇ ಇದ್ದ ನಾಗರಾಜ ತುಮಕೂರಿನ ಪೇಟೆಯ ಮನೆಯಲ್ಲಿ ಹೆಚ್ಚು ಎಚ್ಚರಿಕೆಯಿಂದ ಇರಬೇಕು ಎಂದು ಅವನು ತಿಳಿದುಕೊಂಡಿದ್ದ. ಊರಲ್ಲಿ ಶೌಚಾಲಯ ಇರಲಿಲ್ಲ. ಪೊದೆಗಳ ಹಿಂದೆ ನಿರಾತಂಕವಾಗಿ ಕುಳಿತು ವಿಸರ್ಜನೆಯನ್ನು ಪೂರೈಸುವ ಅಭ್ಯಾಸವಿದ್ದ ನಾಗರಾಜ ಪೇಟೆ ಮನೆಯ ಶೌಚಾಲಯವನ್ನು ಎಷ್ಟು ಚೊಕ್ಕಟವಾಗಿ ಬಳಕೆ ಮಾಡುತ್ತಾನೆ ಎಂಬುದೂ ಅವನಿಗೆ ಮುಖ್ಯವಾಗಿತ್ತು. ಆದ್ದರಿಂದಲೇ ನಾಗರಾಜ ಶೌಚಕ್ಕೆ ಹೋಗಿ ಹೊರಬಂದ ನಂತರ ತಾನು ಹೋಗಿ ಇನ್ನಷ್ಟು ನೀರು ಹಾಕಿ ಅದು ಸ್ವಚ್ಛವಾಗಿಯೇ ಇರುವಂತೆ ನೋಡಿಕೊಳ್ಳುವುದನ್ನು ತೋರಿಸಿಕೊಟ್ಟಿದ್ದ. ಸ್ವಂತ ಚಿಕ್ಕಪ್ಪನ ಮನೆಯಾದರೂ ಬೇರೆ ಸಂಪ್ರದಾಯ ನಡವಳಿಕೆಯ ಮಂಜುಳೆಯ ಮನಸ್ಸಿಗೆ ಒಪ್ಪುವಂತೆ ತಮ್ಮ ನಡವಳಿಕೆ ಇರಬೇಕು ಎಂಬುದು ಲಿಂಗರಾಜನ ಕಾಳಜಿ ಎಂದು ನಾಗರಾಜನಿಗೂ ಅರ್ಥವಾಯಿತು. ತಿಂಡಿ ತಿಂದಾದ ನಂತರ ತಟ್ಟೆಯನ್ನು ಎತ್ತಿಕೊಂಡು ಹೋಗಿ ಅಡುಗೆ ಮನೆಯ ಸಿಂಕಿನಲ್ಲಿ ಇಡುವುದನ್ನು ಅವನೂ ಅನುಸರಿಸಿದ. ಹಳ್ಳಿಗನಂತಿದ್ದರೂ ನಡವಳಿಕೆಯಲ್ಲಿ ಚೊಕ್ಕವಾಗಿರುವುದನ್ನು ಮಂಜುಳೆಯೂ ಗಮನಿಸಿದಳು. ನಾಗರಾಜನನ್ನೂ ವಾತ್ಸಲ್ಯದಿಂದಲೇ ಉಪಚರಿಸತೊಡಗಿದಳು. ಲಿಂಗರಾಜನಂತೆಯೇ ನಾಗರಾಜನೂ ಕಮಲಕ್ಕ ಎಂದು ಕರೆದು ಆಕೆಯ ವಿಶ್ವಾಸವನ್ನೂ ಗಳಿಸಿದನು.

ಸಂಜೆಯ ಹೊತ್ತಿಗೆ ಕಾಫಿ ಜೊತೆಗೆ ಬಿಸ್ಕತ್ತನ್ನೂ ಕೊಟ್ಟ ಮಂಜುಳಾ ಊರಿನ ಸಮಾಚಾರಗಳನ್ನೂ ಆಪ್ತವಾಗಿ ಕೇಳಿದ್ದು ನಾಗರಾಜನಿಗೆ ಇಷ್ಟವಾಯಿತು. ಚಿಕ್ಕಮ್ಮನಲ್ಲಿ ಆಪ್ತಭಾವ ಮೊಳೆಯಲು ಸಹಕಾರಿಯಾಗುವಂತೆ ತಾನು ಸೋದರ ಮಾವನ ಮನೆಯಲ್ಲಿದ್ದ ದಿನಗಳನ್ನೂ ಮೆಲುಕು ಹಾಕಿದನು. ಮನೆಯಲ್ಲಿ ಅವ್ವ, ಅಜ್ಜಿಯರು ರೈತಾಪಿ ಕೆಲಸಗಳಲ್ಲಿ ತೊಡಗುವ ಪರಿಯನ್ನೂ ವಿವರಿಸಿದನು. 'ಇರೋ ಜಮೀನು ಕಮ್ಮಿ ಅಂತ ಅಪ್ಪಯ್ಯ ಹೊಸ ಹೊಸ ಕೆಲಸಕ್ಕೆ ಮುಂದಾಗಿದ್ದಾನೆ. ಊರಲ್ಲಿ ಯಾರೂ ಇನ್ನೂ ನೋಡೇ ಇಲ್ಲ, ಅಪ್ಪಯ್ಯ ರೇಷ್ಮೆ ಬೆಳೆ ಇಟ್ಟಿದ್ದಾನೆ..' ಎಂದು ತಾನು ಬರಬೇಕಾದ ಸನ್ನಿವೇಶವನ್ನೂ ಹೇಳಿಕೊಂಡನು. ಅವೆಲ್ಲವೂ ಲಿಂಗರಾಜನಿಗೂ ಹೊಸ ವಿಷಯಗಳಾಗಿದ್ದರಿಂದ ಅವನೂ ಆಸಕ್ತಿಯಿಂದ ಕೇಳಿಸಿಕೊಂಡನು.

ರಾತ್ರಿಯ ಊಟಕ್ಕೆ ವಿಶೇಷವೇನೂ ಇರಲಿಲ್ಲ. ಆದರೆ ಮನೆಯಲ್ಲಿ ಅನ್ನ, ಸಾರು, ಮಜ್ಜಿಗೆಯಷ್ಟಕ್ಕೆ ತೃಪ್ತಿಪಡುತ್ತಿದ್ದವನಿಗೆ ಮಂಜುಳೆ ಮಾಡಿದ ತರಕಾರಿಯ ಸಾರು ವಿಶೇಷವೆನಿಸಿತ್ತು. ಹಿಂಗಿನ ಒಗ್ಗರಣೆ ಸಾರಿಗೆ ಹಿತವಾದ ವಾಸನೆ ನೀಡಿತ್ತು. ಶಿರಸಿಯಿಂದ ತಂದಿದ್ದ ಮಿಡಿ ಉಪ್ಪಿನಕಾಯಿ ರಾತ್ರಿಯ ಊಟವನ್ನು ಪುಷ್ಕಳಗೊಳಿಸಿತ್ತು. ಹುಡುಗನಿಗೆ ವಿಶೇಷವನ್ನೇನೂ ಮಾಡಲಿಲ್ಲ ಎಂಬ ಅಸಮಾಧಾನ ಮೂಡದಂತೆ ತೃಪ್ತಿಕರವಾಗಿ ಊಟ ಮಾಡಿದ ನಾಗರಾಜ ಊಟದ ನಂತರ ತಟ್ಟೆಯನ್ನು ಅಡುಗೆ ಮನೆಯ ಸಿಂಕಿನಲ್ಲಿಟ್ಟು ಬಂದನು. ಹೀಗೆ ಹೊಂದಿಕೊಂಡು ಹೋಗುವಂತಿದ್ದರೆ ಎಷ್ಟು ದಿನವಾದರೂ ಇದ್ದು ಹೋಗಲಿ ಎಂಬ ಭಾವನೆ ಮಂಜುಳೆಯಲ್ಲಿ ಮೂಡಿತು. ಪಾತ್ರೆ ತೊಳೆಯುವ ಕೆಲಸವನ್ನು ಲಿಂಗರಾಜು ತಾತ್ಕಾಲಿಕವಾಗಿ ನಿಲ್ಲಿಸಿದ್ದನ್ನು ತಿಳಿದ ಕಮಲ ಅದನ್ನು ತಲೆಗೆ ಹಚ್ಚಿಕೊಳ್ಳಲಿಲ್ಲ. ಅವತ್ತು ಮಾತ್ರ ಅವಳಿಗೆ ಮನೆಯಲ್ಲಿ ಹೆಚ್ಚು ಪಾತ್ರೆಗಳನ್ನು ನಿತ್ಯದ ಬಳಕೆಗೆ ಬಿಡುವುದು ಅನಗತ್ಯವೆಂಬ ಭಾವನೆ ಮೂಡಿತು. ಮನೆಯ ಕಸ ಹೊಡೆದು ಪಾತ್ರೆ ತೊಳೆದು ಮಗುವಿನ ಚಾಕರಿಯನ್ನೂ ಎಂದಿನಂತೆ ಮಾಡಿದ ಅವಳಿಗೆ ರಾಮಣ್ಣ ಬರುವ ಮೊದಲೇ ನಿದ್ದೆ ಆವರಿಸಿತ್ತು. ಎರಡನೆಯ ಕೋಣೆಯಲ್ಲಿದ್ದ ಮಂಚವನ್ನು ಊರಿನಿಂದ ಬಂದ ಅಮ್ಮನಿಗಾಗಿ ಬಿಟ್ಟುಕೊಟ್ಟು ಮಂಚದ ಕೆಳಗಡೆ ಮೆತ್ತನೆಯ ಹೊದಿಕೆಯನ್ನು ಹಾಸಿಕೊಂಡು ಮಲಗಿಕೊಂಡಳು.

ತಡವಾಗಿ ಮನೆಗೆ ಬಂದ ರಾಮಣ್ಣ ಮೊದಲಿಗೆ ಕಮಲಳನ್ನೇ ಕರೆದನು. ಅವಳಾಗಲೇ ನಿದ್ದೆ ಹೋಗಿದ್ದು ತಿಳಿಯಿತು. ಕೋಣೆಗೆ ಹೋಗಿ ಅವಳು ಮಲಗಿದ್ದನ್ನು ಖಚಿತಪಡಿಸಿಕೊಂಡು ಬಂದನು. ಹುಡುಗರಿಬ್ಬರೂ ಊಟ ಮುಗಿಸಿ ಚಾಪೆ ಬಿಚ್ಚಿಕೊಂಡು ಹಜಾರದಲ್ಲಿ ಮಲಗಲು ಸಿದ್ಧತೆ ನಡೆಸಿದ್ದರು. ರಾಮಣ್ಣ ಮಂಜುಳೆಯನ್ನು ಕರೆದು ಅಡುಗೆ ಮನೆಯಲ್ಲಿಯೇ ಬಡಿಸಿಕೊಂಡು ಊಟ ಮಾಡಿದನು. ಹಜಾರಕ್ಕೆ ಬಂದು ಹುಡುಗರೊಟ್ಟಿಗೆ ಮಾತುಕತೆ ಆರಂಭಿಸಿದನು. ಹಿಂದಿನ ರಾತ್ರಿ ಬಂದಿದ್ದರೂ ನಾಗರಾಜನೊಂದಿಗೆ ಹೆಚ್ಚಿನ ಮಾತುಕತೆ ಸಾಧ್ಯವಾಗಿರಲಿಲ್ಲ. ಹೈಸ್ಕೂಲಿನ ಕೊನೆಯ ವರ್ಷಕ್ಕೆ ಬಂದಿದ್ದ ನಾಗರಾಜನಿಗೆ ಪಬ್ಲಿಕ್ ಪರೀಕ್ಷೆಗೆ ಹೆಚ್ಚಿನ ಶ್ರಮವಹಿಸುವುದು ಅಗತ್ಯವೆಂದು ಹೇಳಿದನು. ಅವನು ಓದಿನ ಕ್ರಮವನ್ನೂ, ಪಾಠಗಳಿಗೆ ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು ಎಂಬುದನ್ನೂ ಹೇಳಿದನು. ತಾನು ಯಾವ ರೀತಿ ಸಿದ್ಧತೆ ನಡೆಸುತ್ತಿದ್ದೆ, ಹೇಗೆ ಓದುತ್ತಿದ್ದೆ ಎಂಬುದನ್ನು ನೆನಪು ಮಾಡಿಕೊಂಡು ಮನೆಯ ಹಿರಿಯನಂತೆ ಅವನು ಹೇಳುತ್ತಾ ಇದ್ದುದನ್ನು ನಾಗರಾಜ ಶ್ರದ್ಧೆಯಿಂದ ಕೇಳಿದನು. ತಡರಾತ್ರಿ ಆಗಿದ್ದರಿಂದ ರಾಮಣ್ಣ ಮಲಗಲು ಹೋದನು. ಬೆಳಗ್ಗೆಯಿಂದ ಹೆಚ್ಚಿನ ತಿರುಗಾಟವಿಲ್ಲದೆ ಮನೆಯಲ್ಲಿಯೇ ಉಳಿದುಕೊಂಡಿದ್ದ ನಾಗರಾಜನಿಗೆ ನಿದ್ದೆ ಸರಿಯಾಗಿ ಆಗಲಿಲ್ಲ. ಮಧ್ಯರಾತ್ರಿಯಲ್ಲಿ ಯಾರೋ ಕಾಲ ಬಳಿ, ತಲೆದಸಿ ಓಡಾಟ ನಡೆಸಿದಂತೆ ಅರೆ ನಿದ್ದೆ, ಮಂಪರಿನಲ್ಲಿ ತೋರಿತ್ತು. ಹೊರಳಾಡುತ್ತಿದ್ದವನಿಗೆ ಬೆಳಗಿನ ಜಾವ ಒಳ್ಳೆ ನಿದ್ದೆಯಾಯಿತು. ರಾತ್ರಿ ಮಂಪರಿನಲ್ಲಿ ಯಾರೋ ಓಡಾಟ ನಡೆಸಿದ ನೆನಪು ಗಾಢನಿದ್ದೆಯಲ್ಲಿ ಮರೆಯಾಯಿತು.

ಬೆಳಗ್ಗೆ ನಾಗರಾಜ ಎಚ್ಚರವಾಗುವಾಗ ಪಕ್ಕದ ಕೋಣೆಯಲ್ಲಿ ಏನೋ ಗದ್ದಲ. ಗಾಬರಿಯ ಮಾತು. ಕಣ್ಣುಜ್ಜಿಕೊಂಡು ಎದ್ದವನು ನಿನ್ನೆಯೇ ಲಿಂಗರಾಜ ಸೂಚಿಸಿದ್ದಂತೆ ಹೊದಿಕೆಯನ್ನು ಮಡಿಚಿಟ್ಟು ಹಾಸುಗೆಯನ್ನು ಸುತ್ತಿ ಹಜಾರದ ಮೂಲೆಯಲ್ಲಿಟ್ಟನು. ಅಷ್ಟರಲ್ಲಿ ಕಮಲ ಮಲಗಿದ್ದ ಕೋಣೆಯಲ್ಲಿ ಎಲ್ಲರೂ ಸೇರಿದ್ದು ಕಂಡು ಬಂತು. ಅಲ್ಲಿಗೆ ಹೋದವನಿಗೆ ಕಂಡದ್ದು ಕಮಲಳ ಹಾಸುಗೆಯನ್ನು ಸುತ್ತುವರಿದಿದ್ದ ರಂಗೋಲಿ ಎಳೆ. ರಂಗೋಲಿ ಹಿಟ್ಟಿನಂತೆ ಕಂಡಿದ್ದರೂ ಅದು ಬೂದಿ ಎಂಬುದು ಹತ್ತಿರ ಹೋಗಿ ಪರೀಕ್ಷೆ ನಡೆಸಿದಾಗ ತಿಳಿಯಿತು. 'ರಾತ್ರಿ ನಾನೇ ಕಸ ಹೊಡೆದು ಹಾಸಿಗೆ ಹಾಕಿಕೊಂಡೆ. ಈ ರಂಗೋಲಿ ಹಿಟ್ಟು

ಎಲ್ಲಿಂದ ಬಂತು?' ಎಂದು ಕಮಲ ಕೇಳುತ್ತಿದ್ದಳು. 'ರಂಗೋಲಿ ಹಿಟ್ಟಲ್ಲ ನೋಡು. ಇದು ಬೂದಿ ತರ ಇದೆ' ಎಂದು ಮಗುವನ್ನು ಎತ್ತಿಕೊಂಡಿದ್ದ ಮಂಜುಳಾ ಹೇಳುತ್ತಿದ್ದಳು. ಈ ಗಲಾಟೆ ನಡೆದಿರುವಾಗ ಪಕ್ಕದ ಕೋಣೆಯಲ್ಲಿ ಮಲಗಿದ್ದ ರಾಮಣ್ಣ ಕಣ್ಣುಜ್ಜುತ್ತ ಎದ್ದು ಬಂದನು. ಅವನಿಗೂ ವಿಷಯ ಗೊತ್ತಾಯಿತು. 'ಇಷ್ಟಕ್ಕೆಲ್ಲ ಯಾಕೆ ಗಾಬರಿ ಆಗ್ತೀರಿ. ಗಾಳಿ ಕೆಲವೊಮ್ಮೆ ಲಯಬದ್ಧವಾಗಿ ಬೀಸಿದರೆ ದೂಳು ಅಲೆಯಂತೆ ಹರಡಿ ಚಿತ್ರ ಬಿಡಿಸಿದಂತೆ ಆಗುತ್ತೆ... ನಮಗೆ ವೈಜ್ಞಾನಿಕ ದೃಷ್ಟಿ ಬೇಕು. ಇಲ್ಲಸಲ್ಲದ ಕಲ್ಪನೆ ಮಾಡಿಕೊಳ್ಳಬೇಡಿ.. ರಂಗೋಲಿ ಹಾಕೋದರಲ್ಲಿ ಇವನು ನಿಷ್ಣಾತನಲ್ಲ. ಎಲ್ಲಾದರೂ ಕನಸಲ್ಲಿ ಎದ್ದು ರಂಗೋಲಿ ಹಿಟ್ಟನ್ನು ತೆಗೆದುಕೊಂಡೆಯಾ..?' ಎಂದು ಲಿಂಗರಾಜನತ್ತ ತಿರುಗಿದನು. ಮನೆ ಬಾಗಿಲಿಗೆ ರಂಗೋಲಿ ಹಾಕುತ್ತಾ ಇದ್ದುದೇ ಅಪರಾಧವಾಗಿ ಹೋಯಿತಲ್ಲ ಎಂದುಕೊಂಡ ಲಿಂಗರಾಜ ಗಾಬರಿಯಿಂದ 'ನಂಗೇನೂ ಗೊತ್ತಿಲ್ಲ ಚಿಕ್ಕಪ್ಪ. ನನಗೆ ಕಮಲಕ್ಕ ಕೂಗಿದಾಗಲೇ ಎಚ್ಚರವಾಗಿದ್ದು' ಎಂದನು. ಅಲ್ಲಿಯೇ ಮಂಚದ ಮೇಲೆ ಮಲಗಿದ್ದ ಮಂಜುಳೆಯ ಅಮ್ಮ 'ಇದೆಂಥ ರಾಮಾಯಣವೇ ಕೂಸೆ..' ಎಂದು ಕಮಲೆಯನ್ನು ಉದ್ದೇಶಿಸಿ ಹೇಳಿದರು. 'ಸಾಕು ಬಿಡಿ, ಏನೂ ಆಗಿಲ್ಲ. ಗಾಳಿಯಿಂದ ಹೀಗೆ ಆಗಿರಬಹುದು' ಎಂದು ರಾಮಣ್ಣ ನಿರ್ಣಾಯಕವಾಗಿ ಹೇಳಿದಾಗ ಎಲ್ಲರೂ ಚೆದುರಿದರು.

ಅದೇ ಚರ್ಚೆ ಬೆಳಗಿನ ಉಪಾಹಾರದ ಸಂದರ್ಭದಲ್ಲಿಯೂ ಬಂದಿತು. ರಾಮಣ್ಣ ಹನ್ನೊಂದರ ಸುಮಾರಿಗೆ ಕಾಲೇಜಿಗೆ ಹೊರಟನು. ಹೊರಡುವ ಮೊದಲು 'ನೀವು ಬೇಕಿದ್ದರೆ ಸಿದ್ಧಗಂಗೆಗೆ ಹೋಗಿ ಬರ್ರೊ' ಎಂದು ಪತ್ರಿಕೆಯ ಪುಟಗಳನ್ನು ಹಂಚಿಕೊಂಡು ಓದುತ್ತಿದ್ದ ಹುಡುಗರಿಗೆ ಹೇಳಿದನು. 'ಆಗಲಿ ಚಿಕ್ಕಪ್ಪ' ಎಂದನು ನಾಗರಾಜ. ರಾಮಣ್ಣ ಹೊರಡುತ್ತಲೇ 'ನಾವೂ ಮಠದ ಕಡೆ ಹೋಗಿ ಬರ್ತೀವಿ ಚಿಕ್ಕಮ್ಮ' ಎಂದು ಇಬ್ಬರೂ ತಯಾರಾದರು. ಮಂಜುಳ 'ನಿಲ್ರೋ' ಎನ್ನುತ್ತ ಕೋಣೆಯ ಒಳಗೆ ಹೋಗಿ ಹತ್ತು ರೂಪಾಯಿನ ಕೆಲವು ನೋಟುಗಳನ್ನು ಹಿಡಿದು ಬಂದಳು. 'ಇಕಾ.. ಏನಾದ್ರೂ ಬೇಕಾರೆ ತಗೊಳ್ಳಿ' ಎಂದು ಲಿಂಗರಾಜನಿಗೆ ಕೊಟ್ಟಳು. 'ಆಯ್ತು ಚಿಕ್ಕಮ್ಮ. ಬೇಗ ಬರ್ತೀವಿ' ಎನ್ನುತ್ತಾ ಇಬ್ಬರೂ ಮನೆಯಿಂದ ಹೊರಬಿದ್ದರು.

ಹುಡುಗರಿಬ್ಬರೂ ಕ್ಯಾತ್ಸಂದ್ರಕ್ಕೆ ನಡೆದುಕೊಂಡೇ ಸೇರಿದರು. ರಸ್ತೆಯಿಂದ ದೂರಕ್ಕೆ ಕಾಣುತ್ತಿದ್ದ ಮಠದ ಬಳಿ ಹೋದರು. ಅಲ್ಲಿ ಗುಂಪಾಗಿ ಹೋಗುತ್ತಿದ್ದ ಭಕ್ತರ ತಂಡದೊಂದಿಗೆ ಸೇರಿಕೊಂಡರು. ಸ್ವಾಮೀಜಿಯ ಕಚೇರಿಯನ್ನು ಬಿಟ್ಟು ಉಳಿದೆಲ್ಲ ಕಡೆ ಭಕ್ತರಂತೆ ಸುಳಿದಾಡಿದರು. ಸುತ್ತಾಟದಲ್ಲಿ ಹಸಿವಾಗಲು ರಸ್ತೆ ಬದಿ ಇದ್ದ ಹೋಟಲಿಗೆ ಹೋಗಿ ಒಂದೊಂದು ತಟ್ಟೆ ಇಡ್ಲಿ ತಿಂದರು. ಇಡ್ಲಿಯ ಗಾತ್ರ ನೋಡಿ 'ಊರಲ್ಲೂ ಹಿಂಗೇ ಮಾಡ್ತಿದ್ದರು' ಎಂದು ನಾಗರಾಜ ನೆನಪಿಸಿಕೊಂಡನು. ಅರ್ಧರ್ಧ ಕಾಫಿ ಕುಡಿದು ನಡೆದುಕೊಂಡೇ ಮನೆಗೆ ಬಂದರು. ಆಗಲೇ ಮಧ್ಯಾಹ್ನ ಮೂರು ಗಂಟೆ ಮೀರಿತ್ತು. ಮಂಜುಳ ಮಗುವನ್ನು ಮಲಗಿಸಿಕೊಂಡು ತಾನೂ ನಿದ್ದೆ ಹೋಗಿದ್ದಳು. ಹುಡುಗರಿಗೂ ಹೊಟ್ಟೆ ಹಸಿದಿತ್ತು. ಕಮಲ ಇಬ್ಬರಿಗೂ ಊಟ ಬಡಿಸಿದಳು. ಸಾರಿನ ಹೊಸ ರುಚಿಯನ್ನು ಆಸ್ವಾದಿಸುತ್ತಾ ಚೆನ್ನಾಗಿ ಊಟ ಮಾಡಿದ ನಾಗರಾಜ ಊಟದ ನಂತರ ತಾನೇ ಮುಂದಾಗಿ ಸಿಂಕಿನ ನಲ್ಲಿಯಿಂದ ನೀರು ಬಿಟ್ಟುಕೊಂಡು ತಟ್ಟೆಯನ್ನು ತೊಳೆದಿಟ್ಟನು. ತಮ್ಮ ಇರವು ಮನೆಯವರಿಗೆ ಕಿಂಚಿತ್ತೂ ತೊಂದರೆ ಮಾಡಬಾರದೆಂಬುದನ್ನು ಲಿಂಗರಾಜ ತನ್ನ ನಡವಳಿಕೆಯಿಂದ ತೋರಿಸಿದ್ದು ನಾಗರಾಜನಿಗೂ ಮನವರಿಕೆ ಆಗಿತ್ತು.

ರಾತ್ರಿಗೆ ಮೊದಲೇ ಬಂದ ರಾಮಣ್ಣ ಹುಡುಗರನ್ನು ಅಂದಿನ ತಿರುಗಾಟದ ಬಗ್ಗೆ ಕೇಳಿದನು. ಕ್ಯಾತ್ಸಂದ್ರಕ್ಕೆ ಹೋಗಿ ಬಂದುದನ್ನು ನಾಗರಾಜ ಬಣ್ಣಿಸಿದನು. ನಡೆದುಕೊಂಡೇ ಹೋಗಿ ಹಾಗೆಯೇ ವಾಪಸು

ಬಂದಿದ್ದನ್ನು ಅವನು ಹೇಳಿದಾಗ ರಾಮಣ್ಣ ‘ದೈಹಿಕ ಪರಿಶ್ರಮವನ್ನು ನಾವು ಮರೆತಿರುವುದೇ ಎಲ್ಲ ಸಾಮಾಜಿಕ ವ್ಯಾಧಿಗಳಿಗೂ ಮೂಲ’ ಎಂದನು. ‘ನಡೆದೇ ಹೋಗಿದ್ದೀರಿ ಅಂದರೆ ಐದಾರು ಕಿಲೋಮೀಟರ್ ಸುತ್ತಿದ್ದೀರಿ. ನಿಮ್ಮ ದೇಹದಿಂದ ಕನಿಷ್ಠ ಎರಡು ಸಾವಿರ ಕ್ಯಾಲೊರಿಗಳಷ್ಟು ಶಕ್ತಿ ವ್ಯಯವಾಗಿದೆ. ಬೆವರು ಸಾಕಷ್ಟು ಹರಿದಿದೆ. ಶ್ರಮ ಸಂಸ್ಕೃತಿ ಎಂದರೆ ದೇಹವನ್ನು ಸವೆಸುವುದು. ಅದನ್ನು ನೀವು ಇವತ್ತು ಮಾಡಿದ್ದೀರಿ’ ಎಂದು ತನ್ನ ವಾದವನ್ನು ವಿಸ್ತರಿಸಿದನು. ಚಿಕ್ಕಪ್ಪನ ಜೊತೆಗೆ ಮಾತಿಗೆ ನಿಂತರೆ ನಮ್ಮ ಸಮಾಜದ ಮೇಷ್ಟರ ಪಾಠಕ್ಕೆ ಕೂತಂತಾಗುತ್ತದೆ ಎಂದು ಮನಸ್ಸಿನಲ್ಲಿಯೇ ಅಂದುಕೊಂಡನು ನಾಗರಾಜ. ಲಿಂಗರಾಜನಿಗೆ ಅದೆಲ್ಲ ಅಭ್ಯಾಸವಾಗಿತ್ತು.

ಎಲ್ಲರ ಊಟವೂ ಮುಗಿದ ಮೇಲೆ ಅಡುಗೆ ಮನೆಯಲ್ಲಿ ಪಾತ್ರೆ ತೊಳೆಯಲು ಕಮಲ ಜೊತೆಗೆ ಮಂಜುಳೆಯೂ ಸೇರಿದಳು. ಅಕ್ಕ ತಂಗಿಯರಿಬ್ಬರೂ ಗೊಣ ಗೊಣ ಮಾತಾಡುತ್ತಾ ಕೆಲಸ ಮುಗಿಸಿದರು. ಹಜಾರದಲ್ಲಿಯೇ ರಾಮಣ್ಣ ಏನನ್ನೋ ಓದುತ್ತಿದ್ದ. ಮರುದಿನದ ಪಾಠಕ್ಕೆ ಸಿದ್ಧತೆ ಮಾಡುವುದು ಗೊತ್ತಿದ್ದ ಕಾರಣ ಅದನ್ನು ಲಕ್ಷಿಸದೆ ಹುಡುಗರಿಬ್ಬರೂ ಹಾಸುಗೆ ಹಾಸಿಕೊಂಡರು. ರಾಮಣ್ಣ ಓದುತ್ತಾ ಇರುವುದನ್ನು ಗಮನಿಸುತ್ತಾ ತನ್ನ ಕೋಣೆ ಹೊಕ್ಕ ಕಮಲ ಬಾಗಿಲನ್ನು ಮುಕ್ಕಾಲು ತೆರೆದೇ ಇಟ್ಟು ಹಾಸುಗೆ ಹಾಕಿಕೊಂಡಳು. ಕೋಣೆಯ ದೀಪವನ್ನೂ ಆರಿಸಿದಳು. ಸ್ವಲ್ಪ ಹೊತ್ತಿಗೆಲ್ಲ ಅವಳ ಕೋಣೆಯಿಂದ ಸಣ್ಣ ಗೊರಕೆಯ ಸದ್ದೂ ಲಯಬದ್ಧವಾಗಿ ಕೇಳಿಸಿತು. ದಿನವಿಡೀ ತಿರುಗಾಟದಿಂದ ಆಯಾಸಗೊಂಡಿದ್ದ ಹುಡುಗರಿಬ್ಬರಿಗೂ ದಿಂಬಿಗೆ ತಲೆ ಇಟ್ಟ ತಕ್ಷಣವೇ ನಿದ್ದೆ ಆವರಿಸಿತು. ಪುಸ್ತಕವನ್ನು ಮುಚ್ಚಿದ ರಾಮಣ್ಣ ಹುಡುಗರಿಬ್ಬರನ್ನೂ ನೋಡಿ ಹಜಾರದ ದೀಪ ಆರಿಸಿ ಕೋಣೆಗೆ ಹಿಂತಿರುಗಿದ್ದು ಗಾಢನಿದ್ದೆಯಲ್ಲಿದ್ದ ಹುಡುಗರ ಗಮನಕ್ಕೆ ಬರಲಿಲ್ಲ.

ಒಂದು ಹೊತ್ತಿನಲ್ಲಿ ಪಕ್ಕದ ಕೋಣೆಯಲ್ಲಿ ದಡಬಡ ಸದ್ದಾಯಿತು. ನಾಗರಾಜನಿಗೆ ಬಡಿದೆಬ್ಬಿಸಿದಂತೆ ಎಚ್ಚರವಾಯಿತು. ಕಮಲ ಮಲಗಿದ್ದ ಕೋಣೆಯಲ್ಲಿ ರಪ್ಪರಪ್ಪನೆ ಬಾರಿಸುತ್ತಿದ್ದ ಸದ್ದು. ಕಳ್ಳ ಕಳ್ಳ ಎಂಬ ಕೂಗಿನೊಂದಿಗೆ ಬೀಳುತ್ತಿದ್ದ ಏಟಿನ ಸದ್ದಿಗೆ ಎಚ್ಚರಗೊಂಡ ನಾಗರಾಜನೂ ಹಜಾರದ ಮೂಲೆಯಲ್ಲಿ ಒರಗಿಸಿ ಇಟ್ಟಿದ್ದ ಬಟ್ಟೆ ಹರವಲು ಬಳಸುವ ಉದ್ದನೆಯ ಕೋಲನ್ನು ಹಿಡಿದು ನುಗ್ಗಿದನು. ಹೊದಿಕೆಯ ಮುಸುಕು ಹೊದ್ದು ಬಿದ್ದಿದ್ದ ಆಕೃತಿಗೆ ಕಮಲ, ಲಿಂಗರಾಜು ಇಟ್ಟುಕೊಂಡಿದ್ದ ಮರದ ಬ್ಯಾಟಿನಿಂದ ಬಡಿಯುತ್ತಿದ್ದಳು. ಅದು ಹೊರಳಾಟ ನಡೆಸುತ್ತಿದ್ದಾಗಲೇ ಪಕ್ಕದ ಕೋಣೆಯಿಂದ ಮಂಜುಳೆಯೂ ಬಂದಳು. ಕೋಣೆಯ ದೀಪ ಹಾಕಿ ಕೆಳಕ್ಕೆ ಬಿದ್ದಿದ್ದ ಮನುಷ್ಯಾಕೃತಿಯ ಮೇಲೆ ದೊಣ್ಣೆಯಿಂದ ಇನ್ನಷ್ಟು ಹಾಕಿ ಮುಸುಕನ್ನು ತೆಗೆದರೆ ಕಂಡದ್ದು ರಾಮಣ್ಣ. ಎಲ್ಲರಿಗೂ ಆಘಾತವಾಗಿ ಯಾರಿಗೂ ಮಾತು ಹೊರಡದಾಯಿತು. ಮಂಜುಳ ಧೈರ್ಯ ವಹಿಸಿ ‘ಏನರೀ ಇದು. ಇಲ್ಯಾಕೆ ಕಳ್ಳರ ಹಾಗೆ ಬಂದಿದ್ರಿ. ಏನು ಮಾಡಬೇಕೂ ಅಂತ ಬಂದಿದ್ರಿ’ ಎಂದು ಗಟ್ಟಿಸಿ ಕೇಳಿದಾಗ ರಾಮಣ್ಣ ಪ್ರತಿಯಾಗಿ ಏನನ್ನೂ ಹೇಳದೆ ಬ್ಯಾಟಿನಿಂದ ಬಿದ್ದ ಏಟುಗಳಿಗೆ ನರಳುತ್ತಾ ಹಜಾರಕ್ಕೆ ಬಂದು ಕುಂಟುತ್ತಾ ಕೋಣೆಗೆ ಹೊಕ್ಕನು. ಅದನ್ನು ಬೆರಗಿನಿಂದ ನೋಡುತ್ತಾ ಹುಡುಗರಿಬ್ಬರೂ ಪರಸ್ಪರ ಮುಖ ನೋಡಿಕೊಂಡರು.

ಕಮಲ ತಾನೇ ನಡೆದ ಘಟನೆಯ ವಿವರ ನೀಡಿದಳು. ನಿನ್ನೆ ಅವಳ ಹಾಸುಗೆಯ ಸುತ್ತ ಬಿದ್ದಿದ್ದ ಬೂದಿ ರಂಗೋಲಿಯ ಹಿಂದೆ ಮನೆಯವರದೇ ಕೈವಾಡ ಇರಬಹುದೆಂದು ಶಂಕಿಸಿದ್ದಳಂತೆ. ಅದಕ್ಕೆ ನಿದ್ದೆ ಬಂದಂತೆ ನಟಿಸುತ್ತಾ ಗೊರಕೆಯ ಸದ್ದು ಹೊರಡಿಸುತ್ತಿದ್ದಾಗ ರಾತ್ರಿ ಕತ್ತಲಿನಲ್ಲಿ ಬಾಗಿಲನ್ನು ಪೂರ್ತಿ ಸರಿಸಿ ಯಾರೋ ಬಂದಂತಾಯಿತಂತೆ. ಬಂದವರು ಹಾಸುಗೆಯ ಕಾಲಬಳಿ ಸುಳಿದದ್ದನ್ನು ಶಂಕಿಸಿದವಳೇ ದಿಗ್ಗನೆ

ಎದ್ದು ಹೊದ್ದುಕೊಂಡಿದ್ದ ಹೊದಿಕೆಯನ್ನು ಬಂದವರ ಮುಖದ ಮೇಲೆ ಎಸೆದು ಹಾಸುಗೆ ಪಕ್ಕದಲ್ಲಿ ಇಟ್ಟುಕೊಂಡಿದ್ದ ಬ್ಯಾಟಿನಿಂದ ಬಾರಿಸಿದಳಂತೆ. 'ಕಳ್ಳ... ಕಳ್ಳ' ಅಂತ ಕೂಗಿದ್ದರಿಂದ ಉಳಿದವರೂ ಬಂದರು. ಕಳ್ಳನಂತೆ ಬಂದಿದ್ದ ಬಾವ ಸಿಕ್ಕಿಬಿದ್ದರು. 'ಅಲ್ಲ.. ಹಿಂಗ್ಯಾಕೆ ಬಾವ ಮಾಡಿದರು' ಎಂದು ಅವಳು ಅಮಾಯಕತೆಯಿಂದ ಕೇಳಿದಳು. 'ಅದನ್ನೇ ಈಗ ಕೇಳಬೇಕು' ಎನ್ನುತ್ತಾ ಮಂಜುಳಾ ಕೋಣೆಗೆ ಹಿಂತಿರುಗಿದಳು. ಕೋಣೆ ಪ್ರವೇಶಿಸುವಾಗ ಹುಡುಗರಿಬ್ಬರತ್ತ ತಿರುಗಿ ಎಲ್ಲಿಯೂ ಬಾಯಿ ಬಿಡದಂತೆ ಬಾಯಲ್ಲಿ ಬೆರಳಿಟ್ಟು ದೊಡ್ಡದಾಗಿ ಕಣ್ಣು ಬಿಟ್ಟಳು. ನಡೆದ ಘಟನೆಯಿಂದ ಆಘಾತಗೊಂಡಿದ್ದ ಹುಡುಗರು ತಲೆಯಲ್ಲಾಡಿಸಿ ಮೌನ ಸಮ್ಮತಿ ನೀಡಿದರು.

ರಾತ್ರಿ ಆದ ಘಟನೆಯಿಂದ ನಾಗರಾಜನಿಗೆ ಆಘಾತವಾಗಿತ್ತು. ಅದರ ಪರಿಣಾಮ ಬೆಳಗ್ಗೆಯೂ ಅವನಲ್ಲಿ ಉಳಿದಿತ್ತು. ಎಂದಿನಂತೆ ಎದ್ದು ಹೊದಿಕೆಯನ್ನು ಮಡಿಚಿ ಹಾಸುಗೆ ಸುತ್ತಿಟ್ಟ. ಕಮಲಕ್ಕ ಎದುರು ಬಂದಾಗ ಅವಳಿಗೆ ಮುಖ ಕೊಟ್ಟು ಮಾತಾಡುವುದಕ್ಕೆ ಕಷ್ಟವಾಯಿತು. ಘಟನೆಯ ನಂತರ ತಮ್ಮತ್ತ ಕಣ್ಣರಳಿಸಿದ್ದ ಚಿಕ್ಕಮ್ಮನತ್ತ ನೋಡುವುದಕ್ಕೂ ಭಯವಾಯಿತು. ಎದ್ದವನು ನಿತ್ಯ ವಿಧಿಗಳತ್ತವೂ ಗಮನ ಕೊಡದೆ ಆ ವೇಳೆಗೆ ಬಂದಿದ್ದ ಪತ್ರಿಕೆಯನ್ನು ನೋಡತೊಡಗಿದ. ಇಂಥ ಘಟನೆಗಳನ್ನು ಕಂಡಿದ್ದ ಲಿಂಗರಾಜನಿಗೆ ನಿನ್ನೆಯ ಪ್ರಸಂಗ ಅತಿರೇಕದ್ದೆನಿಸಿತ್ತು. ಅವನು ನಾಗರಾಜನಂತೆ ಆಘಾತಗೊಳ್ಳದೆ ಎಂದಿನಂತೆ ಎದ್ದು ನಿತ್ಯವಿಧಿಗಳನ್ನು ಪೂರೈಸಲು ಶೌಚಾಲಯ ಪ್ರವೇಶಿಸಿದನು. ಕಮಲ ಎದ್ದು ಆಗಲೇ ಅಡುಗೆ ಮನೆ ಸೇರಿದ್ದಳು. ಮಂಜುಳ ಅಳುತ್ತಿದ್ದ ಮಗುವನ್ನು ಸಂಭಾಳಿಸುತ್ತಾ ಕೋಣೆಯಲ್ಲಿಯೇ ಉಳಿದಿದ್ದಳು.

ಅಡುಗೆ ಮನೆಯಿಂದ ಹೊರಬಂದ ಕಮಲ 'ನಾಗ್ರಾಜ. ಮುಖ ತೊಳ್ಕಾ.. ಕಾಫಿ ಕೊಡ್ತಿ' ಎಂದಳು. ಮನೆಯಲ್ಲಿ ಏನೂ ನಡೆದಿಲ್ಲ ಎಂಬಂತೆ ಅವಳು ವರ್ತಿಸಿದ್ದು ನಾಗರಾಜನಿಗೆ ವಿಸ್ಮಯ ಮೂಡಿಸಿತು. 'ಆಯ್ತಕ್ಕ..' ಎಂದವನು ತಂದಿದ್ದ ಕೈಚೀಲದಲ್ಲಿದ್ದ ಬ್ರಶ್ ಹಿಡಿದು ಬಚ್ಚಲು ಮನೆ ಹೊಕ್ಕನು. ಅಲ್ಲಿಯೇ ದೊಡ್ಡದೊಂದು ಪೇಸ್ಟ್ ಇದ್ದುದನ್ನು ನಿನ್ನೆಯೇ ನೋಡಿದ್ದನು. ಅವನು ಹಲ್ಲುಜ್ಜಿ ಮುಖ ತೊಳೆದುಕೊಂಡು ಹೊರಬಂದಾಗ ಕೋಣೆಯಲ್ಲಿ ರಾಮಣ್ಣನೊಂದಿಗೆ ಚಿಕ್ಕಮ್ಮನ ಜೋರು ಬಾಯಿ ನಡೆದಿತ್ತು. 'ಇದೆಂಥ ಬೂಟಾಟಿಕೆ ನಿಮ್ದು. ಮಾತಲ್ಲಿ ಮಾತ್ರ ವೈಚಾರಿಕತೆ ಅಂತೆ, ವೈಜ್ಞಾನಿಕ ದೃಷ್ಟಿ...ಕೋಣವಂತೆ, ಎಮ್ಮೆಯಂತೆ. ಇಲ್ಲಿ ನೋಡಿದರೆ ಯಾರೋ ಮಲೆಯಾಳಿ ಮಾಂತ್ರಿಕ ಹೇಳ್ದ ಅಂತ ಬೂದಿ ಹಾಕಿ ಅವಳ ವಶೀಕರಣಕ್ಕೆ ಹೋಗಿದ್ದೀರಲ್ಲ.. ನಾಚಿಕೆ ಆಗಲ್ವಾ.. ಥೂ ನಿಮ್ಮ ಜನ್ಮಕ್ಕೆ' ಎಂದು ಹೇಳಿದ್ದು ಸ್ಪಷ್ಟವಾಗಿ ಕೇಳಿಸಿತು. ಅದಕ್ಕೆ ರಾಮಣ್ಣ 'ನೋಡೂ... ನಾನು ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯ... ಮೆತ್ತಗೆ ಕಾಣ್ತೇನಿ ಅಷ್ಟೆ. ಆದರೆ ನಾನು ಬೆಂಕಿ, ಜ್ವಾಲಾಮುಖಿ.. ಗೊತ್ತಾ..' ಎಂದು ಪ್ರತಿಯಾಗಿ ಹೇಳಿದನು. 'ಗೊತ್ತಿರಲಿಲ್ಲ ಬಿಡಿ. ನೀವು ಬೆಂಕಿ ಅಂತ. ಇನ್ನು ಮೇಲಾದ್ರೂ ಹುಷಾರಾಗಿ ಇರ್ತೀನಿ. ಅವಳಿಗೂ ಹೇಳ್ತೀನಿ..' ಎಂದು ಮಂಜುಳ ಹೇಳುತ್ತಾ ಮಗುವನ್ನು ಎತ್ತಿಕೊಂಡು ಕೋಣೆಯಿಂದ ಹೊರಬಂದರು.

ಅದುವರೆಗೆ ಒಂದೂ ಮಾತನಾಡದೆ ಇದ್ದ ಮಂಜುಳೆಯ ತಾಯಿ ಕೋಣೆಯ ಒಳಗಿನಿಂದಲೇ 'ಇದೆಂಥ ಖರ್ಮ ತಾಯಿ.. ಏನೋ ದೊಡ್ಡ ಮನುಷ್ಯ ಅಂದುಕೊಂಡಿದ್ದೆ... ಕಾಲೇಜು ಮೇಷ್ಟ್ರು. ಪಿಚ್ಚರು ತೆಗೀತಾನೆ ನಮ್ಮ ಅಳಿಯ ಅಂತ ನಾನು ಹೇಳಿದ್ದೇ ಬಂತು. ಇಲ್ಲಿ ನೋಡಿದ್ರೆ ನಾದಿನಿಗೇ ವಶೀಕರಣ ಮಾಡೋ ನೀಚತನಕ್ಕೆ ಇಳಿದನಲ್ಲ...' ಎಂದು ತಮ್ಮಷ್ಟಕ್ಕೆ ಎಂಬಂತೆ ಗಟ್ಟಿಯಾಗಿಯೇ ಹೇಳಿಕೊಂಡರು. ರಾಮಣ್ಣ ಅವರಿಗೆ ಬದಲು ಕೊಡಲು ಹೋಗಲಿಲ್ಲ. ಕೋಣೆಯಿಂದ ಹೊರಬಂದು ಅಲ್ಲಿ ಕುರ್ಚಿಯ ಮೇಲೆ

ಬಿದ್ದಿದ್ದ ಪತ್ರಿಕೆಯನ್ನು ಎತ್ತಿಕೊಂಡ. ಹೆಂಗಸರಿಬ್ಬರ ಜೋರು ಮಾತು ತನ್ನಲ್ಲಿ ಯಾವ ಪರಿಣಾಮವನ್ನೂ ಬೀರಿಲ್ಲ ಎಂಬುದನ್ನು ತೋರಿಸಲೋ ಎಂಬಂತೆ ಚಾಪೆಯ ಮೇಲೆ ಕುಳಿತು ಪುಸ್ತಕ ಜೋಡಿಸುತ್ತಿದ್ದ ಲಿಂಗರಾಜನನ್ನು ಉದ್ದೇಶಿಸಿ 'ನಿನಗೆ ರಜೆ ಸುರು ಆಗಿದೆಯಲ್ಲ.. ಹೆಂಗೂ ನಾಗ್ರಾಜ ಬಂದಿದಾನಲ್ಲ. ಹೋಗಾದಾದ್ರೆ ಹೊರಟು ಬಿಡಿ ಇಬ್ಬರೂ. ಇವತ್ತೋ.. ನಾಳೆಯೋ...' ಎಂದ. 'ಮತ್ತೆ ಮರೆತು ಹೋಗಬಹುದು' ಎಂದು ತನ್ನಷ್ಟಕ್ಕೆ ಹೇಳಿಕೊಳ್ಳುತ್ತಾ ಎದ್ದು ಕೋಣೆಗೆ ಹೋಗಿ ಪರ್ಸ್ ಹಿಡಿದು ಹೊರಬಂದವನು ಇಬ್ಬರಿಗೂ ಆಗುವಷ್ಟು ಬಸ್ ಚಾರ್ಜಿನ ಹಣ ಕೊಟ್ಟ.

ಚಿಕ್ಕಪ್ಪ ಅಷ್ಟು ಹೇಳಿ ಹಣ ಕೊಡುತ್ತಲೂ ಉತ್ಸಾಹದಿಂದ ಎದ್ದ ಲಿಂಗರಾಜ ಹಜಾರದಲ್ಲಿ ಗೋಡೆಗೆ ಹೊಡೆದಿದ್ದ ಗಡಿಯಾರ ನೋಡಿದ. ಆಗಲೇ ಎಂಟು ಗಂಟೆ ಮೀರಿತ್ತು. 'ಈಗ ಹೊಂಟ್ರೆ ನಾಕು ಗಂಟೆಗೆ ಶಿಮೊಗ್ಗ ಸೇರಬಹುದು' ಎಂದು ನಾಗರಾಜನತ್ತ ನೋಡಿದ. ಉಸಿರುಕಟ್ಟುವ ಸ್ಥಿತಿ ಅನುಭವಿಸುತ್ತಿದ್ದ ನಾಗರಾಜ ತಕ್ಷಣಕ್ಕೆ 'ಹಂಗಾದ್ರೆ ಈಗಲೇ ಹೊಂಟು ಬಿಡಾನ. ಸಿಮೊಗ್ಗ ಸೇರಿದ್ರೆ ಅಲ್ಲಿಂದ ಹೆಂಗಾದ್ರೂ ಊರು ಸೇರಬಹುದು' ಎಂದು ಉಲ್ಲಸಿತನಾದ. ಇಬ್ಬರ ನಿತ್ಯದ ವಿಧಿಗಳೂ ಮುಗಿದಿದ್ದವು. ನಾಗರಾಜನ ಕೈ ಚೀಲ ಇತ್ತು. ಲಿಂಗರಾಜ ವರ್ಷಗಳ ಹಿಂದೆ ರಾಮಣ್ಣ ಕೊಟ್ಟಿದ್ದ ಚರ್ಮದಂತೆ ಕಾಣುವ ಚೀಲದಲ್ಲಿ ತನ್ನ ಬಟ್ಟೆಗಳನ್ನು ತುರುಕಿಕೊಂಡ. ರಜೆಯಲ್ಲಿ ಓದಲು ಆಗುವುದಿಲ್ಲ ಎಂದು ಗೊತ್ತಿದ್ದರೂ ವಿದ್ಯಾರ್ಥಿಯ ಲಕ್ಷಣವನ್ನು ಪ್ರದರ್ಶಿಸುವಂತೆ ಎರಡು ಕಥೆ ಪುಸ್ತಕಗಳನ್ನು ತುಂಬಿಕೊಂಡ. ಅವರ ತಯಾರಿಯನ್ನು ಗಮನಿಸಿದ ಕಮಲ ಇಬ್ಬರಿಗೂ ಚಪಾತಿ ಹಾಕಿಕೊಟ್ಟಳು. ತಿಂಡಿ ತಿಂದು ಕಾಫಿ ಕುಡಿದವರು ಅವಸರದಿಂದ ಬಸ್ ನಿಲ್ದಾಣದತ್ತ ಹೊರಡಲು ಸಿದ್ಧರಾದರು. ರಾಮಣ್ಣ ಇಬ್ಬರ ತಯಾರಿ ನೋಡುತ್ತಲೇ ತನ್ನ ನಿತ್ಯದ ವಿಧಿಗಳನ್ನೂ ಪೂರೈಸಿದ. ಅವನು ಸಿದ್ಧನಾಗಿ ಬರುತ್ತಿದ್ದಂತೆ ಕಮಲ ಅವನಿಗೂ ಚಪಾತಿ ಹಾಕಿದಳು. ಮನೆಯಲ್ಲಿ ಸಹಜ ಸ್ಥಿತಿ ಉಂಟಾಗಿದ್ದು ನಾಗರಾಜನಿಗೆ ವಿಶೇಷ ಅನ್ನಿಸಿತು. ಇಬ್ಬರೂ ಕೈ ಚೀಲಗಳನ್ನು ಹಿಡಿದು 'ಹೋಗಿ ಬತ್ತೀವಿ' ಎಂದು ಎಲ್ಲರಿಗೂ ಹೇಳಿ ಮನೆಯಿಂದ ರಸ್ತೆಗೆ ಇಳಿದರು. 'ಹುಷಾರು ಕಣ್ರೋ' ಎಂದು ಕೋಣೆಯೊಳಗಿಂದ ಮಂಜುಳೆಯ ಎಚ್ಚರಿಕೆಯ ಮಾತು ಕೇಳಿಸಿಕೊಂಡು 'ಆಯ್ತು ಚಿಕ್ಕಮ್ಮ' ಎಂದು ತಿರುಗಿ ಹೇಳಿ ಬಿರುಸಿನಿಂದ ಹೆಜ್ಜೆ ಹಾಕಿದರು.

ಬಸ್ ನಿಲ್ದಾಣ ಸೇರುವವರೆಗೆ ಯಾರೂ ಮಾತನಾಡಲಿಲ್ಲ. ಅಲ್ಲಿ ಬಂದರೆ ಕೆಂಪು ಬಸ್ಸು ನಿಂತಿತ್ತು. 'ಇದು ಕೈ ಅಡ್ಡ ಹಾಕಿದಲ್ಲೆಲ್ಲ ನಿಲ್ಲುತ್ತೆ ಮಾರಾಯ' ಎಂದು ಲಿಂಗರಾಜ ಹೇಳಿ ಎಕ್ಸ್‌ಪ್ರೆಸ್ ಬಸ್ಸಿಗೆ ಇಲ್ಲವೇ ರಾಜಹಂಸದಂಥ ಲಕ್ಷುರಿ ಬಸ್ಸಿಗೆ ಹೋಗುವ ಇಂಗಿತ ವ್ಯಕ್ತಪಡಿಸಿದ. 'ಎಲ್ಲ ಊರಲ್ಲೂ ನಿಲ್ಲುತ್ತಲ್ಲ, ಊರು ನೋಡ್ಕಂಡು ಹೋದಂಗಾಗುತ್ತೆ.. ಇದರಲ್ಲೇ ಹೋಗಾನ..' ಎಂದು ನಾಗರಾಜ ಹೇಳಿದಾಗ ಲಿಂಗರಾಜನಿಗೆ ಸಮ್ಮತವಾಯಿತು. 'ಆಯ್ತು ನಡಿ' ಎಂದು ತಾನೇ ಮುಂದೆ ಹತ್ತಿ ಮುಂದುಗಡೆ ಸೀಟು ಹಿಡಿದ. ಎರಡು ಸೀಟುಗಳ ಆಸನದಲ್ಲಿ ಇಬ್ಬರೂ ಆರಾಮಾಗಿ ಕುಳಿತುಕೊಂಡು ನಿಡಿದಾಗಿ ಉಸಿರು ಎಳೆದುಕೊಂಡರು.

ಕಂಡಕ್ಟರು ಬಂದು ಟಿಕೆಟ್ ಪಡೆದಾದ ಮೇಲೆ ಇನ್ನಷ್ಟು ನಿರಾಳವಾದರು. ಬಸ್ಸು ನಿಲ್ದಾಣದಿಂದ ಹೊರಡುತ್ತಲೂ ನಾಗರಾಜ ಹಲವು ಗಂಟೆಗಳಿಂದ ತಡೆದುಕೊಂಡಿದ್ದ 'ಇದೆಂಥ ಗೋಳೋ ಲಿಂಗ್ರಾಜ. ಮೂರು ವರ್ಷದಿಂದ ಇದೀಯಲ್ಲ. ಯಾವಾಗ್ಲೂ ಹಿಂಗೇನ ಚಿಕ್ಕಪ್ಪ. ಅಲ್ಲ, ನಾವು ಬಂದಾಗ ಮೊದಲನೇ ಸಲ ಈ ತರ ಆಯ್ತು..?' ಎಂದ.

‘ಅವೆಲ್ಲ ಏನು ಕೇಳ್ತೀಯ.. ದಿನ ಇಂಥವೇ ಇರ್ತವೆ. ಕೆಲವು ವಾರ ಏನೂ ಇರಲ್ಲ. ಚಿಕ್ಕಪ್ಪ ತುಂಬ ಗಂಭೀರವಾಗಿ ಏನಾದ್ರೂ ಬರೆಯೋದಕ್ಕೆ ಕುಳಿತ ಅಂದ್ರೆ ಯಾರೂ ಗಲಾಟೆ ಮಾಡಂಗಿಲ್ಲ. ಪತ್ರಿಕೆಗೆ ಬರಿಯೋದು ಅಂದ್ರೆ ಹುಡುಗಾಟನಾ ಅಂತ ಅವನು ಚಿಕ್ಕಮ್ಮನಿಗೆ ಜೋರು ಮಾಡಿದ್ರೆ ಮನೆಯೆಲ್ಲ ಗಪ್ ಚುಪ್ ಆಗಿರುತ್ತೆ. ಕಾಲೇಜಿಗೆ ಪಾಠ ಮಾಡಾದಕ್ಕೆ ಹೋಗ್ತಾನಲ್ಲ, ಅದಕ್ಕೂ ಓದಿಕೊಂಡೇ ಹೋಗ್ತಾನೆ. ಒಳ್ಳೇ ಮೇಷ್ಟ್ರಂತೆ. ತುಂಬಾ ಚೆನ್ನಾಗಿ ಪಾಠ ಮಾಡ್ತಾನಂತೆ. ಆದರೆ ಇಂಥವೆಲ್ಲ ಮನೇಲಿ ನಡೀತಾನೆ ಇರ್ತವೆ. ಕಮಲಕ್ಕನ ವಿಷಯದಲ್ಲೇ ಜಾಸ್ತಿ ಜಗಳಾ ನಡಿಯೋದು..’ ಎಂದ ಲಿಂಗರಾಜ. ಬಸ್ಸಿನ ಓಡಾಟದ ಸದ್ದಿನ ಮಧ್ಯೆ ಅವನು ನಾಗರಾಜನ ಕಿವಿಯ ಬಳಿಯೇ ಹೇಳುತ್ತಾ ಇದ್ದುದರಿಂದ ಅದೆಲ್ಲ ಸ್ಪಷ್ಟವಾಗಿಯೇ ಕೇಳಿಸಿತ್ತು. ಪತ್ರಿಕೆಗಳಲ್ಲಿ ಬರುತ್ತಿದ್ದ ಚಿಕ್ಕಪ್ಪನ ಕತೆಗಳ ಬಗ್ಗೆ ಕುತೂಹಲ ತಾಳಿದ್ದ ನಾಗರಾಜನಿಗೆ ಮನೆಯಲ್ಲಿ ನಡೆದ ಘಟನೆಯನ್ನು ನಿಜವೆಂದು ಒಪ್ಪಿಕೊಳ್ಳುವುದಕ್ಕೆ ಕಷ್ಟವಾಗಿತ್ತು.

‘ಅಲ್ಲ ಮಾರಾಯ, ಊರಲ್ಲಿ ಎಂಥಾ ಮರ್ಯಾದೆ ಇದೆ, ಹಳ್ಳೂರು ರಾಮಣ್ಣ ಅಂದ್ರೆ. ನಮ್ಮ ಕಡೆ ಹೀಗೆ ಕತೆ ಬರೆದು ಸಿನಿಮಾ ಮಾಡೋರೇ ಇಲ್ಲ. ಅವನ ಕತೆ ಪೇಪರಲ್ಲಿ ಬಂದ ಮಾರನೇ ದಿನ ನಮ್ಮ ಸ್ಕೂಲಲ್ಲಿ ನನಗೆ ಮೇಷ್ಟ್ರು ಕರೆದು ‘ನಿಮ್ಮ ಚಿಕ್ಕಪ್ಪನ ಕತೆ ಬಂದಿದೆ ಕಣೋ ನಿನ್ನೆ ಪೇಪರ್‍ನಲ್ಲಿ. ಒಂದು ಪೇಪರ್ ಕೊಂಡು ಕೊಂಡು ಹೋಗಿ ಮನೇಲಿ ತೋರ್‍ಸು’ ಅಂತ ಹೇಳ್ತಾರೆ. ನನಗೂ ಒಂದು ತರಾ ಹೆಮ್ಮೆ. ಈಚೆಗೆ ಅವನ ಪಿಚ್ಚರ್‌ಗೆ ಒಂದು ಅವಾರ್ಡು ಬಂತಲ್ಲ, ಅವತ್ತು ಪ್ರೇಯರ್ ಆಗ್ತಿದ್ದಂಗೆ ನಮ್ಮ ಇಂಗ್ಲಿಷ್ ಮೇಷ್ಟ್ರು ‘ನೋಡಿ, ನಮ್ಮ ಜಿಲ್ಲೆ ರಾಮಣ್ಣೋರು ತೆಗೆದ ಪಿಚ್ಚರ್‌ಗೆ ಅವಾರ್ಡ್ ಬಂದಿದೆ. ಇದು ನಾವೆಲ್ಲ ಸಂಭ್ರಮ ಪಡೋ ವಿಷಯ’ ಅಂತ ಹೇಳಿ ಹುಡುಗರಿಂದ ಚಪ್ಪಾಳೆ ಹೊಡೆಸಿದ್ದರು. ಅವಾಗಲೇ ‘ಅವರ ಅಣ್ಣನ ಮಗ ಇಲ್ಲೇ ಇದಾನೆ ನೋಡಿ’ ಅಂತ ನನ್ನನ್ನು ತೋರಿಸಿದ್ದರು. ಹುಡುಗರು ಅದಕ್ಕೂ ಚಪ್ಪಾಳೆ ಹೊಡೆದಿದ್ದರು. ಎಷ್ಟು ಮರ್ಯಾದೆ ಅಲ್ಲವ..’ ಎಂದು ಹೇಳಿದ.

ಹೈಸ್ಕೂಲಿನ ಕೊನೆಯ ವರ್ಷದಲ್ಲಿದ್ದರೂ ಹಳ್ಳಿಗಾಡಿನ ಹಿನ್ನೆಲೆಯ ಕಾರಣ ಸಿನಿಮಾ ಪ್ರಪಂಚದ ವಿದ್ಯಮಾನಗಳಿಗೆ ಸಂಪೂರ್ಣ ಅಪರಿಚಿತನೇ ಆಗಿದ್ದ ನಾಗರಾಜನಿಗೆ ಅವಾರ್ಡು ಗಳಿಸಿದ ಸಿನಿಮಾ ಹೇಗೆ ಇರುತ್ತದೆ ಎಂಬುದೂ ಕಲ್ಪನೆಗೆ ಮೀರಿದ ಸಂಗತಿಯಾಗಿತ್ತು. ಅದನ್ನೇ ಲಿಂಗರಾಜನಲ್ಲಿ ಹೇಳಿದ.

‘ಅಲ್ಲೋ.. ಅವನ ಒಂದೂ ಸಿನಿಮಾ ನೀನೂ ನೋಡಿಲ್ಲ ಅಂತೀಯ. ಆದರೆ ಅವನು ತೆಗೆದ ಮೂರೂ ಸಿನಿಮಾಗಳಿಗೂ ಅವಾರ್ಡ್ ಬಂದಿದಾವಲ್ಲ. ಇದೆಲ್ಲ ಹೆಂಗೆ ಅಂತ ನಂಗಂತೂ ಗೊತ್ತಾಗದಿಲ್ಲ.. ಹೆಂಗೆ?’

‘ಅದೂ ನಂಗೂ ಸರಿಯಾಗಿ ಗೊತ್ತಿಲ್ಲ. ಆದರೆ ಒಂದು ಸಿನಿಮಾ ತೆಗೆದು ಮುಗಿಸಿದ ಮೇಲೆ ಬೆಂಗಳೂರಿಗೆ ಹೋಗಿ ಎರಡು ವಾರ ಇರ್ತಾನೆ. ಬಂದ ಮೇಲೆ ‘ಕಮಿಟಿ ಮೆಂಬರುಗಳನ್ನ ನೋಡಿ ಬಂದೆ. ನಮಗೆ ಬೇಕಾದವರೇ ಇದ್ದಾರೆ’ ಅಂತೆಲ್ಲ ಹೇಳೋನು. ಅದಾಗಿ ಎರಡು ಮೂರು ತಿಂಗಳಲ್ಲಿ ಅವಾರ್ಡು ಅಂತ ಪೇಪರ್‌ನಲ್ಲಿ ಬರೋದು. ಹಂಗೆ ಬಂದಾಗಲೆಲ್ಲ ಪತ್ರಿಕೆಯೋರು ಬಂದು ಅವನ ಸಂದರ್ಶನ ಅಂತ ತಗೊಳ್ಳೋರು. ಹಂಗೆ ಸಂದರ್ಶನಕ್ಕೆ ಬರೋರಿಗೆ ಹೊರಗಡೆ ಕರ್‍ಕೊಂಡು ಹೋಗಿ ಊಟ ಕೊಡಿಸಿ ಬರ್‍ತಿದ್ದ..’ ಎಂದು ಲಿಂಗರಾಜು ತನಗೆ ಗೊತ್ತಿದ್ದ ಸಂಗತಿಯನ್ನು ಹೇಳಿದ.

ಬಸ್ಸು ಗುಬ್ಬಿ, ನಿಟ್ಟೂರು, ಕಿಬ್ಬನಹಳ್ಳಿ ಕ್ರಾಸು, ತಿಪಟೂರು, ಅರಸೀಕೆರೆ, ಕಡೂರು, ಬೀರೂರು, ತರೀಕೆರೆ ದಾಟಿ ಭದ್ರಾವತಿಗೆ ಬರುವಾಗ ಮಧ್ಯಾಹ್ನ ಮೂರು ಗಂಟೆ ಮೀರಿತ್ತು. ‘ಇನ್ನು ಅರ್ಧ ಮುಕ್ಕಾಲು ಗಂಟೆಯಲ್ಲಿ

ಸಿವಮೊಗ್ಗ' ಅಂದುಕೊಂಡು ಹುಡುಗರು ಖುಷಿಯಾದರು. ಇಬ್ಬರಿಗೂ ಹಸಿವನ್ನು ತಡೆದುಕೊಂಡು ಅಭ್ಯಾಸ. ದುಡ್ಡು ಸಿಗುತ್ತಾ ಇದ್ದುದೇ ಅವರಿಗೆ ಅಪರೂಪವಾಗಿದ್ದರಿಂದ ಬಸ್ ಚಾರ್ಜಿನ ನೆಪದಲ್ಲಿ ಅಪ್ಪ ಮತ್ತು ಚಿಕ್ಕಪ್ಪ ಇಬ್ಬರಿಂದಲೂ ಸಿಕ್ಕಿದ ಹಣವನ್ನು ಇಬ್ಬರೂ ಎಚ್ಚರಿಕೆಯಿಂದ ಜೇಬಲ್ಲಿಟ್ಟುಕೊಂಡಿದ್ದರು. ಏನನ್ನು ಕೊಳ್ಳುವುದಾದರೂ ದರ ವಿಚಾರಿಸಿ ಕೊಳ್ಳುತ್ತಿದ್ದರು. ಆದರೂ ಮಾರ್ಗಮಧ್ಯೆ ಊಟಕ್ಕೆ ಬಸ್ಸು ನಿಲ್ಲಿಸಿದಾಗ ಕೆಳಕ್ಕೆ ಇಳಿದು ಬಾಳೆಹಣ್ಣು ಕೊಂಡು ತಿಂದಿದ್ದರು. ಐದು ಗಂಟೆಗೆ ಊರು ಕಡೆ ಹೋಗುವ ಬಸ್ಸು ಸಿಕ್ಕಿದರೆ ರಾತ್ರಿಯ ಒಳಗೆ ಮನೆ ಸೇರಬಹುದೆಂಬ ತವಕದಲ್ಲಿ ಬೆಳಗ್ಗೆ ತಿಂದಿದ್ದ ತಿಂಡಿ ಎಂದೋ ಕರಗಿ ಹೋಗಿದ್ದು ಅವರ ಗಮನಕ್ಕೆ ಬಂದಿರಲಿಲ್ಲ.

ಶಿವಮೊಗ್ಗದಲ್ಲಿ ಬಸ್ಸು ಇಳಿದು ಊರು ಕಡೆಯ ಬಸ್ಸಿಗಾಗಿ ಖಾಸಗಿ ಬಸ್ ನಿಲ್ದಾಣದತ್ತ ಬರುವಾಗ 'ಊರಲ್ಲಿ ಏನೂ ಹೇಳೋದು ಬ್ಯಾಡ. ನಾವೇನಾದರೂ ಬಾಯಿ ಬಿಟ್ಟರೆ ಅದಕ್ಕೆ ರೆಕ್ಕೆ ಪುಕ್ಕ ಸೇರಿ ಚಿಕ್ಕಪ್ಪನಿಗೆ ತಲುಪಿದರೆ ಮತ್ತೆ ಮನೆ ಬಾಗಿಲಿಗೇ ಸೇರಸಲ್ಲ ಅವನು. ನಮಗೂ ಮುಖ ಇರಾದಿಲ್ಲ. ದೊಡ್ಡವರ ವಿಚಾರ ನಮಗ್ಯಾಕೆ....' ಎಂದು ಇಬ್ಬರೂ ಚರ್ಚೆ ನಡೆಸಿ ತುಮಕೂರಿನ ಯಾವ ಅನುಭವಗಳನ್ನೂ ಯಾರಲ್ಲಿಯೂ ಹೇಳಿಕೊಳ್ಳಬಾರದು ಎಂಬ ತೀರ್ಮಾನಕ್ಕೆ ಬಂದಿದ್ದರು.

* * *

ಅಧ್ಯಾಯ–6

# ಬೂದಿ ಮುಚ್ಚಿದ ಬೆಂಕಿ

ನಾಗರಾಜ ಊರಿಗೆ ಬಂದಾಗ ಲಿಂಗರಾಜ ಮನೆಯಲ್ಲಿರಲಿಲ್ಲ. ಪೇಟೆಯ ಕಡೆ ಹೋಗಿದ್ದ. ಅವನು ಬರುವಾಗ ರಾತ್ರಿ ಎಂಟರ ಮೇಲಾಗಿತ್ತು. ಮೊಬೈಲ್ ಇದ್ದರೂ ತಾನು ಬರುವುದನ್ನಾಗಲೀ, ಬಂದುದನ್ನಾಗಲೀ ನಾಗರಾಜ ತಿಳಿಸಿರಲಿಲ್ಲ. ಬಾಲ್ಯದ ಕೆಲವು ವರ್ಷಗಳನ್ನು ಬಿಟ್ಟರೆ ಅವರಿಬ್ಬರೂ ಓದಿನ ಕಾರಣ ಬೇರೆ ಬೇರೆ ಕಡೆಗಳಲ್ಲಿ ಕಳೆದಿದ್ದರಿಂದ ದೊಡ್ಡವರಾದ ಮೇಲೂ ಗೆಳೆಯರಂತೆ ವ್ಯವಹರಿಸುತ್ತಿದ್ದರು. ರಾಮಣ್ಣನ ಮನೆಯಲ್ಲಿ ಆಶ್ರಯ ಪಡೆದಿದ್ದ ಲಿಂಗರಾಜ ತುಮಕೂರಿನಲ್ಲಿಯೂ ನಂತರದ ವರ್ಷಗಳಲ್ಲಿ ಬೆಂಗಳೂರಿನಲ್ಲಿಯೂ ಇದ್ದು ಡಿಪ್ಲೊಮಾ ಪ್ರಮಾಣ ಪತ್ರ ಪಡೆದು ವಾಪಸಾಗುವ ವೇಳೆಗೆ ನಾಗರಾಜ ಶಿವಮೊಗ್ಗದಲ್ಲಿ ಪದವಿ ಮುಗಿಸಿ ಶಿಕ್ಷಕ ತರಬೇತಿಯಲ್ಲಿದ್ದ. ಮನೆಯಲ್ಲಿ ಉಳಿದುಕೊಳ್ಳಲು ಒಬ್ಬರಿಗೆ ಮಾತ್ರವೇ ಅವಕಾಶ ಎಂಬಂಥ ವಸ್ತುಸ್ಥಿತಿಯನ್ನು ಅವರು ಅರ್ಥ ಮಾಡಿಕೊಂಡಂತಿತ್ತು. ತನ್ನ ಡಿಪ್ಲೊಮಾ ಪದವಿಗೆ ಊರುಬದಿಯಲ್ಲಿಯೇ ಸಣ್ಣ ಕೆಲಸ ಸಿಕ್ಕಿದರೂ ಅದಕ್ಕೆ ಹೋಗುವ ಉತ್ಸಾಹವನ್ನು ಲಿಂಗರಾಜ ಉಳಿಸಿಕೊಂಡಿದ್ದ. ಆದರೆ ಅಂಥ ಅವಕಾಶಗಳು ಬಂದಿರಲಿಲ್ಲ.

ಮನೆಗೆ ಬಂದ ಲಿಂಗರಾಜನಿಗೆ ಜಗುಲಿಯಲ್ಲಿ ಕುರ್ಚಿಯ ಮೇಲೆ ಕುಳಿತು ಪುಸ್ತಕ ಹಿಡಿದಿದ್ದ ನಾಗರಾಜನನ್ನು ನೋಡಿ ಆಶ್ಚರ್ಯವಾಯಿತು. 'ಅರೆ, ಯಾವಾಗ ಬಂದ್ಯೋ? ಬರ್ತೀನಿ ಅಂತ ಹೇಳಲೇ ಇಲ್ಲಲ್ಲೋ ಬೆಳಿಗ್ಗೆ ನಾನು ಫೋನು ಮಾಡಿದಾಗ..' ಎಂದು ನಗೆಯಾಡುತ್ತಾ ವಿಚಾರಿಸಿಕೊಂಡ. 'ಅತ್ತಿಗೆಮ್ಮನೂ ಬಂದಿದಾಳೆ ತಾನೆ' ಎಂದು ಹೇಳುತ್ತ ಪಕ್ಕದ ಕೋಣೆಗೆ ಹೋಗಿ ಅಜ್ಜನನ್ನು ಮಾತಾಡಿಸಿದ. ತೋಟದ ಕಡೆಗೆ ಹೋಗಿದ್ದ ಯಲ್ಲನಾಯ್ಕರು ಮನೆಗೆ ಬಂದು ಕಡಿಮಾಡಿನ ಬಚ್ಚಲಲ್ಲಿ ಸ್ನಾನಕ್ಕೆ ಇಳಿದಿದ್ದರು. ಅಡುಗೆ ಮನೆಯಲ್ಲಿ ಅವ್ವನೊಟ್ಟಿಗೆ ಅತ್ತಿಗೆಮ್ಮ ರಾಜೇಶ್ವರಿ ಒಲೆಯ ಹಿತಕರ ಆವರಣದಲ್ಲಿ ಕುಳಿತು ಮಾತಾಡುತ್ತಿದ್ದರು.

ಅವರದು ಶನಿವಾರ ಒಪ್ಪೊತ್ತಿನ ಮನೆ. ಶನಿವಾರ ಮಾಂಸ ಮೀನಿನ ಖಾದ್ಯಗಳಿಗೆ ಮೊದಲಿದ್ದ ನಿರ್ಬಂಧಗಳು ಸಡಿಲವಾಗಿದ್ದವು. ಅಜ್ಜ ತಿಮ್ಮನಾಯ್ಕರು ಮೊದಲಿಂದಲೂ ಶನಿವಾರದ ವ್ರತವನ್ನು ಕಟ್ಟುನಿಟ್ಟಿನಲ್ಲಿ ಮಾಡುತ್ತಿದ್ದರು. ಬೆಳಗ್ಗೆ ಹಿಟ್ಟಿನ ರೊಟ್ಟಿ ತಿಂದು ಕೆಲಸಕ್ಕೆ ಹೋಗುತ್ತಿದ್ದರು. ಮಧ್ಯಾಹ್ನದ ಊಟದ ಹೊತ್ತಿಗೆ ಬಂದು ಸ್ನಾನ ಮಾಡಿ ಮಡಿ ಉಟ್ಟು ಅಡುಗೆ ಮನೆಯಲ್ಲಿ ಇರಿಸುತ್ತಿದ್ದ ಕಳಸಕ್ಕೆ ಪೂಜೆ ಮಾಡಿ ಮಡಿಯಲ್ಲಿ ಸಿದ್ಧಪಡಿಸುತ್ತಿದ್ದ ಅನ್ನ ಸಾರನ್ನು ಅಗ್ನಿಗೆ ಅರ್ಪಿಸಿ ಊಟ ಮಾಡುತ್ತಿದ್ದರು. ಅಷ್ಟು ಹೊತ್ತಿಗೆ ಮೂರು ನಾಲ್ಕು ಗಂಟೆಯಾದರೂ ಆಗುತ್ತಿತ್ತು. ಚೆನ್ನಾಗಿ ಹೊಟ್ಟೆ ಹಸಿದಿರುತ್ತಿತ್ತು. ಹಸಿದು ಮಾಡುವ ಊಟ ರುಚಿಯಾಗಿಯೂ ಇರುತ್ತಿತ್ತು. ಅನುಕೂಲ ಇದ್ದರೆ ಊಟದ ಜೊತೆ ಒಂದು ಹುಟ್ಟು ಪಾಯಸವೂ ಇರುತ್ತಿತ್ತು. ಅನ್ನಕ್ಕೆ ಒಂದು ಚಮಚೆ ತುಪ್ಪವನ್ನೂ ಹಾಕುತ್ತಾ ಇದ್ದುದು ಊಟದ ಗುಣಮಟ್ಟವೂ ಹೆಚ್ಚುತ್ತಿತ್ತು. ಮಧ್ಯಾಹ್ನ ತಡವಾಗಿ ಊಟ ಮಾಡುತ್ತಿದ್ದ ತಿಮ್ಮನಾಯ್ಕರು ಅವತ್ತು ರಾತ್ರಿ ಊಟ ಮಾಡುತ್ತಿರಲಿಲ್ಲ. ಒಂದು ಲೋಟ ಹಾಲನ್ನೋ, ಹಾಲಿಲ್ಲದಿದ್ದರೆ ಕಾಫಿಯನ್ನೋ ಕುಡಿದು ಮಲಗುತ್ತಿದ್ದರು.

ಆದರೆ, ರಾಮಣ್ಣನೊಟ್ಟಿಗೆ ಹಾಸನ, ತುಮಕೂರು, ಬೆಂಗಳೂರು ಕಡೆಯೆಲ್ಲ ಹೋಗಿದ್ದ ಲಿಂಗರಾಜು ಓದು ಮುಗಿಸಿ ಮನೆಗೆ ಬಂದು ರೈತಾಪಿ ಕೆಲಸಕ್ಕೆ ನಿಂತ ಮೇಲೆ ಶನಿವಾರದ ಒಪ್ಪೊತ್ತಿನ ವ್ರತಾಚರಣೆಯ ಕಟ್ಟುಪಾಡುಗಳ ಬಗ್ಗೆ ತನ್ನದೇ ವಾದ ಮಂಡಿಸುತ್ತಿದ್ದ. 'ಇವೆಲ್ಲ ನಮ್ಮ ಪದ್ಧತಿಗಳೇ ಅಲ್ಲ; ಯಾರದೋ ಪ್ರಭಾವಕ್ಕೆ ಒಳಗಾಗಿ ಇಂಥವೆಲ್ಲ ಮಾಡುತ್ತಿದ್ದೇವೆ' ಎಂದು ಅವನು ಹೇಳುತ್ತಿದ್ದಾಗ ಅಜ್ಜ ತಿಮ್ಮನಾಯ್ಕರು ಒಪ್ಪುತ್ತಿರಲಿಲ್ಲ. ಎರಡು ವರ್ಷಕ್ಕೆ ಒಮ್ಮೆಯಾದರೂ ಭಟ್ಟರನ್ನು ಕರೆಸಿ ಸತ್ಯನಾರಾಯಣ ವ್ರತ ಮಾಡುವ ಪದ್ಧತಿಯನ್ನೂ ಲಿಂಗರಾಜು ಟೀಕಿಸುತ್ತಾ ಇದ್ದ. ನಮ್ಮದು ಈ ಕಾಡುಬದಿ ಬೇಸಾಯ ಮಾಡಿಕೊಂಡು ಬದುಕಿದ್ದ ಜನಾಂಗ. ನಮಗೆ ಮೊದಲಿಂದ ಮಾಡುತ್ತಿದ್ದ ದೇವರುಗಳಿಂದಲೇ ರಕ್ಷಣೆ ಎಂದು ಅವನು ಹೇಳುತ್ತಿದ್ದರೆ ಅದನ್ನು ತಿಮ್ಮನಾಯ್ಕರೂ ಯಲ್ಲನಾಯ್ಕರೂ ಒಪ್ಪುತ್ತಿದ್ದರು. 'ನೀವು ಬೇಕಾರೆ ಚೌಡಿ ಹರಕೆ ಮಾಡಿ, ಭೂತಕ್ಕೆ ಹಣ್ಣು ಕಾಯಿ ಇಡಿ' ಎಂದು ಲಿಂಗರಾಜು ಹೇಳುತ್ತಿದ್ದರೆ 'ಮತ್ತೆ ಹಿಂದಿನವರೆಲ್ಲ ಯಾಕೆ ಸನಿವಾರ, ಸತ್ಯನಾರಾಯಣ ಪೂಜೆ ಅಂತ ಮಾಡ್ತಾ ಇದ್ದರು?' ಎಂದು ಪ್ರಶ್ನೆ ಮಾಡುತ್ತಿದ್ದರು. ಗಂಗಮ್ಮನವರಿಗೆ ಮೊಮ್ಮಗನ ಹಠ ಕೆಲವೊಮ್ಮೆ ಅತಿ ಎನಿಸುತ್ತಿತ್ತು. ಪಾರ್ವತಮ್ಮ ಹಬ್ಬದ ದಿನಗಳಲ್ಲಿ ಕೆಲಸ ಕಡಿಮೆ ಆಗುತ್ತಾ ಇದ್ದುದನ್ನು ಯೋಚಿಸುತ್ತಿದ್ದರು.

ಲಿಂಗರಾಜನಿಗೆ ಸಣ್ಣವನಿದ್ದಾಗಿನಿಂದ ಮನೆಯ ಹಬ್ಬಗಳಲ್ಲಿ ಆಸಕ್ತಿ ಬೆಳೆದಿತ್ತು. ಗದ್ದೆ, ತೋಟಗಳಿಗೆ ಹೊಂದಿಕೊಂಡಿದ್ದ ಚೌಡಿ, ಭೂತದ ಬನಗಳ ಬಗ್ಗೆ ಕುತೂಹಲ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಅಜ್ಜ, ಅಜ್ಜಿ ಮಾಡುತ್ತ ಇದ್ದುದೇ ಆದರ್ಶವಾಗಿತ್ತು. ಅಜ್ಜಿ 'ಅಮ್ಮನ ಕಳಸ'ದ ಸಂದರ್ಭದಲ್ಲಿ ತೋರಿಸುತ್ತಿದ್ದ ಶ್ರದ್ಧೆ ಅವನಲ್ಲಿ ಮನೆದೇವರು ಜೇನುಕಲ್ಲಮ್ಮನಲ್ಲಿ ಗಾಢವಾದ ಭಕ್ತಿಯನ್ನು ಮೂಡಿಸಿತ್ತು. ವರ್ಷದಲ್ಲಿ ಎರಡು ಮೂರು ಸಲ 'ಅಮ್ಮನ ಕಳಸ'ದ ಹೆಸರಿನಲ್ಲಿ ಮನೆಯಲ್ಲಿ ತುಂಬ ಮಡಿಯ ವಾತಾವರಣ ಇರುತ್ತಿತ್ತು. ಮನೆಯನ್ನು ಸಗಣಿ, ಕರಿಯಲ್ಲಿ ಸಾರಿಸಿ ಶುದ್ಧಗೊಳಿಸಿ, ಸ್ನಾನದ ನಂತರವೇ ಅಡುಗೆಯನ್ನು ಆರಂಭಿಸುತ್ತಿದ್ದ ಪರಿ ಅವನಲ್ಲಿ ಭಕ್ತಿಭಾವಕ್ಕೆ ಎಡೆ ನೀಡಿತ್ತು. ಅಜ್ಜ ನಿತ್ಯ ಬೆಳಿಗ್ಗೆ ಏನನ್ನಾದರೂ ತಿನ್ನುವ ಮೊದಲು ಹಾಕಿಕೊಳ್ಳುತ್ತಿದ್ದ ನಾಮ ಹುಡುಗನಾಗಿದ್ದಾಗ ಬೆರಗು ಮೂಡಿಸುತ್ತಿತ್ತು. ಅಜ್ಜನನ್ನು ಅನುಕರಿಸಿ ಹಣೆಯ ಮೇಲೆ ನಾಮ ಎಳೆದುಕೊಳ್ಳುತ್ತಿದ್ದ. ತಿಮ್ಮನಾಯ್ಕರು ಶ್ರದ್ಧೆಯಿಂದ ನಾಮ ಹಾಕಿಕೊಳ್ಳುವಾಗ ಮಾತಾಡುತ್ತಿರಲಿಲ್ಲ. 'ರಾಮ ರಾಮ ಮುಕುಂದ, ವಾಸುದೇವ ಕೃಷ್ಣ..' ಎಂದೆಲ್ಲ ಹೆಸರುಗಳನ್ನು ನಿಧಾನವಾಗಿ ಹೇಳಿಕೊಳ್ಳುತ್ತಿದ್ದರು.

ಅವೆಲ್ಲ ದೇವರ ಹೆಸರುಗಳೆಂದು ಅವನಿಗೆ ಶಾಲಾಪೂರ್ವದ ದಿನಗಳಲ್ಲಿ ಗೊತ್ತಾಗಿತ್ತು.

ಅವನು ಪ್ರಾಥಮಿಕ ಶಾಲೆ ಮುಗಿಸಿ ಮಾಧ್ಯಮಿಕ ಶಾಲೆಗೆ ರಾಮಣ್ಣನ ಜೊತೆ ಹೋಗಿದ್ದರೂ ರಾಮಾಯಣ, ಮಹಾಭಾರತದ ಕತೆಗಳ ತುಣುಕುಗಳು ಕೇಳಿಬರುತ್ತಿದ್ದವು. ಬೇಸಗೆ ರಜೆಯಲ್ಲಿ ಊರಿಗೆ ಬಂದಾಗ ಯಕ್ಷಗಾನ ಪ್ರಸಂಗವನ್ನು ತಾಳಮದ್ದಲೆಯಲ್ಲಿ ಕೇಳುವ ಅವಕಾಶಗಳಿದ್ದವು. ದಶಾವತಾರದ ಕತೆಯೂ ಗೊತ್ತಾಗಿತ್ತು. ಶಾಲೆಯಲ್ಲಿ ಇಡುತ್ತಿದ್ದ ಸಾರ್ವಜನಿಕ ಗಣೇಶನ ಸಂದರ್ಭದಲ್ಲಿ ಪ್ರತಿ ಸಂಜೆ ಪೂಜೆಯ ಸಂದರ್ಭದಲ್ಲಿ ದೊಡ್ಡವರಿಂದ ಭಾಷಣಗಳು ನಡೆಯುತ್ತಿದ್ದವು. ಆಗ ಸ್ಕಂದ ಪುರಾಣ, ಭಾಗವತ ಇತ್ಯಾದಿ ಹೆಸರುಗಳು ಕಿವಿಯ ಮೇಲೆ ಬೀಳುತ್ತಿದ್ದವು. ನಮ್ಮನ್ನು ರಕ್ಷಿಸುವುದಕ್ಕೆ ದೇವರ ದೊಡ್ಡದೊಂದು ಪಡೆಯೇ ಇದೆ ಎನ್ನುವ ಭಾವನೆ ಅವನ ಎಳೆಯ ಮನಸ್ಸಿನಲ್ಲಿ ಮೂಡಿತ್ತು. ಹೈಸ್ಕೂಲು ಸೇರುವ ಮೊದಲು ಪ್ರತಿ ತರಗತಿಯಲ್ಲಿ ನಡೆಯುತ್ತಿದ್ದ ಅರ್ಧ ವಾರ್ಷಿಕ ಮತ್ತು ವಾರ್ಷಿಕ ಪರೀಕ್ಷೆಗಳನ್ನು ಎದುರಿಸುವ ಮೊದಲು ನೆನಪಿಗೆ ಬರುತ್ತಿದ್ದ ಎಲ್ಲ ದೇವರುಗಳನ್ನೂ ಸ್ಮರಿಸಿಕೊಳ್ಳುತ್ತಿದ್ದ. ಅದರಲ್ಲಿ ಊರಲ್ಲಿ ಗದ್ದೆ ಬದಿಯ ನೆಂಜಲು ಮರದಲ್ಲಿ ಕಬ್ಬಿಣದ ತ್ರಿಶೂಲ ರೂಪದಲ್ಲಿದ್ದ ಚೌಡಮ್ಮನೂ, ತೋಟದ ಹಿಂದೆ ಕಾಡಿನ ಅಂಚಿನಲ್ಲಿ ತುಕ್ಕು ಹಿಡಿದ ಹಲವು ಶೂಲಗಳ ರೂಪದಲ್ಲಿದ್ದ ಭೂತರಾಯನೂ ಸೇರಿದ್ದರು. ತುಮಕೂರಿನಲ್ಲಿ ಶಾಲೆಗೆ ಹೋಗುವ ಮೊದಲು ಸಿಗುತ್ತಿದ್ದ ಗಣಪತಿ ದೇವಸ್ಥಾನಕ್ಕೂ ಅವನು ಮೊರೆ ಸಲ್ಲಿಸುತ್ತಿದ್ದ. ಎಲ್ಲ ದೇವರುಗಳೂ ಅವನನ್ನು ತರಗತಿಯಲ್ಲಿ ಮೊದಲ ಸ್ಥಾನದಲ್ಲೇನೂ ನಿಲ್ಲಿಸುತ್ತಿರಲಿಲ್ಲ. ಕೆಲವೊಮ್ಮೆ ಮೊದಲ ದರ್ಜೆ, ಅನೇಕ ಸಲ ಎರಡನೇ ದರ್ಜೆಯಲ್ಲಿ ಅವನು ಉತ್ತೀರ್ಣನಾಗುತ್ತಿದ್ದನು. ಸ್ವಂತ ಪ್ರಯತ್ನವಿಲ್ಲದಿದ್ದರೆ ಎಷ್ಟು ದೇವರಿಗೆ ಹರಕೆ ಮಾಡಿಕೊಂಡರೂ ಹೆಚ್ಚು ಪ್ರಯೋಜನ ಇಲ್ಲ ಎಂಬುದು ಅವನು ಹೈಸ್ಕೂಲು ಬಿಡುವ ವೇಳೆಗೆ ತಲೆಯೊಳಗೆ ಇಳಿದಿತ್ತು.

ಎಸ್ಎಸ್ಎಲ್‌ಸಿ ಮುಗಿದ ನಂತರ ಅವನು ಬೆಂಗಳೂರಿನಲ್ಲಿ ಡಿಪ್ಲೊಮಾ ಓದಿಗೆ ಸೇರಿಕೊಂಡಿದ್ದ ಅವಧಿ ಲಿಂಗರಾಜನಿಗೆ ಪ್ರಾಯ ಚಿಗುರೊಡೆಯುತ್ತಿದ್ದ ಕಾಲ. ದೈಹಿಕವಾಗಿ ಮಾತ್ರವಲ್ಲದೆ ಮಾನಸಿಕವಾಗಿಯೂ ತುಂಬ ಬೆಳವಣಿಗೆಯಾಗಿತ್ತು. ರಜೆಗೆ ಊರಿಗೆ ಹೋಗುತ್ತಿದ್ದಾಗ ಮನೆಯಲ್ಲಿ ಎಂದಿನಂತೆ ಚೌಡಿ, ಭೂತಗಳಿಗೆ ಹರಕೆ ನಡೆಯುತ್ತಿತ್ತು. ಅಜ್ಜಿ ವಹಿಸುತ್ತಿದ್ದ ಶ್ರದ್ಧೆ ಕೆಲವೊಮ್ಮೆ ಅತಿರೇಕಕ್ಕೆ ಹೋಗುತ್ತಿತ್ತು. ಮನೆದೇವರಿಗೆ ಹೇಳಿಕೊಂಡ ಹರಕೆಯ ನೆಪದಲ್ಲಿ ಸಗಣಿ ಸಾರಿಸಿದ ಹಸಿ ನೆಲದ ಮೇಲೆ ನೈವೇದ್ಯ ಮಾಡಿದ ಎಡೆಯನ್ನು ಹಾಕಿಕೊಂಡು ತಿನ್ನುವ 'ನೆಲ ಅನ್ನ' ಎಂಬ ಆಚರಣೆಯಂತೂ ಮೈಯಲ್ಲಿ ಮುಳ್ಳು ಎಬ್ಬಿಸುತ್ತಿತ್ತು. ಆದರೆ, ಅವನ್ನೆಲ್ಲ ನೋಡುತ್ತಿದ್ದರೂ ವಿರೋಧಿಸುತ್ತಿರಲಿಲ್ಲ. ಪ್ರಶ್ನೆ ಮಾಡುತ್ತಲೂ ಇರಲಿಲ್ಲ. ದುರ್ಗಮವಾದ ಕಾಡಿನ ಅಂಚಿನಲ್ಲಿ ಬೇಸಾಯಕ್ಕೆ ಭೂಮಿಯನ್ನು ಅಣಿಗೊಳಿಸುವ ಪರಿಸ್ಥಿತಿಯಲ್ಲಿ ತಮ್ಮ ಸುತ್ತಮುತ್ತಲಿನ ನಿಸರ್ಗದಲ್ಲಿಯೇ ದೇವರನ್ನು ಕಂಡುಕೊಳ್ಳುವ ಪರಿಸ್ಥಿತಿಗೆ ಹಿರಿಯರು ಒಗ್ಗಿಹೋಗಿದ್ದರು ಎಂಬುದು ಅವನ ಎಣಿಕೆಯಾಗಿತ್ತು. ತನ್ನ ಓದಿನ ಮಿತಿಯಲ್ಲಿ ಕೂಡ ಅವನಿಗೆ ಸೃಷ್ಟಿಕಾರ್ಯಕ್ಕೆ ಬ್ರಹ್ಮನನ್ನು, ಸ್ಥಿತಿ ಕಾರ್ಯಕ್ಕೆ ವಿಷ್ಣುವನ್ನು ಲಯಕ್ಕೆ ಶಿವನನ್ನು ನಿಯೋಜಿಸಿಕೊಂಡಿರುವ ವ್ಯವಸ್ಥೆಯ ಹಿಂದೆ ಮಾನಸಿಕವಾಗಿ ದೈವಿಕ ಶಕ್ತಿಗಳಿಂದ ರಕ್ಷಣೆ ಪಡೆಯುವ ಉದ್ದೇಶ ಇದೆ ಎಂಬುದು ಸ್ಪಷ್ಟವಾಗುತ್ತಿತ್ತು.

ಮನೆಯ ಇಬ್ಬರು ಹಿರಿಯರು ತನ್ನ ಅಭಿಪ್ರಾಯವನ್ನು ಒಪ್ಪುವುದಿಲ್ಲ ಎಂಬುದು ಲಿಂಗರಾಜನಿಗೆ ಆರಂಭದಿಂದಲೂ ಅನುಭವಕ್ಕೆ ಬಂದಿತ್ತು. ಈಗ ಮನೆಯಲ್ಲಿ ಎಲ್ಲ ಶ್ರಮದ ಕೆಲಸಗಳಿಗೂ ಅವನೇ ಆಧಾರವಾಗಿದ್ದರಿಂದ ಅಜ್ಜನಾಗಲೀ, ಅಪ್ಪನಾಗಲೀ ಅವನ ಮಾತನ್ನು ಕಡೆಗಣಿಸುತ್ತಿರಲಿಲ್ಲ. ಹೈಸ್ಕೂಲು

ಮೇಷ್ಟರಾಗಿದ್ದ ಅಣ್ಣ ನಾಗರಾಜನ ಜೊತೆ ಅವನು ಚರ್ಚೆಗೆ ಇಳಿಯುತ್ತಿರಲಿಲ್ಲ. ಅದರ ಪರಿಣಾಮ ವರ್ಷ, ಎರಡು ವರ್ಷಕ್ಕೆ ನಡೆಸುತ್ತಿದ್ದ ಸತ್ಯನಾರಾಯಣ ವ್ರತ ಕಡ್ಡಾಯವಾಗಲಿಲ್ಲ. 'ಅಜ್ಜ, ನಿಂಗೆ ವಯಸ್ಸಾತು. ವಾರಕ್ಕೆ ಒಂದು ದಿನವೇ ಆದ್ರೂ ಪೂಜೆ ಮಾಡಾದಕ್ಕೆ ಅಂತ ಹಸುಗಂಡು ಉಪಾಸ ಇರಬ್ಯಾಡ' ಎಂದು ಹೇಳಿದಾಗ ಮನೆಯಲ್ಲಿದ್ದವರು 'ಅದು ಹೆಂಗೋ ತಮ್ಮ' ಎಂದು ಆಕ್ಷೇಪಿಸಿದ್ದರು. ಅದಾದ ಒಂದೆರಡು ವಾರಗಳಲ್ಲಿ ತಿಮ್ಮನಾಯ್ಕರಿಗೆ ಶುಕ್ರವಾರವೇ ಬಂದ ಜ್ವರ ನಾಲ್ಕು ದಿನಗಳವರೆಗೆ ಇಳಿಯಲಿಲ್ಲ. ಶನಿವಾರದ ವ್ರತ ಒಮ್ಮೆ ತಪ್ಪಿಹೋಯಿತು. ಜ್ವರದ ಬಾಧೆಯಿಂದ ಚೇತರಿಸಿಕೊಳ್ಳುವಾಗಲೇ ಮುಂದಿನ ಶನಿವಾರ ಬಂತು. ಅನಿವಾರ್ಯವಾಗಿ ವ್ರತ ಮತ್ತೊಂದು ವಾರ ಮುಂದಕ್ಕೆ ಹೋಯಿತು. 'ಮನೆಯ ಪದ್ಧತಿ ಅಂತ ಹೇಳ್ತೀಯಲ್ಲ, ಈ ಶನಿವಾರದ ವ್ರತದಿಂದ ಇದುವರೆಗೆ ಏನೇನು ಪ್ರಯೋಜನ ಆಯ್ತು ಅಂತ ಹೇಳ್ತೀಯ ಅಜ್ಜ' ಎಂದು ಅವನು ಒಂದು ಶುಕ್ರವಾರದ ಮಧ್ಯಾಹ್ನ ಊಟದ ನಂತರ ಜಗುಲಿಯಲ್ಲಿ ಮಾತಾಡುತ್ತಾ ಕುಳಿತಿದ್ದಾಗ ಕೇಳಿದ್ದ. 'ನಿಂದೊಳ್ಳೆ ವರಾತ ಅಯ್ತಲ್ಲೊ ಮಾರಾಯ.. ದೇವರು ದಿಂಡರು ಅಂದರೆ ಹಂಗೆಲ್ಲ ಮಾತಾಡ್ತಾರೇನೊ' ಎಂದು ತಿಮ್ಮನಾಯ್ಕರು ಗದರಿಕೊಂಡರೂ ಅವರಿಗೆ ತಮ್ಮ ಅದುವರೆಗಿನ ತಪಸ್ಸಿನಂಥ ವ್ರತಾಚರಣೆಗೆ ಏನೇನು ಅನುಕೂಲ ಆಯಿತೆಂದು ಲೆಕ್ಕ ಹಾಕುವುದಕ್ಕೆ ಸಾಧ್ಯವಾಗಲಿಲ್ಲ. ಆದರೂ ಪಟ್ಟು ಬಿಡದವರಂತೆ 'ಎಂತ ಹೇಳ್ತೀ ತಮ್ಮ, ಚೌಡಿ, ಬೂತಕ್ಕೆ ಪೂಜೆ ಅಂತ ಮಾಡಿದರೆ ಒಪ್ಗಂತೀ. ಭಟ್ರನ್ನ ಕರೆದು ಸತ್ನಾರಾಣನ ವ್ರತ ಮಾಡಿಸಿದರೆ ಬ್ಯಾಡ ಅಂತೀಯಲ್ಲ' ಎಂದು ಮಾತಿನಲ್ಲೇ ಸಿಕ್ಕಿಸಲು ನೋಡಿದ್ದರು. 'ಚೌಡಿ, ಬೂತಕ್ಕೆ ಪೂಜೆ ಅಂದ್ರೆ, ಕೋಳಿ, ಕುರಿ ಹಬ್ಬ. ನಂಟ್ರು ಇಷ್ಟರು ಬರ್ತಾರೆ. ನಮ್ಮವರೆಲ್ಲ ಒಟ್ಟಿಗೆ ಸೇರಿ ಮಾತುಕತೆ ಆಡಾದಕ್ಕೆ, ಊಟ ಮಾಡಾದಕ್ಕೆ ಒಂದು ನೆಪ. ಈ ಭಟ್ರ ಪೂಜೆ ಅಂದರೆ ಪರಮಾನ್ನ, ಆಲೇಗಡ್ಡೆ ಸಾರು, ಪಚಡಿ. ಪ್ರಸಾದ ಚೆನ್ನಾಗಿರುತ್ತೆ ಅನ್ನೋದು ಬಿಟ್ರೆ ಅದೇ ಅಜ್ಜಿ ಕತೆ. ನಾನು ಸಣ್ಣವನಿದ್ದಾಗ ಕೇಳ್ತಾ ಇದ್ದ ಕತೆಗಳನ್ನೇ ಈಗಲೂ ಹೇಳ್ತಾ ಇರ್ತಾರೆ. ಆದರೆ ಒಂದು ಅನುಕೂಲ ಇದೆ. ಅದು ಭಟ್ಟರಿಗೆ. ಒಂದು ಸತ್ಯನಾರಾಯಣ ವ್ರತ ಅಂತ ಮಾಡಿಸಿದರೆ ಅವರ ಮನೆಗೆ ಒಂದು ವಾರಕ್ಕೆ ಏನೂ ತಾಪತ್ರಯವಿಲ್ಲ' ಎಂದು ನಗೆಯಾಡುತ್ತಾ ಹೇಳುತ್ತಿದ್ದ. ಅದನ್ನು ಅಲ್ಲಗಳೆಯಲು ತಿಮ್ಮನಾಯ್ಕರು ಹೋಗುತ್ತಿರಲಿಲ್ಲ.

ಆದ್ದರಿಂದಲೇ ಶನಿವಾರ ಸಂಜೆಗೆ ನಾಗರಾಜ ಮನೆಗೆ ಬಂದಾಗ ಅವತ್ತು ಕೋಳಿ ಕೊಯ್ಯುವುದಕ್ಕೆ ವ್ರತದ ನೆಪದಲ್ಲಿ ಅಡ್ಡಿಯಾಗಲಿಲ್ಲ. 'ಬಾ ಇವತ್ತು ಒಂದು ಹುಂಜವನ್ನು ಸ್ವರ್ಗಕ್ಕೆ ಕಳಿಸೋಣ' ಎಂದು ಲಿಂಗರಾಜ ಜಗುಲಿಯಲ್ಲಿ ಕುರ್ಚಿಯ ಮೇಲೆ ಕುಳಿತು ಪುಸ್ತಕ ಕೈಯಲ್ಲಿ ಹಿಡಿದಿದ್ದ ನಾಗರಾಜನನ್ನು ಎಬ್ಬಿಸಿದ. ಅಡುಗೆ ಮನೆಯಲ್ಲಿ ಒಲೆಯ ಶಾಖದ ವಲಯದಲ್ಲಿ ಕುಳಿತು ಮಾತಾಡುತ್ತಿದ್ದ ಅಜ್ಜಿ, ಅತ್ತೆ, ಸೊಸೆ ರಾತ್ರಿಯ ಅಡುಗೆಗೆ ಒಣಮೆಣಸಿನಕಾಯಿ, ಕೊತ್ತಂಬರಿ ಹುರಿದು ಖಾರ ಕಡೆಯುವ, ರೊಟ್ಟಿಗಾಗಿ ಹಿಟ್ಟನ್ನು ಕಲೆಸುವ, ಹುಳಿ ಸಾರಿಗಾಗಿ ಹುಣಸೇಹಣ್ಣನ್ನು ನೆನೆಸುವ ಕಾರ್ಯದಲ್ಲಿ ತೊಡಗಿಕೊಂಡರು.

ಹಿತ್ತಲುಕಡೆ ಕೋಳಿ ಒಡ್ಡಿಯಲ್ಲಿ ಕೈ ಹಾಕಿ ಹುಂಜವೊಂದನ್ನು ಹಿಡಿದು ತಂದ ಲಿಂಗರಾಜ. ಕಡಿಮಾಡಿನ ಬಚ್ಚಲು ಮನೆಯಿಂದ ಚೆಂಬಿನಲ್ಲಿ ನೀರು ತಂದ ನಾಗರಾಜ. ಕತ್ತಲಿನಲ್ಲಿ ಕೋಳಿಯನ್ನು ಹುಡುಕುವುದು ಕಷ್ಟವಾಗಬಾರದೆಂದು ಮನೆಯ ಎದುರಿನ ಕಣಕ್ಕೆ ಇಬ್ಬರೂ ಬಂದರು. ಮುಂಬಾಗಿಲಿನ ಹೊರಗಡೆ ಒಂದು ಲೈಟ್ ಹಾಕಿದ್ದರಿಂದ ಮನೆ ಎದುರಿನ ಕಣದಲ್ಲಿ ಬೆಳಕಿಗೆ ತೊಂದರೆ ಇರಲಿಲ್ಲ. ಕೊಯ್ಲುಗತ್ತಿಯನ್ನು ಜೊತೆಗೆ ಹಿಡಿದಿದ್ದ ಲಿಂಗರಾಜು ಅಣ್ಣನ ಕೈಗೆ ಕೋಳಿಯನ್ನು ಕೊಟ್ಟ. ಕೋಳಿಯ ಕಾಲಿಗೂ ಕೊಕ್ಕಿಗೂ ನೀರು ಹನಿಸಿದ. 'ಹೇಗೂ ಕೊಯ್ಯುವುದಿದೆ. ನಮ್ಮ ಕೆರೆ ಬೂತರಾಯನ ಹೆಸರು

ಹೇಳಿಯೇ ಕೊಯ್ದರೆ ಅವನಿಗೂ ಹರಕೆ ಒಪ್ಪಿಸಿದ ತೃಪ್ತಿ. ಹ್ಯಾಗೂ ಅಡುಗೆ ಆದ ಮೇಲೆ ಹಿರಿಯರಿಗೆ ಎಡೆ ಇಡುತ್ತಾರಲ್ಲ' ಎಂದು ನಗೆಯಾಡುತ್ತ ಮುಂದಿನ ಕೆಲಸ ನಡೆಸಿದ. ನಾಗರಾಜ ತಕ್ಷಣವೇ ತಲೆಗೆ ನೀರು ಹಾಕಿ ಕಣದಲ್ಲಿ ಎಗರಾಡುತ್ತಿದ್ದ ಹುಂಜ ತಪ್ಪಿಸಿಕೊಂಡು ಬೇಲಿ ಸಂದಿಗೆ ಹೋದೀತೆಂದು ಆ ಕಡೆಯೇ ಕಣ್ಣಿಟ್ಟ. ಕೋಳಿ ಹಿಡಿದ ಸದ್ದಿನೊಂದಿಗೆ ವಾಸನೆ ಹಿಡಿದು ಕಣದ ಬಳಿಗೆ ಬಂದಿದ್ದ ಮನೆಯ ನಾಯಿ ಲಿಂಗರಾಜನ ಗದರಿಕೆಯಿಂದ ಸುಮ್ಮನಾಗಿ ಬಚ್ಚಲು ಮನೆಯ ಒಳಕ್ಕೆ ಸರಿಯಿತು. ಕಣದಲ್ಲಿ ಸ್ವಲ್ಪ ಹೊತ್ತಿಗೆ ಸ್ತಬ್ದವಾದ ಹುಂಜವನ್ನು ನಾಗರಾಜನೇ ಎತ್ತಿಕೊಂಡು ಬಚ್ಚಲು ಮನೆಗೆ ಲಿಂಗರಾಜನನ್ನು ಹಿಂಬಾಲಿಸಿದ. ಬಚ್ಚಲು ಮನೆಯಲ್ಲೂ ಬೆಳಕು ಇದ್ದ ಕಾರಣ ಒಲೆಯ ಬೆಂಕಿಯ ಹಿತಕರ ಶಾಖದ ವಲಯದಲ್ಲಿ ಕುಳಿತು ತಿಪ್ಪುಳವನ್ನು ತೆಗೆಯಲು ಅನುಕೂಲವಾಯಿತು. ಅಣ್ಣ ತಮ್ಮ ಇಬ್ಬರೂ ಊರ ಸುದ್ದಿಗಳನ್ನು ಮೆಲುಕು ಹಾಕುತ್ತಿದ್ದಾಗ ಕೋಳಿಯನ್ನು ಸ್ವಚ್ಛ ಮಾಡುವ ಕೆಲಸ ಯಾಂತ್ರಿಕವಾಗಿ ನಡೆಯುತ್ತಿತ್ತು. ತಿಪ್ಪುಳವನ್ನೆಲ್ಲ ತೆಗೆದ ಮೇಲೆ ಬಚ್ಚಲು ಒಲೆಯ ಬೆಂಕಿಯನ್ನು ಜಿಗ್ಗನ್ನು ಒಟ್ಟಿ ದೊಡ್ಡದು ಮಾಡಿದ ಲಿಂಗರಾಜು ಕೋಳಿಯನ್ನು ಹದವಾದ ಬೆಂಕಿಯಿಂದ ಇನ್ನಷ್ಟು ಬಿಸಿ ಮಾಡಿದ. ಹೊರಮೈಯಲ್ಲಿ ಅಳಿದುಳಿದ ತಿಪ್ಪಳುಗಳೆಲ್ಲ ಬೆಂಕಿಗೆ ಸುಟ್ಟು ಕರಕಲಾಗುತ್ತಿದ್ದಾಗ ಹಿತಕರವಾದ ವಾಸನೆ ಮೂಗಿಗೆ ಅಡರುತ್ತಿತ್ತು. ಅದನ್ನು ಗಮನಿಸಿದ ಲಿಂಗರಾಜು 'ಈ ವಾಸನೆ ಬಂದ್ರೆ ಹೊರಗಿನೋರಿಗೆ ಗೊತ್ತಾಗುತ್ತೆ ಅಂತ ಈ ಕಡೆ ಸೊನಗಾರರು ಬಿಸಿ ನೀರಲ್ಲಿ ಅದ್ದಿ ತಿಪ್ಪಳ ಸುಲಿಯೋದಂತೆ. ಅದಕ್ಕೆ ಅವರಿಗೆ ಕುಚ್ಚುಗೋಳಿ ಸೆಟ್ರು ಅಂತಾರಂತೆ' ಎಂದು ನಗೆಯಾಡಿದ. 'ಈಗೇನು ಎಲ್ಲರೂ ತಿನ್ನಾದಕ್ಕೆ ಸುರು ಮಾಡಿದಾರೆ. ನಮ್ಮ ಜಯಪುರದಲ್ಲೇ ಕೇಜಿಗೆ ಮುನ್ನೂರೈವತ್ತು ನಾನೂರು ಆಗಿದೆ' ಎಂದ ನಾಗರಾಜ.

ಬಚ್ಚಲು ಮನೆಯಲ್ಲಿ ಒಲೆಯ ಎದುರಿಗೆ ಸಾಕಷ್ಟು ಜಾಗ ಇದ್ದ ಕಾರಣ ಅಲ್ಲಿಯೇ ಬೆಂಕಿಯಲ್ಲಿ ಬಾಡಿಸಿದ ಬಾಳೆ ಎಲೆಯನ್ನು ಹಾಸಿ ಹಸಿಗೆಗೆ ವ್ಯವಸ್ಥೆ ಮಾಡಿಕೊಂಡರು. ಬಚ್ಚಲು ಮನೆಯ ಬಾಗಿಲ ಸಂದಿಯಲ್ಲಿದ್ದ ಕೊಚ್ಚುಗೊಲ್ಲನ್ನು ಬಿಸಿ ನೀರಿನಲ್ಲಿ ಚೆನ್ನಾಗಿ ತಿಕ್ಕಿ ತೊಳೆದು ಬೆಂಕಿಗೆ ಹಿಡಿದು ಲಿಂಗರಾಜನೇ ಕೊಚ್ಚಲು ಕುಳಿತುಕೊಂಡ. ಅವನು ಕೊಚ್ಚಿ ಹಾಕುತ್ತಾ ಇದ್ದುದನ್ನು ಕುಕ್ಕುರುಗಾಲಲ್ಲಿ ಕುಳಿತುಕೊಂಡು ಹಲ್ಲುಗತ್ತಿಯಿಂದ ಸಣ್ಣ ಸಣ್ಣ ತುಂಡುಗಳಾಗಿ ಹೆಚ್ಚಿದ ನಾಗರಾಜ. ತನ್ನ ಹೈಸ್ಕೂಲಿನ ಕೆಲಸದ ಬಗ್ಗೆ ನಾಗರಾಜ ಹೇಳುತ್ತಿದ್ದ. ಸಹೋದ್ಯೋಗಿಗಳು, ಹೆಡ್ಮಾಸ್ಟರು, ಹೊಸದಾಗಿ ಹೈಸ್ಕೂಲು ಹುಡುಗರಿಗೂ ಮಧ್ಯಾಹ್ನದ ಊಟಕ್ಕೆ ಮಾಡಿದ ವ್ಯವಸ್ಥೆ ಇತ್ಯಾದಿ ಹೇಳುತ್ತಿದ್ದರೂ ಕೋಳಿಯ ಹಸಿಗೆ ಯಾಂತ್ರಿಕವಾಗಿ ಸಾಗಿತ್ತು.

'ಅವತ್ತು ಯಾರೋ ಹೇಳ್ತಾ ಇದ್ದರು, ನಾವೇ ಗಂಧ ಬೆಳೆದರೆ ಅದಕ್ಕೆ ಒಳ್ಳೇ ಧಾರಣೆ ಸಿಗುತ್ತಂತೆ. ಸರ್ಕಾರವೇ ಕೊಂಡುಕೊಳ್ಳುತ್ತಂತಲ್ಲ' ಎನ್ನುತ್ತಾ ಲಿಂಗರಾಜ ಹಸಿಗೆಯಾದ ತುಂಡನ್ನೆಲ್ಲ ಚೆನ್ನಾಗಿ ಕಲೆಸಿ ಗುಪ್ಪೆಯಾಗಿ ಮಾಡಿ ಬಾಳೆಯ ಎಲೆಯಿಂದಲೇ ನೀಟಾಗಿ ಕಟ್ಟಿದ. ಉಳಿದ ಬಾಳೆಎಲೆಯನ್ನು ಸುತ್ತಿ ಬಾಗಿಲಿಂದ ಆಚೆ ಹೋಗಿ ಹಿತ್ತಲು ಕಡೆ ಎಸೆದು ಬಂದ ನಾಗರಾಜ 'ಅದಕ್ಕೆ ಮೂವತ್ತು ನಲವತ್ತು ವರ್ಷ ಬೇಕಲ್ಲೋ. ಅಲ್ಲೀವರೆಗೆ ಅದನ್ನು ಕಳ್ಳರಿಂದ ಉಳಿಸಿಕೊಳ್ಳಬೇಕಲ್ಲ..' ಎಂದ. 'ಆಯನೂರು ಹತ್ರ ಯಾರೋ ರಾಜಕೀಯದ ವ್ಯಕ್ತಿ ದೊಡ್ಡದೊಂದು ಪ್ಲಾಂಟೇಶನ್ ಮಾಡಿದ್ದಾನಂತೆ. ಕಳ್ಳರನ್ನು ಓಡಿಸೋದಕ್ಕೆ ಬಂದೂಕು ಹಿಡಿದ ಗಾರ್ಡುಗಳನ್ನು ಇಟ್ಟಿದ್ದಾನಂತೆ' ಎಂದು ಲಿಂಗರಾಜ ತನಗೆ ತಿಳಿದಿದ್ದ ಸಂಗತಿಯನ್ನು ಹೇಳಿದ. ಅದಕ್ಕೆ ನಾಗರಾಜ 'ಗಂಧ ಬೆಳೆಯೋದಾದರೆ ಸರ್ಕಾರವೇ ಅದರ ರಕ್ಷಣೆಗೆ ಬಂದೂಕು ಕೊಡ್ತದಂತೆ. ಬಂದೂಕು ಇದೆ ಅಂತ ಎದೆಗೆ ಗುರಿ ಇಟ್ಟು ಆಗದವರನೆಲ್ಲ ಹೊಡೆಯೋದಲ್ಲ, ಹಾಗೇನಾದರೂ ಕಳ್ಳರು ಬಂದು ಮರ

ಕುಯ್ತಾ ಇದ್ದರೆ ಮೊಣಕಾಲು ಕೆಳಗೆ ಹೊಡೀಬೇಕು. ಅವರು ಗಂಧ ಕದಿಯಾಕೆ ಬಂದವರು ಅಂತ ಪ್ರಬಲ ಸಾಕ್ಷಿ ಇರಬೇಕಾಗ್ತದೆ. ಅದೆಲ್ಲ ಸರಿಯೇ, ನಮ್ಮಲ್ಲಿ ಎಲ್ಲಿದೆಯೋ ಅಷ್ಟು ಜಾಗ. ಅಲ್ದೆ ಈಗ ಹಾಕಿದರೆ ಮೂವತ್ತು ನಲವತ್ತು ವರ್ಷ ಅದು ಬರೋವರ್ಗ್ಗೂ ನಾವು ಇರ್ತೀವಾ..?' ಎಂದು ತನ್ನ ಗುಮಾನಿಯನ್ನು ವ್ಯಕ್ತಪಡಿಸಿದ. ಹಸಿಗೆ ಮಾಡುತ್ತಿದ್ದ ಹುಡುಗರು ಇನ್ನೂ ಯಾಕೆ ಅಡುಗೆ ಮನೆ ಕಡೆ ಬರಲಿಲ್ಲ ಎಂದು ನೋಡಿಕೊಂಡು ಹೋಗಲು ಬಚ್ಚಲು ಮನೆಯ ಕಡೆ ಬಂದಿದ್ದ ಗಂಗಮ್ಮನಿಗೆ '..ನಾವು ಇರ್ತೀವಾ..' ಎಂದಿದ್ದಷ್ಟೆ ಕೇಳಿಸಿ 'ಅದೆಂತಕ್ಕೆ ಹಂಗೆ ಹೇಳ್ತೀರೋ.. ಒಳ್ತು ಅನ್ನಿ' ಎಂದು ಹೇಳಿದರು. ಅಜ್ಜಿಯ ಕಕ್ಕುಲಾತಿಗೆ ಮುಕ್ತವಾಗಿ ನಗೆಯಾಡಿದ ಮೊಮ್ಮಕ್ಕಳಿಬ್ಬರೂ 'ಎಂತದ್ದೂ ಇಲ್ಲ ಅಜ್ಜಿ... ಒಳ್ತು ಒಳ್ತು ಆಯ್ತಾ' ಎಂದು ಹೇಳುತ್ತಾ ಬಾಳೆ ಎಲೆಯಲ್ಲಿ ಸುತ್ತಿಟ್ಟಿದ್ದನ್ನು ಕೈಗಿತ್ತರು. ಬಚ್ಚಲು ಹಂಡೆಯಲ್ಲಿ ಬಿಸಿಯಾಗಿದ್ದ ನೀರಿನಲ್ಲಿ ಕೈಕಾಲು ಮುಖ ತೊಳೆದುಕೊಂಡು ಜಗುಲಿಗೆ ಬಂದರು.

'ಇರೋ ಇಷ್ಟು ಜಾಗದಲ್ಲಿ ಏನೂ ಅಂತ ಮಾಡಾದೊ ಮಾರಾಯ. ಇರೋ ಎರಡು ಎಕರೆಯಲ್ಲಿ ಒಂದೆಕರೆ ತ್ವಾಟಕ್ಕೆ ಹೋಗಿದೆ. ಊಟಕ್ಕೆ ಬತ್ತ ಬೆಳೆಯಾಕೆ ಒಂದು ಎಕರೆ ಆದ್ರೂ ಬೇಕು. ಅದರಲ್ಲೇ ಹೋದ ವರ್ಷ ಸ್ವಲ್ಪ ಕಬ್ಬು ಹಾಕಿದ್ದಾಯ್ತು. ನಾವು ಕಬ್ಬು ಹಾಕಬಾರ್ದಿತ್ತು. ಮಾಡಿದ ಕೂಲಿನೂ ಹುಟ್ಟಲಿಲ್ಲ. ಏನೇ ಹಾಕಾದಿದ್ರೂ ಅಡಕೆ ಮರಗಳ ಸಾಲಿನಲ್ಲೇ ಹಾಕಬೇಕು..' ಎಂದು ಲಿಂಗರಾಜ ತನ್ನಷ್ಟಕ್ಕೆ ಹೇಳಿಕೊಳ್ಳುತ್ತಾ ಜಗುಲಿಗೆ ಬಂದು ಕುರ್ಚಿಯ ಮೇಲೆ ನಾಗರಾಜ ಇಟ್ಟಿದ್ದ ಪುಸ್ತಕವನ್ನು ಕೈಗೆತ್ತಿಕೊಂಡ. 'ಈ ಒತ್ತುವರಿ ಜಾಗಕ್ಕೆ ಅರ್ಜಿ ಕೊಡಬೇಕು ಅಂತ ಇತ್ತಲ್ಲ, ಅದೆಲ್ಲ ಆಯ್ತಾ?' ಎಂದು ನಾಗರಾಜ ಬಚ್ಚಲು ಮನೆಯಿಂದ ಹೊರಬರುತ್ತಾ ವಿಚಾರಿಸಿದ. 'ಅದಕ್ಕೆ ನಾನು ನಾಡಕಚೇರಿಗೆ ಹೋಗಿ ಅಜ್ಜನ ಹೆಸರಲ್ಲಿ ಪಾಣಿ, ಮ್ಯುಟೇಶನ್ನು ತೆಗೆಸಿದೆ. ಸರ್ಕಾರಿ ಲೆಕ್ಕದಲ್ಲಿ ಇರೋದೆ ಎರಡು ಎಕರೆ. ಈಗ ಸರ್ಕಾರದ ಕಡೆಯಿಂದ ಏನು ಆಗಬೇಕಾದ್ರೂ ವಂಶವೃಕ್ಷ ಮಾಡಿಸಬೇಕು. ಅಜ್ಜನ ಹೆಸರಲ್ಲಿ ಅರ್ಜಿ ಕೊಟ್ಟು ಬಂದಿದೀನಿ. ಅದರಲ್ಲಿ ಚಿಕ್ಕಪ್ಪನ ಕುಟುಂಬದವರ ಹೆಸರನ್ನೂ ಸೇರಿಸಲೇಬೇಕಲ್ಲ.. ಅದಕ್ಕೆ ಮತ್ತೆ ಫಾಲೋ ಮಾಡಿಲ್ಲ..' ಎಂದ ಲಿಂಗರಾಜು ಉದಾಸೀನವಾಗಿ. 'ಜಮೀನು ಎಷ್ಟೇ ಇರಲಿ, ನಮ್ಮ ರೆಕಾರ್ಡ್ ಪಕ್ಕಾ ಇರಬೇಕು. ಏನೇ ದಾಖಲೆ ಇದ್ರು ಒಂದು ಫೈಲ್ ಮಾಡಿ ಇಟ್ಗಾ ಮಾರಾಯ. ನಾನು ಕೆಲಸಕ್ಕೆ ಸೇರೋವಾಗ ಜಾತಿ ಪ್ರಮಾಣ ಪತ್ರದ ಸಿಂಧುತ್ವಕ್ಕೆ ಎಷ್ಟು ಒದ್ದಾಡಿದೆ ಗೊತ್ತಾ' ಎಂದು ನಾಗರಾಜ ತನ್ನ ಅನುಭವ ನೆನಪು ಮಾಡಿಕೊಂಡ. ಜಗುಲಿಗೆ ಹೊಂದಿಕೊಂಡ ಕೋಣೆಯಲ್ಲಿ ಮಲಗಿದ್ದ ತಿಮ್ಮನಾಯ್ಕರಿಗೆ ಮೊಮ್ಮಕ್ಕಳು ನಡೆಸುತ್ತಿದ್ದ ಮಾತುಕತೆ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಮನೆಯ ಜಮೀನಿಗೆ ಸಂಬಂಧಿಸಿದ ವಿಷಯ ಇದ್ದುದರಿಂದ ಕಿವಿ ಚುರುಕಾಗಿತ್ತು. ಇರೋದು ಎರಡು ಎಕರೆ. ಅದರಲ್ಲಿ ಇಬ್ಬರೂ ಗಂಡುಮಕ್ಕಳಿಗೆ ಹಂಚಿಕೊಟ್ಟರೆ ಒಬ್ಬೊಬ್ಬರಿಗೆ ಒಂದೊಂದು ಎಕರೆ. ಈ ಹುಡುಗರಿಗೆ ಅದರಲ್ಲಿ ಅರ್ಧರ್ಧ ಅಂದರೂ ತಲಾ ಒಂದು ಅರ್ಧ ಎಕರೆ. ಅಷ್ಟು ಜಾಗದಲ್ಲಿ ಏನೇನೆಲ್ಲ ಹಾಕಬಹುದು ಅಂತ ಮಾತಾಡುತ್ತಾ ಇದ್ದಾರಲ್ಲ ಎನಿಸಿತು. ಪೇಟೆ ತಿರುಗಿ ಓದಿ ಬಂದಿರೋದರಿಂದ ಅನ್ನ ನೀರಿಗೆ ತೊಂದರೆ ಆಗದಂತೆ ಸಂಪಾದನೆ ಮಾರ್ಗ ಹಿಡಿದಿದ್ದಾರೆ. ಬೆಂಗಳೂರು ಸೇರಿಕೊಂಡ ರಾಮಣ್ಣ ತನ್ನ ಪಾಲಿನ ಆಸ್ತಿಗೆ ಬಂದರೆ ಇಲ್ಲಿ ಇವರು ಅದೂ ಇದೂ ಹಾಕಿ ಅಭಿವೃದ್ಧಿ ಮಾಡಿದ್ದನ್ನೂ ಬಿಟ್ಟು ಕೊಡಬೇಕಾಗುತ್ತಲ್ಲ ಎಂಬ ಯೋಚನೆಯೂ ಮೂಡಿತು.. ಅದನ್ನೆಲ್ಲ ಹೇಳಬೇಕು ಅಂದುಕೊಂಡವರಿಗೆ ಧ್ವನಿ ಹೊರಡಲಿಲ್ಲ. ಗಂಗಮ್ಮ ಕೂಡ ಕೋಣೆ ಕಡೆ ಸುಳಿಯದೆ ತುಂಬ ಹೊತ್ತಾಗಿದ್ದು ಗಮನಕ್ಕೆ ಬಂತು. ಮಂಚದಿಂದ ಎದ್ದು ಜಗುಲಿಗೆ ಬರುವುದಕ್ಕೆ ಯತ್ನಿಸಿದರು. ಯಾರನ್ನಾದರೂ ಕರೆಯಬೇಕು ಎನಿಸಿದರೂ ಧ್ವನಿ ಹೊರಡಲಿಲ್ಲ. ಸುಮ್ಮನೆ

ಮಲಗಿಕೊಂಡರು.

ಜಗುಲಿಯ ಇನ್ನೊಂದು ಮೂಲೆಯಲ್ಲಿ ಕುಳಿತು ಹಳೆಯ ಪುಸ್ತಕವೊಂದನ್ನು ನೋಡುತ್ತಿದ್ದ ಯಲ್ಲನಾಯ್ಕರಿಗೆ ಮಕ್ಕಳಿಬ್ಬರ ಮಾತುಕತೆಯೆಲ್ಲ ಸ್ಪಷ್ಟವಾಗಿ ಕೇಳಿಸುತ್ತಿತ್ತು. ಆಗಲೇ ಅರವತ್ತರ ಹತ್ತಿರ ಬರುತ್ತಿದ್ದ ಅವರಿಗೆ ಮನೆಯ ವ್ಯವಹಾರವನ್ನು ಲಿಂಗರಾಜನೇ ನಿರ್ವಹಿಸುತ್ತಿರುವುದರಿಂದ ನಿವೃತ್ತಿಯ ನಿರಾಳತೆ ಆವರಿಸಿತ್ತು. ತಮಗೆ ಹೆಚ್ಚಿನ ಹೊರೆಯನ್ನು ಕೊಡದೆ ತಮ್ಮಷ್ಟಕ್ಕೆ ಹೇಗೋ ಓದು ಮುಗಿಸಿ ಬಂದ ಮಕ್ಕಳ ಬಗ್ಗೆ ಅಭಿಮಾನವೂ ಇತ್ತು. ಮಕ್ಕಳು ಹಾದಿ ತಪ್ಪಿಲ್ಲ ಎನ್ನುವ ಸಮಾಧಾನವೂ ಇತ್ತು. ಆದರೂ ಎಚ್ಚರಿಕೆಯ ಮಾತಿನಂತೆ 'ಈ ಜಮೀನಿಗೆ ಸಂಬಂಧಪಟ್ಟು ಏನೇ ಮಾಡಿದರೂ ಅದರಲ್ಲಿ ರಾಮು ಕೂಡ ಪಾಲುದಾರ ಅನ್ನೋದನ್ನು ಮರೀಬಾರದು ಕಣ್ರೋ' ಎಂದು ಹೇಳಿ ಸುಮ್ಮನಾದರು. ಯಲ್ಲನಾಯ್ಕರು ಮಕ್ಕಳಿಬ್ಬರೂ ದೊಡ್ಡವರಾದ ಮೇಲೆ ಅವರೊಂದಿಗೆ ಯಜಮಾನಿಕೆಯ ಗತ್ತಿನಲ್ಲಿ ಮಾತಾಡಿದವರಲ್ಲ. ಚಿಕ್ಕಂದಿನಿಂದಲೂ ಮನೆಯಿಂದ ಹೊರಗಡೆಯೇ ಇದ್ದವರು ಮನೆಗೆ ರಜೆ ಇದ್ದ ದಿನಗಳಲ್ಲಷ್ಟೆ ಬರುತ್ತಿದ್ದರು. ಎರಡು ವರ್ಷದಿಂದ ಈಚೆಗೆ ಮನೆಯಲ್ಲಿ ಇರಲು ಲಿಂಗರಾಜ ಬಂದವನು. ನಾಗರಾಜ ಶಿವಮೊಗ್ಗದಲ್ಲಿ ಓದು ಮುಗಿಸಿ ವಾಪಸು ಬಂದವನು ಒಂದೆರಡು ತಿಂಗಳಲ್ಲಿ ಹೈಸ್ಕೂಲು ಶಿಕ್ಷಕನಾಗಿ ಆಯ್ಕೆಯಾಗಿ ಕೆಲಸಕ್ಕೆ ಸೇರುವವರೆಗಷ್ಟೆ ಮನೆಯಲ್ಲಿದ್ದವನು. ತಮ್ಮ ಸ್ವಂತ ಗಳಿಕೆಯಿಂದಲೇ ಓದು ಮುಗಿಸಿ ಕೆಲಸವನ್ನೂ ಪಡೆದ ಅವನ ಬಗ್ಗೆ ಅಭಿಮಾನವೇ ಇತ್ತು. ಕೆಲಸಕ್ಕೆ ಸೇರಿದವನು ಮದುವೆ ಆಗುವವರೆಗೆ ಮನೆಯ ಹೆಚ್ಚಿನ ಅಗತ್ಯಗಳಿಗೆ ದುಡ್ಡ ಕೊಡುತ್ತಿದ್ದವನೂ ನಾಗರಾಜನೇ. ಲಿಂಗರಾಜು ಮನೆಯಲ್ಲಿ ನಿಂತ ಮೇಲೆ ಸಂಪಾದನೆಯ ಮಾರ್ಗಗಳನ್ನು ವಿಸ್ತರಿಸುತ್ತಾ ಇದ್ದುದರಿಂದ ಅವನ ಬಗ್ಗೆಯೂ ಅವರಿಗೆ ತಕರಾರು ಇರಲಿಲ್ಲ. ಆದ್ದರಿಂದ ಮಲೆನಾಡಿನ ಯಜಮಾನಿಕೆಯ ಪ್ರವೃತ್ತಿ ಅವರಲ್ಲಿ ಸುಳಿಯುವಂತಿರಲಿಲ್ಲ.

ಅಡುಗೆ ಮನೆಯಿಂದ ಮರಿಗೆಯಲ್ಲಿ ಹಿಟ್ಟನ್ನು ಮಿಲಿದು ಅಕ್ಕಿ ಸುಡುತ್ತಿರುವ ಸಪ್ಪಳ ಜಗುಲಿಯವರೆಗೂ ಆಪ್ಯಾಯಮಾನವಾಗಿ ಕೇಳಿಸುತ್ತಿದ್ದಾಗ ಲಿಂಗರಾಜ, ನಾಗರಾಜರಿಬ್ಬರೂ ಊರಿನ ಸದ್ಯದ ಸ್ಥಿತಿಯ ಬಗ್ಗೆ ಮಾತು ಆರಂಭಿಸಿದ್ದರು. 'ತ್ವಾಟದ ಬೇಲಿ ಸುತ್ತ ಎಂಥದ್ದಾದರೂ ನೆರಳು ಕೊಡೋ ಮರ ಹಾಕಬೇಕು. ಅವು ಮುಂದೆ ನಾಟ ಆಗಿ ಮಾರಾಟಕ್ಕೆ ಸಿಗಬೇಕು' ಎಂದು ನಾಗರಾಜ ನೀಡಿದ ಸಲಹೆಗೆ 'ಈಗಾಗಲೇ ಅಕೇಸಿಯಾ ಇದಾವೆ ಮಾರಾಯ, ಆದರೆ ಅದರಿಂದ ಉಪದ್ರ ಜಾಸ್ತಿ, ಈ ಸಲ ಅವನ್ನು ಕಡಿಸಬೇಕು' ಎಂದ. 'ಯಾಲಕ್ಕಿ ಗಿಡ, ಮೆಣಸಿನ ಬಳ್ಳಿ ಮೇಲೆ ಹೆಚ್ಚಿನ ನಿಗಾ ಇಡು. ಕರಾವಳಿ ಕಡೆ ಜನ ಕೋಕೋ ಅಂತ ತೋಟದಲ್ಲಿ ಹಾಕ್ತಾರಂತೆ. ದಸರಾ ರಜೆ ಇದ್ದಾಗ ಇಬ್ರೂ ಆ ಕಡೆ ಹೋಗಿ ಬರೋಣ. ಯಾವುದಾದ್ರೂ ತೋಟ ನೋಡಿ ಬಂದ್ರೆ ಗೊತ್ತಾಗುತ್ತೆ' ಎಂದು ನಾಗರಾಜ ಹೇಳಿದ. 'ಏನೇ ಮಾಡೋದಾದ್ರೂ ಜಾಗದ್ದೇ ಸಮಸ್ಯೆ. ಇರೋ ಜಾಗದಲ್ಲೇ ಎಷ್ಟು ಸರ್ಕಸ್ಸು ಮಾಡೋದು ಮಾರಾಯ' ಎಂದು ಲಿಂಗರಾಜ ವಾಸ್ತವ ಸ್ಥಿತಿಯ ಅರಿವು ಮೂಡಿಸಿದ. 'ನಿನ್ನದು ಮೆಕ್ಯಾನಿಕಲ್ ಅಲ್ವ, ಅದಕ್ಕೆ ಊರಲ್ಲಿದ್ದುಕೊಂಡು ಸ್ವಂತಕ್ಕೆ ಏನೂ ಮಾಡುವುದು ಸಾಧ್ಯ ಇಲ್ಲವಾ..?' ಎಂದು ನಾಗರಾಜ ಹಿಂದೆ ಎಷ್ಟೋ ಸಲ ಕೇಳಿದ್ದನ್ನು ಪುನರುಚ್ಚರಿಸಿದ. 'ಬಂದ ಶುರುನಲ್ಲಿ ಆ ಬಗ್ಗೆ ಯೋಚನೆ ಮಾಡಿದ್ದರೆ ಏನಾದರೂ ಮಾಡಬಹುದಿತ್ತೇನೊ.. ಈಗ ಪೇಟೆಯಲ್ಲಿ ಐಟಿಐ ಕಾಲೇಜಿನಲ್ಲಿ ಅವಕಾಶ ಇದ್ದರೆ ಟ್ಯೂಟರ್ ಆಗಿ ಇಲ್ಲವೇ ಅಸಿಸ್ಟೆಂಟ್ ಆಗಿ ಅವಕಾಶ ಸಿಗುತ್ತಾ ನೋಡಬೇಕು.. ಈಗ ಸ್ವತಂತ್ರವಾಗಿ ಇರುವುದೇ ಅಭ್ಯಾಸವಾಗಿದೆಯಲ್ಲ, ಯಾರ ಕೈಕೆಳಗೆ ಇದ್ದು ಅವರು ಹೇಳಿದಂತೆ ನಡೆದುಕೊಳ್ಳುವುದು ಕಷ್ಟ ಆಗಬಹುದು.. ಅದೂ ನಾನು ಬೆಂಗಳೂರಿನಲ್ಲಿ ಚಿಕ್ಕಪ್ಪನ ಮನೆಯಲ್ಲಿ ಇದ್ದುದನ್ನು

ನೆನೆಸಿಕೊಂಡರೆ ಎಲ್ಲಿಯೂ ಕೆಲಸ ಹುಡುಕುವುದೇ ಬೇಡ ಅನ್ನಿಸುತ್ತೆ..' ಎಂದ. ಚಿಕ್ಕಪ್ಪ ರಾಮಣ್ಣನ ಹೆಸರು ಎತ್ತಿದರೆ ಸಿಡಿಮಿಡಿಗೊಳ್ಳುತ್ತಿದ್ದ ಲಿಂಗರಾಜನ ವರ್ತನೆಗೆ ಕಾರಣ ಕೇಳಬೇಕೆಂದು ನಾಗರಾಜ ಹಿಂದೆಯೇ ಅಂದುಕೊಂಡಿದ್ದ. ಅವನ ಪ್ರಸ್ತಾಪವನ್ನು ಲಿಂಗರಾಜನೇ ಮಾಡಿದ ಮೇಲೆ ಆ ಬಗ್ಗೆ ಕೇಳಬಹುದೆನ್ನಿಸಿತ್ತು. ಅಷ್ಟರಲ್ಲಿ ಅಡುಗೆ ಮನೆಯಿಂದ ರಾಜೇಶ್ವರಿ ಹೊರಬಂದು 'ಬರ್ರಿ ಊಟಕ್ಕೆ' ಎಂದು ಕರೆದಳು. ಅದನ್ನೇ ನಿರೀಕ್ಷಿಸುತ್ತಾ ಇದ್ದವರಂತೆ ಮೂವರೂ ಎದ್ದು ಒಳಮನೆಗೆ ಕಾಲಿಟ್ಟರು.

ಅವರದು ಮೂರು ಅಂಕಣದ ಮನೆ. ಮೂರು ಕಡೆ ಕಡಿಮಾಡು ವಿಸ್ತರಿಸಿಕೊಂಡಿದ್ದರು. ಹಿಂಬದಿ ಕಡಿಮಾಡಿನಲ್ಲಿ ಅಡುಗೆ ಮನೆ ಮತ್ತು ಊಟಕ್ಕೆ ಕೂರುವ ಒಳಮನೆಗೆ ವ್ಯವಸ್ಥೆ ಮಾಡಿಕೊಂಡಿದ್ದರು. ಜಗುಲಿಯ ಎರಡೂ ಬದಿ ಒಂದೊಂದು ಕೋಣೆಗೆ ಅವಕಾಶ ಮಾಡಿಕೊಂಡಿದ್ದು ಅವುಗಳಲ್ಲಿ ತಿಮ್ಮನಾಯ್ಕರೂ, ಯಲ್ಲನಾಯ್ಕರೂ ಮಲಗುತ್ತಿದ್ದರು. ರಾಮಣ್ಣ ಒಬ್ಬನೇ ಬಂದಾಗ ಜಗುಲಿಯಲ್ಲೇ ಮಲಗುತ್ತಿದ್ದ. ಮಂಜುಳಾ ಜೊತೆಗೆ ಬಂದಾಗ ಯಲ್ಲನಾಯ್ಕರ ಕೋಣೆಯಲ್ಲಿ ವ್ಯವಸ್ಥೆ ಆಗುತ್ತಿತ್ತು. ಹೈಸ್ಕೂಲಿನಲ್ಲಿ ಕೆಲಸ ಆದ ನಂತರ ನಾಗರಾಜ ಮನೆಯಲ್ಲಿ ಕೆಲವು ಅನುಕೂಲಗಳ ಕಡೆ ಗಮನ ಕೊಟ್ಟಿದ್ದ. ಅದರಂತೆ ಅಡುಗೆ ಮನೆಯ ಪಕ್ಕದಲ್ಲಿ ಗೋಡೆಗೆ ಕುಳಿತುಕೊಳ್ಳಲು ಎರಡೂ ಕಡೆ ಸಿಮೆಂಟ್ ಕಟ್ಟೆ ಮಾಡಿಸಿದ್ದ. ಸಾಕಷ್ಟು ಅಗಲವಿದ್ದ ಒಂದು ಉದ್ದನೆಯ ಮೇಜನ್ನೂ ಮಾಡಿಸಿದ್ದರಿಂದ ಊಟಕ್ಕೆ ಮೇಜಿನ ವ್ಯವಸ್ಥೆ ಆಗಿತ್ತು. ಅದನ್ನು ನಿತ್ಯವೂ ಬಳಸುತ್ತಿದ್ದರು.

ಮೂವರೂ ಒಳಮನೆಗೆ ಬಂದು ಗೋಡೆ ಬದಿಯ ಸಿಮೆಂಟ್ ಕಟ್ಟೆಯ ಮೇಲೆ ಆರಾಮಾಗಿ ಕುಳಿತರು. ಎದುರುಗಡೆ ಇದ್ದ ಮೇಜಿನ ಮೇಲೆ ರಾಜೇಶ್ವರಿ ಮೂರು ತಟ್ಟೆಗಳನ್ನು ಇಟ್ಟು ಕುಡಿಯುವ ನೀರಿಗೆ ತಂಬಿಗೆಯನ್ನು ತಂದಳು. ಪಾರ್ವತಿ ಒಲೆಯ ಬದಿ ಕುಳಿತು ಬೇಯಿಸಿ ಕೊಡುತ್ತಿದ್ದ ಬಿಸಿ ಬಿಸಿ ರೊಟ್ಟಿಗಳನ್ನು ರಾಜೇಶ್ವರಿ ಒಂದೊಂದಾಗಿ ತಂದು ಹಾಕಿದ ಮೇಲೆ ವಯಸ್ಸಾಗಿ ನಡೆದಾಡಲು ಕಷ್ಟವಾಗುತ್ತಿದ್ದರೂ ಮೊಮ್ಮಕ್ಕಳಿಬ್ಬರು ಒಟ್ಟಿಗೆ ಸೇರಿದ್ದರಿಂದ ಉತ್ತೇಜಿತರಾದ ಗಂಗಮ್ಮ ಕೋಳಿ ಸಾರಿನ ಪಾತ್ರೆಯನ್ನು ರಾಜೇಶ್ವರಿಯಿಂದ ಎತ್ತಿಸಿಕೊಂಡು ತಂದು ತಾನೇ ಒಬ್ಬೊಬ್ಬರಿಗೂ ಬಡಿಸಿದರು. ಕಮ್ಮಗೆ ಮೂಗಿಗೆ ಬಡಿಯುತ್ತಿದ್ದ ಕೋಳಿ ಸಾರಿನ ಪರಿಮಳಕ್ಕೆ ಉತ್ತೇಜಿತನಾದ ನಾಗರಾಜ ರೊಟ್ಟಿಯನ್ನು ಮುರಿಯುತ್ತ ಲಿಂಗರಾಜನತ್ತ ನೋಡಿ 'ಎಣ್ಣೆ ಇಟ್ಟಿಲ್ಲೇನೋ' ಎಂದ. ಮನೆಯಲ್ಲಿ ಅವರಿಗೆ ಬಾಲ್ಯದಿಂದಲೂ ಔತಣ ಇದ್ದ ವಿಶೇಷ ದಿನಗಳಲ್ಲಿ ಅಪ್ಪನೋ, ಅಜ್ಜನೋ ತಾವೇ ಅಲ್ಪಸ್ವಲ್ಪ ಕುಡಿಸುತ್ತಿದ್ದ ಅಭ್ಯಾಸದ ಕಾರಣ ಅವನು ಹೇಳಿದ್ದು ಗುಪ್ತ ಸಂಗತಿಯೇನೂ ಆಗಿರಲಿಲ್ಲ. 'ಮರೆತೇ ಬಿಟ್ಟಿದ್ದೆ ನೋಡು' ಎಂದು ಅರ್ಧ ತುಂಡು ರೊಟ್ಟಿಯನ್ನು ಮುರಿದು ಬಾಯಲ್ಲಿಟ್ಟಿದ್ದ ಲಿಂಗರಾಜ ಎದ್ದು ಜಗುಲಿಗೆ ವಾಪಸಾಗಿ ಅಜ್ಜನ ಕೋಣೆಯಲ್ಲಿ ಕಪಾಟಿನಲ್ಲಿ ಇಟ್ಟಿದ್ದ ಗಾಜಿನ ಬಾಟಲಿಯೊಂದನ್ನು ತಂದ. ಅವನು ತಂದದ್ದನ್ನು ಅನುಸರಿಸಿ ಅಡುಗೆ ಮನೆಯಿಂದ ರಾಜೇಶ್ವರಿ ಮೂರು ಚಿಕ್ಕ ಲೋಟಗಳನ್ನೂ ಎಲ್ಲರ ಎದುರಿಗೆ ಇಟ್ಟಳು. ಬಣ್ಣವಿಲ್ಲದೆ ಶುದ್ಧ ನೀರಿನಂತೆ ಪಾರದರ್ಶಕವಾಗಿದ್ದ ವಿಶೇಷ ಪೇಯವನ್ನು ನೋಡಿದ ನಾಗರಾಜ 'ಆಲೆಮನೆಯದೇನೋ' ಎಂದ. ಅದಕ್ಕೆ ಪ್ರತಿಯಾಗಿ ಏನನ್ನೂ ಹೇಳದ ಲಿಂಗರಾಜು ಮೂರೂ ಲೋಟಗಳಿಗೆ ಅಷ್ಟಷ್ಟು ಬೊಗ್ಗಿಸಿದ. ಅಭ್ಯಾಸವಿದ್ದ ಮೂವರೂ ಆ ಬಗ್ಗೆ ಯಾವ ಮಾತನ್ನೂ ಆಡದೆ ಒಂದೇ ಗುಕ್ಕಿಗೆ ಮುಗಿಸಿ ಲೋಟಗಳನ್ನು ತಟ್ಟೆಯ ಪಕ್ಕದಲ್ಲಿ ಇಟ್ಟುಕೊಂಡರು. ಬಿಸಿ ರೊಟ್ಟಿಗೆ ಹೊಂದಿಕೆಯಾಗುತ್ತಿದ್ದ ಬಿಸಿ ಬಿಸಿ ಸಾರು. ನೆಂಚಿಕೊಳ್ಳಲು ರುಚಿಕರವಾಗಿದ್ದ ವ್ಯಂಜನ. ಹೆಂಚಿನ ಮೇಲೆ ಹದವಾಗಿ ಬೇಯಿಸಿ ನಂತರ ಕೆಂಡದ ಉರಿಯಲ್ಲಿ ಇನ್ನಷ್ಟು

ಗರಿಗರಿಯಾಗಿ ಸುಟ್ಟಿದ್ದ ಅಕ್ಕಿ ರೊಟ್ಟಿ, ಮಸಾಲೆ ಬೆರೆತ ಸುವಾಸನೆಯುಕ್ತ ಸಾರಿನಲ್ಲಿ ಮಿಳಿತವಾಗಿ ಮೂವರೂ ತಲಾ ಒಂದೊಂದು ರೊಟ್ಟಿ ಮುಗಿಸಿದರು. 'ಬಿಸಿ ರೊಟ್ಟಿ' ಎಂದು ರಾಜೇಶ್ವರಿ ಒತ್ತಾಯದಿಂದ ಇನ್ನೂ ಅರ್ಧರ್ಧವನ್ನು ಮೂವರಿಗೂ ಬಡಿಸಿದಳು. ಸಂಜೆ ಮಾಡಿದ್ದ ಬಿಸಿ ಅನ್ನಕ್ಕೆ ಹುಣಸೇ ಹಣ್ಣು ಕಿವಿಚಿ ಒಗ್ಗರಣೆ ಹಾಕಿ ಮಾಡಿದ್ದ ಹುಳಿಸಾರು ಮತ್ತಷ್ಟು ಅನ್ನ ಹಾಕಿಸಿಕೊಳ್ಳುವುದಕ್ಕೆ ಒತ್ತಾಸೆಯಾಯಿತು. ಊಟದ ಸವಿಯನ್ನು ಹೆಚ್ಚಿಸುವಂತೆ ಮಧ್ಯದಲ್ಲಿ ಸೇವಿಸಿದ್ದ ಬಣ್ಣವಿಲ್ಲದ ಪೇಯದ ಪ್ರಭಾವ ಮೂವರಲ್ಲಿಯೂ ನಿಧಾನವಾಗಿ ಆಗುತ್ತಿದ್ದು ಮುಖ ಮೂತಿಯಲ್ಲಿ ಬೆವರಿನ ಹನಿಗಳು ಮೂಡುತ್ತಿದ್ದವು. ಮೂಗಿನಲ್ಲಿಯೂ ತೆಳುವಾಗಿ ಸುರಿಯುತ್ತಿದ್ದ ನೀರನ್ನು ಎಡಗೈ ತೋಳಿನಿಂದ ನಿವಾರಿಸಿಕೊಂಡು ಸಂತೃಪ್ತಿಯಿಂದ ಊಟ ಮುಗಿಸಿ ಎದ್ದರು. ಒಳಮನೆಯಲ್ಲಿ ಇವರ ಊಟ ನಡೆದಿರುವಾಗಲೇ ಅಜ್ಜಿ ಗಂಗಮ್ಮ ಮೆತ್ತಗಿದ್ದ ರೊಟ್ಟಿಯನ್ನು ತಟ್ಟೆಯಲ್ಲಿಟ್ಟುಕೊಂಡು ಕೋಣೆಯಲ್ಲಿ ಮಲಗಿದ್ದ ತಿಮ್ಮನಾಯ್ಕರಿಗೆ ಕೊಟ್ಟು ಬಂದಿದ್ದರು. ಇವರ ಊಟ ಮುಗಿಯುವ ಹೊತ್ತಿಗೆ ತಿಮ್ಮನಾಯ್ಕರ ಊಟವೂ ಮುಗಿದು ಅವರು ಬಾಯಿ ಮುಕ್ಕಳಿಸಿ ಮಲಗುವುದಕ್ಕೆ ಅಣಿಯಾಗಿದ್ದರು.

ಊಟದ ನಂತರ ಎಲೆ ಅಡಿಕೆ ಹಾಕುವ ಅಭ್ಯಾಸ ಯಲ್ಲನಾಯ್ಕರಿಗೆ ಇತ್ತು. ವಿಶೇಷ ಊಟ ಮಾಡಿದ ಸಂದರ್ಭದಲ್ಲಿ ಲಿಂಗರಾಜನೂ ತಾಂಬೂಲ ಹಾಕುತ್ತಿದ್ದನು. ಅಪರೂಪಕ್ಕೆ ಎಲೆ ಅಡಿಕೆ ಹಾಕುವ ಅಭ್ಯಾಸ ಇದ್ದರೂ ನಿತ್ಯ ಮಕ್ಕಳನ್ನು ಎದುರಿಸಬೇಕಿದ್ದ ನಾಗರಾಜ ಊರಿಗೆ ಬಂದಾಗ ಮಾತ್ರವೇ ಊಟದ ನಂತರ ತಾಂಬೂಲ ಹಾಕುತ್ತಿದ್ದ. ಎಲ್ಲರೂ ಊಟ ಮುಗಿಸಿ ಜಗುಲಿಗೆ ಬಂದ ಮೇಲೆ ಅಡುಗೆ ಮನೆಯಲ್ಲಿ ಪಾರ್ವತಮ್ಮ ಸೂಚಿಸಿದಂತೆ ಒಂದು ಹರಿವಾಣದಲ್ಲಿ ಬೆಟ್ಟೆ ಅಡಿಕೆಗಳನ್ನು ಹರಡಿಕೊಂಡು ರಾಜೇಶ್ವರಿ ತಂದು ಇಟ್ಟಳು. ಸುಣ್ಣ ಮತ್ತು ಎಲೆ ಯಲ್ಲನಾಯ್ಕರ ಸಂಚಿಯಲ್ಲಿ ಇದ್ದವು. ಮೂವರೂ ಸುತ್ತ ಕುಳಿತು ಅಡಿಕೆ ಹೋಳನ್ನು ಆರಿಸಿಕೊಂಡು, ಎಲೆಗಳನ್ನು ಆಯ್ದುಕೊಂಡು ತೊಟ್ಟು ಚಿವುಟಿ ಬೆನ್ನಿನ ಪೊರೆಯನ್ನು ಎಳೆದು ತೆಳುವಾಗಿ ಸುಣ್ಣವನ್ನು ಲೇಪಿಸಿಕೊಂಡು ಸುರುಳಿಯಂತೆ ಸುತ್ತಿ ಬಾಯಲ್ಲಿ ಇಟ್ಟುಕೊಂಡರು. ಯಲ್ಲನಾಯ್ಕರು ಹುಡುಗರು ಹೆಬ್ಬೆರಳ ಉಗುರಿನಿಂದ ಸುಣ್ಣವನ್ನು ಕೆದಕುತ್ತಿದ್ದಾಗ 'ಹೊಸ ಸುಣ್ಣ ಕಣ್ರೊ, ಹೆಚ್ಚು ಹಾಕಿದರೆ ನಾಲಿಗೆ ಸುಡ್ತದೆ' ಎಂದು ಎಚ್ಚರಿಸಿದ್ದು ಬಿಟ್ಟರೆ ಬೇರೇನೂ ಹೇಳಲಿಲ್ಲ.

ಸ್ವಾದಿಷ್ಟ ಭೋಜನದ ನಂತರ ತಾಂಬೂಲ ಸೇವಿಸಿ ಮಲಗುವುದಕ್ಕೆ ಅಣಿಯಾದರು. ಲಿಂಗರಾಜ ಜಗುಲಿಯಲ್ಲಿ ಮಲಗುತ್ತಿದ್ದ. ಹೊಸದಾಗಿ ಮದುವೆ ಆಗಿದ್ದರೂ ನಾಗರಾಜ ತಾನೂ ಜಗಲಿಯಲ್ಲಿಯೇ ಮಲಗುವುದಾಗಿ ಹೇಳಿ ಒಳಮನೆಯಿಂದ ಹಾಸುಗೆ ತಂದು ಬಿಚ್ಚಿಕೊಂಡ. ಅದನ್ನು ನೋಡಿದ ರಾಜೇಶ್ವರಿ ತಾನು ಅಡುಗೆ ಮನೆಯಲ್ಲಿ ಮಲಗುವುದಾಗಿ ಹೇಳಿದ್ದು ನಾಗರಾಜನಿಗೆ ನಿರಾಳವಾಯಿತು. 'ಇಲ್ಯಾಕೆ ಒಬ್ಬಳೇ ಮಲಗುತ್ತೀ? ನಮ್ಮ ಕೋಣೆಯಲ್ಲೇ ಮಲಗಾನ ಬಾ..' ಎಂದು ಪಾರ್ವತಮ್ಮ ಹೇಳಿದ್ದು ರಾಜೇಶ್ವರಿಗೂ ಸಮಾಧಾನವಾಯಿತು. ಮನೆಯಲ್ಲಿ ಅಜ್ಜ ಅಜ್ಜಿಯರಿಗೆ ಮಾತ್ರವೇ ಮಂಚ ಇದ್ದುದರಿಂದ ಕೆಲಸಕ್ಕೆ ಸೇರಿದ ಕೆಲವು ತಿಂಗಳಲ್ಲಿ ನಾಗರಾಜನೇ ಹಠ ಹಿಡಿದು ಅಪ್ಪ ಅವ್ವ ಮಲಗುವುದಕ್ಕೂ ಒಂದು ಮಂಚ ಮಾಡಿಸಿದ್ದನು. ಮಂಚದ ಮೇಲೆ ಮಲಗುವ ಅಭ್ಯಾಸ ಒಂದು ವರ್ಷದಿಂದ ಮಾತ್ರ ಇದ್ದ ಪಾರ್ವತಮ್ಮನಿಗೆ ಸೊಸೆಯೊಂದಿಗೆ ತಮ್ಮ ಕೋಣೆಯಲ್ಲಿ ನೆಲದ ಮೇಲೆ ಹಾಸಿಗೆ ಹಾಸಿಕೊಳ್ಳುವುದು ವಿಶೇಷ ಎನಿಸಲಿಲ್ಲ. ಹೆಂಡತಿ ಮಗ್ಗಲಲ್ಲಿ ಇರಲೇ ಬೇಕು ಎಂಬ ನಿರೀಕ್ಷೆ ಯಲ್ಲನಾಯ್ಕರಿಗೂ ಇರಲಿಲ್ಲ.

ಗಂಗಮ್ಮನೊಂದಿಗೆ ಅತ್ತೆ ಸೊಸೆಯರಿಬ್ಬರೂ ಊಟ ಮುಗಿಸಿ ಮುಸುರೆ ಪಾತ್ರೆಗಳನ್ನೆಲ್ಲ ತೊಳೆದಿಟ್ಟು

ಹಿಂದಿನ ಬಾಗಿಲು ಮುಚ್ಚಿ ಮಲಗಲು ಬಂದಾಗ ಜಗುಲಿಯಲ್ಲಿ ನಾಗರಾಜ, ಲಿಂಗರಾಜ ಇಬ್ಬರೂ ಹಾಸಿಗೆ ಬಿಚ್ಚಿಕೊಂಡು ಸಣ್ಣ ದನಿಯಲ್ಲಿ ಮಾತಾಡುತ್ತಿದ್ದರು. ನಾಗರಾಜನತ್ತ ಕೀಟಲೆಯ ನೋಟ ಬೀರಿದ ರಾಜೇಶ್ವರಿ ಅತ್ತೆಯೊಂದಿಗೆ ಅವರ ಕೋಣೆಯನ್ನು ಹೊಕ್ಕಳು. ಊರಿಗೆ ಬಂದಾಗ ಮಲಗುವುದಕ್ಕೆ ತಮಗೇ ಒಂದು ಪ್ರತ್ಯೇಕ ಕೋಣೆ ಮಾಡಿಕೊಳ್ಳಬೇಕು ಎಂದು ನಾಗರಾಜ ಮನಸ್ಸಿನಲ್ಲಿ ಅಂದುಕೊಂಡ. ಮನೆಗೆ ಬಂದಾಗ ಅಣ್ಣ ಅತ್ತಿಗೆ ಪ್ರತ್ಯೇಕವಾಗಿ ಮಲಗುವಂತೆ ಆಗಿರುವ ಸ್ಥಿತಿಯನ್ನು ಅರ್ಥ ಮಾಡಿಕೊಂಡ ಲಿಂಗರಾಜ 'ಮುಂದಿನ ವರ್ಷವಾದರೂ ಈ ಕಡೆ ಕಡಿಮಾಡು ಬೆಳೆಸಬೇಕು' ಎಂದು ಮೆಲ್ಲಗೆ ಹೇಳಿಕೊಂಡ.

ಎಲ್ಲ ಕಡೆ ದೀಪಗಳನ್ನು ಆರಿಸಿ ಮನೆ ತುಂಬ ಕತ್ತಲು ಆವರಿಸಿದ್ದರೂ ನಾಗರಾಜನಿಗೆ ನಿದ್ದೆ ಸುಳಿಯಲಿಲ್ಲ. ಪಕ್ಕದ ಹಾಸಿಗೆಯಲ್ಲಿ ಮಲಗಿದ್ದ ಲಿಂಗರಾಜನಿಗೂ ನಿದ್ದೆ ಬಂದಿಲ್ಲ ಎಂಬುದು ಅವನ ಏರಿಳಿತದ ಉಸಿರಾಟದಿಂದ ಸ್ಪಷ್ಟವಾಗಿತ್ತು. ಅದನ್ನು ಖಚಿತಪಡಿಸಿಕೊಳ್ಳಲು 'ನಿದ್ದೆ ಬಂತೇನೋ' ಎಂದ. 'ಇಲ್ಲ ಮಾರಾಯ, ನನಗೆ ಮಲಗಿದ ಕೂಡಲೇ ನಿದ್ದೆ ಬರೋದಿಲ್ಲ' ಎಂದು ಲಿಂಗರಾಜ ಹೇಳಿದ. ಕತ್ತಲಿದ್ದರೂ ಮಾತು ಮುಂದುವರಿಸಲು ಅಡ್ಡಿ ಇರಲಿಲ್ಲ. ಸಂಜೆ ಬಂದಾಗಲೇ ಅಜ್ಜಿ 'ರಾಮಣ್ಣನ ಹೆಸರೆತ್ತಿದರೆ ಲಿಂಗರಾಜ ಉರಿದು ಬೀಳುತ್ತಾನೆ' ಎಂದಿದ್ದು ನೆನಪಿಗೆ ಬಂತು. ರಾಮಣ್ಣ ಊರು ಕಡೆ ಬರದೆ ಅನೇಕ ವರ್ಷಗಳೇ ಆಗಿದ್ದು ತಾನು ಕೂಡ ಅವನ ಭೇಟಿಗೆ ಹೋಗಿರಲಿಲ್ಲ. ಡಿಪ್ಲೊಮಾ ಮುಗಿಸಿ ಮನೆಗೆ ವಾಪಸಾದ ನಂತರ ತನ್ನ ಬೆಂಗಳೂರು ವಾಸದ ಬಗ್ಗೆ ಲಿಂಗರಾಜ ಯಾವತ್ತೂ ಮನಸ್ಸು ಬಿಚ್ಚಿ ಮಾತಾಡುವ ಅವಕಾಶವೇ ಬಂದಿರಲಿಲ್ಲ. ಊಟಕ್ಕೆ ಹೊರಡುವ ಮೊದಲು ನಡೆದಿದ್ದ ಮಾತುಕತೆಯಲ್ಲಿ ರಾಮಣ್ಣನ ಪ್ರಸ್ತಾಪ ಬಂದಿದ್ದರಿಂದ ಈಗ ಮಾತಾಡಬಹುದು ಎನಿಸಿತು. ಅದಕ್ಕೆ 'ಏನಾದರೂ ಸುದ್ದಿ ಬಂತಾ ಚಿಕ್ಕಪ್ಪನಿಂದ. ಅವನು ಸರ್ಕಾರದ ಯಾವುದೋ ಕಮಿಟಿಗೆ ಅಧ್ಯಕ್ಷನಾಗಿ ನೇಮಕ ಆಗಿದ್ದಾನೆ ಅಂತ ವಾರದ ಹಿಂದೆ ಪತ್ರಿಕೆಯಲ್ಲಿ ಬಂದಿತ್ತು...' ಎಂದು ಮಾತಿಗೆ ಅಣಿ ಹಾಕಿದ. 'ಇಲ್ಲಿಗೆ ಪೇಪರ್ ಎಲ್ಲಿ ಬರುತ್ತೋ... ನಾನು ಪೇಟೆ ಕಡೆ ಹೋದಾಗ ಎಲ್ಲಾದರೂ ಕಣ್ಣಿಗೆ ಬಿದ್ದರೆ ನೋಡುವುದು. ಅವನ ವಿಷಯ ನಾನು ನಿನ್ನ ಕಡೆಯಿಂದಲೇ ಈಚೆಗೆ ಕೇಳುತ್ತಾ ಇರೋದು. ದೊಡ್ಡ ಮನುಷ್ಯ ಆಗಿದ್ದಾನಪ್ಪ ಅವನು' ಎಂದ.

'ನಾನಂತೂ ಅವನನ್ನು ಸರಿಯಾಗಿ ನೋಡಿದ್ದು ಅಂದರೆ ನೀನು ತುಮಕೂರಿನಲ್ಲಿ ಇದ್ದಾಗ. ಅದಾಗಿ ಎಂಟು ಹತ್ತು ವರ್ಷ ಆಯಿತಲ್ಲ. ಅವನು ಆಮೇಲೆ ಒಂದು ಸಲವೇನೋ ಊರಿಗೆ ಬಂದಿದ್ದನಂತೆ. ಆಗ ನಾನು ಬಿಎಡ್ ಪರೀಕ್ಷೆ ಬರೀತಿದ್ದೆ. ನನ್ನ ಮದುವೆಗೆ ಅಪ್ಪಯ್ಯ ಫೋನು ಮಾಡಿ ಕರೆದಿದ್ದ. ಆವಾಗ ಅವನು ಬರಲಿಲ್ಲ. ಅಲ್ಲಿ ಬೆಂಗಳೂರಿನಲ್ಲೇ ದೊಡ್ಡ ಮನೆ ಮಾಡಿದ್ದಾನಂತೆ ಈಗ. ನೀನಿದ್ದಾಗ ಅಲ್ಲೆಲ್ಲೋ ಚಾಮರಾಜಪೇಟೆಯಲ್ಲಿ ಬಾಡಿಗೆ ಮನೆಯಲ್ಲಿದ್ದನಂತಲ್ಲ. ಅಲ್ಲಿಂದ ತಾನೇ ನೀನು ಪಾಲಿಟೆಕ್ನಿಕ್ ಗೆ ಹೋಗ್ತಾ ಇದ್ದುದ್ದು..' ಎಂದು ಲಿಂಗರಾಜನ ನೆನಪು ಬಿಚ್ಚಿಕೊಳ್ಳುವುದಕ್ಕೆ ಒತ್ತಾಸೆ ನೀಡಿದ.

ಮಲಗಿದ್ದ ಲಿಂಗರಾಜ ಎದ್ದು ಕುಳಿತ. 'ಲೈಟ್ ಹಾಕೋದೇನೂ ಬೇಡ.. ಹಂಗೇ ಮಾತಾಡು' ಎಂದು ನಾಗರಾಜ ಅವನು ಲೈಟ್ ಹಾಕಬಹುದೆಂದು ತಡೆದ. ಇವರು ಜಗುಲಿಯಲ್ಲಿ ಮಾತಾಡುತ್ತಿದ್ದರೆ ಒಳಗೆ ಮಲಗಿದ್ದವರಿಗೆ ಎಚ್ಚರವಾಗಿ ಸುಮ್ಮನೆ ಅವರ ನಿದ್ದೆಗೆ ಭಂಗ ಎಂಬ ಎಚ್ಚರಿಕೆ ಅವನದಾಗಿತ್ತು.

* * *

ಆ ದಿನಗಳು ಲಿಂಗರಾಜನಲ್ಲಿ ಹಸಿರಾಗಿದ್ದವು. ಮೂರನೆಯದೋ, ನಾಲ್ಕನೆಯದೋ ಪಿಚ್ಚರ್ ತೆಗೆದು ಅದಕ್ಕೆ ಪ್ರಶಸ್ತಿ ಪಡೆದಿದ್ದ ರಾಮಣ್ಣ ಪ್ರತಿಷ್ಠಿತನಾಗಿ ಹೋಗಿದ್ದ. ಅವನೇ ಇಷ್ಟಪಟ್ಟಂತೆ ಬೆಂಗಳೂರಿಗೆ ವರ್ಗ

ಆಗಿತ್ತು. ಅದೇ ಮೊದಲ ಸಲಕ್ಕೆ ಬೆಂಗಳೂರಿಗೆ ಮನೆ ಸಾಮಾನು ತುಂಬಿಕೊಂಡಿದ್ದ ಲಾರಿಯಲ್ಲಿ ಲಿಂಗರಾಜು ಬಂದಿದ್ದ. ಅದು ಚಾಮರಾಜಪೇಟೆಯಂತೆ. ಮನೆ ಹುಡುಕಿ ಅದರ ವಿಳಾಸವನ್ನು ಲಾರಿ ಚಾಲಕನಿಗೆ ಕೊಟ್ಟು ರಾಮಣ್ಣ ಹೆಂಡತಿ ಮಗುವಿನ ಜೊತೆ ಬಸ್ಸಿನಲ್ಲಿ ಹೊರಟಿದ್ದ. ಲಿಂಗರಾಜು ಜೊತೆಗೆ ಹೊರಟಾಗ ಅವನ್ನು ಪಕ್ಕಕ್ಕೆ ಕರೆದು ಲಾರಿಯಲ್ಲಿ ಬರಲು ಸೂಚಿಸಿದ್ದ. 'ಮನೆ ಸಾಮಾನು ಇದಾವಲ್ಲ, ಲಾರಿಯವರು ಮಧ್ಯದಲ್ಲಿ ನಿಲ್ಲಿಸಿ ಬೇಕಾದ್ದನ್ನು ಇಳಿಸಿಕೊಂಡರೆ...' ಎಂದು ತನ್ನನ್ನು ಅತ್ಯಂತ ವಿಶ್ವಾಸಕ್ಕೆ ತೆಗೆದುಕೊಂಡು ಹೇಳಿದ್ದರಿಂದ ಲಿಂಗರಾಜನಿಗೆ ಚಿಕ್ಕಪ್ಪ ತನ್ನ ಮೇಲೆ ಇಟ್ಟಿದ್ದ ನಂಬಿಕೆಗೆ ಮನಸ್ಸು ತುಂಬಿ ಬಂದಿತ್ತು. ಅಂಥದ್ದೇನೂ ಆಗದಿದ್ದರೂ ಮುಂದುಗಡೆ ಕ್ಯಾಬಿನ್‌ನಲ್ಲಿ ಕುಳಿತಿದ್ದ ಲಿಂಗರಾಜು ಮಧ್ಯದಲ್ಲಿ ಚಾಲಕ ಲಾರಿ ಇಳಿಸುವುದನ್ನು ಪತ್ತೇದಾರನಂತೆ ಎದುರು ನೋಡುತ್ತಿದ್ದ. ಲಾರಿ ಚಾಲಕ ಮಧ್ಯದಲ್ಲಿ ಎಲ್ಲಿಯೂ ನಿಲ್ಲಿಸದೆ ರಾಮಣ್ಣ ಕೊಟ್ಟಿದ್ದ ವಿಳಾಸದ ಜಾಗಕ್ಕೆ ಬಂದಾಗ ಅವನಿಗೆ ನಿರಾಸೆ ಆಗಿತ್ತು. ಅದು ಮುಖ್ಯರಸ್ತೆಗೆ ಹೊಂದಿಕೊಂಡಿದ್ದರೂ ಮುಂದಿನ ಮನೆಯ ಹಿಂಬದಿಯಲ್ಲಿ ಎರಡು ಕೋಣೆಗಳ ಚಿಕ್ಕ ಮನೆಯಾಗಿತ್ತು. ಅಲ್ಲಿಗೆ ಸಾಮಾನು ಸಾಗಿಸಿ ಅವನ್ನೆಲ್ಲ ಜೋಡಿಸಿದ ನಂತರ ರಾಮಣ್ಣನೇ ಅವನನ್ನು ಕರೆದೊಯ್ದು ಪಾಲಿಟೆಕ್ನಿಕ್‌ಗೆ ಸೇರಿಸಿದ್ದ. ಅಲ್ಲಿಗೆ ಸಿಟಿ ಬಸ್ಸಿನಲ್ಲಿ ಹೋಗುವ ವ್ಯವಸ್ಥೆಯನ್ನು ತೋರಿಸಿದ್ದ. ಬಸ್ಸಿನ ನಂಬರನ್ನು ತಿಳಿಸಿ ಅದಕ್ಕೆ ತಿಂಗಳ ಪಾಸು ಮಾಡಿಸಿಕೊಟ್ಟಿದ್ದ.

ಚಾಮರಾಜಪೇಟೆಯಿಂದ ನಿತ್ಯವೂ ಕೆ.ಆರ್. ಸರ್ಕಲ್ ಬಳಿ ಇದ್ದ ಸರ್ಕಾರಿ ಪಾಲಿಟೆಕ್ನಿಕ್‌ಗೆ ಬೆಳಗ್ಗೆ ಒಂಬತ್ತು ಗಂಟೆ ಸುಮಾರಿಗೆ ಬಸ್ಸಿನಲ್ಲಿ ಹೋಗುತ್ತಿದ್ದ ಲಿಂಗರಾಜ ಕೆಲವೇ ದಿನಗಳಲ್ಲಿ ಮಾರ್ಗ ಮಧ್ಯದ ಮಾರುಕಟ್ಟೆ, ವಿಕ್ಟೋರಿಯಾ ಆಸ್ಪತ್ರೆ, ಪುರಭವನ, ರವೀಂದ್ರ ಕಲಾಕ್ಷೇತ್ರ, ಕಾರ್ಪೊರೇಷನ್ ಸರ್ಕಲ್, ಮೈಸೂರು ಬ್ಯಾಂಕು ಇತ್ಯಾದಿ ಸ್ಥಳಗಳ ಗುರುತು ಮಾಡಿಕೊಂಡ. ನಗರ ಸಾರಿಗೆ ಬಸ್ಸಿನ ಕೆಲವು ನಂಬರಿನ ಬಸ್ಸುಗಳಿಗೆ ಅನ್ವಯವಾಗುವ ಪಾಸನ್ನು ಮಾಡಿಸಿದ್ದರಿಂದ ಅವನಿಗೆ ಹೆಚ್ಚಿನ ಗೊಂದಲವಾಗಲಿಲ್ಲ.

ಒಂದೆರಡು ತಿಂಗಳು ಕಳೆಯುತ್ತಿದ್ದಂತೆ ರಾಮಣ್ಣನ ಮನೆಯ ಗುರುತು ಅವನ ಗೆಳೆಯರಿಗೆ ಪರಿಚಯವಾಗಿ ಕೆಲವರು ಬರತೊಡಗಿದ್ದರು. ಗೆಳೆಯರ ಬರವು ಹೆಚ್ಚಾಗುತ್ತಿದ್ದಂತೆ ರಾಮಣ್ಣ ಒಂದು ಸಂಜೆ ಕಂದು ಬಣ್ಣದ ದಪ್ಪನೆಯ ಬನಿಯನ್ ಒಂದನ್ನು ಲಿಂಗರಾಜನಿಗೆ ಕೊಟ್ಟು 'ಇದು ನಿನ್ನ ಅಳತೆಗೆ ಸರಿ ಹೋಗುತ್ತದೆಯೋ ನೋಡು. ಮನೆಯಲ್ಲಿದ್ದಾಗ ಹಾಕಿಕೊಳ್ಳಬಹುದು. ಆರಾಮಾಗಿಯೂ ಇರುತ್ತೆ. ನಿನಗೆ ತುಂಬಾ ಚೆನ್ನಾಗಿ ಕಾಣುತ್ತೆ..' ಎಂದು ಅಭಿಮಾನ ಮೂಡುವಂತೆ ಹೇಳಿದ. ಲಿಂಗರಾಜನ ಮೈ ಅಳತೆಗೆ ಸರಿಯಾಗಿ ಹೊಂದಿಕೊಂಡ ಹೊಸ ಬಗೆಯ ಬನಿಯನ್ನು ಅವನಿಗೆ ಇಷ್ಟವಾಯಿತು. 'ಮನೆಯಲ್ಲಿ ಇದ್ದಾಗ ಒಳ್ಳೆಯ ಚಡ್ಡಿ ಹಾಕು. ಚೆನ್ನಾಗಿ ಕಾಣುತ್ತದೆ..' ಎಂದು ಹೇಳಿ ಕಂದು, ಊದಾ ಬಣ್ಣದ ಹೊಸ ಚಡ್ಡಿಗಳನ್ನು ತಂದುಕೊಟ್ಟ. ಅದು ಕ್ರಮೇಣ ಚಡ್ಡಿಗೂ ಬನಿಯನ್ನಿಗೂ ಹೊಂದಿಕೆಯಾಗುವ ಉಡುಪಿನಂತಾಯಿತು. ಬೇರೆ ಬೇರೆ ಬಣ್ಣದ ಮನೆ ಉಡುಪುಗಳನ್ನು ಹಾಕಿಕೊಂಡು ಸಂಭ್ರಮಿಸುತ್ತಾ ಇದ್ದ ಲಿಂಗರಾಜನನ್ನು ಮನೆಯಲ್ಲಿ ಇದ್ದಾಗ ತುಂಬ ಪ್ರೀತಿಯಿಂದ ಮಾತಾಡಿಸುತ್ತಿದ್ದ ರಾಮಣ್ಣ, ಅತಿಥಿಗಳು ಬಂದಾಗ ಅವನಿಂದಲೇ ಕಾಫಿ ಟೀ ಲೋಟಗಳನ್ನು ಪೂರೈಸುವುದಕ್ಕೆ ಕರೆಯುತ್ತಿದ್ದ. ಮಂಜು ಚಿಕ್ಕಮ್ಮ ಎಂದಿನಂತೆ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಅವರೇ ಅಡುಗೆ ಮನೆಯಲ್ಲಿ ಎಷ್ಟು ಜನ ಅತಿಥಿಗಳು ಬಂದರೆ ಅವರಿಗೆಲ್ಲ ಕಾಫಿ ಮತ್ತು ಟೀಯನ್ನು ಯಾವ ಪ್ರಮಾಣದಲ್ಲಿ ಮಾಡಬೇಕು ಎಂಬುದನ್ನು ನಿಧಾನವಾಗಿ ತೋರಿಸಿಕೊಟ್ಟರು. ಅವನು ಉತ್ಸಾಹದಿಂದ ಕಾಫಿ ಮಾಡಿ ರಾಮಣ್ಣನಿಗೂ, ಚಿಕ್ಕಮ್ಮನಿಗೂ ನೀಡಿದಾಗ 'ತುಂಬ ಚೆನ್ನಾಗಿದೆ' ಎಂದು

ಮೆಚ್ಚುಗೆ ಸೂಚಿಸಿದ್ದರು. 'ಗಂಡುಮಕ್ಕಳು ಅಡುಗೆ ಕಲಿತರೆ ಜಗತ್ತಿನಲ್ಲಿ ಎಲ್ಲಿಗೆ ಹೋದರೂ ಜಯಿಸಿ ಬರಬಹುದು. ಈಗೇನು ಎಲ್ಲಾ ಕಡೆ ಎಲ್ಲಾ ಸಾಮಾನು ಸಿಗುತ್ತವೆ. ಅವನ್ನು ಚೆನ್ನಾಗಿ ಮಾಡಿಕೊಳ್ಳಲು ಬಂದರೆ ಆಯಿತು' ಎಂದು ಅವನನ್ನು ರಮಿಸುವಂತೆ ಹೇಳುತ್ತಿದ್ದ ಮಂಜುಳ ನಿಧಾನವಾಗಿ ಅವನಿಗೆ ಅನ್ನ ಮಾಡುವುದನ್ನು ಹೇಳಿಕೊಟ್ಟಳು. ತಿಳಿಸಾರು ಮಾಡುವುದನ್ನೂ ಕಲಿಸಿದಳು. 'ಅಡುಗೆ ಮಾಡುವುದರ ಹಿಂದೆ ಒಂದೇ ತತ್ವ ಇರುತ್ತದೆ ಲಿಂಗ್ರಾಜ, ತರಕಾರಿ ಬೇರೆ ಬೇರೆ ಇರಬಹುದು. ಆದರೆ ಒಗ್ಗರಣೆಯ ವಿಧಾನ ಒಂದೇ ಇರುತ್ತದೆ. ಅಡುಗೆ ಮನೆಯಲ್ಲಿ ಶುಚಿ ಮತ್ತು ರುಚಿಯ ದೃಷ್ಟಿ ಇಟ್ಟುಕೊಳ್ಳಬೇಕು. ಶುದ್ಧ ಮನಸ್ಸಿನಿಂದ ಅನ್ನ ಸಾರು ಮಾಡಿ ಹಾಕಿದರೂ ಅದು ಅತ್ಯಂತ ಆರೋಗ್ಯಪೂರ್ಣವಾಗಿರುತ್ತದೆ..' ಎಂದು ಅವನ ಕೆಲಸಕ್ಕೆ ತಾತ್ವಿಕ ತಳಹದಿಯನ್ನು ರಾಮಣ್ಣ ನೀಡಿದ್ದ. ಬೆಳಗ್ಗೆ ಎದ್ದು ನಿತ್ಯದ ಪದ್ಧತಿಯಂತೆ ಚಿಕ್ಕಮ್ಮನ ಕೆಲಸಗಳಿಗೆ ನೆರವಾಗಿ ಕಾಲೇಜಿಗೆ ಹೊರಡುತ್ತಿದ್ದ. ಪ್ರಾಕ್ಟಿಕಲ್ ಇದ್ದಾಗ ಬೇಗ ಮನೆ ಬಿಡಬೇಕಿತ್ತು. ಅವನ ಕಾಲೇಜು ಮಧ್ಯಾಹ್ನಕ್ಕೆ ಮುಗಿಯುತ್ತ ಇತ್ತು. ಸಂಜೆ ನಾಲ್ಕೂವರೆ ಐದು ಗಂಟೆಗೆಲ್ಲ ಮನೆ ಸೇರುತ್ತಿದ್ದ. ಚಿಕ್ಕಮ್ಮನ ಕೆಲಸಗಳಿಗೆ ನೆರವಾಗುತ್ತ, ಮನೆಗೆ ಸಂಜೆ ವೇಳೆಗೆ ಬರುತ್ತಿದ್ದ ರಾಮಣ್ಣನ ಗೆಳೆಯರನ್ನು ಸತ್ಕರಿಸುತ್ತ ಅವನಿಗೆ ಸ್ವಂತದ ಓದಿಗೆ ಹೆಚ್ಚು ಸಮಯ ಸಿಗುತ್ತಿರಲಿಲ್ಲ. ಆದರೂ ಓದಿನಲ್ಲಿ ಹಿಂದೆ ಬೀಳಲಿಲ್ಲ. ಮನೆಯಲ್ಲಿ ಹೊರಗಿನವರು ಯಾರೂ ಇಲ್ಲದಿದ್ದಾಗ ತುಂಬ ವಿಶ್ವಾಸದಿಂದ ಮಾತಾಡುತ್ತಿದ್ದ ರಾಮಣ್ಣ ಯಾರಾದರೂ ಅತಿಥಿಗಳು ಮಾತಿಗೆ ಕುಳಿತಿದ್ದರೆ ಚಿಕ್ಕಮ್ಮನೊಂದಿಗೆ ಮಾತ್ರ ಏನಾದರೂ ಹೇಳುತ್ತಿದ್ದ.

ಇವನ ಡಿಪ್ಲೊಮಾ ಕೋರ್ಸಿನ ಎರಡನೇ ವರ್ಷವೇ ರಾಮಣ್ಣನಿಗೆ ಹೊಸ ಬಡಾವಣೆಯೊಂದರಲ್ಲಿ ನಿವೇಶನ ಮಂಜೂರಾಯಿತು. ಸರ್ಕಾರದಿಂದ ಸಾಲವೂ ಸಿಗುತ್ತದೆ ಎಂದು ಚಿಕ್ಕಮ್ಮನೊಂದಿಗೆ ಮಾತಾಡಿ ಮನೆಯನ್ನು ಕಟ್ಟಿಸಲು ರಾಮಣ್ಣ ಮುಂದಾದ. ಅದಕ್ಕೆ ಆಗಾಗ ಜನ ಮನೆಗೆ ಬರುತ್ತಿದ್ದರು. ಕಾಲೇಜು, ಸಿನಿಮಾ ನಿರ್ಮಾಣ, ಕರೆದಲ್ಲಿಗೆ ಹೋಗಿ ಭಾಷಣ, ಬರವಣಿಗೆ ಇತ್ಯಾದಿ ಚಟುವಟಿಕೆಗಳನ್ನು ಹಚ್ಚಿಕೊಂಡಿದ್ದ ರಾಮಣ್ಣ ಬೆಳಗ್ಗೆ ಮನೆ ಬಿಟ್ಟರೆ ತಡರಾತ್ರಿಗೆ ಬರುತ್ತಿದ್ದ. ಅವನನ್ನು ಹುಡುಕಿಕೊಂಡು ಬಂದ ಗೆಳೆಯರಿಗೆ ಕಾಫಿಯನ್ನೋ, ಚಹವನ್ನೋ ಕೊಡುವುದು ಕಡ್ಡಾಯವಾಗಿತ್ತು. ರಾಮಣ್ಣ ಆಗಾಗ ಕೊಡಿಸುತ್ತಿದ್ದ ಚಡ್ಡಿ ಮತ್ತು ಅರೆ ತೋಳಿನ ದಪ್ಪ ಬನಿಯನ್ನು ಹಾಕಿಕೊಂಡು ಅಡುಗೆ ಮನೆಯಲ್ಲಿ ಚಿಕ್ಕಮ್ಮ ಟ್ರೇಯಲ್ಲಿ ಹಾಕಿ ಕೊಡುತ್ತಿದ್ದ ಕಾಫಿ, ಟೀ ಲೋಟಗಳನ್ನು ಕೊಟ್ಟು ಅವರು ಕುಡಿದಾದ ಮೇಲೆ ಒಳಮನೆಗೆ ತಂದು ತೊಳೆದು ಇಡುವ ಕೆಲಸ ಲಿಂಗರಾಜನಿಗೆ ಅಭ್ಯಾಸವಾಗಿತ್ತು.

ಅವನ ಡಿಪ್ಲೊಮಾ ಅಂತಿಮ ವರ್ಷದಲ್ಲಿ ಶೈಕ್ಷಣಿಕ ಪ್ರವಾಸಕ್ಕೆ ಹೋಗಬೇಕಾಗಿತ್ತು. 'ನೀನು ಹೋದರೆ ಹೆಂಗೋ ಮಾರಾಯ. ಇಲ್ಲಿ ಮನೆ ಕೆಲಸ ಕೊನೇ ಹಂತಕ್ಕೆ ಬಂದಿದೆ. ಅಕಸ್ಮಾತ್ ಹೊರಡೋ ಹೊತ್ತಿಗೆ ವಿದ್ಯಾರ್ಥಿ ಕಾಯಿಲೆ ಕಸಾಲೆ ಅಂತ ಬಿದ್ರೆ ಏನು ಮಾಡ್ತಾರಂತೆ ನಿಮ್ಮ ಕಾಲೇಜಿನೋರು' ಎಂದು ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದು ರಾಮಣ್ಣನ ಬಗ್ಗೆ ಲಿಂಗರಾಜು ಅಸಮಾಧಾನ ಪಡಲು ಕಾರಣವಾಗಿತ್ತು. ಆ ಪರಿಸ್ಥಿತಿಯ ಅರಿವೂ ಅವನಿಗೆ ಇತ್ತು. ರಾಮಣ್ಣನೇ ಅವರ ವಿಭಾಗದ ಮುಖ್ಯಸ್ಥರೊಂದಿಗೆ ಫೋನ್ ನಲ್ಲಿ ಮಾತನಾಡಿದ್ದ. ಊರಲ್ಲಿ ಅವನ ಅಜ್ಜನಿಗೆ ವಿಪರೀತ ಕಾಯಿಲೆ ಅಂತ ನೆಪ ಹೇಳಿ ಪ್ರವಾಸದ ಕಟ್ಟಲೆಯಿಂದ ಬಿಡಿಸಿಕೊಂಡಿದ್ದ. 'ನೀನು ಕೆಲಸಕ್ಕೆ ಸೇರಿ ನಿನ್ನ ಕಾಲ ಮೇಲೆ ನಿಂತಾಗ ಯಾವ ಜಾಗಕ್ಕಾದರೂ ಮಾರಾಜನ ಹಾಗೆ ಹೋಗು.. ಈ ಹುಡುಗರ ದಂಡಿನಲ್ಲಿ ಪ್ರವಾಸ ಹೋದರೆ ಏನನ್ನೂ ನೋಡೋದಕ್ಕೆ ಆಗಾದಿಲ್ಲ. ಅದೆಲ್ಲ ಹೆಂಗೆ ಇರುತ್ತೆ ಗೊತ್ತಾ, ಇಲ್ಲಿ ಮದುವೆ ಆರತಕ್ಷತೆ ಅಂತ ಹೋಗ್ತೀವಲ್ಲ, ಅಲ್ಲಿ ನಮ್ಮನ್ನು ಗಂಡು ಹೆಣ್ಣಿಗೆ

ಪರಿಚಯ ಮಾಡಿಸ್ತಾರಲ್ಲ. ಆ ಕ್ಷಣಕ್ಕೆ ಗುರ್ತು ಇರುತ್ತೆ. ಐದು ನಿಮಿಷ ಕಳೆದು ಹೋದರೆ ನಾವು ಯಾರೂ ಅಂತ ಅವರಿಗೇ ಗೊತ್ತಿರಾದಿಲ್ಲ.. ಗೊತ್ತಾ..' ಎಂದು ವಿವರವಾಗಿ ಹೇಳಿ ಲಿಂಗರಾಜನ ಅಸಮಾಧಾನವನ್ನೂ ನಿವಾರಿಸಿದ್ದ.

ಡಿಪ್ಲೊಮಾ ಪರೀಕ್ಷೆ ಮುಗಿದು ಫಲಿತಾಂಶ ಬಂದಾಗ ಲಿಂಗರಾಜ ತೇರ್ಗಡೆಯಾಗಿದ್ದ. ಅಂತೂ ಒಂದು ಹಂತಕ್ಕೆ ಬಂದ ಸಮಾಧಾನವಾಗಿತ್ತು. ರಾಮಣ್ಣನ ಹೊಸ ಮನೆಯ ಕೆಲಸವೂ ಮುಗಿದಿತ್ತು. ಅದೊಂದು ಸಂಜೆ ಅದರ ಗೃಹಪ್ರವೇಶ ಸಮಾರಂಭಕ್ಕೆ ಮಾತುಕತೆ ನಡೆಸುವುದಕ್ಕೆ ಮನೆ ಕೆಲಸದ ಉಸ್ತುವಾರಿ ಹೊತ್ತಿದ್ದ ಗೆಳೆಯನೊಬ್ಬ ಬಂದಿದ್ದ. ಎರಡು ವರ್ಷಗಳಿಂದಲೂ ಬಂದು ಹೋಗುತ್ತಿದ್ದ ಅವನು ಅವತ್ತು ತುಂಬಾ ಅವಸರದಲ್ಲಿ ಇದ್ದಂತೆ ತೋರಿದ. ಎಂದಿನಂತೆ ರಾಮಣ್ಣನಿಗೂ, ಅವನಿಗೂ ಕಾಫಿ ಕೊಟ್ಟು ಖಾಲಿ ಲೋಟಗಳನ್ನು ಎತ್ತಿಕೊಂಡು ಅಡುಗೆ ಮನೆಗೆ ಕಡೆ ತಿರುಗಿದ್ದ ಲಿಂಗರಾಜನಿಗೆ 'ಮೇಷ್ಟ್ರೇ, ನಮಗೂ ಒಬ್ಬ ಇಂಥ ಹುಡುಗನನ್ನು ಹುಡುಕಿ ಕೊಡ್ರೀ.. ಎರಡು ವರ್ಷದಿಂದ ನೋಡ್ತಾ ಇದೀನಿ, ಇವನು ಎಷ್ಟು ನಿಯತ್ತಿನಲ್ಲಿ ನಿಮ್ಮ ಮನೆ ಕೆಲಸ ಮಾಡ್ತಾ ಇದಾನಲ್ಲ. ಮಾತಿಲ್ಲ, ಕತೆಯಿಲ್ಲ. ಎಂಥ ಒಳ್ಳೇ ಹುಡುಗ..' ಎಂದು ರಾಮಣ್ಣನ ಗೆಳೆಯ ಹೇಳಿದ್ದು ಕೇಳಿಸಿತು. ಅದಕ್ಕೆ ರಾಮಣ್ಣ 'ಈಗ ಹಂಗೆಲ್ಲ ಎಲ್ಲಿ ಸಿಕ್ತಾರೆ ಕೆಲಸದೋರು. ನಾವು ಊರು ಕಡೆಯಿಂದ ಬಾಳ ವರ್ಷದ ಹಿಂದೆ ಕರಕೊಂಡು ಬಂದಿರೋದು... ಈಗ ಹಿಂಗೆ ಯಾರೂ ಬರಾದಿಲ್ಲ...' ಎಂದು ಸಮಜಾಯಿಷಿ ಕೊಡುತ್ತಾ ಇದ್ದುದು ಕೇಳಿ ಆಘಾತವಾಯಿತು. ತನ್ನನ್ನು ಬೆಂಗಳೂರಿನ ಗೆಳೆಯರಿಗೆ ಕೆಲಸದ ಹುಡುಗ ಎಂದೇ ರಾಮಣ್ಣ ಪರಿಚಯಿಸಿದ್ದನೇ ಎಂದು ದಿಗ್ಭ್ರಮೆಯಾಯಿತು. ಬೆಂಗಳೂರಿನಲ್ಲಿ ಕಳೆದ ಮೂರು ವರ್ಷ ತಾನು ಹೀಗೆ ಮನೆ ಕೆಲಸದವನಾಗಿಯೇ ಇದ್ದೆನೇ ಎಂದು ಸಂಕಟವಾಗಿ ಅವತ್ತು ರಾತ್ರಿಯೆಲ್ಲ ಪರಿತಪಿಸಿದ್ದ.

* * *

'ಬೆಂಗಳೂರಿನಲ್ಲಿ ಇದ್ದ ಮೂರು ವರ್ಷ ಚಿಕ್ಕಪ್ಪ ನನ್ನನ್ನು ಯಾವತ್ತೂ 'ಇವನು ನಮ್ಮ ಮನೆ ಹುಡುಗ, ನನ್ನ ಅಣ್ಣನ ಮಗ' ಅಂತ ಯಾರಿಗೂ ಹೇಳಿರಲಿಲ್ಲ. ನಾನು ಅಲ್ಲಿ ಹೇಗಿದ್ದೆ ಅಂದರೆ ಅವರ ಮನೆಯ ಕೆಲಸದ ಆಳು ಅಂತ ಬಂದವರೆಲ್ಲ ಭಾವಿಸುತ್ತಿದ್ದರು ಅಂತ ನನಗೆ ಪರೀಕ್ಷೆ ರಿಸಲ್ಟು ಬಂದ ಮೇಲೆ ಗೊತ್ತಾಯಿತು. ಅವನು 'ಬಾಳ ಚೆನ್ನಾಗಿದೆ ಮನೆಯಲ್ಲಿ ಹಾಕೋ ಡ್ರೆಸ್ಸು' ಅಂತ ಕೊಡಿಸಿದ್ದು ಅಲ್ಲಿ ಮನೆ ಕೆಲಸದವರನ್ನು ಪ್ರತ್ಯೇಕವಾಗಿ ಗುರುತಿಸಲು ಸಿರಿವಂತರ ಮನೆಗಳಲ್ಲಿ ನೀಡುತ್ತಿದ್ದ ಡ್ರೆಸ್ಸುಗಳೇ. ನನ್ನನ್ನು ಒಬ್ಬ ಜೀತದ ಆಳಿನಂತೆ ನೋಡುವುದು, ನನಗೆ, ಎಂಥಾ ದಡ್ಡ ನಾನು, ಕೊನೆಯ ದಿನದವರೆಗೂ ಗೊತ್ತೇ ಆಗಲಿಲ್ಲ. ಅದು ಗೊತ್ತಾದ ಮಾರನೇ ದಿನ ಕಾಲೇಜಿಗೆ ಹೋದೆ. ಡಿಪ್ಲೊಮಾ ಮಾರ್ಕ್ಸ್ ಕಾರ್ಡು ಕೈಗೆ ಸಿಗುತ್ತಲೇ ಈ ದೊಡ್ಡ ಮನುಷ್ಯನ ಸಾವಾಸವೇ ಬ್ಯಾಡ ಅಂತ ಬಟ್ಟೆ ಬರೆ ಎತ್ತಿಕೊಂಡು ಅವತ್ತೇ ರಾತ್ರಿ ಬಸ್ಸಿಗೆ ಊರಿಗೆ ಬಂದೆ..' ಎಂದ ಲಿಂಗರಾಜ. ನಾಗರಾಜನಿಗೆ ಹೆಚ್ಚಿನ ವಿವರಗಳನ್ನು ಕೇಳುವ ಮನಸ್ಸಾಗಲಿಲ್ಲ. ಕಂಡವರ ಮನೆಯಲ್ಲಿ ಇದ್ದಾಗ ಅನುಭವಿಸುವ ಅನಾಥ ಪ್ರಜ್ಞೆಯ ಅರಿವು ಮೇಷ್ಟರಾಗಿದ್ದ ಅವನಿಗೆ ತಿಳಿಯದ ಸಂಗತಿಯಲ್ಲ.

'ಹೋಗಲಿ ಬಿಡು. ಅಪಮಾನ ಆಗುವಂಥ ಪರಿಸ್ಥಿತಿ ಇದ್ದರೂ ನಿನಗೆ ಡಿಪ್ಲೊಮಾ ಅಂತ ಒಂದು ಡಿಗ್ರಿ ಮಾಡಿಸಿದನಲ್ಲ. ಅದಕ್ಕಾದರೂ ಸಮಾಧಾನ ಪಟ್ಟುಕೊಳ್ಳೋಣ' ಅಂದ. 'ಅದಕ್ಕೇ ನಾನು ಈಗ ಸುಮ್ಮನಾಗಿರೋದು. ಇಲ್ಲದಿದ್ದರೆ ಅವನ ದೊಡ್ಡಸ್ಥಿಕೆಗೆ ಜನ್ಮ ಜಾಲಾಡುತ್ತಿದ್ದೆ' ಎಂದು ಹೇಳಿ ಹಾಸಿಗೆಯ

ಮೇಲೆ ಉರುಳಿದ.

* * *

ಅಧ್ಯಾಯ–7

# ತಿಮ್ಮನಾಯ್ಕರ ಅವಸಾನ

ಬೆಳಗ್ಗೆ ಆರು ಗಂಟೆಗೆ ಮೊದಲು ಎಚ್ಚರವಾಗುವ ಅಭ್ಯಾಸ ಇದ್ದ ಲಿಂಗರಾಜ ಎದ್ದು ಹಾಸುಗೆಯನ್ನು ಎತ್ತಿಟ್ಟು ಮುಂಬಾಗಿಲು ತೆಗೆದು ಮನೆ ಎದುರಿನ ಅಂಗಳದ ದಕ್ಷಿಣ ಮೂಲೆಯಲ್ಲಿ ದೇಹಬಾಧೆ ಇಳಿಸಿಕೊಂಡ. ಅವ್ವನಾಗಲೀ, ಅಜ್ಜಿಯಾಗಲೀ ಎದ್ದಂತೆ ಕಾಣಲಿಲ್ಲ. ಮತ್ತೆ ಒಳಗೆ ಬಂದು ಸಣ್ಣದೊಂದು ಕತ್ತಿ ಹಿಡಿದು ಚಪ್ಪಲಿ ಮೆಟ್ಟಿಕೊಂಡು ಮುಂಬಾಗಿಲನ್ನು ಮುಂದೆ ಮಾಡಿ ಅಂಗಳದ ಅಂಚಿನ ಕಳ್ಳಿಬೇಲಿಯ ದಡಪೆಯನ್ನು ದಾಟಿ ತೋಟದ ಕಡೆ ಇಳಿದ. ನಾಲ್ಕು ಸಾಲು ಗದ್ದೆಗಳನ್ನು ದಾಟಿದ ನಂತರ ಹತ್ತು ಸಾಲು ಅಡಿಕೆ ಮರಗಳ ಸಣ್ಣ ತೋಟ. ಗದ್ದೆ ತೋಟಗಳನ್ನು ಒಟ್ಟು ಮಾಡಿ ಬೇಲಿ ಹಾಕಿದ್ದರು. ತೋಟದಲ್ಲಿ ಒಂದು ಸುತ್ತು ಹಾಕಿ ಬರುವ ಅಭ್ಯಾಸ ಮಾಡಿಕೊಂಡಿದ್ದ. ತೋಟದಲ್ಲಿ ಸುತ್ತಾಡುವಾಗ ಉದುರಿದ್ದ ಅಡಿಕೆ ಸೋಗೆಗಳನ್ನು ಎರಡು ಮೂರು ತುಂಡುಗಳಾಗಿ ಕತ್ತರಿಸಿ ಅಡಿಕೆ ಮರಗಳ ಬುಡಕ್ಕೆ ಹಾಕುತ್ತಿದ್ದ. ಕಳೆಯನ್ನು ನಿಯಂತ್ರಿಸುವುದಕ್ಕೆ ಅವನು ತನ್ನಷ್ಟಕ್ಕೆ ಕಂಡುಕೊಂಡ ಮಾರ್ಗ ಅದು. ತೋಟದ ಮಧ್ಯದಲ್ಲಿ ಒಂದು ತೆರೆದ ಬಾವಿ ಇದ್ದು ಅದರ ದಂಡೆಯ ಸುತ್ತ ಅಕೇಸಿಯಾ ಗಿಡಗಳನ್ನು ಲಿಂಗರಾಜನೇ ಹಾಕಿದ್ದ. ತಮ್ಮ ಜಮೀನು ಸ್ವಲ್ಪವೇ ಇದ್ದರೂ ಅದು ಕಣ್ಣಿಗೆ ತಂಪಾಗುವಷ್ಟು ಹಸಿರಿನಲ್ಲಿ ಕೂಡಿರಬೇಕು ಎಂಬುದು ಅವನ ಎಣಿಕೆಯಾಗಿತ್ತು.

ಅವನು ತೋಟದಲ್ಲಿ ನಿಧಾನವಾಗಿ ಅತ್ತಿತ್ತ ನೋಡುತ್ತಾ ಸಾಗುತ್ತಿದ್ದಾಗ 'ದಿನಾ ಇಷ್ಟು ಬೇಗ ಎದ್ದು ಕೆಲಸ ಶುರು ಮಾಡ್ತೀಯೇನೋ ಮಾರಾಯ' ಎಂದು ಹೇಳುತ್ತಾ ನಾಗರಾಜ ತಾನಿರುವತ್ತ ಬರುವುದು ಕಾಣಿಸಿತು. 'ಅಂಥಾ ಕೆಲಸ ಏನಿರುತ್ತೆ? ಬೇಗ ಎದ್ದೆನಲ್ಲ, ಹಂಗೆ ತ್ವಾಟದ ಕಡೆ ಬಂದೆ' ಎನ್ನುತ್ತ ನಿಂತ. ಇಬ್ಬರೂ ತೋಟದ ಮೂಲೆಯವರೆಗೆ ನಿಧಾನವಾಗಿ ಸಾಗಿದರು. ಕೊನೆಯ ಸಾಲಿನ ಕಪ್ಪಿನಲ್ಲಿ ಲಿಂಗರಾಜ ಕಣ್ಣಿಗೆ ದೊಡ್ಡದೊಂದು ಕಾರೇಡಿ ಕಂಡಿತು. ಇವರ ಹೆಜ್ಜೆ ಸಪ್ಪಳಕ್ಕೆ ಬೆದರಿ ಎರಡು ಕೊಂಬುಗಳನ್ನು ಎತ್ತಿಕೊಂಡು ಕಪ್ಪಿನ ಕೆಸರಿನಲ್ಲಿ ಅಡಗಿಕೊಳ್ಳಲು ಯತ್ನಿಸಿತು. ಅಂಥ ಸಂದರ್ಭಗಳನ್ನು ಹಿಂದೆ ಕಂಡಿದ್ದ ಲಿಂಗರಾಜ 'ನೋಡಲ್ಲಿ ಏಡಿ' ಎನ್ನುತ್ತಾ ನಾಗರಾಜನ ಗಮನ ಸೆಳೆದು ನಿಧಾನವಾಗಿ ಕಪ್ಪಿಗೆ ಇಳಿದು ಎಚ್ಚರಿಕೆಯಿಂದ ಅದರ ಬೆನ್ನಿನ ಕಡೆಯಿಂದ ಅದುಮಿ ಹಿಡಿದು ಕೊಂಬು ಜಿಗ್ಗುಗಳನ್ನು ಮುರಿದು ಹತ್ತಿರದಲ್ಲಿ ಉದುರಿ ಬಿದ್ದಿದ್ದ ಸೋಗೆ ಹಾಳೆಯಿಂದ ಸಣ್ಣ ಕೊಟ್ಟೆಯನ್ನು ಮಾಡಿ ಅದರಲ್ಲಿ ಹಾಕಿದ. 'ಇದಕ್ಕೆ ಗ್ರಾಚಾರ ಕಾದಿತ್ತೇನೊ... ಹಂಗೇ ನೋಡು.. ಗ್ರಾಚಾರ ಕೆಟ್ಟ ಇನ್ನಷ್ಟು ಏಡಿಗಳು ಹೊರಕ್ಕೆ ಬಂದಿರಬಹುದು' ಎಂದು ನಾಗರಾಜನೂ ಕಪ್ಪಿನ ಸಾಲುಗಳತ್ತ ದೃಷ್ಟಿ ಹರಿಸಿದ. 'ಬೆಳಗಾ ಬೆಳಗಾ ಇವು ಸಾಮಾನ್ಯವಾಗಿ ಹೊರಕ್ಕೆ ಬರೋದಿಲ್ಲ. ಇದಕ್ಕೇನೂ ಗ್ರಾಚಾರ ಕಾದಿತ್ತು' ಎನ್ನುತ್ತಾ ಲಿಂಗರಾಜ ಹಾಳೆಯ ಕೊಟ್ಟೆಯನ್ನು ಹಿಡಿದು ಮನೆಯತ್ತ ತಿರುಗಿದ.

ಮನೆಗೆ ಹಿಂದಿರುಗುವ ಹಾದಿಯಲ್ಲಿ ತೋಟದ ಕೊನೆಯ ಕಪ್ಪಿನಲ್ಲಿ ಇನ್ನೊಂದು ಏಡಿಗೂ ಗ್ರಾಚಾರ ಕಾಡಿತ್ತು. ಅದನ್ನೂ ಮೆಲ್ಲಗೆ ಹಿಡಿದು ಹಾಳೆ ಕೊಟ್ಟೆಯೊಳಕ್ಕೆ ಹಾಕಿಕೊಂಡು ಮನೆಯ ಬಳಿಗೆ ಬರುವಷ್ಟರಲ್ಲಿ ಹೆಂಗಸರು ಎದ್ದು ಅಡುಗೆ ಮನೆಯಲ್ಲಿ ಚಟುವಟಿಕೆ ಆರಂಭಿಸಿದ್ದರು. 'ಈಗಷ್ಟೆ ಸಿಕ್ಕಿದಾವಲ್ಲ, ಬೇಗ ಚಟ್ನಿ

ಮಾಡಿಬಿಡಿ, ಬೆಳಗ್ಗಿನ ತಿಂಡಿಗೂ ಸರಿ ಹೋಗುತ್ತದೆ' ಎಂದು ನಾಗರಾಜ ರಾಜೇಶ್ವರಿಯನ್ನು ಕರೆದು ಲಿಂಗರಾಜನ ಕೈಯಿಂದ ಹಾಳೆ ಕೊಟ್ಟೆಯನ್ನು ನೀಡಿದ. ಕೊಟ್ಟೆಯ ಒಳಕ್ಕೆ ಕಣ್ಣು ಹಾಯಿಸಿದ ರಾಜೇಶ್ವರಿ 'ಇಷ್ಟು ಬೆಳಗ್ಗೆ ಇವಕ್ಕೆಲ್ಲಿ ಗ್ರಾಚಾರ ಕಾಡಿತ್ತು' ಎಂದು ಹೇಳುತ್ತಾ ಕೊಟ್ಟೆಯನ್ನು ಎತ್ತಿಕೊಂಡು ಅಡುಗೆ ಮನೆ ಒಳಕ್ಕೆ ಹೋದಳು. 'ಬಚ್ಚಲು ಮನೆಯಲ್ಲಿ ಬೆಂಕಿ ದೊಡ್ಡಗೆ ಮಾಡಿ ಅಲ್ಲಿ ಸುಟ್ಟುಕೊಂಡು ಬಾ' ಎಂದು ಪಾರ್ವತಮ್ಮ ಹೇಳಿದ್ದರಿಂದ ರಾಜೇಶ್ವರಿ ಕಡಿಮಾಡಿನ ಬಚ್ಚಲು ಮನೆಗೆ ಬಂದು ಒಲೆಯಲ್ಲಿದ್ದ ಬೆಂಕಿಯನ್ನು ಊದಿ ದೊಡ್ಡದು ಮಾಡಿದಳು.

ಗಂಗಮ್ಮನ ನಿರ್ದೇಶನದಂತೆ ರಾಜೇಶ್ವರಿ ಏಡಿಗಳನ್ನು ಚೆನ್ನಾಗಿ ಸುಟ್ಟು ಏಡಿಯ ಓಡನ್ನು ನಯವಾಗಿ ತೆಗೆದು ಒಳಗಿನ ತಿರುಳನ್ನು, ಕೆಂಡದಲ್ಲಿ ಸುಟ್ಟ ಹಸಿಮೆಣಸಿನಕಾಯಿ, ಕಾಯಿ ತುರಿ, ನೀರುಳ್ಳಿ, ಉಪ್ಪಿನೊಂದಿಗೆ ಹದವಾಗಿ ಮಿಶ್ರಮಾಡಿ ಒರಳುಕಲ್ಲಿನಿಂದ ನಯವಾಗಿ ಜಜ್ಜಿ ಚಟ್ನಿಯ ರೂಪಕ್ಕೆ ತಂದಳು. ಅದನ್ನು ಅಡುಗೆ ಮನೆಗೆ ಒಯ್ದು ಬೆಳ್ಳುಳ್ಳಿಯ ಒಗ್ಗರಣೆಯನ್ನೂ ಕೊಟ್ಟಳು. ಬೆಂಕಿಕೆಂಡದಲ್ಲಿ ಸುಟ್ಟಿದ್ದರಿಂದ ಜಗುಲಿಯನ್ನೂ ವ್ಯಾಪಿಸಿದ ಪರಿಮಳವನ್ನು ಮೊದಲ ಸಲ ಎಂಬಂತೆ ಆಘ್ರಾಣಿಸಿದ ಲಿಂಗರಾಜ 'ಪರವಾಗಿಲ್ಲ ಕಣೋ, ಅತ್ತಿಗೆ ಏಡಿಚಟ್ನಿಯನ್ನು ಸೊಗಸಾಗಿ ಮಾಡುತ್ತಾರೆ' ಎಂದು ನಾಗರಾಜನಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ. 'ಇಬ್ರೇ ಇರ್ತೀವಲ್ಲ, ಚೆನ್ನಾಗಿ ಅಡುಗೆ ಪ್ರಯೋಗ ಮಾಡುತ್ತಾಳೆ..' ಎಂದು ನಾಗರಾಜನೂ ಧ್ವನಿಗೂಡಿಸಿದ.

ಅಜ್ಜಿ ತಿಮ್ಮನಾಯ್ಕರನ್ನು ಎಬ್ಬಿಸಿ ಮುಖ ತೊಳೆಸಿ ಬೆಳಗಿನ ಪೇಯವಾಗಿ ಬಿಸಿ ನೀರನ್ನು ಕುಡಿಸುತ್ತಾ ಸಜ್ಜುಗೊಳಿಸುತ್ತಿದ್ದಾಗ ಪಾರ್ವತಮ್ಮ ಕೊಟ್ಟಿಗೆಗೆ ಹೋಗಿ ಹಾಲು ಕರೆದುಕೊಂಡು ಬಂದಳು. ಏಡಿ ಚಟ್ನಿ ಮಾಡಿ ಮುಗಿಸಿದ ರಾಜೇಶ್ವರಿಯೇ ಒಳಗಿನ ಒಲೆಯ ಬೆಂಕಿಯನ್ನು ದೊಡ್ಡದು ಮಾಡಿ ಬೆಳಗಿನ ತಿಂಡಿಗೆ ಅತ್ತೆಯ ನಿರ್ದೇಶನದಂತೆ ರೊಟ್ಟಿ ಮಾಡುವುದಕ್ಕೆ ಅಕ್ಕಿಹಿಟ್ಟನ್ನು ಕಲೆಸುವುದಕ್ಕೆ ಕುಳಿತಳು. ರಾತ್ರಿ ಉಳಿದಿದ್ದ ಅನ್ನದಲ್ಲಿ ಹಿಟ್ಟನ್ನು ಮಿಶ್ರಮಾಡಿ ಚೆನ್ನಾಗಿ ಮಿಲಿದು ಮರಿಗೆಯ ಮೇಲಿಟ್ಟು ಕೈಯಿಂದ ತಟ್ಟ ತೊಡಗಿದಳು. ರಾತ್ರಿ ಊಟಕ್ಕೆ ಮಾಡಿದ್ದ ಕೋಳಿ ಸಾರು ಬೆಳಗಿನ ತಿಂಡಿಗೂ ಸಾಕಾಗುವಷ್ಟಿತ್ತು. ಜೊತೆಗೆ ಈಗಷ್ಟೆ ಮಾಡಿದ್ದ ಏಡಿ ಚಟ್ನಿಯೂ ಇತ್ತು. 'ನೀನು ರೊಟ್ಟಿ ಸುಡ್ತಾ ಇದ್ದಂಗೆ ನಾನು ಹಂಗೆ ಕೊಟ್ಟಗೆಗೆ ಕಡೆ ನೋಡಿ ಬರ್ತೀನಿ' ಎಂದು ಹೋದ ಪಾರ್ವತಮ್ಮ ಲಿಂಗರಾಜನ ಜೊತೆ ಸೇರಿಸಿ ಸೆಗಣಿಯನ್ನು ಬಾಚಿ ಹತ್ತಿರದಲ್ಲಿದ್ದ ಗೊಬ್ಬರದ ಗುಂಡಿಗೆ ಹಾಕಿಸಿದಳು.

ನಾಗರಾಜನಿಗೆ ಭಾನುವಾರದ ರಜೆಯ ಭಾವ. ಯಲ್ಲನಾಯ್ಕರಿಗಾಗಲೀ, ಲಿಂಗರಾಜನಿಗಾಗಲೀ ರಜೆಯ ಕಲ್ಪನೆಯೇ ಬರುವಂತಿರಲಿಲ್ಲ. ನಿನ್ನೆ ಸಂಜೆ ಅಪ್ಪ ಮಗ ಮಾತಾಡಿಕೊಂಡಿದ್ದಂತೆ ಮನೆಯ ಹಿಂದಿನ ಕೆರೆಯ ತೂಬನ್ನು ಸರಿಪಡಿಸುವ ಕೆಲಸಕ್ಕೆ ಬೆಳಗಿನ ತಿಂಡಿಯ ನಂತರ ಹೊರಡಬೇಕೆಂದು ನಿರ್ಧರಿಸಿದ್ದರು. ಬೆಳಗ್ಗೆ ಎದ್ದ ಯಲ್ಲನಾಯ್ಕರು ನಿತ್ಯದ ವಿಧಿಗಳನ್ನು ಪೂರೈಸಿ ಗೊಬ್ಬರದ ಗುಂಡಿಗೆ ಹಾಕಲು ಹಕ್ಕಲಿನಿಂದ ಸೊಪ್ಪನ್ನು ಹೊರೆ ಕಟ್ಟಿ ತಂದರು. ಕೊಟ್ಟಿಗೆಯಿಂದ ಸಗಣಿ ತೆಗೆದು ಗೊಬ್ಬರ ಗುಂಡಿಗೆ ಹಾಕಿದ ನಂತರ ಅದರ ಮೇಲೆ ಸೊಪ್ಪು ಹಾಕಿದರೆ ಗೊಬ್ಬರದ ಗುಣ ಮತ್ತು ಪ್ರಮಾಣದಲ್ಲಿ ಹೆಚ್ಚಳವಾಗುತ್ತದೆ ಎಂದು ಲಿಂಗರಾಜ ಹೇಳಿದ್ದು ಅವರಿಗೂ ಸರಿಯೆಂದು ಮನವರಿಕೆ ಆಗಿತ್ತು. ಆದ್ದರಿಂದ ಬೆಳಗ್ಗೆ ಪುರುಸೊತ್ತು ಇದ್ದಾಗ ಅವರು ಮನೆಯ ಹಿಂದಿನ ಹಕ್ಕಲಿಗೆ ಹೋಗಿ ಸೊಪ್ಪನ್ನು ಕಡಿದು ತರುತ್ತಿದ್ದರು.

ಅಡುಗೆ ಮನೆಯಲ್ಲಿ ಆಳಿಗೊಂದರಂತೆ ರೊಟ್ಟಿಗಳನ್ನು ಹಂಚಿನಲ್ಲಿ ಬೇಯಿಸಿ ಕೆಂಡದಲ್ಲಿ ಸುಡುವ ಹಂತಕ್ಕೆ ಬಂದಾಗ ರಾಜೇಶ್ವರಿ ರೊಟ್ಟಿ ಮರಿಗೆಯ ಹಿಂದೆ ಕುಳಿತಲ್ಲಿಂದಲೇ 'ತಿಂಡಿಗೆ ಕರೀರಿ ಅತ್ತೆ' ಎಂದಳು.

ಅದರಂತೆ ಜಗುಲಿಯತ್ತ ದೃಷ್ಟಿ ಹಾಯಿಸಿದ ಪಾರ್ವತಮ್ಮ 'ಮುಖ ತೊಳ್ಕಂಡಿದ್ರೆ ತಿಂಡಿಗೆ ಬರ್ರೊ' ಎಂದು ಮಕ್ಕಳಿಬ್ಬರನ್ನು ಉದ್ದೇಶಿಸಿ ಹೇಳಿದರು. ಆ ವೇಳೆಗಾಗಲೇ ಸೊಪ್ಪು ತಂದು ಹಾಕಿ ಬಚ್ಚಲಿನಲ್ಲಿ ಕೈಕಾಲು ಮುಖ ತೊಳೆದು ಜಗುಲಿ ಕಡೆ ಬರುತ್ತಿದ್ದ ಯಲ್ಲನಾಯ್ಕರು ಅಡುಗೆ ಮನೆಯಿಂದ ಬಂದ ಕರೆಗೆ ತಕ್ಷಣವೇ ಸ್ಪಂದಿಸಿದರು. ಅವರನ್ನು ಮಕ್ಕಳಿಬ್ಬರೂ ಹಿಂಬಾಲಿಸಿದರು. 'ಅಜ್ಜನಿಗೆ ಕೋಣೆಯಲ್ಲೇ ಕೊಡ್ತೀಯಲ್ಲ ಅಜ್ಜಿ' ಎಂದು ಲಿಂಗರಾಜ ನೆನಪು ಮಾಡಿದ.

ಅಡುಗೆ ಮನೆಯಲ್ಲಿ ಸಾಲಾಗಿ ಹಾಕಿದ್ದ ಮಣೆಗಳ ಮೇಲೆ ಕುಳಿತ ಮೂವರಿಗೂ ತಟ್ಟೆ ಇಟ್ಟ ಪಾರ್ವತಿಪಾರ್ವತಿ ಒಂದೊಂದು ರೊಟ್ಟಿ ಹಾಕಿ ಕೋಳಿ ಸಾರಿನ ಗಸಿಯನ್ನು ಬಡಿಸಿದರು. ಅದರೊಂದಿಗೆ ಏಡಿ ಚಟ್ನಿಯನ್ನೂ ಹಾಕಿದರು. ಯಲ್ಲನಾಯ್ಕರು ತಲೆ ಎತ್ತಿ ನೋಡಿದಾಗ 'ಬೆಳಗ್ಗೆ ತ್ವಾಟದಾಗ ಹಿಡ್ಕಂಡು ಬಂದಿದ್ದು ಹುಡುಗರು' ಎಂದು ಪಾರ್ವತಮ್ಮ ವಿವರಣೆ ನೀಡಿದರು. ಕೋಳಿ ಸಾರಿಗೆ ತುಂಬ ಹೊಂದಿಕೆಯಾಗಿದ್ದ ಅಕ್ಕಿ ರೊಟ್ಟಿ ಒಂದರ ನಂತರ ಒಂದರಂತೆ ತಟ್ಟೆಗೆ ಬಿದ್ದು ಮೂವರಲ್ಲಿಯೂ ಸಂತೃಪ್ತಿಯ ಭಾವ ಮೂಡಿತು. ರೊಟ್ಟಿ ಮುಗಿಸಿದ ನಂತರ ನೀರು ಕುಡಿದು ಸಣ್ಣ ಲೋಟಗಳಲ್ಲಿ ನೀಡಿದ ಕಾಫಿಯನ್ನೂ ಗುಟುಕರಿಸಿ ನಿಧಾನವಾಗಿ ಎದ್ದು ಜಗುಲಿಗೆ ಬಂದರು.

ತೂಬಿನಿಂದ ನೀರು ಸೋರಿ ಹೋಗುತ್ತಾ ಇದ್ದದನ್ನು ಗುರುತಿಸಿದ್ದ ಲಿಂಗರಾಜ ಅದರ ಸೋರಿಕೆಯನ್ನು ಮುಚ್ಚಲು ಜಾಗ ಗುರುತು ಮಾಡಿದ್ದ. ಇಬ್ಬರು ಹೋದರೆ ಅದಕ್ಕೆ ಚೆನ್ನಾಗಿ ಮಣ್ಣು ತುಂಬಿ ಬರಬಹುದು ಎಂದು ನಿನ್ನೆ ರಾತ್ರಿ ಅಪ್ಪ ಮಗ ಮಾತಾಡಿಕೊಂಡಿದ್ದರು. ಅದರಂತೆ ಗುದ್ದಲಿ, ಸಣ್ಣದೊಂದು ಹಾರೆಯನ್ನು ಹಿಡಿದು ಮನೆಯ ಹಿಂದೆ ಅಂದಾಜು ಇನ್ನೂರು ಅಡಿಯಷ್ಟು ದೂರದಲ್ಲಿದ್ದ ಕೆರೆಯತ್ತ ಹೊರಟರು. ರಜೆಯಲ್ಲಿ ಮನೆಗೆ ಬಂದಾಗ ಮೊದಲಿನಿಂದಲೂ ರೈತಾಪಿ ಕೆಲಸ ಮಾಡುತ್ತಿದ್ದ ನಾಗರಾಜನೂ ಜೊತೆಯಾದ. ಅವರು ಅರ್ಧದಷ್ಟು ದಾರಿ ಸಾಗುತ್ತಿದ್ದಾಗ ಹಿಂದಿನಿಂದ 'ರೀ ರೀ' ಎಂದು ರಾಜೇಶ್ವರಿ ಕೂಗಿದ್ದು ಕೇಳಿಸಿತು. ಅವಳು ಗಾಬರಿಯಿಂದ ಹತ್ತಿರ ಬಂದವಳೇ 'ಅಜ್ಜನಿಗೆ ವಾಂತಿಯಂತೆ. ಹೆಂಗೆಂಗೋ ಆಡ್ತಾರೆ ಅಂತ ಅಜ್ಜಿ ಹೇಳ್ತು..' ಎಂದು ಮಾಹಿತಿ ಕೊಟ್ಟಳು. 'ಅದಕ್ಕೆ ಯಾಕೆ ಎಷ್ಟು ಗಾಬರಿ?' ಎಂದು ಯಲ್ಲನಾಯ್ಕರು ಅದು ಸಾಮಾನ್ಯ ಸಂಗತಿ ಎಂಬಂತೆ ಕೆರೆಯ ಕಡೆ ಮುಂದುವರಿದರು. ಲಿಂಗರಾಜನಿಗೆ ಅದು ಅಷ್ಟು ಸಾಮಾನ್ಯ ಎನಿಸಲಿಲ್ಲ. ನಾಗರಾಜನ ಮುಖ ನೋಡಿದ. ಕೆಲವೇ ದಿನಗಳ ಹಿಂದೆ ಹೊಂಗಿ ಬಿದ್ದು ಬಲಗಾಲು ಸ್ವಾಧೀನ ತಪ್ಪಿದಂತೆ ಆಗಿದ್ದ ಘಟನೆ ನೆನಪಿಗೆ ಬಂದು 'ಹೋಗಿ ನೋಡ್ಕಂಡು ಬರಾನ' ಎಂದು ಹಿಂದಕ್ಕೆ ಮನೆಯತ್ತ ತಿರುಗಿದರು. ಬಿರುಸಾಗಿ ಹೆಜ್ಜೆ ಹಾಕುತ್ತಾ ಮನೆ ತಲುಪಿ ಜಗುಲಿ ಹತ್ತುತ್ತಿದ್ದಂತೆ ಅಜ್ಜ ಮಲಗುತ್ತಿದ್ದ ಕೋಣೆಯಿಂದ 'ಬೇಗ ಬೇಗ ನೀರು ಬಿಡು...' ಎಂದು ಅಜ್ಜಿ ಆರ್ತ ಸ್ವರದಿಂದ ಜೊತೆಯಲ್ಲಿದ್ದ ಪಾರ್ವತಮ್ಮನಿಗೆ ಹೇಳುತ್ತಾ ಇದ್ದುದು ಕೇಳಿಸಿತು. ಇಬ್ಬರೂ ಗಾಬರಿಯಿಂದ ಕೋಣೆಗೆ ಧಾವಿಸಿ ನೋಡಿದಾಗ ಮಂಚದ ಮೇಲೆ ಅಜ್ಜಿಯನ್ನು ಒರಗಿಕೊಂಡು ಕುಳಿತಿದ್ದ ಅಜ್ಜನ ಕತ್ತು ಬಲಕ್ಕೆ ವಾಲಿತ್ತು. ಮುನ್ನುಗ್ಗಿ ಹಿಡಿದುಕೊಂಡ ಲಿಂಗರಾಜನಿಗೆ ಅಜ್ಜನ ಉಸಿರು ನಿಂತು ಹೋಗಿದ್ದು ಗೊತ್ತಾಯಿತು.

ಅದೇ ಮೊದಲ ಸಲಕ್ಕೆ ಕಣ್ಣುಮುಂದೆ ಜೀವವೊಂದು ಸ್ತಬ್ಧವಾಗಿದ್ದುದನ್ನು ಕಂಡು ಎಲ್ಲರಿಗೂ ದಿಕ್ಕು ತೋಚದಂತೆ ಆಯಿತು. 'ಅರರೆ, ಇದೆಂಥ ಆತ್ರೊ..' ಎಂದು ಆರ್ತವಾಗಿ ಹೇಳಿದ ಅಜ್ಜಿ ತಮ್ಮ ಕೈಮೀರಿ ಹೋಗಿದ್ದನ್ನು ಅರಿತು ಸಾವರಿಸಿಕೊಂಡು 'ನಿಮ್ಮಪ್ಪನ್ನ ಕರೀರೋ' ಎಂದರು. ಹುಡುಗರಿಬ್ಬರೂ ಮನೆಯ ಕಡೆ

ಅವಸರದಿಂದ ಹಿಂತಿರುಗಿದ್ದನ್ನು ನೋಡಿ ಯಲ್ಲನಾಯ್ಕರೂ ವಾಪಸು ಬಂದು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡರು.

ಸ್ವಲ್ಪ ಹೊತ್ತಿನಲ್ಲಿ ಸುಧಾರಿಸಿಕೊಂಡ ಯಲ್ಲನಾಯ್ಕರು ಜಗುಲಿಯಲ್ಲಿ ಹಾಸಿಗೆಯನ್ನು ಹಾಸಲು ಮುಂದಾದರು. ಅವರಿಗೆ ನಾಗರಾಜ ನೆರವಾದನು. ಕೋಣೆಯಿಂದ ಅಜ್ಜನನ್ನು ನಿಧಾನವಾಗಿ ಎತ್ತಿಕೊಂಡು ಜಗುಲಿಯಲ್ಲಿ ಹಾಸುಗೆಯ ಮೇಲೆ ಮಲಗಿಸಿದರು. ಯಲ್ಲನಾಯ್ಕರು ಜಗುಲಿಯ ತೊಲೆಯಲ್ಲಿ ಅಡ್ಡಲಾಗಿ ಇರಿಸಿದ್ದ ಕೇಪಿನ ಕೋವಿಯನ್ನು ಇಳಿಸಿ ಅದರಲ್ಲಿ ಕೇಪು ಇರುವುದನ್ನು ನೋಡಿ ಮನೆಯಿಂದ ಹೊರಬಂದು ಆಕಾಶದ ಕಡೆಗೆ ಗುಂಡು ಹಾರಿಸಿದರು. ಅದು ಅನಿರೀಕ್ಷಿತ ಸಾವಿನ ಸುದ್ದಿಯನ್ನು ಊರಿನವರಿಗೆ ತಿಳಿಸುವ ಊರಿನ ಪದ್ಧತಿ. ಹುಡುಗರಿಬ್ಬರೂ ತಮ್ಮ ತಮ್ಮ ಮೊಬೈಲ್‌ನಲ್ಲಿದ್ದ ನಂಬರುಗಳನ್ನು ಹುಡುಕಿ ಹೇಳಬೇಕಾದವರಿಗೆ ಸುದ್ದಿ ತಿಳಿಸಿದರು. ಈರತ್ತೆಗೂ ಸುದ್ದಿ ಹೋಯಿತು. 'ರಾಮುಗೂ ಸುದ್ದಿ ಕೊಡ್ರೋ.. ಈ ಸಲನಾದ್ರೂ ಬತ್ತಾನೇನೊ' ಎಂದು ಗಂಗಮ್ಮ ಆರ್ತಧ್ವನಿಯಲ್ಲಿ ಎಲ್ಲರಿಗೂ ಉದ್ದೇಶಿಸಿ ಹೇಳಿದರು. 'ಆಯ್ತಜ್ಜಿ.. ಹೇಳ್ತೀವಿ' ಎಂದು ನಾಗರಾಜನೇ ಸಮಾಧಾನಪಡಿಸಿದನು.

ಸುದ್ದಿ ತಿಳಿಯುತ್ತಲೇ ಊರಿನ ಗಂಡಸರೆಲ್ಲ ಒಬ್ಬೊಬ್ಬರಾಗಿ ಬರತೊಡಗಿದರು. ತಿಮ್ಮನಾಯ್ಕರು ಕೆಲವರಿಗೆ ದೊಡ್ಡಪ್ಪ, ಒಂದಿಬ್ಬರಿಗೆ ಚಿಕ್ಕಪ್ಪ, ಉಳಿದವರಿಗೆ ಅಜ್ಜ. ದೊಡ್ಡಪ್ಪ ಎನ್ನುತ್ತಾ ಇದ್ದವರಲ್ಲಿ ಒಬ್ಬ, ಯಲ್ಲನಾಯ್ಕರಿಗೆ 'ಅಯ್ಯ, ಮೊದೂಲು ಸ್ನಾನ ಮಾಡಿಸಿ, ಹೊಸ ಬಟ್ಟೆ ಹಾಕಿಸಿ ಕೂರಿಸಿ ಬಿಡಾನ' ಎಂದು ಸೂಚಿಸಿದ. ಆ ಕೆಲಸಕ್ಕೆ ಊರಿನ ಇನ್ನಿಬ್ಬರು ಜೊತೆಗೂಡಿದರು. ಬಚ್ಚಲು ಮನೆಗೆ ತಿಮ್ಮನಾಯ್ಕರನ್ನು ಎತ್ತಿಕೊಂಡು ಅಣಿಯಾಗುತ್ತ ಇದ್ದುದನ್ನು ಕಂಡ ಇನ್ನೊಬ್ಬ ಹಿರಿಯರು, 'ಅಲ್ಲಿಗೆ ಬ್ಯಾಡ್ರೊ.. ಹೊರಗಡೆ ಅಂಗಳದಲ್ಲಿ ತೆಂಗಿನ ಮರ ಇದೆಯಲ್ಲ, ಅದರ ಬುಡದಲ್ಲಿ ಇರಿಸಿ ನೀರು ಹಾಕಿ' ಎಂದರು. ಜಗುಲಿಯಲ್ಲಿ ತಿಮ್ಮನಾಯ್ಕರನ್ನು ಮಲಗಿಸಿದ್ದ ಹಾಸುಗೆಯ ಪಕ್ಕದಲ್ಲಿ ದಶಕಗಳಿಂದ ಜೊತೆಯಾಗಿದ್ದ ಹಿರಿಯ ಜೀವ ಸಣ್ಣದೊಂದು ನರಳಿಕೆಯೂ ಇಲ್ಲದೆ ಅನಿರೀಕ್ಷಿತವಾಗಿ ಉಸಿರು ಕಳೆದುಕೊಂಡ ಆಘಾತಕ್ಕೆ ಗಂಗಮ್ಮ ದಿಕ್ಕೆಟ್ಟು ಕುಳಿತಿದ್ದುದನ್ನು ಕಂಡು ಅಷ್ಟೇ ಆಘಾತಗೊಂಡಿದ್ದ ಪಾರ್ವತಮ್ಮ, ರಾಜೇಶ್ವರಿ ಸಣ್ಣಗೆ ಕಣ್ಣೀರುಗರೆಯುತ್ತ ಜೊತೆಗೆ ಕುಳಿತರು. ಅಗಲಿದ ಚೇತನಕ್ಕೆ ಸ್ನಾನ ಮಾಡಿಸಿ ಜಗುಲಿಯಲ್ಲಿ ವ್ಯವಸ್ಥಿತವಾಗಿ ಕೂರಿಸುವುದಕ್ಕೆ ಊರಿನ ಗಂಡಸರು ಅಣಿಯಾಗುತ್ತಿರುವುದನ್ನು ಗಮನಿಸಿದ ಪಾರ್ವತಮ್ಮ ತಕ್ಷಣವೇ ಎದ್ದು ಬಚ್ಚಲು ಮನೆಯಿಂದ ಮಾವಯ್ಯನ ಸ್ನಾನಕ್ಕೆ ಬಿಸಿನೀರನ್ನು ಬಿಂದಿಗೆಯಲ್ಲಿ ತುಂಬಿಕೊಂಡು ಅಂಗಳಕ್ಕೆ ಒಯ್ದರು. ಅತ್ತೆ ಎದ್ದುದನ್ನು ಕಂಡು ರಾಜೇಶ್ವರಿಯೂ ಹಿಂಬಾಲಿಸಿದಳು. ಅಷ್ಟರಲ್ಲಿ ಸುದ್ದಿ ಕೇಳಿ ಬಂದಿದ್ದ ಊರಿನ ಮಹಿಳೆಯರು ಗಂಗಮ್ಮನ ಸುತ್ತ ನೆರೆದು ಕುಳಿತರು.

ಮತ್ತೊಬ್ಬ ಹಿರಿಯ ನಾಗರಾಜನನ್ನು ಕರೆದು 'ತಮ್ಮಾ, ಹೇಳೋರಿಗೆಲ್ಲ ನಿನ್ನ ಮೊಬೈಲ್‌ನಿಂದ ಸುದ್ದಿ ಕೊಡುತ್ತಾ ಪ್ಯಾಟೆ ಕಡೆ ಹೋಗಿ ಹೊಸ ಬಟ್ಟೆ, ಊದುಬತ್ತಿ, ಕರ್ಪೂರ, ಗರ್ನಾಲು ತಗಂಡು ಬಾ' ಎಂದ.

ತಿಮ್ಮನಾಯ್ಕರನ್ನು ಜಗುಲಿಯಿಂದ ಇಳಿಸಿ ಮನೆಯ ಹೊರಗಡೆ ಎತ್ತಿ ಒಯ್ದರು. ಅಂಗಳದ ಮೂಲೆಯಲ್ಲಿದ್ದ ತೆಂಗಿನ ಸಸಿಯ ಬುಡದಲ್ಲಿ ಕಾಲು ತೊಳೆಯಲು ಹಾಕಿದ್ದ ಚಪ್ಪಡಿ ಕಲ್ಲಿನ ಮೇಲೆ ಅವರನ್ನು ಕೂರಿಸಿದಂತೆ ಹಿಡಿದುಕೊಂಡು ಮೈಮೇಲೆ ಹಾಕಿದ್ದ ಬಟ್ಟೆಗಳನ್ನು ನಿಧಾನವಾಗಿ ತೆಗೆದರು. ಹಿರಿಯನೊಬ್ಬ ಬಿಸಿ ನೀರನ್ನು ತಲೆಯ ಮೇಲಿಂದ ಸುರಿದ. ಅಂಗಿಯನ್ನು ತೆಗೆದವರು ಮರ್ಯಾದೆಗೆ ಭಂಗವಾಗದಂತೆ ಟವೆಲ್ಲಿನಿಂದ ಮರೆ ಮಾಡಿ ಪಂಚೆಯನ್ನೂ ತೆಗೆದು ಮರ್ಮಸ್ಥಾನಗಳನ್ನೂ ಬಿಸಿ ನೀರಿನಿಂದ ತೊಳೆದ.

'ನಮ್ಮನ್ನೆಲ್ಲ ಬೈದು ಸರಿದಾರಿಗೆ ತರ್ತಿದ್ದ. ಇದೊಂದು ಸೇವೆ ಮಾಡೋದಕ್ಕೆ ಅವಕಾಶ ಕೊಟ್ಟ' ಎಂದು ಅವನು ನೆನಪು ಮಾಡಿಕೊಳ್ಳುತ್ತಾ ಆ ನೆನಪಿನಲ್ಲಿ ಕಣ್ಣೀರು ಸುರಿಸುತ್ತಾ ಸ್ನಾನದ ಸೇವೆಯನ್ನು ಮುಂದುವರಿಸಿದ. ಅಲ್ಲಿ ದುಃಖತಪ್ತರಾಗಿ ನಿಂತಿದ್ದ ಮಗ ಯಲ್ಲನಾಯ್ಕರು, ಮೊಮ್ಮಕ್ಕಳು ನಾಗರಾಜ, ಲಿಂಗರಾಜನಿಂದ ಒಂದೊಂದು ಚೆಂಬು ಬಿಸಿ ನೀರನ್ನು ಹೊಯ್ಯಿಸಿದರು. ಬಿಸಿ ನೀರಿನಿಂದ ದೇಹದ ಎಲ್ಲ ಕಡೆ ತೊಳೆದು ಪಾರ್ವತಮ್ಮ ತಂದುಕೊಟ್ಟ ಟವೆಲ್ಲಿನಿಂದ ಒರೆಸಿ ಜಗುಲಿಗೆ ಎತ್ತಿಕೊಂಡು ಬಂದರು. ಕುಳಿತುಕೊಂಡ ಭಂಗಿಯಲ್ಲಿ ಎರಡೂ ಕಾಲುಗಳನ್ನು ಮಡಿಚಿ ಗೋಡೆಗೆ ಒರಗಿಸಿದರು. ಮುಂದಕ್ಕೆ ಬಾಗಿ ಬೀಳದಂತೆ ಆತುಕೊಳ್ಳಲು ಎರಡು ಸಪೂರವಾದ ಮರದ ಕಡ್ಡಿಗಳನ್ನು ಕತ್ತರಿ ಆಕಾರದಲ್ಲಿ ಕುತ್ತಿಗೆಯ ಎರಡೂ ಬದಿ ಕಟ್ಟಿ ಆಪು ಕೊಟ್ಟರು. ಅದು ಹೊರಗಡೆ ಕಾಣದಂತೆ ಕೋಣೆಯಿಂದ ಆರಿಸಿ ತಂದಿದ್ದ ಮಡಿಯಾಗಿದ್ದ ಅಂಗಿಯನ್ನು ಎದುರುಗಡೆಯಿಂದ ಎಚ್ಚರಿಕೆಯಿಂದ ತೊಡಿಸಿದರು. ಪಂಚೆಯನ್ನೂ ನಾಜೂಕಾಗಿ ಉಡಿಸಿದರು. ಈ ಕ್ರಿಯೆಗಳೆಲ್ಲ ನಡೆಯುತ್ತಿರುವಾಗ ಊರಿನ ಹಿರಿಯರೊಬ್ಬರು 'ಸ್ವಾಮಿ ವೆಂಕಟರಮಣ ಸ್ವಾಮಿ ಪಾದಕ್ಕೆ ಗೋವಿಂದ ಎನ್ನಿ ಗೋವಿಂದಾ..' ಎಂದು ಹೇಳುತ್ತಲೇ ಜಗುಲಿಯಲ್ಲಿ ನೆರೆದಿದ್ದವರೆಲ್ಲ 'ಗೋವಿಂದಾ..' ಎಂದು ದನಿಗೂಡಿಸಿದರು.

'ಎಲ್ರೂ ಇಲ್ಲೇ ಇದ್ದರೆ ಹೆಂಗರೋ? ಇನ್ನು ಇಲ್ಲಿ ಮಾಡೋ ಕೆಲಸ ಏನೂ ಇಲ್ಲ. ಕಾನು ಕಡೆ ಹೋಗಿ ಸೂಡಿಗೆ ಸೌದೆ ಒಟ್ಟು ಮಾಡೋದಿದೆಯಲ್ಲ. ಎಲ್ಲಿ ಮನೆಗೊಬ್ರು ರೆಡಿಯಾಗಿ ಹೊರಡಿ' ಎಂದು ಇನ್ನೊಬ್ಬ ಹಿರಿಯರು ಸೂಚಿಸಿದಾಗ ಜಗುಲಿಯಲ್ಲಿ ಇದ್ದವನೊಬ್ಬ 'ಆ ಕೆಲಸಕ್ಕೆ ಆಗಲೇ ಹೋಗಿ ಆಯ್ತು ದೊಡಪ್ಪ. ಎಲ್ಲಿ ಸೂಡು ಕಟ್ಟೋದು ಅಂತ ಮನೆಯವರು ಹೇಳಿದರೆ ಆಯಿತು. ಹಿಂದೆಲ್ಲ ಕಾನು ಕುಂಬ್ರಿ ಅಂತ ಇತ್ತು. ಅಲ್ಲೇ ಯಾವುದಾದ್ರೂ ಮರದ ಬುಡಕ್ಕೆ ಸೂಡು ಕಟ್ತಾ ಇದ್ರು. ಊರಿನ ಕುಂಬ್ರಿ ಜಾಗಕ್ಕೆಲ್ಲ ಫಾರೆಸ್ಟ್‌ನೋರು ಅಕೇಸಿಯಾ ಹಾಕಿ ಬೇಲಿ ಕಟ್ಟಿರೋದರಿಂದ ನಮ್ಮ ನಮ್ಮ ಹಕ್ಕಲಿನಲ್ಲೇ ಸೂಡು ಕಟ್ಟೋದಾಗಿದೆ' ಎಂದು ಊರಿನ ಯುವ ಮುಖಂಡನಂತೆ ಕಂಡಿದ್ದವ ಹೇಳಿದ. 'ಎಲ್ಲಿ ಅಂತ ಮನೆಯವರು ತೋರಿಸ್ತಾರೆ, ನೀವು ಹೋಗಿ ಕಟ್ಟಿಗೆ ಒಟ್ಟುಮಾಡಿ ಬರ್ರಿ' ಎಂದು ಹಿರಿಯ ಹೇಳಿದ.

ಜಗುಲಿಯ ಮಧ್ಯ ಭಾಗದಲ್ಲಿ ಗೋಡೆಗೆ ತಿಮ್ಮನಾಯ್ಕರನ್ನು ಕೂರಿಸುತ್ತಿದ್ದಂತೆ ಆ ವೇಳೆಗೆ ಗಂಗಮ್ಮನ ಜೊತೆ ಕುಳಿತಿದ್ದ ಮಹಿಳೆಯೊಬ್ಬರು ಪಾರ್ವತಮ್ಮನನ್ನು ಒಳಮನೆಗೆ ಕರೆದೊಯ್ದು ಕಳಸದ ಮಣೆಯಲ್ಲಿ ಹಣತೆಯನ್ನು ಸಿದ್ಧಪಡಿಸಿ ತಂದು ತಿಮ್ಮನಾಯ್ಕರ ಪಕ್ಕದಲ್ಲಿ ಇಡಿಸಿದಳು. ಜಗುಲಿಯಲ್ಲಿ ದೇವರ ಪಟದ ಹಿಂದೆ ಇರಿಸಿದ್ದ ಊದುಬತ್ತಿಯ ಕಟ್ಟಿನಿಂದ ಊದುಬತ್ತಿಗಳನ್ನು ತೆಗೆದು ಹೊತ್ತಿಸಿ ಹಣತೆಯ ಪಕ್ಕದಲ್ಲಿ ಇರಿಸಿದಳು. ನೋಡಲು ಬಂದವರು ಹೂವು ಅಕ್ಷತೆ ಹಾಕಿ ಧೂಪ ಬೆಳಗುವುದಕ್ಕೆ ವ್ಯವಸ್ಥೆ ಸಿದ್ಧವಾಯಿತು.

'ಇದೆಂಥದ್ದೋ ಮಾರಾಯ.. ನಿನ್ನೆ ಮಧ್ಯಾಹ್ನ ಬಂದು ಮಾತಾಡಿಸಿಕೊಂಡು ಹೋಗಿದ್ದೆ. ಚೆನ್ನಾಗೇ ಇದ್ದ. ನನ್ನ ಹತ್ರ ಚೆನ್ನಾಗಿ ಮಾತಾಡಿದ್ದ...' ಎಂದು ಅಳುವ ಧ್ವನಿಯಲ್ಲಿ ಹೇಳುತ್ತಾ ಬಂದ ಕೆಳಗಿನ ಮನೆಯ ಜಯಣ್ಣ ಜಗುಲಿಯ ಮೂಲೆಯಲ್ಲಿ ನಿಂತ. 'ಚೆನ್ನಾಗೆ ಇದ್ರು ಕಣೋ. ರಾತ್ರೆ ಒಂದು ರೊಟ್ಟಿ ತಿಂದು ಸ್ವಲ್ಪ ಅನ್ನ ಊಟ ಮಾಡಿದ್ರು. ಬೆಳಿಗ್ಗೆ ಹಿಂಗೆ ಆಗ್ತದೆ ಅಂತ ಯಾರ ಕಂಡಿದ್ರು' ಎಂದು ಗಂಗಮ್ಮ ಸಣ್ಣದನಿಯಲ್ಲಿ ಹೇಳಿದರು. ಅಷ್ಟು ಹೊತ್ತಿಗೆ ಅವರು ಚೇತರಿಸಿಕೊಂಡಿದ್ದರು. 'ಬೆಳಿಗ್ಗೆ ಎಷ್ಟು ಹೊತ್ತಿಗೆ ಎದ್ದಿದ್ರು ಅಜ್ಜಿ' ಎಂದು ಒಬ್ಬಳು ಕೇಳಿ ಹೆಚ್ಚಿನ ವಿವರ ನಿರೀಕ್ಷೆ ಮಾಡಿದಳು. ಅದನ್ನೇ ಕಾಯುತ್ತಾ ಇದ್ದವಳಂತೆ ಗಂಗಮ್ಮ 'ದಿನಾ ಏಳ ಹಂಗೆ ಬೇಗ ಎದ್ದಿದ್ರು. ನಿನ್ನೆ ರಾತ್ರಿನೇ ಬಲತೋಳಲ್ಲಿ ನೋವು.. ಎತ್ತಾಕಾಗಲ್ಲ ಅಂತ ಹೇಳ್ತಾ ಇದ್ರು. ಒಂದೇ ಕಡೆ ಮನಗಿದ್ರಿಂದ ಹಂಗೆ ನೋವಾಗಿರಬೇಕು ಅಂದುಕೊಂಡು ನೋವಿನ ಎಣ್ಣೆ ತಿಕ್ಕಲಾ ಅಂದ್ರೆ ಬೇಡ

ಅಂದಿದ್ರು' ಎಂದು ಒಂದೊಂದು ವಿವರವನ್ನು ನೆನಪು ಮಾಡಿಕೊಂಡರು. 'ಬೆಳಿಗ್ಗೆ ಎದ್ದಾಗಲೂ ಸಣ್ಣಗೆ ಬಲತೋಳು ನೋವು ಇದೆ ಅಂದ್ರು. ಬಿಸಿ ನೀರಿನ ಕಾವಟ ಕೊಡೋದು ಅಂತ ಇದ್ದೆ. ಅವರೇ ನಿದಾನ ಎದ್ದು ಮಖಾ ತೊಳ್ಕಂಡು ಬಂದ್ರು. ಬಿಸಿ ನೀರು ಕೊಟ್ಟೆ. ಕುಡಿದವರು ಸುಮ್ಮನೆ ಮಲಗಿದರು. ಆಮೇಲೆ ರೊಟ್ಟಿ ಬೇಡ, ಅನ್ನ ಇದ್ರೆ ಅದಕ್ಕೆ ಮಜ್ಜಿಗೆ ಹಾಕಿ ಕೊಡು ಅಂತ ಹೇಳಿದ್ರು. ಅದನ್ನು ತಂದು ಕಲೆಸಿ ಕೊಟ್ಟೆ. ಊಟ ಮಾಡಿ ನೀರು ಕುಡಿದು ಹಂಗೇ ಕುಳಿತಿದ್ರು. ನಾನು ಬಟ್ಟಲು ತಗೊಂಡು ಒಳಗಡೆ ಇಟ್ಟು ಬರಾಕೆ ಹೋದೆ. ಮತ್ತೆ ಕ್ವಾಣಿಗೆ ಬಂದ್ರೆ ಮಂಚದಿಂದ ಎದ್ದು ಬಚ್ಚಲು ಕಡೆ ಹೋಗ್ತಾನೆ ವಾಂತಿ ಮಾಡ್ಕಂಡ್ರು. ಅದೆಲ್ಲ ತೆಗೆದು ಬಂದೆ. ಆಗಲೇ ಮಂಚದ ಮೇಲೆ ಕುಂತವರು ಹಿಂದಕ್ಕೆ ಒರಗಿದರು. ಮಾತಿಲ್ಲ ಕತಿ ಇಲ್ಲ. ಹಿಡ್ಕಂಡೆ. ಕೈಯಲ್ಲೇ ಉಸಿರು ನಿಂತು ಹೋತು....' ಎಂದರು.

ಜಗುಲಿಯಲ್ಲಿ ಅದನ್ನೆಲ್ಲ ಬಿಡಿ ಬಿಡಿಯಾಗಿ ಕೇಳಿಸಿಕೊಂಡ ಲಿಂಗರಾಜನಿಗೆ ಅಜ್ಜನಿಗೆ ಹೃದಯಾಘಾತವೇ ಆಗಿದ್ದು ಖಚಿತವಾಯಿತು. ವಾರದ ಹಿಂದೆಯಷ್ಟೆ ಜಗುಲಿಯಲ್ಲಿ ಕುಳಿತಿದ್ದವನು ಎದ್ದಾಗ ಹೊಂಗಿ ಬಿದ್ದುದು ಕೂಡ ಅದರ ಪೂರ್ವ ಲಕ್ಷಣ ಇರಬೇಕು ಎಂದು ತನ್ನಷ್ಟಕ್ಕೆ ತರ್ಕಿಸಿದ ಅವನು ಮುಂದಿನ ಕೆಲಸಗಳಿಗೆ ಅಣಿಯಾದನು.

ಅಜ್ಜನನ್ನು ಜಗುಲಿಯಲ್ಲಿ ಕೂರಿಸಿದ ನಂತರ ಪೇಟೆಗೆ ಹೊರಡಲು ಸಜ್ಜಾದ ನಾಗರಾಜ ಮೋಟಾರು ಬೈಕಿನ ಕೀಯನ್ನು ಲಿಂಗರಾಜನಿಂದ ಪಡೆದುಕೊಂಡ. 'ಚಿಗಪ್ಪನ ಫೋನ್ ನಂಬರ್ ಇದ್ದರೆ ಕೊಡು, ನಾನೇ ಮಾತಾಡಿ ವಿಷಯ ತಿಳಿಸ್ತೀನಿ' ಎಂದ. ಲಿಂಗರಾಜ 'ನಾನು ಇದ್ದಾಗ ಇದ್ದ ಮನೆ ಫೋನ್ ನಂಬರ್. ಈಗಲೂ ಅದೇ ಇದೆಯೋ ಗೊತ್ತಿಲ್ಲ ಮಾರಾಯ. ಆದ್ರೂ ಪ್ರಯತ್ನ ಮಾಡು..' ಎನ್ನುತ್ತಾ ಅಜ್ಜನ ಕೋಣೆಯ ಕಪಾಟಿನಲ್ಲಿ ಇರಿಸಿದ್ದ ತನ್ನ ಒಂದು ಡೈರಿಯಲ್ಲಿ ಬರೆದುಕೊಂಡಿದ್ದ ನಂಬರ್ ಕೊಟ್ಟ. 'ಆಯಿತು' ಎಂದು ಹೇಳಿದ ನಾಗರಾಜ ತನ್ನೊಂದಿಗೆ ಸೋಮಣ್ಣನನ್ನು ಕರೆದುಕೊಂಡು ಬೈಕನ್ನು ಹೊರಡಿಸಿದ. ಸೋಮಣ್ಣ ಅರ್ಧ ಫರ್ಲಾಂಗ್ ದೂರ ಇದ್ದ ನೆರೆಮನೆಯ ಯುವಕ. ವಾರಿಗೆಯಲ್ಲಿ ಚಿಗಪ್ಪನ ಮಗ.

'ಚಿಗಪ್ಪ ಈ ಸಲನಾದ್ರೂ ಬರ್ತಾನ. ಅವನು ಎಲ್ಲಿರ್ತಾನೋ ಏನೋ...' ಎಂದು ಬೈಕಿನ ಹಿಂದೆ ಕುಳಿತ ಸೋಮಣ್ಣ ಸ್ವಗತದಂತೆ ಹೇಳಿಕೊಂಡದ್ದು ನಾಗರಾಜನ ಸ್ವಗತದಂತೆಯೂ ಇತ್ತು. 'ಮೊದೂಲು ಪ್ರಯತ್ನ ಮಾಡನ. ಮನೆ ಹತ್ರ ಸಿಗ್ನಲ್ ಸಿಗಾದಿಲ್ಲ. ರಸ್ತೆ ಹತ್ರ ಫೋನ್ ಮಾಡನ' ಎಂದು ರಸ್ತೆ ಮುಟ್ಟುತ್ತಲೂ ಬೈಕ್ ನಿಲ್ಲಿಸಿ ಲಿಂಗರಾಜ ಕೊಟ್ಟ ನಂಬರಿಗೆ ಮೊಬೈಲ್‌ನಿಂದ ಕರೆ ಮಾಡಿದ. ಒಂದೆರಡು ಪ್ರಯತ್ನಗಳಲ್ಲಿ ಸ್ಪಷ್ಟವಾಗಿ ಕೇಳಿಬಂದ ಸಂದೇಶ 'ಈ ನಂಬರ್ ಅಸ್ತಿತ್ವದಲ್ಲಿ ಇಲ್ಲ..' 'ಪ್ಯಾಟೇಲಿ ಯಾರನ್ನಾದ್ರೂ ಕೇಳನ' ಎಂದು ಸೋಮಣ್ಣ ನೀಡಿದ ಸೂಚನೆ ನಾಗರಾಜನಿಗೂ ಇಷ್ಟವಾಯಿತು. 'ಹಂಗೇ ಮಾಡನ' ಎನ್ನುತ್ತಾ ಬೈಕ್ ಹೊರಡಿಸಿದ. ಹದಿನೈದು ಇಪ್ಪತ್ತು ನಿಮಿಷಗಳಲ್ಲಿ ಅವರು ಪೇಟೆ ತಲುಪಿದರು. ಪೇಟೆಯಲ್ಲಿ ಸಿಗ್ನಲ್ ಸಿಗುವ ಖಾತರಿ ಇತ್ತು. ಅಲ್ಲಿಂದ ಪ್ರಯತ್ನ ಪಟ್ಟರೂ 'ಈ ನಂಬರ್ ಅಸ್ತಿತ್ವದಲ್ಲಿ ಇಲ್ಲ' ಎಂಬ ಸಂದೇಶವೇ ಅನುರಣಿಸಿತು. 'ದೊಡ್ಡ ಮನುಷ್ಯ.. ಹಳ್ಳೂರು ರಾಮಪ್ಪ ಅಂದರೆ ಯಾರಿಗಾದರೂ ಗೊತ್ತಿರುತ್ತೆ' ಎಂದುಕೊಂಡಿದ್ದ ನಾಗರಾಜನಿಗೆ ನಿರಾಸೆ ಆಯಿತು. 'ಅವನು ಬರೀತಾನಲ್ಲ, ಇಲ್ಲೇ ಕಾಮತ್ ಅಂತ ಇದ್ದಾರೆ. ಅವರು ಇಲ್ಲಿನ ಸಾಹಿತ್ಯ ಪರಿಷತ್ ಅಧ್ಯಕ್ಷರಂತೆ. ಅವರನ್ನು ಕೇಳನ' ಎಂದು ಸೋಮಣ್ಣ ಹೇಳಿದ್ದನ್ನು ನಾಗರಾಜ 'ಹೌದಲ್ಲ, ಸಾಹಿತ್ಯ ಪರಿಷತ್ತಿನವರಿಗೆ ಗೊತ್ತಿರುತ್ತೆ' ಎಂದು ಒಪ್ಪಿಕೊಂಡು ಕಾಮತ್ ಮನೆ ಹುಡುಕಿಕೊಂಡು ಹೋದರು. ಜೀವವಿಮಾ ಸಂಸ್ಥೆಯಲ್ಲಿ ಉನ್ನತ ಸ್ಥಾನ ಗಳಿಸಿದ್ದ ಏಜೆಂಟರಾಗಿದ್ದ ಕಾಮತ್

ತಮ್ಮ ಮನೆಯ ಕಚೇರಿಯಲ್ಲಿಯೇ ಇದ್ದರು. ನಾಗರಾಜನನ್ನು ನೋಡಿದವರೇ 'ಬನ್ನಿ ಬನ್ನಿ' ಎಂದು ಬರಮಾಡಿಕೊಂಡರು. 'ಹಳ್ಳೂರು ರಾಮಪ್ಪನವರು ಯಾರಿಗೆ ಗೊತ್ತಿಲ್ಲ' ಎಂದು ಮೆಚ್ಚುಗೆಯ ಮಾತು ಹೇಳುತ್ತಲೇ ತಮ್ಮಲ್ಲಿದ್ದ ಕನ್ನಡ ಲೇಖಕರ ವಿಳಾಸಗಳ ಒಂದು ದೊಡ್ಡ ಪುಸ್ತಕವನ್ನು ತೆಗೆದು ಹುಡುಕಿದರು. 'ಹಳ್ಳೂರು' ಕಡೆಯಿಂದ ಒಂದು ಸಲ ಹುಡುಕಿದವರು. 'ರಾಮಪ್ಪ' ಎಂಬ ಹೆಸರಿನಿಂದ ಇನ್ನೊಮ್ಮೆ ಹುಡುಕಿದರು. 'ರಾಮಚಂದ್ರಪ್ಪ ಅಂತ ಇದೆ.. ರಾಮಪ್ಪ ಕಾಣ್ತಾ ಇಲ್ವಲ್ಲ...' ಎಂದು ಕಾಮತರು ಸ್ವಗತ ಎಂಬಂತೆ ಹೇಳಿಕೊಳ್ಳುತ್ತಾ ಮತ್ತೆ ಮತ್ತೆ ಹುಡುಕಾಡಿದರು. 'ರಾಮಚಂದ್ರಪ್ಪ ಅಂತ ದೊಡ್ಡ ಸಾಹಿತಿ ಇದ್ದಾರೆ. ಅವರ ಬಗ್ಗೆ ತುಂಬಾ ಸಲ ಪತ್ರಿಕೆಗಳಲ್ಲಿ ಬರ್ತಾ ಇರುತ್ತೆ. ಈ ನಮ್ಮೂರ 'ಹಳ್ಳೂರು ರಾಮಪ್ಪ' ಹೆಸರೂ ತುಂಬ ಸಲ ಬರುತ್ತೆ. ಆದರೂ ವಿಳಾಸವಾಗಲೀ, ಸ್ವಂತ ಮೊಬೈಲ್ ನಂಬರ್ ಆಗಲೀ ಸಿಗ್ತಾ ಇಲ್ವಲ್ಲ...' ಎಂದು ಹೇಳುತ್ತಾ ತಮ್ಮ ಮನೆಯ ಒಳಕ್ಕೆ ಹೋಗಿ ಹೊರಬಂದರು.

'ಇರಲಿ, ಮೇಷ್ಟ್ರೇ. ನಮ್ಮ ಬೆಂಗಳೂರು ಕಚೇರಿಗೆ ಫೋನ್ ಮಾಡೋಣ ಅಂದರೆ ಹೋದ ಎಲೆಕ್ಷನ್‌ನಲ್ಲಿ ನಾವು ವಿರೋಧ ಮಾಡಿದವರೇ ಅಲ್ಲಿ ಈಗ ಅಧಿಕಾರಕ್ಕೆ ಬಂದಿದ್ದಾರೆ. ಆದರೂ ಒಬ್ಬಿಬ್ಬರು ಹಳಬರು ಇದ್ದಾರೆ. ಅವರನ್ನೇ ಕೇಳೋಣ ಬಿಡಿ' ಎಂದು ತಮ್ಮಷ್ಟಕ್ಕೆ ಹೇಳಿಕೊಳ್ಳುತ್ತಾ ಬೆಂಗಳೂರಿನ ತಮ್ಮ ಸಂಪರ್ಕಗಳಿಗೆ ಫೋನ್ ಹಚ್ಚಿದರು. ಎರಡು ಮೂರು ಕರೆಗಳನ್ನು ಮಾಡಿದ ನಂತರ ಆ ಕಡೆಯಿಂದ 'ಓಹೋಹೋ.... ಕಾಮತರು... ಏನು ಹಳ್ಳೂರು ರಾಮಪ್ಪನವರು ನಿಮಗೂ ಉಂಡೆ ಹಚ್ಚಿದ್ದಾರಾ...' ಎಂದೇನೋ ಹೇಳಿದ್ದು ಸ್ಪೀಕರ್ ಅನ್ನು ತೆರೆದೇ ಇಟ್ಟಿದ್ದರಿಂದ ನಾಗರಾಜನಿಗೆ ಕೇಳಿಸಿತು. ತಕ್ಷಣ ಸ್ಪೀಕರ್ ಅನ್ನು ನಿಲ್ಲಿಸಿ ಕಿವಿ ಹತ್ತಿರಕ್ಕೆ ಒಯ್ದು ಕಾಮತರು, 'ತುಂಬ ತುರ್ತು ಸಂದರ್ಭ ಮಾರಾಯರೇ, ಅವರ ತಂದೆ ತಿಮ್ಮನಾಯ್ಕರು ಅಂತ, ಅವರು ಇವತ್ತು ಬೆಳಗ್ಗೆ ತೀರಿ ಹೋಗಿದ್ದಾರೆ. ಮಗನಾಗಿ ಅಂತ್ಯಕ್ರಿಯೆಯಲ್ಲಿ ಭಾಗವಹಿಸಬೇಕಲ್ಲವೋ... ಅವರಿಗೆ ಈ ವಿಷಯ ತಿಳಿಸಬೇಕಲ್ಲ...' ಎಂದು ಮುತುವರ್ಜಿಯಿಂದ ಹೇಳಿದರು. ಬೆಂಗಳೂರಿನ ಕಚೇರಿಯಿಂದ ಸ್ವಲ್ಪ ಹೊತ್ತಿನಲ್ಲಿ ಹಳ್ಳೂರು ರಾಮಪ್ಪನವರ ಮನೆಯ ನಂಬರ್ ಸಿಕ್ಕಿತು. ಅದನ್ನೇ ಕಾಮತರು ನಾಗರಾಜನಿಗೆ ಕೊಟ್ಟು 'ಸದ್ಯ ಅಂತೂ ಮನೆ ನಂಬರ್ ಸಿಕ್ಕಿತಲ್ಲ. ಇನ್ನು ನೀವೇ ಮಾತಾಡಿ' ಎಂದು ಚೀಟಿಯಲ್ಲಿ ಬರೆದುಕೊಟ್ಟರು. ಅದನ್ನು ಕೈಗೆತ್ತಿಕೊಂಡ ನಾಗರಾಜ ತಕ್ಷಣವೇ ತನ್ನ ಮೊಬೈಲ್ ನಿಂದ ಕರೆ ಮಾಡಿದ.

ಸತತವಾಗಿ ಹಲವು ಸಲ ಕರೆ ಮಾಡಿದರೂ ಬರುತ್ತಾ ಇದ್ದುದು 'ನೀವು ಕರೆ ಮಾಡುತ್ತಿರುವ ಗ್ರಾಹಕರು ಇನ್ನೊಂದು ಕರೆಯಲ್ಲಿ ನಿರತರಾಗಿದ್ದಾರೆ, ಕಾಯಿರಿ ಅಥವಾ ಸ್ವಲ್ಪ ಹೊತ್ತು ಬಿಟ್ಟು ಕರೆ ಮಾಡಿ' ಎಂಬ ಸಂದೇಶ. ಅರ್ಧ ಗಂಟೆಗೂ ಮಿಕ್ಕಿ ಪ್ರಯತ್ನ ನಡೆಸಿದ ಮೇಲೆ ಅಂತೂ ಅವರು ಮಾಡುತ್ತಿದ್ದ ಕರೆಗೆ ಆ ಕಡೆಯಿಂದ ಉತ್ತರ ಸಿಕ್ಕಿತು. ಫೋನ್ ಎತ್ತಿಕೊಂಡವನು ರಾಮಣ್ಣನ ಮನೆಯಲ್ಲಿ ಅಡುಗೆ ಕೆಲಸಕ್ಕಿದ್ದ ಹುಡುಗನಂತೆ. ಅವನಿಗೆ ರಾಮಣ್ಣ ಯಾವುದೋ ಶೂಟಿಂಗ್‌ಗೆ ಹೋಗಿದ್ದ ಸಂಗತಿ ಬಿಟ್ಟು ಬೇರೇನೂ ಗೊತ್ತಿರಲಿಲ್ಲ. 'ಅವರ ಮೊಬೈಲ್ ನಂಬರ್ ಇದ್ದರೆ ಕೊಡು ಮಾರಾಯ' ಎಂದಿದ್ದಕ್ಕೆ ಅದೂ ತನಗೆ ಗೊತ್ತಿಲ್ಲ ಎಂದ. 'ಆಯಿತು. ಹೀಗೆ ಅವರ ತಂದೆಯವರು, ತಿಮ್ಮನಾಯ್ಕರು, ಹಳ್ಳೂರಿನಲ್ಲಿ ಇವತ್ತು ಬೆಳಗ್ಗೆ ತೀರಿದ್ದಾರೆ. ತಕ್ಷಣ ಹೊರಟು ಬರಬೇಕು ಅಂತ ಊರಿಂದ ನಾಗರಾಜ ಅಂತ ಮೇಷ್ಟ್ರು ಹೇಳಿದ್ದಾರೆ ಅಂತ ಹೇಳು' ಎಂದು ಬಿಡಿಸಿ ಬಿಡಿಸಿ ಹೇಳಿದ. 'ಆಯಿತು ಸಾರ್..' ಎಂದು ಆ ಕಡೆಯಿಂದ ಉತ್ತರ ಬಂತು. ಅಂತೂ ಸುದ್ದಿಯನ್ನು

ತಲುಪಿಸಿದ ಸಮಾಧಾನದಲ್ಲಿ ನಾಗರಾಜ ಪೇಟೆಯಲ್ಲಿ ಕೊಳ್ಳಬೇಕಿದ್ದ ಸಾಮಾನುಗಳನ್ನು ಕೊಂಡು ಸೋಮಣ್ಣನೊಂದಿಗೆ ಊರಿಗೆ ವಾಪಸಾದ.

ಊರಿನವರು, ಅಕ್ಕಪಕ್ಕದ ಹಳ್ಳಿಯಲ್ಲಿ ಪರಿಚಿತರು, ಹತ್ತಿರದ ಬಂಧುಗಳೆಲ್ಲ ಒಬ್ಬೊಬ್ಬರಾಗಿ ಮನೆಯ ಬಳಿ ಸೇರುತ್ತಾ ಅನಿರೀಕ್ಷಿತವಾಗಿ ಸಂಭವಿಸಿದ ಘಟನೆಗೆ ವಿಷಾದ ಪಡುತ್ತಾ ಅಲ್ಲಲ್ಲಿ ಗುಂಪುಗೂಡಿ ತಮ್ಮತಮ್ಮಲ್ಲಿ ಮಾತಾಡುತ್ತಿದ್ದರು. ಪೇಟೆಯಿಂದ ವಾಪಸಾದ ನಾಗರಾಜನನ್ನು ಮನೆಯ ಬಳಿಯೇ ತಡೆದು 'ರಾಮಣ್ಣ ಎಷ್ಟು ಹೊತ್ತಿಗೆ ಬತ್ತಾನಂತೆ...', 'ಬೆಂಗಳೂರು ಬಿಟ್ಟಿದ್ದಾನ...' 'ಎಷ್ಟು ಹೊತ್ತಿಗೆ ಬಿಟ್ಟಿದ್ದಾನಂತೆ...' ಎಂಬೆಲ್ಲ ಪ್ರಶ್ನೆಗಳನ್ನು ಕೇಳತೊಡಗಿದರು. ತನ್ನನ್ನು ತಡೆದು ಕೇಳುತ್ತಾ ಇದ್ದವರಿಗೆಲ್ಲ ತನ್ನ ಪ್ರಯತ್ನಗಳನ್ನೆಲ್ಲ ನಿಧಾನವಾಗಿ ಹೇಳಿ ಮನೆಯೊಳಕ್ಕೆ ಪ್ರವೇಶಿಸಿ ಅದನ್ನೇ ಅಜ್ಜಿ ಗಂಗಮ್ಮನಿಗೂ ಹೇಳಿದ. ಯಲ್ಲನಾಯ್ಕರು 'ಅವನಿಗೆ ಸುದ್ದಿ ಮುಟ್ಟಿದೆಯಲ್ಲ' ಎಂದು ವಿಚಾರಿಸಿದರು. 'ಅವನಿಗೆ ಮುಟ್ಟಿಸಲು ಆಗಲಿಲ್ಲ. ಅವನ ಮನೆಯಲ್ಲಿ ಒಬ್ಬ ಹುಡುಗ ಇದ್ದ, ಅವನಿಗೆ ತಿಳಿಸಲು ಹೇಳಿದ್ದೇನೆ. ಅವನು ಹೇಳಿದರೆ ಗೊತ್ತಾಗಬೇಕು..' ಎಂದು ನಿಧಾನವಾಗಿ ವಿವರಿಸಿದ. 'ಅಂತೂ ಸುದ್ದಿ ಅಲ್ಲಿಗೆ ಹೋಗಿದೆ. ಈಗಲ್ಲದಿದ್ದರೆ ಸಂಜೆಗೋ ರಾತ್ರಿಗೋ ಗೊತ್ತಾಗಬಹುದು. ಆ ಮೇಲೆ ಅವನು ಊರಿಗೆ ಬರೋದಕ್ಕೆ ಹೊರಡಬೇಕು...' ಎಂದು ಲಿಂಗರಾಜು ತನ್ನ ಅನುಮಾನ ವ್ಯಕ್ತಪಡಿಸಿದ. 'ಬರದೇ ಏನು ಮಾಡ್ತಾನೋ.. ಬಂದೇ ಬರ್ತಾನೆ. ಸ್ವಂತ ಅಪ್ಪನಿಗೆ ಬರದೆ ಇನ್ಯಾರಿಗೆ ಬರ್ತಾನಂತೆ..' ಎಂದು ಜಗುಲಿಯಲ್ಲಿ ಕುಳಿತು ಹಿರಿಯತನವನ್ನು ಚಲಾಯಿಸುತ್ತಿದ್ದ ಹಿರಿಯನೊಬ್ಬ ನಿರ್ಣಾಯಕವಾಗಿ ಹೇಳಿದ.

ಆಗಲೇ ಬಿಸಿಲೇರುತ್ತಿತ್ತು. ಬೆಳಗ್ಗೆ ರೊಟ್ಟಿ ತಿಂದಿದ್ದ ಮನೆಯವರಿಗೆ ಹಸಿವಿನ ಬಾಧೆ ಇರಲಿಲ್ಲ. ಆದರೂ ನೆರೆ ಮನೆಯ ಮಹಿಳೆಯರು ತಮ್ಮ ಮನೆಯಿಂದ ಕಡುಬನ್ನೋ, ರೊಟ್ಟಿಯನ್ನೋ ಮಾಡಿಕೊಂಡು ಬಂದು ಹಿಂಬಾಗಿಲಿನಿಂದ ಅಡುಗೆ ಮನೆ ಪ್ರವೇಶಿಸಿ ಇಟ್ಟು ಪಾರ್ವತಮ್ಮನನ್ನೂ ರಾಜೇಶ್ವರಿಯನ್ನೂ ಒಬ್ಬೊಬ್ಬರಾಗಿ ಒಳಕ್ಕೆ ಕರೆದು ಹೊಟ್ಟೆಗೆ ಸ್ವಲ್ಪವಾದರೂ ಹಾಕಿಕೊಳ್ಳಲು ಒತ್ತಾಯಿಸಿದರು. ಮಧ್ಯವಯಸ್ಸು ದಾಟಿದ್ದ ಯಲ್ಲನಾಯ್ಕರೂ ಒಂದು ಹೆಜ್ಜೆ ಅಡುಗೆ ಮನೆಗೆ ಇಣುಕಿ ಒಂದು ಕಡುಬನ್ನು ತಿಂದು ನೀರು ಕುಡಿದು ಜಗುಲಿಗೆ ವಾಪಸಾಗಿದ್ದರು. ಪೇಟೆಯಿಂದ ಬರುವಾಗ ಜೊತೆಯಿದ್ದ ಸೋಮಣ್ಣನ ಒತ್ತಾಯಕ್ಕೆ ಅಲ್ಲಿನ ಸೆಟ್ಟರ ಹೊಟಲಿನಲ್ಲಿ ಬನ್ನು ತಿಂದು ಚಹಾ ಕುಡಿದು ಬಂದಿದ್ದ ನಾಗರಾಜನಿಗೆ ಹಸಿವು ಇರಲಿಲ್ಲ. ಆದರೂ ಒಳಗಡೆಯಿಂದ ರಾಜೇಶ್ವರಿ ಸನ್ನೆ ಮಾಡಿ ಕರೆದು ಬಲವಂತವಾಗಿ ಒಂದು ಕಡುಬು ತಿನ್ನಿಸಿದ್ದಳು. ಏನನ್ನೋ ತರುವುದಕ್ಕೆ ಅಡುಗೆ ಮನೆಯ ಒಳಗೆ ಸುಳಿದಿದ್ದ ಲಿಂಗರಾಜನನ್ನು ತಡೆದು ನಿಲ್ಲಿಸಿದ ಊರಿನ ಮಹಿಳೆಯರು ತುಂಬ ಕಕ್ಕುಲಾತಿಯಿಂದ ಕಡುಬನ್ನು ತಿನ್ನಿಸಿ ಸಾಂತ್ವನ ಹೇಳಿದ್ದರು. ತಿಮ್ಮಜ್ಜನ ಪಕ್ಕದಲ್ಲಿ ಕುಳಿತಿದ್ದ ಅಜ್ಜಿ ಗಂಗಮ್ಮನನ್ನು ಮಹಿಳೆಯರು ಅಡುಗೆ ಮನೆಯ ಒಳಕ್ಕೆ ಕರೆದರಾದರೂ ಗಂಡನ ಸಾವಿನಿಂದ ಸಂಕಟಪಡುತ್ತಿದ್ದ ವೃದ್ಧ ಜೀವ ಮಾನಸಿಕವಾಗಿ ಜರ್ಝರಿತವಾಗಿದ್ದು ಏನನ್ನೂ ಸ್ವೀಕರಿಸುವ ಸ್ಥಿತಿಯಲ್ಲಿರಲಿಲ್ಲ. 'ಸುಸ್ತಾಗ್ತದಲ್ಲ ಅಜ್ಜಿ, ಒಂಚೂರು ಮಜ್ಜಿಗೆನಾದ್ರೂ ಕುಡಿ' ಎಂಬ ಸಾಂತ್ವನದ ಉಪಚಾರಕ್ಕೂ ಅಜ್ಜಿ ಮಣಿದಿರಲಿಲ್ಲ.

ತಿಮ್ಮನಾಯ್ಕರ ಬಳಗದವರು, ಗಂಗಮ್ಮನ ಬಳಗದವರು, ಯಲ್ಲನಾಯ್ಕರ ಸಂಬಂಧಿಕರು, ಈರಮ್ಮ-ವಾಸನಾಯ್ಕರು, ನಾಗರಾಜನ ಗೆಳೆಯರು, ರಾಜೇಶ್ವರಿಯ ಬಂಧುಗಳು, ಲಿಂಗರಾಜನ ಮಿತ್ರರು ಬಂದು ಬಂದು ಅಂತಿಮ ನಮನ ಸಲ್ಲಿಸಿ ಕೊನೆಯ ಕಾರ್ಯಕ್ರಮದಲ್ಲಿ ಭಾಗಿಯಾಗುವುದಕ್ಕೆ ಎದುರು ನೋಡುತ್ತಿದ್ದರು.

ಸೂಡಿಗಾಗಿ ಕಟ್ಟಿಗೆ ಒಟ್ಟು ಮಾಡಲು ಹೋಗಿದ್ದ ಊರಿನವರು ಯಲ್ಲನಾಯ್ಕರು ಸೂಚಿಸಿದ್ದ ಅವರ ಹಕ್ಕಲಿನ ಮೂಲೆಯಲ್ಲಿ ಸೂಡನ್ನು ಸಿದ್ಧಪಡಿಸಿ ಮುಂದಿನ ಕಾರ್ಯಕ್ಕಾಗಿ ಮನೆಯ ಬಳಿಗೆ ಬಂದು ಸೇರಿದ್ದರು. ಹೊತ್ತು ನೆತ್ತಿಯಿಂದ ಇಳಿದು ಪಶ್ಚಿಮಾಭಿಮುಖವಾಗಿ ಜಾರುತ್ತಿರುವುದನ್ನು ಕಂಡ ಊರಿನ ಹಿರಿಯರು ಜಗುಲಿಗೆ ಇಣುಕಿ 'ಬರೋರೆಲ್ಲ ಬಂದ್ರೆ ಹೊರಡಿಸಿ ಬಿಡಾನ. ಸಂಜೆ ಹೊತ್ತಿಗೆ ಮಳೆ ಬಂದ್ರೆ ಮತ್ತೆ ಕಷ್ಟ..' ಎಂದು ಎಚ್ಚರಿಸಿದರು. 'ಎಲ್ರೂ ಬಂದಂಗಾತು.. ಅವನು ರಾಮಣ್ಣ ಮಾತ್ರ ಇನ್ನೂ ಬಂದಿಲ್ಲ..' ಎಂದೊಬ್ಬ ಜಗುಲಿಯಿಂದ ಹೇಳಿದ. 'ಅವನನ್ನು ನೆಚ್ಚಂಗಿಲ್ಲ. ಅವನಿಗೆ ಸುದ್ದಿನೇ ಮುಟ್ಟಿದ ಗ್ಯಾರಂಟಿ ಇಲ್ಲ. ಮುಟ್ಟಿದ್ರೆ ಅವನೇ ಫೋನು ಮಾಡಿ ತಿಳಿಸ್ತಿದ್ದ...' ಎಂದು ನಾಗರಾಜ ವಿವರ ಒಪ್ಪಿಸಿದಾಗ ಕೇಳಿಸಿಕೊಂಡಿದ್ದವನೊಬ್ಬ ಹೇಳಿದ. 'ಅಜ್ಜಿನ ಕೇಳಿ ಬಿಡ್ರೋ.. ರಾಮಣ್ಣ ಬರೋವರೆಗೂ ಕಾಯದಾ ಅಂತ..?' ಎಂದು ಸೇರಿದ್ದ ಹಿರಿಯ ತಲೆಗಳ ಮಧ್ಯೆ ಜಿಜ್ಞಾಸೆ ಶುರುವಾಯಿತು. 'ಅರೆ, ಊರು ಬಿಟ್ಟಿದಾನೆ ಅಂದ್ರೂ ರಕ್ತ ಸಂಬಂಧ ಎಲ್ಲಿ ಹೋಗ್ತದೆ? ಅವನು ಬರಲೇಬೇಕಲ್ಲ. ಬರ್‍ತಾನೆ ಬಿಡ್ರೊ' ಎಂದೊಬ್ಬ ಹೇಳಿದರೆ, 'ವರ್ಷಗಳಿಂದ ಇತ್ಲಾಗೆ ಅವನ ಸುಳಿವೇ ಇಲ್ಲ. ಅವನು ಇಂಥಲ್ಲಿ ಇದಾನೆ ಅಂತಾನೂ ಇಲ್ಲಿನವರಿಗೆ ಗೊತ್ತೇ ಇಲ್ಲ..' ಎಂದು ಮತ್ತೊಬ್ಬ ಹೇಳಿದ. 'ಅವತ್ತು ಪೇಪರಲ್ಲಿ ಅವನ ಫೋಟೋ ಬಂದಿತ್ತಂತೆ. ನಮ್ಮ ಹುಡುಗ್ರು ಹೇಳಿದ್ರು, ಯಾವುದೋ ಕಮಿಟಿಗೆ ಅಧ್ಯಕ್ಷ ಅಂತೆ...' ಇನ್ನೊಬ್ಬ ತನಗೆ ತಿಳಿದಿದ್ದುದನ್ನು ಹೇಳಿದ. 'ಅವನು ದೊಡ್ಡ ಮನುಷ್ಯ ಕಣ್ರೊ. ಆದರೆ ಹುಟ್ಟಿಸಿದ ಅಪ್ಪನಿಗೆ ಕೆಂಡ ಇಡಾಕಾದ್ರೂ ಬರಬೇಕಲ್ಲ..' ಎಂದು ಹಿರಿಯರೊಬ್ಬರು ಸಮಾಧಾನದಿಂದ ಹೇಳಿದರು.

ಜಗುಲಿಯಲ್ಲಿ ರಾಮಣ್ಣನ ಆಗಮನದ ಕುರಿತಾಗಿ ನಡೆಯುತ್ತಿದ್ದ ಮಾತುಗಳನ್ನೆಲ್ಲ ಕೇಳಿಸಿಕೊಂಡಿದ್ದ ಲಿಂಗರಾಜನಿಗೆ ರಾಮಣ್ಣನಿಗೆ ಸುದ್ದಿ ಮುಟ್ಟಿಲ್ಲ ಎಂಬುದು ನಾಗರಾಜನ ಮಾತಿನಿಂದಲೇ ಖಚಿತವಾಗಿತ್ತು. ಅವನು ಬೆಂಗಳೂರಿನಲ್ಲಿ ಅವನ ಮನೆಯಲ್ಲಿದ್ದಾಗ ಮನೆಯಲ್ಲಿ ಇದ್ದವರು ಯಾವ ಸುದ್ದಿ ಇದ್ದರೂ ಅವನು ರಾತ್ರಿ ಬಂದು ಊಟ ಮಾಡಿ ಸಮಾಧಾನದಿಂದ ಕುಳಿತಾಗ ಮಾತ್ರವೇ ಹೇಳಬೇಕು ಎಂಬುದನ್ನು ತಿಳಿದವನಾಗಿದ್ದ. ನಾಗರಾಜ ಹೇಳಿದ್ದಂತೆ ಅವರ ಮನೆಯಲ್ಲಿದ್ದ ಹುಡುಗನಿಗೆ ರಾಮಣ್ಣ ಮಧ್ಯಾಹ್ನವೇ ಮನೆಗೆ ಬಂದಿದ್ದರೂ ರಾತ್ರಿಯ ನಂತರವೇ ಸಾವಿನ ಸುದ್ದಿಯನ್ನು ಹೇಳುವುದಕ್ಕೆ ಅವಕಾಶ ಸಿಗುತ್ತಿತ್ತು. ಹಾಗೆ ಸುದ್ದಿ ಸಿಕ್ಕಿ ಅವನು ರಾತ್ರಿ ಬಸ್ಸಿಗೆ ಹೊರಟರೂ ಶಿವಮೊಗ್ಗಕ್ಕೆ ಬಂದು ಮತ್ತೆ ಊರು ಕಡೆ ಬರುವುದು ನಾಳೆ ಬೆಳಿಗ್ಗೆಯೇ. ಈ ಲೆಕ್ಕಾಚಾರವನ್ನು ಮನಸ್ಸಿನಲ್ಲಿಯೇ ನಡೆಸಿದ ಲಿಂಗರಾಜ ಜಗುಲಿಯಲ್ಲಿ ಹಿರಿತನ ನಡೆಸಿದ್ದ ಹಿರಿಯನೊಟ್ಟಿಗೆ 'ಇಲ್ಲ ದೊಡಪ್ಪ, ಅವನು ಬರಾದಾಗಿದ್ರೆ ಇಷ್ಟು ಹೊತ್ತಿಗಾಗಲೇ ನಮಗೆ ಫೋನು ಮಾಡಿ ತಿಳಿಸ್ತಿದ್ದ. ಅಲ್ಲೆಲ್ಲೋ ಅವನು ಶೂಟಿಂಗ್ ನಲ್ಲಿ ಇದ್ದಾನಂತೆ. ಅವನಿಗೆ ಸುದ್ದಿ ತಲುಪಿಸೋದು ಕಷ್ಟವಂತೆ. ಅಕಸ್ಮಾತ್ ಅವನಿಗೆ ಸುದ್ದಿ ತಿಳಿದು ಹೊರಟರೂ ಅವನು ಇಲ್ಲಿಗೆ ಬಂದು ತಲುಪೋದು ನಾಳೆ ಬೆಳಗ್ಗೆ ಆಗುತ್ತೆ.. ಎಂಥ ಮಾಡಾದು?' ಎಂದು ನಿರ್ಧಾರವನ್ನು ಹಿರಿಯರಿಗೇ ಒಪ್ಪಿಸಿದ. 'ಹಂಗಾರೆ ಎಂತ ಮಾಡಾದು. ಈಗ ಬರೋರೆಲ್ಲ ಬಂದಾಗಿದ್ರೆ ಹೊಂಟು ಬಿಡಾನ. ಅವನಿಗೆ ಅದೃಷ್ಟ ಇದ್ರೆ ಸೂಡಿನ ಹತ್ರನಾದ್ರೂ ಬಂದು ಕೊನೇ ಸೇವೆ ಮಾಡ್ತಾನೆ. ಈಗ ನೀವು ಕೆಲಸ ಮುಂದುವರಿಸಿ..' ಎಂದು ಆ ಹಿರಿಯ ನಿರ್ಣಾಯಕ ಎಂಬಂತೆ ಹೇಳಿದ. 'ಎಂತ ಮಾಡಾದು ಅಜ್ಜಿ..?' ಎಂದು ಸುಸ್ತಾಗಿ ಕುಳಿತಿದ್ದ ಗಂಗಮ್ಮನವರನ್ನು ಕೇಳಿದಾಗ 'ಎಂತ ಮಾಡ್ತೀರಿ. ಅವನಿಗೆ ಅಂತ ಎಷ್ಟು ಹೊತ್ತು ಕಾಯ್ತೀರಿ. ಸ್ವಾಮಿ ಮಾಡಿದಂಗೆ ಆಗಲಿ, ನೀವು ಕೆಲಸ ಮುಂದುವರಿಸಿ' ಎಂದು ಸೋತ ಧ್ವನಿಯಲ್ಲಿ ಹೇಳಿದರು.

‘ಸರಿ, ಇನ್ನು ಎತ್ತಿ ಬಿಡಾನ. ವಾಲಗದವರು ಬಂದ್ರಾ..?’ ಎಂದು ಉಸ್ತುವಾರಿಯನ್ನು ವಹಿಸಿಕೊಂಡವನಂತಿದ್ದ ಹಿರಿಯ ಹೇಳಿದ. ಕೊನೆಯದಾಗಿ ಪೂಜೆ ಸಲ್ಲಿಸಿ ಧೂಪ ಹಾಕುವವರು ಬರಬಹುದು ಎನ್ನುವ ಕರೆಯೂ ಹೊರಟಿತು. ಯಲ್ಲನಾಯ್ಕರ ಕೋಣೆಯಲ್ಲಿ ಸೇರಿಕೊಂಡಿದ್ದ ನಂತರ ಹುಡುಗನೊಬ್ಬ ಅವಸರದಿಂದ ಹೊರಬಂದು ತಿಮ್ಮನಾಯ್ಕರಿಗೆ ಪೂಜೆ ಸಲ್ಲಿಸಿ ಕೈಮುಗಿದು ಹಿಂದೆ ಸರಿದ. ‘ಇಷ್ಟು ಹೊತ್ತಿನ ತಂಕ ಯಂತ ಮಾಡ್ತಿದ್ಯಾ..’ ಎಂದು ಹಿರಿಯನೊಬ್ಬ ಗದರಿದಾಗ ‘ಬೆಳಗ್ಗೆ ಬಂದಾಗ ಏನೂ ರೆಡಿ ಮಾಡ್ರಿಲ್ಲ. ಹಂಗೆ ಕೋಣೆ ಸೇರಿದೆ. ಮಂಚದ ಮೇಲೆ ಕೂತವನಿಗೆ ಹಂಗೆ ನಿದ್ದೆ ಬಂದು ಬಿಡ್ತು’ ಎಂದು ಅಪರಾಧಭಾವದಲ್ಲಿ ಮೆಲ್ಲಗೆ ಹೇಳಿದ. ಹೊರಗಿನ ಅಂಗಳದ ಮೂಲೆಯಲ್ಲಿ ಬ್ಯಾಂಡು ಸೆಟ್‌ನವರು ನಿಂತಿದ್ದವರು ಯಾವುದೋ ಶೋಕಗೀತೆಯ ಮಟ್ಟನ್ನು ಒಂದು ಸಲ ನುಡಿಸಿದರು. ಜಗುಲಿಯಲ್ಲಿ, ಒಳಗಿನ ಕೋಣೆಗಳಲ್ಲಿ, ಅಡುಗೆ ಮನೆಯಲ್ಲಿ, ಅಂಗಳದಲ್ಲಿ, ಕಣದ ಸುತ್ತಲಿನ ಮರಗಳ ನೆರಳಿನಲ್ಲಿ ಗುಂಪುಗುಂಪಾಗಿ ಸೇರಿದ್ದವರೆಲ್ಲ ಎದ್ದು ಎಲ್ಲರೂ ಕೊನೆಯ ಕಾರ್ಯದ ಸಿದ್ಧತೆಗಾಗಿ ಹತ್ತಿರ ಬರತೊಡಗಿದರು. ಸೂಡಿಗಾಗಿ ಕಟ್ಟಿಗೆ ಒಟ್ಟು ಮಾಡಲು ಹೋಗಿದ್ದವರಲ್ಲಿ ಕೆಲವರು ಸಿದಿಗೆಗಾಗಿ ನಾಲ್ಕು ನೇರವಾಗಿದ್ದ ಅಡ್ಡೆಗಳನ್ನೂ ಅಡ್ಡಲಾಗಿ ಕಟ್ಟುವುದಕ್ಕೆ ಕಾಡು ಬಳ್ಳಿಯ ಸಿಂಬೆಯನ್ನು ತಂದು ಅಂಗಳದಲ್ಲಿ ಇಡತೊಡಗಿದರು.

ಜಗುಲಿಯಲ್ಲಿ ಹಿರಿತನ ವಹಿಸಿಕೊಂಡಿದ್ದವರು ತಿಮ್ಮನಾಯ್ಕರನ್ನು ನಿಧಾನವಾಗಿ ಎತ್ತಿಕೊಂಡು ಮನೆಯಿಂದ ಹೊರಗಡೆ ತರುವುದಕ್ಕೆ ಯಲ್ಲನಾಯ್ಕರನ್ನೂ ಮೊಮ್ಮಕ್ಕಳಾದ ಲಿಂಗರಾಜ, ನಾಗರಾಜನನ್ನೂ ಕರೆದರು. ಊರಿನ ಇತರೆ ಯುವಕರು ದೊಡ್ಡಪ್ಪನ ಸೇವೆಗಾಗಿ ತಮಗೂ ಅವಕಾಶಕ್ಕಾಗಿ ಜೊತೆಗೆ ನಿಂತರು. ಜಗುಲಿಯಲ್ಲಿ ಕುಳ್ಳಿರಿಸಿದ್ದ ಹಾಸುಗೆಯ ಸಹಿತ ಅವರನ್ನು ಕುಳಿತ ಭಂಗಿಯಿಂದ ಎತ್ತಿಕೊಂಡು ಹೆಬ್ಬಾಗಿಲನ್ನು ನಿಧಾನವಾಗಿ ದಾಟಿಸಿದರು. ಅಂಗಳದಲ್ಲಿ ಅಗಲವಾಗಿ ಹಾಕಿದ್ದ ಸಿದಿಗೆಯ ಮೇಲೆ ಮಲಗಿಸಿದರು. ಜಗುಲಿಯಿಂದ ಅಂಗಳಕ್ಕೆ ತರುವಾಗ ಹಿರಿಯರೊಬ್ಬರು ‘ಸ್ವಾಮಿ ವೆಂಕಟರಮಣ ಸ್ವಾಮಿ ಪಾದಕ್ಕೆ ಗೋವಿಂದ ಎನ್ನಿ ಗೋವಿಂದಾ..’ ಎಂದು ಕೂಗುತ್ತಾ ಬೇರೆಯವರೂ ದನಿಗೂಡಿಸುವಂತೆ ಕೈ ಸನ್ನೆಯಲ್ಲಿ ಸೂಚಿಸುತ್ತಿದ್ದರು. ಸಿದಿಗೆಯ ಮೇಲೆ ನಾಜೂಕಾಗಿ ಮಲಗಿಸುವ ಮೊದಲು ಸ್ನಾನ ಮಾಡಿಸಿ ಹಾಕಿದ್ದ ಮಡಿ ಅಂಗಿಯನ್ನೂ, ಪಂಚೆಯನ್ನು ನಿಧಾನವಾಗಿ ತೆಗೆದು ನಾಗರಾಜ ಪೇಟೆಯಿಂದ ತಂದ ಹೊಸ ಬಟ್ಟೆಯನ್ನು ಮುಖವನ್ನು ಬಿಟ್ಟು ಮುಚ್ಚಿದರು. ಹೊಸ ಟವೆಲ್ ಒಂದನ್ನು ತಿಮ್ಮನಾಯ್ಕರ ತಲೆಗೆ ಮುಂಡಾಸಿನಂತೆ ಸುತ್ತಿದರು. ಸಿದಿಗೆಯ ಮೇಲೆ ಹೊಸ ಬಟ್ಟೆಯನ್ನು ಹೊದಿಸಿದ ನಂತರ ಉದ್ದನೆಯ ಅಡ್ಡೆಗಳನ್ನು ಎತ್ತಿಕೊಂಡು ಸೂಡು ಇರುವ ಕಡೆ ಹೊತ್ತೊಯ್ಯುವಾಗ ಮೇಲೆ ಇದ್ದ ತಿಮ್ಮನಾಯ್ಕರು ಜಾರದಂತೆ ಕಾಡು ಬಳ್ಳಿಯಿಂದ ಎಲ್ಲ ಕಡೆ ಬಿಗಿದರು. ಮತ್ತೆ ಯಲ್ಲನಾಯ್ಕರು, ನಾಗರಾಜ, ಲಿಂಗರಾಜನನ್ನು ಸಿದಿಗೆಯನ್ನು ಮೊದಲನೆಯವರಾಗಿ ಎತ್ತಿಕೊಳ್ಳುವ ಸೇವೆಗೆ ಕರೆದರು. ಮನೆಯವರಾಗಿ ಮಾಡುವ ಕೊನೆಯ ಸೇವೆಯಾಗಿದ್ದರಿಂದ ಮೂವರೂ ಅದುವರೆಗೆ ಅದುಮಿ ಹಿಡಿದಿದ್ದ ದುಃಖದ ಕಟ್ಟೆ ಒಡೆದಂತಾಗಿ ಜೋರಾಗಿ ಅಳುತ್ತಾ ಸಿದಿಗೆಗೆ ಭುಜ ಕೊಟ್ಟರು. ಸಂಬಂಧಿಕ ಯುವಕನೊಬ್ಬ ಮಣ್ಣಿನ ಕೊಡದಲ್ಲಿ ನೀರನ್ನು ಹೊತ್ತು ಮುಂದೆ ಸಾಗಿದ್ದಂತೆ ಸಿದಿಗೆ ಹೊತ್ತವರು ಹಿಂಬಾಲಿಸಿದರು. ಕಾರ್ಯಕ್ರಮದ ಉಸ್ತುವಾರಿ ಹೊತ್ತವನಂತೆ ವರ್ತಿಸುತ್ತಿದ್ದ ಹಿರಿಯನು ‘ಗಂಜಿಯ ಕೊಡ ಹಿಡುಕೊಂಡು ಬನ್ನಿರೋ’ ಎನ್ನುತ್ತಾ ತಿಮ್ಮನಾಯ್ಕರನ್ನು ಹೊತ್ತವರನ್ನು ಹಿಂಬಾಲಿಸಿದನು.

ಮನೆಯ ಹಕ್ಕಲಿನಲ್ಲಿಯೇ ತಿಮ್ಮನಾಯ್ಕರಿಗೆ ಸೂಡನ್ನು ಸಿದ್ಧಪಡಿಸಿದ್ದರು. ಹತ್ತಿರದಲ್ಲಿ ಬೆಂಕಿಯ ಝಳಕ್ಕೆ ಯಾವ ಗಿಡ ಮರಗಳಿಗೂ ತೊಂದರೆ ಆಗದಂತೆ ಎಚ್ಚರ ವಹಿಸಿದ್ದರು. ನಾಲ್ಕು ಕಡೆಯಲ್ಲೂ

ಬಲವಾದ ಗೂಟಗಳನ್ನು ಹೂತು ದೊಡ್ಡ ಗಾತ್ರದ ಕುಂಟೆಗಳನ್ನು ಅಡಿಯಲ್ಲಿ ಪೇರಿಸಿದ್ದರು. ಎದೆಮಟ್ಟದ ವರೆಗೆ ದಪ್ಪ ದಪ್ಪನೆಯ ಕುಂಟೆಗಳನ್ನು ಜೋಡಿಸಿ ಬಿಡಿ ಸೌದೆಗಳನ್ನೂ ಚಕ್ಕೆಗಳನ್ನೂ ನಂತರ ಮುಚ್ಚುವುದಕ್ಕೆ ಪಕ್ಕದಲ್ಲಿ ಜೋಡಿಸಿಟ್ಟಿದ್ದರು. ಸೂಡಿನ ಬಳಿ ಬಂದಾಗ ಅಲ್ಲೊಂದು ಕಡೆ ಇಳಿಸಲು ಹೇಳಿದರು. ಅಲ್ಲಿ ತಿಮ್ಮನಾಯ್ಕರನ್ನು ಇಳಿಸಿದ ಮೇಲೆ ಅಲ್ಲಿಯರೆಗೆ ಹೊತ್ತು ತಂದಿದ್ದವರು ಬೆವರು ಒರೆಸಿಕೊಳ್ಳುತ್ತಾ ನಿಂತರು. ಸಿದಿಗೆಯನ್ನು ಇಳಿಸಿದ ನಂತರ ತಿಮ್ಮನಾಯ್ಕರಿಗೆ ಇನ್ನೊಮ್ಮೆ ಪೂಜೆ ಸಲ್ಲಿಸಿ ಅಲ್ಲಿ ನೆರೆದಿದ್ದ ಎಲ್ಲರೂ ಕೊಡದಲ್ಲಿ ತಂದಿದ್ದ ಗಂಜಿಯಲ್ಲಿ ಒಂದೊಂದು ಹನಿಯನ್ನು ಅದಕ್ಕೆಂದೇ ತಂದಿದ್ದ ಎಲೆಯಲ್ಲಿ ಕೊಟ್ಟೆ ಮಾಡಿ ಬಾಯಲ್ಲಿ ಬಿಟ್ಟರು. 'ಬಾಯಿಗೆ ಒಂದು ಹನಿಯಾದ್ರೂ ಬೀಳಹಂಗೆ ನಿದಾನ ಬಿಡ್ರೋ.. ಅದಕ್ಕೆ ತಾನೇ ಅದಕ್ಕೆ ಬಾಯಿಗಂಜಿ ಅಂತ ಹೇಳಾದು' ಎಂದು ಹಿರಿತನದ ಉಸ್ತುವಾರಿ ಹೊತ್ತಿದ್ದ ಹಿರಿಯ ಹೇಳಿದ. ಸುಡುಗಾಡಿಗೆ ಬಂದವರೆಲ್ಲ ಬಾಯಿಗೆ ಗಂಜಿ ಬಿಟ್ಟ ನಂತರ ಹಿಂದೆ ಮಹಿಳೆಯರೊಂದಿಗೆ ನಡೆದು ಬಂದಿದ್ದ ಗಂಗಮ್ಮನತ್ತ ತಿರುಗಿದ ಹಿರಿಯ ಮಂಗಳಸೂತ್ರವನ್ನು ತೆಗೆದು ಕೈ ಬಳೆಯನ್ನು ಬಿಚ್ಚಿಕೊಡುವಂತೆ ಹೇಳಿದಾಗ ಅಲ್ಲಿಯೇ ಇದ್ದ ನಾಗರಾಜ 'ಬೇಕಿದ್ದರೆ ತಾಳಿಯನ್ನು ಬಿಚ್ಚಿ. ಅದೂ ಈಗ ಅವಶ್ಯಕವಲ್ಲ. ಬಳೆಯನ್ನು ಶಾಸ್ತ್ರಕ್ಕೆ ಅಂತ ಒಂದನ್ನು ಮಾತ್ರ ತೆಗೆಯಿರಿ. ಅವನ್ನೆಲ್ಲ ಒಡೆದು ರಂಪ ಮಾಡಬೇಡಿ' ಎಂದು ಕಟುವಾಗಿ ಹೇಳಿದ. ಅದನ್ನೇ ಲಿಂಗರಾಜನೂ ಹೇಳಿದಾಗ 'ಹೋಗಲಿ ಬಿಡ್ರೊ ಮಾರಾಯ. ಇಲ್ಲಿ ಮಾಡೋ ರಿವಾಜು ಅಂತ ಹೇಳಿದೆ' ಎಂದು ಹಿರಿಯ ಸುಮ್ಮನಾದ. ಶಾಸ್ತ್ರಕ್ಕೆ ಅಂತ ಹೇಳಿ ಅಜ್ಜಿಯ ಕೈಯಿಂದ ಒಂದು ಬಳೆಯನ್ನು ತೆಗೆದುಕೊಂಡ ಹಿರಿಯ ಅದನ್ನು ತಿಮ್ಮನಾಯ್ಕರ ಸುತ್ತ ಸುಳಿದು ಸೂಡಿಗೆ ಹಾಕಿದರು.

ತಿಮ್ಮನಾಯ್ಕರನ್ನು ಮಲಗಿದ್ದಂತೆ ಎತ್ತಿಕೊಂಡು ಸೂಡಿನ ಮೇಲೆ ಇರಿಸಿದರು. ಇರಿಸುವ ಮೊದಲು ಎಡಗಡೆಯಿಂದ ಸುತ್ತು ಬಂದರು. ಸೂಡಿನ ಮಧ್ಯೆ ಇರಿಸಿದ ನಂತರ ಒಂದೊಂದೇ ಸೌದೆಯನ್ನು ಇರಿಸುತ್ತ ಮುಚ್ಚಿದರು. ಬೆಂಕಿ ಹತ್ತಿಸುವ ಮೊದಲು 'ರಾಮಣ್ಣ ಹಾದಿ ಮೇಲೆ ಇದಾನೇನು ನೋಡ್ರೋ ಫೋನು ಮಾಡಿ' ಎಂದು ಕೊನೆಯ ಪ್ರಯತ್ನವಾಗಿ ನಿರೀಕ್ಷೆ ಮಾಡಿದರು. ತನ್ನ ಮೊಬೈಲ್ ನಲ್ಲಿ ರಾಮಣ್ಣನ ಮನೆಯ ನಂಬರನ್ನು ಉಳಿಸಿಕೊಂಡಿದ್ದ ನಾಗರಾಜ ಕೊನೆಯ ಪ್ರಯತ್ನ ಎಂಬಂತೆ ಕರೆ ಮಾಡಿದ. 'ನಿಮ್ಮ ಚಂದಾದಾರರು ವ್ಯಾಪ್ತಿ ಪ್ರದೇಶದಿಂದ ಹೊರಗಿದ್ದಾರೆ' ಎಂದು ಒಮ್ಮೆ ಸಂದೇಶ ಬಂದರೆ, ಇನ್ನೊಂದು ಸಲ ನಡೆಸಿದ ಪ್ರಯತ್ನಕ್ಕೆ 'ನಿಮ್ಮ ನಂಬರ್ ಸರಿ ಇದೆಯೇ ಪರೀಕ್ಷಿಸಿಕೊಳ್ಳಿ' ಎಂಬ ಸಂದೇಶ ಬಂತು. ನಾಗರಾಜ ತನ್ನ ಫೋನಿನ ಸ್ಪೀಕರ್ ಅನ್ನು ಎಲ್ಲರಿಗೂ ಕೇಳಿಸುವಂತೆ ಇಟ್ಟಿದ್ದರಿಂದ ಅಲ್ಲಿ ಸೇರಿದ್ದವರೆಲ್ಲ ಕೇಳಿಸಿಕೊಂಡು 'ಇನ್ನು ಬಿಡ್ರಾ.. ಅಂವ ಬರಂಗಿಲ್ಲ.. ಅಜ್ಜನ ಮಖ ನೋಡ ಅದೃಷ್ಟ ಇಲ್ಲ' ಎನ್ನುತ್ತಾ ಮುಂದಿನ ಕೆಲಸಕ್ಕೆ ಅಣಿಯಾದರು. ಊರಿನ ಪದ್ಧತಿಯಂತೆ ಬಂದ ಬಂಧು ಬಾಂಧವರೆಲ್ಲ ಅಲ್ಲಿ ಒಟ್ಟಿದ್ದ ಸೌದೆಗಳನ್ನು ಇಬ್ಬರು ಎರಡು ಕಡೆಯಿಂದ ಹಿಡಿದು ಮುಚ್ಚಿದರು. ಯಾರೋ ಒಬ್ಬ ಬಲಗೈಯಲ್ಲಿ ಸೌದೆ ಇಡುತ್ತಾ ಇದ್ದುದನ್ನು ಕಂಡ ಹಿರಿಯನೊಬ್ಬ 'ಎಡಗೈಯಲ್ಲಿ ಹಾಕಬೇಕು ಕಣೋ' ಎಂದು ಆಕ್ಷೇಪಿಸುವಂತೆ ಹೇಳಿದಾಗ ಅವನು ಗಾಬರಿಯಿಂದ ಎಡಗೈಯಿಂದ ಸೌದೆಯನ್ನು ಏರಿಸಿದನು. ಅದನ್ನು ಕೇಳಿಸಿಕೊಂಡ ನಾಗರಾಜ ತಾನು ಬಲಗೈಯಲ್ಲಿಯೇ ಎಲ್ಲರಿಗೂ ಕಾಣಿಸುವಂತೆ ಸೌದೆಯನ್ನು ಎತ್ತಿ ಹಿಡಿದು ಸೂಡಿನ ಮೇಲೆ ಮುಚ್ಚಿದನು. ಹಿಂದೆ ಯಾರೋ ಯಾವುದೋ ಕಾಲದಲ್ಲಿ ಮಾಡಿದ್ದನ್ನು ಈಗಲೂ ಯಾಕೆಂದು ಗೊತ್ತಾಗದೆ ಅನುಸರಿಸುತ್ತಿರುವ ಬಗ್ಗೆ ಮೇಷ್ಟರಾಗಿದ್ದ ಅವನಿಗೆ ಅಸಮಾಧಾನ ಇತ್ತು. ಮನೆಯಲ್ಲಿ ಲಿಂಗರಾಜನೊಟ್ಟಿಗೆ ಮಾತನಾಡುತ್ತಿದ್ದಾಗ ಅವನ ಅಸಮಾಧಾನ ನಿರಾಧಾರ ಅಂತೇನೂ ಅನ್ನಿಸುತ್ತಿರಲಿಲ್ಲ. ಹಲವು ವರ್ಷಗಳಿಂದ

ರಾಮಣ್ಣನ ಮನೆಯಲ್ಲಿ ಕಳೆದಿದ್ದ ಲಿಂಗರಾಜನಿಗೆ ರಾಮಣ್ಣ ತನ್ನ ಗೆಳೆಯರೊಂದಿಗೆ ಆಡುತ್ತಿದ್ದ ಮಾತುಗಳನ್ನು ಕೇಳಿ ಅವುಗಳ ಪರೋಕ್ಷ ಪ್ರಭಾವವೂ ಆಗಿತ್ತು. ಶ್ರಮವಿಭಜನೆ, ದೈಹಿಕ ಶ್ರಮದ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವುದು, ಹಣದ ಲೆಕ್ಕಾಚಾರದಲ್ಲಿ ಪ್ರಾಮಾಣಿಕತೆಯಿಂದ ಇರುವುದು ಇತ್ಯಾದಿ ವಿಷಯಗಳಲ್ಲಿ ರಾಮಣ್ಣ ತುಂಬ ಸ್ಪಷ್ಟವಾಗಿ ಗೆಳೆಯರೊಂದಿಗೆ ವಾದ ಮಂಡಿಸುತ್ತಿದ್ದುದನ್ನು ಅವನು ಕಾಫಿ, ಚಹಾ ನೀಡುವ ಸಂದರ್ಭದಲ್ಲಿ ಕೇಳಿಸಿಕೊಳ್ಳುತ್ತಿದ್ದ. ತುಮಕೂರಿನಲ್ಲಿ ಇದ್ದಾಗ ರಾಮಣ್ಣನ ವರ್ತನೆ ಅವನು ಹೇಳುತ್ತಾ ಇದ್ದುದಕ್ಕೆ ಪೂರಕವಾಗಿ ಇಲ್ಲದಿದ್ದರೂ ತನ್ನ ಮಟ್ಟಿಗೆ ಅವೆಲ್ಲ ಅನುಸರಿಸಬೇಕಾದ ಮಾತುಗಳೆಂದು ಮನವರಿಕೆಯಾಗಿತ್ತು. ಆದ್ದರಿಂದ ಅಜ್ಜಿಯ ತಾಳಿ ತೆಗೆಯುವುದಕ್ಕೆ ಹಾಗೂ ಬಳೆಯನ್ನು ಒಡೆದು ರಂಪ ಮಾಡುವುದಕ್ಕೆ ಆಕ್ಷೇಪ ಎತ್ತಿದ ನಾಗರಾಜನ ಮಾತಿಗೆ ತಾನೂ ದನಿಗೂಡಿಸಿದ್ದ. 'ಇದೇನೋ ಈ ಹುಡುಗರು ಈಗಲೇ ಸೀಮೆಗಿಲ್ಲದ ಯಜಮಾನಿಕೆ ಮಾಡುತ್ತಾರೆ' ಎಂದು ಅಲ್ಲಿ ಸೇರಿದ್ದ ಒಬ್ಬಿಬ್ಬರಾದರೂ ಅಸಮಾಧಾನಗೊಂಡರಾದರೂ ಅದನ್ನು ಬಾಯಿ ಬಿಟ್ಟು ಹೇಳಲು ಹೋಗಲಿಲ್ಲ. 'ಆಯ್ತು ಕಣ್ರೊ, ಬಲಗೈಯೋ ಎಡಗೈಯೋ ಸೌದೆ ಹಾಕಿದರಾಯ್ತು' ಎನ್ನುತ್ತಾ ಮುಂದಿನ ಕ್ರಿಯೆಗೆ ಅಣಿಯಾದರು.

ಸೂಡನ್ನು ಸೌದೆಯಿಂದ ಸಂಪೂರ್ಣ ಮುಚ್ಚಿದ ನಂತರ ಯಲ್ಲನಾಯ್ಕರು ಅಲ್ಲಿಗೆ ತಂದಿದ್ದ ಕಳಸದ ಬಟ್ಟಲಲ್ಲಿ ಇಟ್ಟಿದ್ದ ಕರ್ಪೂರವನ್ನು ಹೊತ್ತಿಸಿ ಅದರಿಂದ ತುಪ್ಪದಲ್ಲಿ ಅದ್ದಿದ್ದ ಅಳ್ಳಟ್ಟೆಗೆ ಬೆಂಕಿಯನ್ನು ತಗುಲಿಸಿ ಸೂಡಿನಲ್ಲಿ ತಲೆಯ ಭಾಗದ ಕೆಳಗೆ ಬೆಂಕಿಯನ್ನು ತಗುಲಿಸಿದರು. ಊರಿನ ಹಿರಿಯರಲ್ಲಿ ಹತ್ತಿರ ಸುಳಿದವರು ತಾವೂ ಒಂದೊಂದು ಕೊಳ್ಳಿಯನ್ನು ತುಪ್ಪದಲ್ಲಿ ಅದ್ದಿ ಬೆಂಕಿ ಅಂಟಿಸಿಕೊಂಡು ಸೂಡಿನ ಸುತ್ತ ತಳಭಾಗದಲ್ಲಿ ಹಚ್ಚತೊಡಗಿದರು. ಸಣ್ಣ ಕಟ್ಟಿಗೆಗಳಿಗೆ ತಗುಲಿದ ಬೆಂಕಿ ಗಾಳಿಯಾಡುವಂತೆ ವಿರಳವಾಗಿ ಹಾಸಿದ್ದ ದೊಡ್ಡ ಕುಂಟೆಗಳಿಗೂ ವ್ಯಾಪಿಸಿ ಸ್ವಲ್ಪ ಹೊತ್ತಿನಲ್ಲಿಯೇ ಸೂಡಿನ ಬೆಂಕಿ ರಭಸವಾಗಿ ಎದ್ದಿತು. ಒಣಸೌದೆಗಳ ಜೊತೆಗೆ ಸ್ವಲ್ಪ ಹಸಿಯಾಗಿದ್ದವುಗಳನ್ನೂ ಸೇರಿಸಿದ್ದರಿಂದ ಚಟ ಚಟ ಸದ್ದಿನೊಂದಿಗೆ ಹೊಗೆಯೂ ಎದ್ದಿತು. ಬೆಂಕಿ ಬಿರುಸಿನಿಂದ ತೀವ್ರಗೊಂಡಾಗ ಸೂಡಿಗೆ ಹತ್ತಿರ ನಿಂತು ನೋಡುತ್ತಿದ್ದವರೆಲ್ಲ ನಿಧಾನವಾಗಿ ಹಿಂದಕ್ಕೆ ಸರಿದರು. ಅಂತ್ಯಕ್ರಿಯೆಗೆ ಬಂದವರು ಮನೆಯವರಿಗೆ ಹೇಳಿ ಹೋಗುವ ಪದ್ಧತಿ ಇಲ್ಲವಂತೆ. ಆದರೆ ನಿಮ್ಮೊಂದಿಗೆ ನಾವು ಇದ್ದೇವೆ ಎಂದು ಧ್ವನಿಸುವಂತೆ ಸಂತ್ರಸ್ತ ಮನೆಯವರಿಗೆ ಎಲೆ ಅಡಿಕೆಯನ್ನು ಕೊಟ್ಟು ನಿರ್ಗಮಿಸುವುದು ವಾಡಿಕೆಯಂತೆ. ಸುತ್ತಮುತ್ತಲ ಹಳ್ಳಿಗಳಿಂದ ಬಂದ ಸಂಬಂಧಿಕರು ಹಾಗೆ ನಿರ್ಗಮಿಸುವ ಮೊದಲು ಯಲ್ಲನಾಯ್ಕರನ್ನೂ ಅಜ್ಜಿಯನ್ನೂ ಕಂಡು ಎಲೆ ಅಡಿಕೆ ಕೊಟ್ಟು ಹೊರಟರು. ಅವರಿಗೆ ಅಪ್ಪಯ್ಯನಲ್ಲಿ ಮತ್ತು ಅಜ್ಜಿಯಲ್ಲಿ ಸಮಾಲೋಚಿಸಿದ ಲಿಂಗರಾಜು ಮೂರನೇ ದಿನದ ಕಟ್ಟಳೆಯ ಸಮಯವನ್ನೂ ಹೋಗುತ್ತಿದ್ದವರಿಗೆ ತಿಳಿಸಿದ. ಅವತ್ತೇ ಬೆಳಗ್ಗೆ ಒಂಬತ್ತು ಗಂಟೆಯ ಸುಮಾರಿಗೆ ತಿಮ್ಮನಾಯ್ಕರು ಉಸಿರು ನಿಲ್ಲಿಸಿದ್ದರಿಂದ ಮಾರನೆಯ ದಿನವಲ್ಲ, ಮೂರನೆಯ ದಿನಕ್ಕೆ ಕಟ್ಟಲೆಯನ್ನು ನಡೆಸಲು ನಿರ್ಧರಿಸಿದ್ದರು.

ಸೂಡು ಸಂಪೂರ್ಣವಾಗಿ ಭಸ್ಮವಾಗಿ ಬೂದಿಯಷ್ಟೆ ಉಳಿಯುವ ವರೆಗೂ ಊರಿನ ಒಬ್ಬಿಬ್ಬರು ಅಲ್ಲಿಯೇ ನಿಂತರು. 'ನಾಳೆ ಇಲ್ಲಿಗೆ ಬಂದು ಬೂದಿಯನ್ನು ಒಟ್ಟು ಮಾಡಬೇಕು. ಉಳಿದ ಎಲುಬಿನ ಚೂರುಗಳನ್ನು ಸಂಗ್ರಹಿಸಿ ಕೆರೆಯಲ್ಲೋ, ಹರಿಯುವ ಹೊಳೆಯಲ್ಲೋ ಹಾಕಲು ಒಯ್ಯಬೇಕಲ್ಲ' ಎಂದು ಅಂತ್ಯಕ್ರಿಯೆಯ ಉಸ್ತುವಾರಿಯನ್ನು ತಾವೇ ಹೊತ್ತುಕೊಂಡಿದ್ದ ಹಿರಿಯರು ಹೇಳಿದಾಗ ಯಲ್ಲನಾಯ್ಕರು 'ಆಯ್ತು.. ಆಯ್ತು..' ಎಂದಷ್ಟೆ ಹೇಳಿದರು.

* * *

ಅಧ್ಯಾಯ 8

# ಮೂರನೇ ದಿನದ 'ಕಾರ್ಯ'

ಸಂಜೆ ಆರು ಗಂಟೆಯ ಸುಮಾರಿಗೆ ಮನೆ ಬಳಿ ಸೇರಿದ್ದ ಬಂಧು ಬಾಂಧವರೆಲ್ಲ ಕರಗಿದರು. ಕೆಲವೇ ದಿನಗಳ ಹಿಂದೆಯಷ್ಟೆ ಹೊಂಗಿ ಬಿದ್ದು ಆಸ್ಪತ್ರೆಗೆ ತೋರಿಸಿಕೊಂಡು ಬಂದ ಸಂದರ್ಭ ಹೀಗೆ ದುರಂತದಲ್ಲಿ ಕೊನೆಯಾಗುವುದೆಂದು ಮನೆಯಲ್ಲಿ ಯಾರೂ ನಿರೀಕ್ಷೆ ಮಾಡಿರಲಿಲ್ಲ. ತಿಮ್ಮನಾಯ್ಕರಿಗೆ ಎಂಬತ್ತು ಮೀರಿದ್ದರೂ ಅದು ಮನೆಯವರ ಲಕ್ಷ್ಯಕ್ಕೆ ಬಂದಿರಲಿಲ್ಲ. ಮನೆಯಲ್ಲಿ ಇರುತ್ತಿದ್ದವರೇ ನಾಲ್ಕು ಮಂದಿ. ಎರಡು ಎಕರೆಯಷ್ಟೆ ಮಳೆಯಾಶ್ರಿತ ಜಮೀನು ಇದ್ದ ಅವರ ಕುಟುಂಬ ಸರ್ಕಾರದ ಲೆಕ್ಕದಲ್ಲಿ ಬಡತನದ ರೇಖೆಯ ಕೆಳಗಿನದೇ ಆಗಿದ್ದರೂ ಅವರೆಲ್ಲ ಓದಿಗೆ ಆದ್ಯತೆ ನೀಡಿದ್ದರಿಂದ ಊರಿನ ಉಳಿದ ಕುಟುಂಬಗಳಿಂದ ಭಿನ್ನವಾಗಿತ್ತು. ಯಲ್ಲನಾಯ್ಕರು ಚಿಕ್ಕ ವಯಸ್ಸಿನಿಂದ ಅಪ್ಪಯ್ಯನಿಗೆ ನೆರವಾಗುತ್ತಲೇ ಕಷ್ಟಬಿದ್ದು ಹೈಸ್ಕೂಲು ಮುಗಿಸಿದ್ದರು. ಎಸ್‌ಎಸ್‌ಎಲ್‌ಸಿ ವರೆಗೆ ಬಂದಿದ್ದ ಅವರು ಪಾಸಾಗಿದ್ದರೆ ಮುಂದೆ ಓದಲು ಹೋಗುತ್ತಿದ್ದರು. ಓದುವ ಅವಕಾಶ ಹುಡುಕಿಕೊಂಡು ಮನೆ ಬಿಟ್ಟಿದ್ದ ರಾಮಣ್ಣ ದೊಡ್ಡ ಹೆಸರು ಮಾಡಿದ್ದ. ಮನೆಯಲ್ಲಿ ಉಳಿದು ಚಿಕ್ಕ ವಯಸ್ಸಿನಲ್ಲಿ ಮದುವೆಯಾಗಿದ್ದ ಯಲ್ಲನಾಯ್ಕರ ಇಬ್ಬರೂ ಗಂಡು ಹುಡುಗರು ಬಡತನದ ಬವಣೆಯನ್ನು ಲೆಕ್ಕಕ್ಕೆ ಹಿಡಿಯದೆ ಓದುವುದಕ್ಕಾಗಿ ಮನೆಯಿಂದ ದೂರ ಇದ್ದರು. ಬೇಸಾಯದ ಕೆಲಸದಲ್ಲಿ ಗಟ್ಟಿಗರಾಗಿದ್ದ ತಿಮ್ಮನಾಯ್ಕರು ತಮ್ಮ ಪಾಲಿಗೆ ಬಂದ ಅತ್ಯಲ್ಪ ಜಮೀನಿನಲ್ಲಿ ಬತ್ತದ ಜೊತೆಗೆ ಅಡಿಕೆ ಸಸಿ ಎಬ್ಬಿಸಿದ್ದರು. ಇದ್ದ ಜಾಗವನ್ನು ವ್ಯರ್ಥವಾಗಲು ಬಿಡದೆ ಒಂದಲ್ಲ ಒಂದು ರೀತಿಯಲ್ಲಿ ಉತ್ಪತ್ತಿ ತೆಗೆಯುವ ಅವರ ಪ್ರಯತ್ನಕ್ಕೆ ಯಲ್ಲನಾಯ್ಕರು ನೆರವಾಗುತ್ತಿದ್ದರು. ಚಿಕ್ಕಪ್ಪನ ಆಸರೆಯಲ್ಲಿ ಒಂದು ಹಂತದ ಓದನ್ನು ಬೆಂಗಳೂರಿನಲ್ಲಿ ಮುಗಿಸಿ ಬಂದ ಲಿಂಗರಾಜ ಮನೆಯಲ್ಲಿ ಅಪ್ಪನೊಂದಿಗೆ ಕೆಲಸಕ್ಕೆ ನಿಂತ ಮೇಲೆ ತಿಮ್ಮನಾಯ್ಕರು ಮನೆ ಬದಿಯಲ್ಲಿಯೇ ಕೈಲಾದ ಕೆಲಸ ಮಾಡಿಕೊಂಡಿದ್ದರು. ತಾವೇ ಮಾಡಿದ ತೋಟ, ಗದ್ದೆ ಕೆಲಸಗಳಿಗೆ ಸಂಬಂಧಿಸಿ ಯಲ್ಲನಾಯ್ಕರಿಗಾಗಲೀ, ಮೊಮ್ಮಗ ಲಿಂಗರಾಜನಿಗಾಗಲೀ ಏನನ್ನೂ ಹೇಳುತ್ತಿರಲಿಲ್ಲ. ಸೋದರ ಮಾವನ ಮನೆಯಲ್ಲಿದ್ದು ಪ್ರಾಥಮಿಕ ಶಿಕ್ಷಣ ಪೂರೈಸಿದ್ದ ನಾಗರಾಜ ಎಸ್‌ಎಸ್‌ಎಲ್‌ಸಿ ಪೂರೈಸುತ್ತಲೇ ಸರ್ಕಾರದ ಹಾಸ್ಟಲಿನಲ್ಲಿ ಆಶ್ರಯ ಪಡೆದು ಶಿವಮೊಗ್ಗದಲ್ಲಿ ಪದವಿಯನ್ನೂ ಶಿಕ್ಷಕ ತರಬೇತಿಯನ್ನೂ ಪಡೆದು ಹೈಸ್ಕೂಲು ಶಿಕ್ಷಕನಾಗಿದ್ದನು. ಲಿಂಗರಾಜ ಉತ್ಸಾಹದಿಂದ ಕೈಗೊಳ್ಳುತ್ತಿದ್ದ ಪ್ರಯೋಗಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಮನೆಯಲ್ಲಿ ಹಿರಿಯನಾಗಿ ತಮ್ಮಷ್ಟಕ್ಕೆ ಇರುತ್ತಿದ್ದ ಅವರ ಬಗ್ಗೆ ಪತ್ನಿ ಗಂಗಮ್ಮನಂತೆ ಸೊಸೆ ಪಾರ್ವತಮ್ಮನೂ ಗೌರವದಿಂದ ನೋಡುತ್ತಿದ್ದರು.

ಕೆಲವೇ ದಿನಗಳ ಹಿಂದೆ ಸಹಜವಾಗಿ ಓಡಾಡಿಕೊಂಡಿದ್ದ ತಿಮ್ಮನಾಯ್ಕರು ತಲೆ ಸುತ್ತಿ ಬಂದಂತೆ ಬಿದ್ದು, ಅದರಿಂದ ಆಸ್ಪತ್ರೆಗೆ ಹೋಗಿ ಬಂದ ಮೇಲೆ ಹೆಚ್ಚು ನಡೆದಾಡುತ್ತಿರಲಿಲ್ಲ. ಬೆಳಗ್ಗೆ ತಡವಾಗಿ ಎದ್ದು ನಿಧಾನವಾಗಿ ಜಗುಲಿಗೆ ಬಂದು ಅದಕ್ಕೆ ಹೊಂದಿಕೊಂಡಂತೆ ಕಡಿಮಾಡಿನಲ್ಲಿದ್ದ ಬಚ್ಚಲಿಗೆ ಹೋಗಿ ಹಲ್ಲುಜ್ಜಿ ಮುಖ ತೊಳೆದುಕೊಂಡು ಮತ್ತೆ ಕೋಣೆ ಸೇರಿ ಮಂಚದ ಮೇಲೆ ಕುಳಿತುಕೊಳ್ಳುತ್ತಿದ್ದರು. ಬೆಳಗಿನ ತಿಂಡಿ, ಮಧ್ಯಾಹ್ನ, ಸಂಜೆಯ ಊಟಕ್ಕೆ ಅಡುಗೆ ಮನೆಗೆ ಬರುವುದನ್ನು ನಿಲ್ಲಿಸಿದ್ದರು. ಬಲಗಾಲು ನೋವಾಗುತ್ತಿದೆ ಎಂದು ಹೇಳುತ್ತಾ ಇದ್ದ ಕಾರಣ ಅವರಿಗಿಂತ ಕೆಲವೇ ವರ್ಷ ಕಿರಿಯರಾಗಿದ್ದ ಗಂಗಮ್ಮ ತಟ್ಟೆಯಲ್ಲಿ

ಹಾಕಿಕೊಂಡು ಬೆಳಗಿನ ತಿಂಡಿಯನ್ನೂ, ನಂತರದ ಊಟವನ್ನು ಒಯ್ದು ಕೊಡುತ್ತಿದ್ದರು. ಆದರೆ ತಮ್ಮ ದೈಹಿಕ ಒತ್ತಡಗಳನ್ನು ಅವರೇ ನಿಧಾನವಾಗಿ ನಡೆದು ನಿವಾರಿಸಿಕೊಳ್ಳುತ್ತಿದ್ದರು.

ವಯಸ್ಸಾದ ನಂತರ ಪಾರ್ಸಿ ಹೊಡೆದು ಎಲ್ಲವನ್ನೂ ಹಾಸಿಗೆಯಲ್ಲಿಯೇ ಮಾಡಿಕೊಳ್ಳುತ್ತಿದ್ದವರ ಕತೆಗಳನ್ನು ಕೇಳಿ, ನೋಡಿ ತಿಳಿದಿದ್ದ ಗಂಗಮ್ಮನವರಿಗೆ ಸದ್ಯ ಆ ಕೆಲಸಗಳನ್ನು ತಿಮ್ಮನಾಯ್ಕರು ನಿರ್ವಹಿಸುತ್ತಿರುವ ಸ್ಥಿತಿಯ ಬಗ್ಗೆ ಸಮಾಧಾನ ಇತ್ತು. ಆಸ್ಪತ್ರೆಯಲ್ಲಿ ಡಾಕ್ಟರು ನೋವಿಗೆ ಕೊಟ್ಟ ಮಾತ್ರೆ ಮುಗಿಯುತ್ತಲೂ ಎಲ್ಲವೂ ಮೊದಲಿನಂತೆ ಸಹಜ ಸ್ಥಿತಿಗೆ ಬರಬಹುದು ಎಂಬ ನಿರೀಕ್ಷೆ ಇಟ್ಟುಕೊಂಡಿದ್ದರು. ನಿನ್ನೆ ಸಂಜೆಯ ವೇಳೆಗೆ 'ಯಾಕೋ ಬಲಭುಜದಿಂದ ಸಣ್ಣಗೆ ಚಳಕು ಹೊಡೆದಂತೆ ನೋವು' ಎಂದು ಹೇಳಿದ್ದರೂ ನಾಗರಾಜ ಹೆಂಡತಿಯೊಂದಿಗೆ ನೋಡಲು ಬಂದಾಗ ಅದನ್ನು ಮರೆತು ಲವಲವಿಕೆ ತೋರಿದ್ದರು. ಇಬ್ಬರ ಜೊತೆಗೂ ಚೆನ್ನಾಗಿ ಮಾತಾಡಿದ್ದರು. ಮೊಮ್ಮಕ್ಕಳಿಬ್ಬರೂ ಜಗುಲಿಯಲ್ಲಿ ಏನೇನೋ ಮಾತಾಡುತ್ತಾ ಇದ್ದುದನ್ನು ಕೋಣೆಯಲ್ಲಿ ಮಲಗಿಕೊಂಡೇ ಕೇಳಿಸಿಕೊಳ್ಳುತ್ತಿದ್ದುದನ್ನು ಕಂಡಿದ್ದ ಗಂಗಮ್ಮನವರು ಅವರಿಬ್ಬರೂ ಕೋಣೆಯಲ್ಲಿ ಕುಳಿತೇ ಮಾತಾಡಬಾರದೇ ಅನ್ನಿಸಿತ್ತು. ರಾತ್ರಿ ಮಧ್ಯೆ ಎದ್ದಿರಲಿಲ್ಲ. ಬೆಳಗ್ಗೆ ಎಂದಿನಂತೆ ಎದ್ದಿದ್ದರು. ನಿಧಾನವಾಗಿ ಬಚ್ಚಲಿಗೆ ಹೋಗಿ ಹಲ್ಲುಜ್ಜಿ ಬಂದಿದ್ದರು. ನೀರು ಕುಡಿದಿದ್ದರು. ಬೆಳಗಿನ ತಿಂಡಿಗೆ ರೊಟ್ಟಿ ತಂದಾಗ ಬೇಡ, 'ಒಂಥರಾ ಎದೆ ಉರಿ, ಸಂಕಟ' ಎಂದು ಹೇಳಿ ಅದಕ್ಕೆ ಬದಲಾಗಿ ಮಜ್ಜಿಗೆ ಊಟವನ್ನೂ ಮಾಡಿದ್ದರು. ಆದರೆ, ಕೆಲವೇ ಹೊತ್ತಿನಲ್ಲಿ ವಾಂತಿ ಮಾಡಿಕೊಂಡು ಅದನ್ನು ಸ್ವಚ್ಛಗೊಳಿಸಿದ ಸ್ವಲ್ಪ ಹೊತ್ತಿನಲ್ಲೇ ಯಾವ ಸುಳಿವನ್ನೂ ನೀಡದೆ ಉಸಿರು ನಿಲ್ಲಿಸಿದ್ದು ಗಂಗಮ್ಮನಿಗೆ ಆಘಾತಕಾರಿಯಾಗಿತ್ತು. ಅವರಂತೆಯೇ ಮನೆಯವರಿಗೂ ಅನಿರೀಕ್ಷಿತವಾಗಿತ್ತು.

ಬೆಳಗ್ಗೆಯಿಂದ ಅನಿರೀಕ್ಷಿತ ಮಾನಸಿಕ ಒತ್ತಡಕ್ಕೆ ಸಿಲುಕಿದ್ದ ಮನೆಯವರು ಪರಸ್ಪರ ಮುಖ ಕೊಟ್ಟು ನೋಡಲಾಗದ ಸಂಕಟವನ್ನು ಅನುಭವಿಸುತ್ತಿದ್ದರು. ವಾಸನಾಯ್ಕರ ಜೊತೆ ಬಂದಿದ್ದ ಈರಮ್ಮನೇ ಎಲ್ಲರನ್ನೂ ಸಂತೈಸುವ ಹೊಣೆಯನ್ನು ಹೊತ್ತುಕೊಂಡಳು. ಒಬ್ಬಳೇ ಮಗಳಾಗಿದ್ದರೂ ಸುಖ ಕಷ್ಟ ಕಂಡಿದ್ದ ಹಿರಿತನವನ್ನು ಆವಾಹಿಸಿಕೊಂಡು 'ಎಲ್ಲರೂ ಸ್ನಾನ ಮಾಡ್ರೊ' ಎಂದು ಹೇಳುತ್ತಾ ಬಚ್ಚಲಿನಲ್ಲಿ ಬೆಂಕಿಗೆ, ನೀರಿಗೆ ಅಣಿಗೊಳಿಸಿದಳು.

ಯಲ್ಲನಾಯ್ಕರಿಗೆ ತಂದೆಯ ಸಾವು ಆಘಾತಕಾರಿಯಾಗಿತ್ತು. ವಯಸ್ಸಾಗಿತ್ತು ಅಂದುಕೊಂಡರೂ ಅಷ್ಟು ಬೇಗ ಅಪ್ಪಯ್ಯ ಹೋಗುತ್ತಾನೆ ಎಂದುಕೊಂಡಿರಲಿಲ್ಲ. ಸಾವಿನ ಸುದ್ದಿ ತಿಳಿದು ಊರಿನವರು, ಅಕ್ಕಪಕ್ಕದ ಊರಿನ ಗುರುತಿನವರು ಧಾವಿಸಿ ಬಂದು ತಮಗೆ ಸಾಂತ್ವನ ಹೇಳುವಂತೆ ನೆರೆದಾಗ ವಾಸ್ತವ ಪರಿಸ್ಥಿತಿ ಅರಿವಿಗೆ ಬಂದು ಮುಂದಿನ ಕಾರ್ಯಕ್ಕೆ ತೊಡಗಿಕೊಂಡಿದ್ದರು. ಅಂತ್ಯಕ್ರಿಯೆಯ ಸಿದ್ಧತೆಗಳನ್ನು ಊರಿನ ಯುವಕರೂ, ಹಿರಿಯರೂ ವಹಿಸಿಕೊಂಡು ನಡೆಸುತ್ತಿದ್ದಾಗ ಮಧ್ಯೆ ಒಂಟಿತನದ ಬಾಧಿಸಿ ತಂದೆಯನ್ನು ಕಳೆದುಕೊಂಡ ಅನಾಥ ಭಾವ ಮೂಡುತ್ತಿತ್ತು. ಆಗ ಅರಿವಿಲ್ಲದೆ ಕಣ್ಣಲ್ಲಿ ನೀರು ಜಿನುಗುತ್ತಿದ್ದವು. ಅದರಲ್ಲೂ 'ಚೆನ್ನಾಗಿಯೇ ಇದ್ದನಲ್ಲ, ಈಗ ಹೆಂಗಾಯ್ತು..?' ಎಂದು ಬಂದವರು ಕೇಳಿದಾಗ ಅವರಿಗೆ ನಡೆದದ್ದನ್ನು ಮತ್ತೆ ಮತ್ತೆ ವಿವರಿಸುವಾಗ ಧ್ವನಿ ಗದ್ಗದಿತವಾಗುತ್ತಿತ್ತು. ಅವರ ಶೋಕತಪ್ತ ಪ್ರತಿಕ್ರಿಯೆಗೆ ಅವರ ವಾರಿಗೆಯ ಹಿರಿಯರು 'ನೀನೂ ಹಿರೇ ಮನುಷ್ಯ.. ಹಿಂಗೆ ಕಣ್ಣಲ್ಲಿ ನೀರು ಹಾಕಿದರೆ ಚಿಕ್ಕ ಹುಡುಗರು ಏನು ಮಾಡಬೇಕೋ. ಹಿಂಗಿದ್ದರೆ ಹೆಂಗೋ?' ಎಂದು ಸಣ್ಣದನಿಯಲ್ಲಿ ಗದರುತ್ತಿದ್ದರು. ಬಂದ ಹಿರಿಯನೊಬ್ಬ, 'ಪುಣ್ಯಾತ್ಮ..

ಯಾರಿಗೂ ಹೆಚ್ಚು ಕಷ್ಟ ಕೊಡದೆ ಸುಖವಾಗಿ ದಾಟಿದ..' ಎಂದು ಸಮಾಧಾನ ವ್ಯಕ್ತಪಡಿಸಿದ್ದು ಯಲ್ಲನಾಯ್ಕರಿಗೂ ನಿಜವಾದ ಸಾಂತ್ವನ ನೀಡಿತ್ತು.

ಮನೆಯಲ್ಲಿ ಅಳಿಯ ವಾಸನಾಯ್ಕರು ಮಾತ್ರ ಉಳಿದುಕೊಂಡಿದ್ದರು. ಯಲ್ಲನಾಯ್ಕರು ಬಚ್ಚಲುಮನೆಗೆ ಸ್ನಾನಕ್ಕೆ ಹೋದ ಮೇಲೆ ಜಗುಲಿಯಲ್ಲಿ ಮೌನವಾಗಿ ಕುಳಿತಿದ್ದ ಇಬ್ಬರೂ ಹುಡುಗರಿಗೆ 'ನೀವೂ ಸ್ನಾನ ಮಾಡಿಬಿಡ್ರೊ...' ಎಂದವರು ದನಿ ತಗ್ಗಿಸಿ 'ಮನೆಯವರಾಗಿ ನಿಮಗೇನೂ ಸೂತಕ ಇಲ್ಲ..' ಎಂದರು. ಮನೆಯ ಹಿರಿಯನಾಗಿದ್ದು ತುಂಬು ಜೀವನ ನಡೆಸಿದ ಅಜ್ಜ ವಯೋಧರ್ಮಕ್ಕೆ ತಕ್ಕಂತೆ ತೀರಿಕೊಂಡದ್ದು ಸೂತಕ ಹೇಗಾಗುತ್ತದೆ ಎಂಬ ಜಿಜ್ಞಾಸೆ ನಾಗರಾಜನಲ್ಲಿ ಮೂಡಿತು. ಸೂತಕ ಎಂದು ತಲೆಯಲ್ಲಿ ತುಂಬಿ ಅದರ ನೆಪದಲ್ಲಿ ಉಪಶಮನ ರೂಪದ ಕಟ್ಟಳೆಗಳನ್ನು ವಿಧಿಸುತ್ತಿರುವುದು ಅವನಿಗೆ ಪ್ರಶ್ನೆಯಾಯಿತು. ಈ ಹಿಂದೆ ಇಂಥ ಸಂದರ್ಭ ಎದುರಾಗಿರಲಿಲ್ಲ. ಹೈಸ್ಕೂಲು ಮೇಷ್ಟರಾಗಿದ್ದ ಅವನಿಗೆ ಪ್ರಶ್ನೆ ಮಾಡುವುದು ನಿಧಾನವಾಗಿ ಅಭ್ಯಾಸವಾಗುತ್ತಿತ್ತು. ಅದನ್ನು ನಿತ್ಯದ ವ್ಯವಹಾರಗಳಿಗೂ ಅನ್ವಯಿಸುವಂತಾಗುತ್ತಿತ್ತು. ವಾಸಮಾವ ಸೂತಕದ ಮಾತನ್ನು ಕೆಳದನಿಯಲ್ಲಿ ಹೇಳಿದಾಗ ಅಲ್ಲಿಯೇ ಕುಳಿತಿದ್ದು ಮೌನವಾಗಿದ್ದ ಲಿಂಗರಾಜನಿಗೆ 'ಇದೆಲ್ಲ ಸೂತಕ ಹೆಂಗಾಗ್ತದೆಯೊ..' ಎಂದು ಪ್ರಶ್ನಿಸಿದ. ಊರಲ್ಲಿ ಯಾರಾದರೂ ಹಡೆದಾಗ ಸೂತಕ ಅಂತ ಬಂದು ಹೇಳುತ್ತಾ ಇದ್ದುದನ್ನು ಲಿಂಗರಾಜನೂ ಕೇಳಿದ್ದ. ಸಹಜವಾಗಿ ಜನನವಾಗುತ್ತದೆ, ಅದರಂತೆಯೇ ಸಾವು... ಇದರಲ್ಲಿ ಸೂತಕ ಎಂಬ ಅಪರಾಧಿಭಾವದ ಆಚರಣೆ ಯಾಕೆ ಎಂಬ ಜಿಜ್ಞಾಸೆ ಅವನಿಗೂ ಮೂಡಿತು. 'ನಮ್ಮವರಿಗೆ ಸ್ವತಂತ್ರ ಬುದ್ಧಿ ಇರಲಿಲ್ಲ. ಇವರೆಲ್ಲ ಪ್ರತಿಯೊಂದಕ್ಕೂ ನಿಮಿತ್ತ ಕೇಳುವ ಜನ. ಆದ್ದರಿಂದಲೇ ಹೆತ್ತರೂ ಸೂತಕ, ಸತ್ತರೂ ಸೂತಕ...' ಎಂದು ಸಿಡುಕುತ್ತಾ ಎದ್ದು ಅಡುಗೆ ಮನೆಯ ಕಡೆ ಹೆಜ್ಜೆ ಹಾಕಿದ. ಅಲ್ಲಿ ಅತ್ತೆಯೊಂದಿಗೆ ಅವ್ವನೂ ಅತ್ತಿಗೆಯೂ ಕೆಳದನಿಯಲ್ಲಿ ಗುನುಗುತ್ತಿದ್ದುದನ್ನು ನೋಡಿ ಜಗುಲಿಗೆ ವಾಪಸು ಬಂದ. ಅಷ್ಟರಲ್ಲಿ ಅವನಿಗೆ ಸ್ಪಷ್ಟತೆ ಬಂದು 'ಸೂತಕ ಅಂತ ಅಲ್ಲ, ಬೆಳಗ್ಗೆಯಿಂದ ಒಂದು ತರಾ ಸುಸ್ತು. ಮೈಕೈ ನೋವು. ಅದಕ್ಕೆ ಬಿಸಿ ನೀರಲ್ಲಿ ಸ್ನಾನ ಮಾಡೋದು ಒಳ್ಳೇದು..' ಎಂದ. ಅಷ್ಟರಲ್ಲಿ ಯಲ್ಲನಾಯ್ಕರು ಸ್ನಾನ ಮುಗಿಸಿ ಬಂದರು. ಬಚ್ಚಲು ಮನೆ ಖಾಲಿ ಆಗಿದ್ದನ್ನು ನೋಡಿ ನಾಗರಾಜ ಸ್ನಾನಕ್ಕೆ ಹೋದ.

ಗಂಡಸರ ಸ್ನಾನವೆಲ್ಲ ಮುಗಿದ ನಂತರ ಮಹಿಳೆಯರೂ ಸ್ನಾನಕ್ಕೆ ಹೋದರು. ಎಷ್ಟು ಬೇಗ ಮುಗಿಸಬೇಕೆಂದರೂ ಕೊನೆಯದಾಗಿ ರಾಜೇಶ್ವರಿ ಹೊರ ಬಂದಾಗ ಗಂಟೆ ಹತ್ತರ ಮೇಲಾಗಿತ್ತು. ಜಗುಲಿಯಲ್ಲಿ ತಿಮ್ಮನಾಯ್ಕರನ್ನು ಮಲಗಿಸಿದ್ದ ಜಾಗದಲ್ಲಿ ಇರಿಸಿದ್ದ ಹಣತೆಗೆ ನಮಸ್ಕರಿಸಿ ಎಲ್ಲರೂ ಅಡುಗೆ ಮನೆ ಹೊಕ್ಕರು. ಊರಿನ ಒಂದೆರಡು ಮನೆಯವರು ಸಂಜೆಯ ವೇಳೆಗೆ ತಂದುಕೊಟ್ಟಿದ್ದನ್ನು ಮಹಿಳೆಯರು ಬಡಿಸಿದರು. ಗಂಗಮ್ಮ ಸಂಕಟದಿಂದ ಮಧ್ಯಾಹ್ನ ಏನನ್ನೂ ತಿಂದಿರಲಿಲ್ಲ. ಅವರಿಗಾಗಿ ಈರಮ್ಮ ಬಿಸಿ ಅನ್ನ ಮಾಡಿದ್ದರು. 'ಏನೂ ಸೇರಲ್ಲ ಕಣೆ' ಎಂದು ಅವರು ಹೇಳಿದಾಗ 'ಮತ್ತೆ ನಮಗೆಲ್ಲ ಊಟ ಸೇರ್ತದೆ ಅಂತ ಮಾಡಿದಿಯಾ..?' ಎಂದು ಈರಮ್ಮ ಒತ್ತಾಯಿಸಿದಾಗ ಸ್ವಲ್ಪ ಅನ್ನ ಸಾರು ಹಾಕಿಸಿಕೊಂಡು ಊಟ ಮಾಡಿದರು.

ರಾತ್ರಿ ಸಾಗುತ್ತಿದ್ದರೂ ಯಾರಿಗೂ ನಿದ್ದೆ ಮಾಡುವ ಅವಸರ ಇರಲಿಲ್ಲ. ಮಹಿಳೆಯರು ಅಡುಗೆ ಮನೆಯಲ್ಲಿ ಊಟ ಮಾಡಿದ ತಟ್ಟೆಗಳನ್ನು ತೊಳೆದು ಬರುವವರೆಗೂ ಜಗುಲಿಯಲ್ಲಿ ಕುಳಿತವರು ಎತ್ತಲೋ ನೋಡುತ್ತ, ಪರಸ್ಪರ ಮುಖ ನೋಡಿಕೊಳ್ಳುತ್ತ ಸುಮ್ಮನೆ ಕುಳಿತಿದ್ದುದನ್ನು ಕಂಡು ಈರಮ್ಮನೇ 'ಏನು ಎಲ್ರೂ ಸುಮ್ಮನೆ ಕುಂತು ಬಿಟ್ರಲ್ಲ. ರಾಮಣ್ಣನಿಗೆ ಸುದ್ದಿ ಮುಟ್ಟಿತ್ತಾ ಅಂತಲೂ ವಿಚಾರಿಸಿದ್ರಾ..?' ಎಂದು ಮಾತಿಗೆ ಮೊದಲಿಟ್ಟಳು. 'ಹೌದಲ್ರೊ, ಸಂಜೆ ಹೊತ್ತಿಗಾದ್ರೂ ಅವನು ಮೊಬೈಲ್‌ಗೆ ಸಿಗ್ತಿದ್ನೋ ಏನೋ..' ಎಂದು

ವಾಸನಾಯ್ಕರು ಅಳಿಯಂದಿರ ಮುಖ ನೋಡಿದರು. 'ಅವನು ಮೊಬೈಲ್ ಇಟ್ಕಳಲ್ಲ ಅಂದನಪ್ಪ ಅವನ ಮನೆಯಲ್ಲಿದ್ದವನು' ಎಂದು ಮಧ್ಯಾಹ್ನ ತಾನು ನಡೆಸಿದ ಪ್ರಯತ್ನದ ಅರಿವಿದ್ದ ನಾಗರಾಜ ಹೇಳಿದನು. 'ಮೊಬೈಲ್ ಇಟ್ಕಳಲ್ಲ ಅಂತ ಅಲ್ಲ, ಹಂಗೆ ಅವನು ಹೇಳ್ತಾ ಇರ್‍ತಾನೆ ಅಷ್ಟೆ' ಎಂದು ಲಿಂಗರಾಜ ಹೇಳಿದಾಗ 'ನೀನು ಅಲ್ಲೇ ಬಾ...ಳ ವರ್ಷ ಇದ್ದಂವ. ನಿಂಗೆ ಗೊತ್ತೇ ಇರ್‍ತದೆ ಬಿಡು' ಎಂದು ವಾಸನಾಯ್ಕರು ಹೇಳಿ 'ಅಲ್ಲ, ಅವನು ಸುದ್ದಿ ಗೊತ್ತಾದರೂ ಬರಲೇ ಬೇಕಿತ್ತಲ್ಲ.. ಇಲ್ಲ ಪೋನಾದರೂ ಮಾಡಬೇಕಿತ್ತು' ಎಂದು ತಮ್ಮಷ್ಟಕ್ಕೆ ಹೇಳಿಕೊಂಡರು. 'ಸುದ್ದಿ ಗೊತ್ತಾದ್ರೆ ಬಂದೇ ಬರ್‍ತಾನೆ. ಯಾವುದಕ್ಕೂ ಅವನ ವಿಳಾಸ ಹುಡುಕಿ ಕಾಗದಾನಾದ್ರೂ ಹಾಕಿ' ಎಂದು ಈರಮ್ಮ ಹೇಳಿ ತಿಮ್ಮನಾಯ್ಕರು ಮಲಗುತ್ತಿದ್ದ ಕೋಣೆಗೆ ವಾಡಿಕೆಯಂತೆ ಹೋದಳು. ಹೋದವಳು ತಕ್ಷಣವೇ ವಾಪಸು ಬಂದು 'ಅವ್ವ... ಎಲ್ಲರೂ ಜಗಲೀಲೆ ಮನಗಾನ' ಎಂದಳು. 'ಯಾಕೆ ತಂಗಿ, ಅವರು ಕ್ವಾಣೆಲಿ ದಯ್ಯ ಗಿಯ್ಯ ಆಗಿರ್‍ತಾರೆ ಅಂತ ಮಾಡಿದೆಯಾ? ಚೆನ್ನಾಗಿ ಬಾಳಿ ಬದುಕಿದೋರು. ಯಾರಿಗೂ ಏನೂ ಮಾಡ್ದೋರಲ್ಲ. ನಾನಂತೂ ಅಲ್ಲೇ ಮನಗಾದು' ಎಂದು ಗಂಗಮ್ಮನವರು ದನಿ ಉಡುಗಿದ್ದರೂ ದೃಢವಾಗಿ ಹೇಳಿದ್ದನ್ನು ಕೇಳಿ ಈರಮ್ಮ ಪೆಚ್ಚಾದಳು. 'ನಡಿ, ನಾವಿಬ್ರೂ ಅಲ್ಲೇ ಮನಗಾನ' ಎಂದು ಹೇಳುತ್ತಾ ಕೋಣೆಯನ್ನು ಧೈರ್ಯವಾಗಿ ಪ್ರವೇಶಿಸಿದಳು. ವಾಸನಾಯ್ಕರಿಗೆ ಜಗುಲಿಯಲ್ಲಿ ಹಾಸುಗೆ ಹಾಕಿ ಅದರ ಪಕ್ಕದಲ್ಲಿ ಇಬ್ಬರೂ ಹುಡುಗರು ತಮ್ಮ ಹಾಸುಗೆಗಳನ್ನು ಬಿಚ್ಚಿಕೊಂಡರು. ಅದುವರೆಗೆ ಮೌನವಾಗಿ ಕುಳಿತಿದ್ದ ಯಲ್ಲನಾಯ್ಕರು ನಿಧಾನವಾಗಿ ಎದ್ದು ತಮ್ಮ ಕೋಣೆಗೆ ಹೋದರು. ಈರಮ್ಮನನ್ನು ಚಿಕ್ಕಮ್ಮ ಎಂದು ಕರೆಯುತ್ತಿದ್ದ ರಾಜೇಶ್ವರಿ 'ನಾನೂ ನಿಮ್ಮ ಜೊತೆಗೆ ಮಲಗ್ತೇನೆ' ಎನ್ನುತ್ತಾ ಅವರನ್ನು ಹಿಂಬಾಲಿಸಿದಳು.

ಜಗುಲಿಯಲ್ಲಿ ದೀಪ ಆರಿಸಿದರೂ ಯಾರಿಗೂ ನಿದ್ದೆ ಬಂದಿರಲಿಲ್ಲ. ನಾಗರಾಜನಿಗೂ, ಲಿಂಗರಾಜನಿಗೂ ಆಘಾತದ ಜೊತೆಗೆ ತಕ್ಷಣಕ್ಕೆ ಬೇಕಾದ ಖರ್ಚಿಗೆ ದುಡ್ಡು ಹೊಂದಿಸುವ ಯೋಚನೆ. ಇಬ್ಬರ ತಲೆಯಲ್ಲಿ ಆ ಯೋಚನೆ ಇದ್ದರೂ ಪರಸ್ಪರ ಮಾತಾಡಿಕೊಂಡಿರಲಿಲ್ಲ. ವಾಸನಾಯ್ಕರಿಗೂ ಮಲಗಿದ ತಕ್ಷಣ ನಿದ್ದೆ ಬರಲಿಲ್ಲ. ಹುಡುಗರೂ ನಿದ್ದೆ ಹೋಗಿಲ್ಲ ಎಂಬುದು ಅವರ ಹೊರಳಾಟದಿಂದ ಅರಿವಿಗೆ ಬಂದು 'ನಿದ್ದೆ ಬಂತೇನ್ರೋ' ಎಂದು ಮೆಲ್ಲಗೆ ಕೇಳಿದರು. 'ಇಲ್ಲ ಮಾವ' ಎಂದ ಪಕ್ಕದಲ್ಲಿ ಮಲಗಿದ್ದ ನಾಗರಾಜ. 'ನಾಳೆ ಎಲ್ಲ ಸರಿ ಮಾಡೋದಿದೆ. ನಾಡದ್ದು ಮೂರನೇ ದಿನ, ಅಂದರೆ ಒಂದಿಷ್ಟು ಖರ್ಚು ಬರ್‍ತದೆ... ದುಡ್ಡಿಗೆ ಏನು ಮಾಡಿದೀರಿ..' ಎಂದು ವ್ಯವಹಾರದ ಮಾತು ಆರಂಭಿಸಿದರು. ನಾಗರಾಜನ ಪಕ್ಕದ ಹಾಸಿಗೆಯಲ್ಲಿ ಮಲಗಿ ಯೋಚಿಸುತ್ತಿದ್ದ ಲಿಂಗರಾಜ 'ಎಷ್ಟು ಬರಬಹುದು ಮಾವ' ಎಂದು ಕೇಳಿದ. ಎಷ್ಟು ಜನ ಸೇರುತ್ತಾರೆ, ಏನೇನು ಅಡುಗೆ ವ್ಯವಸ್ಥೆ ಮಾಡಬೇಕು ಎಂಬುದು ಅವನಿಗೆ ಸ್ಪಷ್ಟವಿರಲಿಲ್ಲ. ಮೂರನೇ ದಿನದ ಕಟ್ಟಳೆ ಹೇಗಿರುತ್ತದೆ ಎಂಬುದು ಇಬ್ಬರೂ ಹುಡುಗರಿಗೆ ಗೊತ್ತಿರಲಿಲ್ಲ. ಅವರು ಅದೇ ಮೊದಲ ಸಲಕ್ಕೆ ಹತ್ತಿರದವರ ಸಾವನ್ನು ನೋಡುತ್ತಿದ್ದವರು. ಅದನ್ನೇ ವಾಸನಾಯ್ಕರಲ್ಲಿ ಹೇಳಿದ. 'ಇವತ್ತು ಬಂದವರಲ್ಲಿ ಹತ್ತಿರದವರು ಮಾತ್ರ ಮೂರನೇ ದಿನಕ್ಕೆ ಬರ್‍ತಾರೆ. ಅವರೇ ಅಂದರೂ ಒಂದು ನೂರು ಜನರಾದರೂ ಇರ್‍ತಾರೆ. ಅವರಿಗೆಲ್ಲ ಊಟಕ್ಕೆ ವ್ಯವಸ್ಥೆ ಆಗಬೇಕು. ಅವರಿಗೆ ಏನು ಇಷ್ಟ ಇತ್ತೋ ಅದನ್ನೆಲ್ಲ ಎಡೆ ಮಾಡಬೇಕು. ಹನ್ನೊಂದನೇ ದಿನ ಬಿಡಿ, ಅದು ಎಲ್ಲರಿಗೂ ಮಾಡೋ ಸಮಾರಾಧನೆ. ಈ ಮೂರನೇ ದಿನವೇ ಸರಿಯಾಗಿ ಅವರಿಗೆ ಸಲ್ಲಿಸೋ ಪೂಜೆ... ಅದಕ್ಕೆ ಏನೇನು ಬೇಕು ಅಂತ ಅತ್ತೆಮ್ಮ ಹೇಳ್ತಾರೆ..' ಎಂದು ತಮಗೆ ಗೊತ್ತಿದ್ದನ್ನು ವಾಸನಾಯ್ಕರು ಹೇಳಿ 'ಸದ್ಯಕ್ಕೆ ನಾನೂ ಒಂದಿಷ್ಟು ದುಡ್ಡು ತಂದಿದೀನಿ. ಸಂಕೋಚ ಇಟ್ಟುಕೊಳ್ಳಬೇಡಿ' ಎನ್ನುತ್ತಾ ಮಗ್ಗಲು ಬದಲಾಯಿಸಿದರು. ನೂರು ನೂರೈವತ್ತು ಜನರಿಗೆ ಊಟಕ್ಕೆ ವ್ಯವಸ್ಥೆಯನ್ನು ಮಾಡಬೇಕಾದರೆ ಎಷ್ಟೆಲ್ಲ ಖರ್ಚು

ಬರಬಹುದು ಎಂದು ಲಿಂಗರಾಜು ಮನಸ್ಸಿನಲ್ಲಿ ಲೆಕ್ಕ ಹಾಕತೊಡಗಿದ. ಅದೇ ಗುಂಗಿನಲ್ಲಿದ್ದ ನಾಗರಾಜ 'ಈಗ ನಿದ್ದೆ ಮಾಡನ, ನಾಳೆ ನೋಡಿಕೊಂಡರಾಯಿತು..' ಎನ್ನುತ್ತ ಹೊದಿಕೆಯನ್ನು ಮುಖದ ಮೇಲೆ ಎಳೆದುಕೊಂಡ.

ಆದರೆ ಲಿಂಗರಾಜನಿಗೆ ನಿದ್ದೆ ಬರಲಿಲ್ಲ. ಅಜ್ಜನ ಆರೋಗ್ಯ ವಾರದ ಹಿಂದೆಯಷ್ಟೆ ಹದಗೆಟ್ಟಾಗ ಅವನೇ ಪೇಟೆಗೆ ಕರೆದುಕೊಂಡು ಹೋಗಿದ್ದ. ವಯಸ್ಸಾದ ವ್ಯಕ್ತಿ, ಹೇಗೋ ಎಂತೋ ಎಂಬ ಅಳುಕು ಇದ್ದರೂ ಅದನ್ನು ತೋರಿಸಿಕೊಂಡಿರಲಿಲ್ಲ. ವಯಸ್ಸಾದವರು ಮಾತ್ರವಲ್ಲದೆ, ನಡುವಯಸ್ಸಿನವರು, ಹದಿನೆಂಟು ಇಪ್ಪತ್ತರ ಹುಡುಗರೂ ಹಠಾತ್ತಾಗಿ ಹೃದಯಾಘಾತದಿಂದ ಸಾವನ್ನಪ್ಪುತ್ತಿರುವುದನ್ನು ಪತ್ರಿಕೆಯಲ್ಲಿ ಓದಿದ್ದ. ಬೆಂಗಳೂರಿನಲ್ಲಿ ಇದ್ದು ಬಂದವನಾದ್ದರಿಂದ ಹೃದಯಾಘಾತದ ಬಗ್ಗೆ ಸಾಮಾನ್ಯ ತಿಳಿವಳಿಕೆಯೂ ಇತ್ತು. ಆದ್ದರಿಂದ ಅಜ್ಜನ ಸಾವು ಅನಿರೀಕ್ಷಿತವಾಗಿರಲಿಲ್ಲ. ಆದರೆ, ಇಷ್ಟು ಬೇಗ ಆಗಬಹುದೆಂಬ ನಿರೀಕ್ಷೆ ಇರಲಿಲ್ಲ. ಮಾವ ಹೇಳಿದ್ದಂತೆ ಮೂರನೇ ದಿನಕ್ಕೆ ಎಷ್ಟು ಖರ್ಚು ಬರುತ್ತದೆಯೋ ಎಂದು ಅವನಿಗೆ ಅಂದಾಜಾಗಲಿಲ್ಲ. ಅವನು ಮನೆಯ ಕೆಲಸಕ್ಕೆ ಬರುವ ಮೊದಲು ಅಪ್ಪಯ್ಯನೇ ಎಲ್ಲ ನೋಡಿಕೊಳ್ಳುತ್ತಿದ್ದ. ಅವನು ಬಂದು ಕೆಲಸಕ್ಕೆ ನಿಂತ ಮೇಲೂ ಅದೇ ಮುಂದುವರಿದಿತ್ತು. ಅವರಲ್ಲಿ ಊರಲ್ಲಿ ಇರುವಂತೆ ವಾಡಿಕೆಯ ಯಜಮಾನಿಕೆಯ ಪದ್ಧತಿ ಇರಲಿಲ್ಲ. ತಾನು ಸ್ವಂತವಾಗಿ ಗಳಿಸಿದ್ದನ್ನು ತಂದು ಅವ್ವನ ಬಳಿ ಕೊಡುತ್ತಿದ್ದ. ಪೇಟೆಗೆ ಹೋಗುವುದಿದ್ದರೆ ಅವ್ವನಿಂದಲೇ ಪಡೆದುಕೊಳ್ಳುತ್ತಿದ್ದ. ಮನೆಯಲ್ಲಿ ಇದ್ದವರೇ ಮೂರು ಮತ್ತೊಂದು ಜನ. ಅವರಲ್ಲಿ ಮುಚ್ಚುಮರೆಯ ವ್ಯವಹಾರಕ್ಕೆ ಆಸ್ಪದ ಇರಲಿಲ್ಲ. ಮನೆಯಲ್ಲಿ ಎಷ್ಟು ದುಡ್ಡು ಇರಬಹುದು ಎಂಬುದರ ಅಂದಾಜು ಲೆಕ್ಕವೇನೋ ಲಿಂಗರಾಜನಿಗೆ ಇತ್ತು. ಆದರೂ ಏನೇನು ಖರ್ಚು ಬರುತ್ತದೆಯೋ ಎಂಬುದರ ಸ್ಪಷ್ಟ ಕಲ್ಪನೆ ಇಲ್ಲದ ಗೊಂದಲ ಉಳಿದಿತ್ತು. ಬೆಳಗ್ಗೆ ನೋಡಿದರಾಯಿತು ಎಂದು ನಿಧಾನವಾಗಿ ಉಸಿರೆಳೆದುಕೊಂಡ. ಸ್ವಲ್ಪ ಹೊತ್ತಿಗೆ ನಿದ್ದೆಗೆ ಶರಣಾದ.

ರಾತ್ರಿ ಕಳೆದು ಬೆಳಕು ಹರಿಯಿತು. ತಮ್ಮ ಮನೆಯಲ್ಲಿದ್ದಾಗ ಬೆಳಗಿನ ಜಾವಕ್ಕೆ ಎದ್ದು ರೂಢಿಯಾಗಿದ್ದ ಈರಮ್ಮ ಅಡುಗೆ ಮನೆ ಸೇರಿದಳು. ಅತ್ತಿಗೆ ಪಾರ್ವತಮ್ಮ ಸ್ವಲ್ಪ ತಡವಾಗಿ ಎದ್ದು ಕೊಟ್ಟಿಗೆಗೆ ಹಾಲು ಕರೆಯಲು ಹೋದಳು. ಅಜ್ಜಿ, ಚಿಕ್ಕಮ್ಮನ ಜೊತೆ ಮಲಗಿದ್ದ ರಾಜೇಶ್ವರಿಗೆ ತುಂಬ ಹೊತ್ತು ನಿದ್ದೆ ಬಂದಿರಲಿಲ್ಲ. ಬೆಳಗಿನ ಜಾವದ ಹೊತ್ತಿಗೆ ನಿದ್ದೆ ಬಂದು ಈರಮ್ಮ ಎದ್ದಾಗಲೂ ಅವಳಿಗೆ ಎಚ್ಚರವಾಗಲಿಲ್ಲ. ಈರಮ್ಮ ಅಡುಗೆ ಮನೆಯಲ್ಲಿ ಪಾತ್ರೆಗಳನ್ನು ತೊಳೆದು ಎತ್ತಿಡುವ ಹೊತ್ತಿಗೆ ಹಾಲು ಕರೆದು ಒಳಗೆ ಬಂದ ಪಾರ್ವತಮ್ಮ ಅಂದಿನ ಬೆಳಗಿನ ಹೊತ್ತಿಗೆ ಉಪ್ಪಿಟ್ಟು ಮಾಡುವುದೆಂದು ನಿರ್ಧರಿಸಿದ್ದಳು. ಅವಳು ಹಾಲನ್ನು ಸೋಸಿ ಒಲೆಯ ಸಣ್ಣ ಉರಿಯಲ್ಲಿ ಕಾಯಲು ಇಟ್ಟು ಬಾಣಲೆಯನ್ನು ಹುಡುಕಿ ರವೆಯನ್ನು ಹುರಿಯಲು ಸಿದ್ಧತೆ ನಡೆಸುತ್ತಿದ್ದಾಗ ಪಕ್ಕದ ಕೋಣೆಯಲ್ಲಿ ಮಲಗಿದ್ದ ರಾಜೇಶ್ವರಿಗೆ ಎಚ್ಚರವಾಯಿತು. ಅವಳು ಗಡಿಬಿಡಿಯಿಂದ ಹಾಸುಗೆಗಳನ್ನು ಎತ್ತಿಟ್ಟು ಬಚ್ಚಲಿಗೆ ಹೋಗಿ ಮುಖಕ್ಕೆ ನೀರು ಹಾಕಿಕೊಂಡು ಅಡುಗೆ ಮನೆ ಸೇರಿಕೊಂಡಳು. ಆಗಲೇ ಹೆಂಗಸರಿಬ್ಬರು ಕೆಲಸದಲ್ಲಿ ತೊಡಗಿದ್ದುದನ್ನು ಕಂಡು ಬೇಗನೆ ಒಲೆಯ ಬದಿ ಸಾಗಿ ರವೆ ಹುರಿಯಲು ಮುಂದಾದಳು. 'ಹಂಗಾರೆ ಉಪ್ಪಿಟ್ಟು ನೀನೇ ಮಾಡಿಬಿಡು' ಎನ್ನುತ್ತಾ ಸೊಸೆಗೆ ಅದನ್ನು ಒಪ್ಪಿಸಿದಳು ಪಾರ್ವತಮ್ಮ. 'ಮೊದೂಲು ಎಲ್ಲಾರ ಬಟ್ಟೆ ಒಗೆದು ಹಾಕನ, ಸ್ನಾನ ಮಾಡಿ ಬಂದ ಮೇಲೆ ಅಡುಗೆ ಮಾಡಿದರಾಯ್ತು' ಎಂದು ಈರಮ್ಮ ಹೇಳಿದ್ದನ್ನು ಒಪ್ಪಿಕೊಂಡ ಪಾರ್ವತಮ್ಮ ಜಗುಲಿಗೆ ಬಂದು ಒಗೆಯಬೇಕಿದ್ದ ಬಟ್ಟೆಗಳನ್ನು ಕಲೆ ಹಾಕಲು ಆರಂಭಿಸಿದಳು.

ಅಷ್ಟು ಹೊತ್ತಿಗೆ ಗಂಡಸರೆಲ್ಲ ಎದ್ದು ನಿತ್ಯ ವಿಧಿಗಳನ್ನು ತೀರಿಸಿ ಮುಂದಿನ ಕೆಲಸಗಳ ಬಗ್ಗೆ ಜಗುಲಿಯಲ್ಲಿ ಕುಳಿತು ಮಾತಿಗೆ ತೊಡಗಿದ್ದಾಗ ಒಳಗಿನಿಂದ ಹೊರಬಂದ ಈರಮ್ಮನೇ 'ಮೊದಲು ತಿಂಡಿ ತಿಂದುಬಿಡಿ, ಆಮೇಲೆ ನಿಮ್ಮ ನಿಮ್ಮ ಕೆಲಸ..' ಎಂದು ಎಲ್ಲರನ್ನೂ ಎಬ್ಬಿಸಿ ಅಡುಗೆ ಮನೆಯಲ್ಲಿ ಬಾಳೆ ಎಲೆಯ ಕೀತಿನ ಮೇಲೆ ಉಪ್ಪಿಟ್ಟನ್ನು ಬಡಿಸಿದಳು. ತಿಂಡಿಯ ಶಾಸ್ತ್ರ ಮುಗಿಸಿ ಎಲ್ಲರ ಬಟ್ಟೆಗಳನ್ನು ಒಟ್ಟುಗೂಡಿಸಿ ಬಾವಿಯ ಬಳಿ ಒಯ್ದಾಗ ಅಡುಗೆ ಮನೆಯ ಒಳಗೆ ಇದ್ದ ರಾಜೇಶ್ವರಿ ಗಂಡಸರಿಗೆಲ್ಲ ಕಾಫಿಯನ್ನು ನೀಡಿ ಬಟ್ಟೆ ಒಗೆಯುವ ಕೆಲಸದಲ್ಲಿ ತಾನೂ ಹೋಗಿ ಸೇರಿಕೊಂಡಳು. ಬಟ್ಟೆ ಒಗೆಯಲು ಕುಳಿತ ಈರಮ್ಮ ಎದ್ದು ಜಗುಲಿಗೆ ಬಂದು 'ರಾಮಣ್ಣನಿಗೆ ಇವತ್ತಾದರೂ ಸುದ್ದಿ ತಲುಪಿತಾ ನೋಡ್ರೋ' ಎಂದು ಇಬ್ಬರೂ ಹುಡುಗರಿಗೆ ತಾಕೀತು ಮಾಡಿ ಹಿಂತಿರುಗಿದಳು.

ನಾಗರಾಜನೂ, ಲಿಂಗರಾಜನೂ ತಿಂಡಿ ಪೂರೈಸಿ ಮುಂದಿನ ಕೆಲಸಗಳ ಬಗ್ಗೆ ವಾಸನಾಯ್ಕರ ಜೊತೆ ಮಾತಿಗೆ ತೊಡಗಿದಾಗಲೇ ಊರಿನ ಹಿರಿಯರಲ್ಲಿ ಒಬ್ಬನಾಗಿದ್ದ ಜಯಣ್ಣ ಬಂದ. ಅವನು ಮೂರು ದಿನದ ಕಟ್ಟಳೆಯ ಬಗ್ಗೆ ತಿಳಿದಿದ್ದ ಅನುಭವಿ. ಅವನನ್ನು ವಾಸನಾಯ್ಕರು ನೆಂಟಸ್ಥಿಕೆಯ ಭಾವದಲ್ಲಿ ಬರಮಾಡಿಕೊಂಡರು. ಔಪಚಾರಿಕ ಕುಶಲೋಪರಿಯೇನೂ ಇಲ್ಲದೆ ನೇರವಾಗಿ ವಿಷಯಕ್ಕೆ ಬಂದ ಜಯಣ್ಣ 'ಈಗ ನನ್ನ ಜೊತೆ ನಿಮ್ಮಲ್ಲಿ ಒಬ್ಬರು ಬರ್ರಿ. ನಿನ್ನೆ ಸೂಡು ಹಾಕಿದಲ್ಲಿಗೆ ಹೋಗಿ ಬೂದಿಯೆಲ್ಲ ಒಟ್ಟಿಗೆ ಮಾಡಿ ಏನಾದರೂ ಎಲುಬಿನ ಶೇಷ ಉಳಿದಿದ್ದರೆ ತಂದು ಬಿಡಾನ. ಅದನ್ನು ಕೆರೆಗೋ, ಹೊಳೆಗೋ ಬಿಡಬೇಕು. ಅಲ್ಲೊಂದು ಗಿಡ ನೆಡಬೇಕು. ಅದನ್ನು ನಾಳೆಗೆ ನೆಟ್ಟರಾಯಿತು. ಆಮೇಲೆ ನಾಳೆಗೆ ಏನೇನು ಮಾಡಬೇಕು ಅನ್ನೋದನ್ನು ಮಾತಾಡನ' ಎಂದ. ಅಲ್ಲಿಯವರೆಗೆ ಏನು ಮಾಡಬೇಕೆಂಬುದರ ಸ್ಪಷ್ಟತೆ ಇಲ್ಲದೆ ಗೊಂದಲದಲ್ಲಿದ್ದ ಮೂವರಿಗೂ ಮುಂದಿನ ಕ್ರಮಗಳ ಅರಿವಾಯಿತು. ತಮ್ಮಲ್ಲಿ ಮಾತನಾಡಿಕೊಂಡು ಸೂಡಿನ ಕಡೆ ವಾಸನಾಯ್ಕರೂ, ಅವರೊಂದಿಗೆ ಲಿಂಗರಾಜನೂ ಹೋಗುವುದೆಂದಾಯಿತು. ನಾಗರಾಜ ಪೇಟೆಗೆ ಹೋಗಿ ರಾಮಣ್ಣನನ್ನು ಸಂಪರ್ಕಿಸಿ ವಿಷಯ ಮುಟ್ಟಿಸಿ ಬರುವುದೆಂದು ತೀರ್ಮಾನ ಮಾಡಿಕೊಂಡರು. ಯಲ್ಲನಾಯ್ಕರು ಒಳಗೆ ಹೋಗಿ ಆಗಲೇ ನಿಧಾನವಾಗಿ ಎದ್ದು ಮುಖ ತೊಳೆದು ಮಗಳು ಈರಮ್ಮ ಮಾಡಿಕೊಟ್ಟಿದ್ದ ಕಷಾಯವನ್ನು ಕುಡಿದು ಒಲೆಯ ಶಾಖದ ವಲಯದಲ್ಲಿ ಕುಳಿತಿದ್ದ ಅವ್ವನೊಟ್ಟಿಗೆ ನಾಳೆಯ ಕಟ್ಟಳೆಗಳ ಬಗ್ಗೆ ಮಾತನಾಡಲು ನಿಂತರು. ಸಂಗಾತಿಯನ್ನು ಅಗಲಿದ್ದ ದುಃಖದಲ್ಲಿದ್ದರೂ ನಡೆಸಬೇಕಾದ ಕಾರ್ಯಗಳ ಬಗ್ಗೆ ಅರಿವಿದ್ದ ಗಂಗಮ್ಮ 'ಅವರದು ದೊಡ್ಡ ಬಳಗ. ನಾಲ್ಕು ಸೇರು ಅಕ್ಕಿ ನೆನೆಸಿ ಕಡುಬು ಮಾಡಬೇಕು' ಎಂದರು. ಅಷ್ಟು ಹೇಳಿದವರಿಗೆ ದುಃಖ ಒತ್ತರಿಸಿ ಬಂದು 'ನಿನ್ನೆ ಇಷ್ಟು ಹೊತ್ತಲ್ಲಿ ಚೆನ್ನಾಗಿ ಇದ್ದರಲ್ಲೋ...' ಎಂದು ಗದ್ಗದಿತರಾದರು. 'ಎಂಥ ಮಾಡಾದು ಅವ್ವ, ನಮ್ಮ ಕೈಯಾಗೆ ಏನೈತೆ..' ಎಂದೇನೋ ಸಮಾಧಾನ ಪಡಿಸಲು ಯತ್ನಿಸಿದರಾದರೂ ಅವರಿಗೂ ದುಃಖ ಒತ್ತರಿಸಿ ಬಂದು ಅಲ್ಲಿ ನಿಲ್ಲಲಾಗದೆ ಜಗುಲಿಗೆ ಬಂದರು.

ಗಂಗಮ್ಮನ ಮಾತನ್ನು ಜಗುಲಿಯಿಂದಲೇ ಕೇಳಿಸಿಕೊಂಡಿದ್ದ ವಾಸನಾಯ್ಕರು 'ನಾಲ್ಕು ಸೇರಕ್ಕಿ ಕಡುಬು ಅಂದರೆ ನೂರೈವತ್ತು ಜನರಾದರೂ ಬರಬೋದು ಅಂತ ಆಯ್ತು. ಆದ್ರೂ ಇನ್ನೂ ಒಂದು ಸೇರು ಜಾಸ್ತಿನೇ ಮಾಡಿದರೆ ಆಯ್ತು. ಯಾವುದಕ್ಕೂ ಕಡಿಮೆ ಆಗಬಾರದಲ್ಲ..' ಎಂದು ತಮ್ಮ ಸೂಚನೆಯನ್ನೂ ಸೇರಿಸುತ್ತಾ ಜಯಣ್ಣನನ್ನು ಹಿಂಬಾಲಿಸಿದರು. ಮನೆಯಿಂದ ಹೊರಕ್ಕೆ ಬಂದು ಹಕ್ಕಲು ಬೇಲಿಯನ್ನು ದಾಟಿ ಸೂಡಿನ ಜಾಗಕ್ಕೆ ಹೋಗುವಾಗ ತಮ್ಮ ಜೊತೆಗೆ ಬಂದ ಲಿಂಗರಾಜನೊಟ್ಟಿಗೆ 'ನೂರೈವತ್ತು ಇನ್ನೂರು ಜನರಿಗಾದರೂ

ಚಿಚ್ಚದ ವ್ಯವಸ್ಥೆ ಆಗಬೇಕು. ಇಪ್ಪತ್ತು ಕೆಜಿಯಾದರೂ ತುಕಡಿಗೆ ವ್ಯವಸ್ಥೆ ಮಾಡಬೇಕು' ಎಂದು ಕೆಳದನಿಯಲ್ಲಿ ಹೇಳಿದರು. ಮುಂದೆ ಸಾಗುತ್ತಿದ್ದ ಜಯಣ್ಣ ಅದನ್ನು ಕೇಳಿಸಿಕೊಂಡವನು 'ಲಿಂಗ್ರಾಜ.. ಮತ್ತೆ ನೀನು ಬರೀ ಕೋಳಿ ತುಕಡಿಗೇ ಹೇಳಿಬಿಡಬೇಡ.. ಒಂದಿಷ್ಟು ಕುರಿನೂ ಇರಲಿ' ಎಂದು ತನ್ನ ಸೂಚನೆಯನ್ನೂ ಸೇರಿಸಿದ. 'ಎಡೆಗೆ ಅಂತ ಸ್ವಲ್ಪ ಮೀನು ಕೂಡ ಬೇಕು. ಅಜ್ಜನಿಗೆ ಹಲ್ಲು ಗಟ್ಟಿಯಾಗೇ ಇದ್ದೊ. ಒಳ್ಳೆ ರೊಟ್ಟಿ ಕರಿಮೀನು ಚಟ್ನಿ ಅವನಿಗೆ ಒಳ್ಳೇ ಖಾಯಿಶು...' ಎಂದು ತನ್ನ ಅಭಿರುಚಿಯ ಖಾದ್ಯಗಳನ್ನೂ ಅಜ್ಜನ ಲೆಕ್ಕಕ್ಕೆ ಸೇರಿಸಿದನು. 'ಬಾಡು ಅಂದರೆ ಸಾಯ್ತಾರೆ. ಕುರಿ ತುಕಡಿಗೆ ನಾನೂರು, ಕೊಂಡು ತರೋದು ಕಷ್ಟ ಅಂತ ಅಜ್ಜನ ನೆಪದಲ್ಲಿ ಮುಕ್ಕೋದಕ್ಕೆ ನೋಡ್ತಾರೆ' ಎಂದು ಒಳಗೊಳಗೆ ಲೆಕ್ಕ ಹಾಕಿದ ಲಿಂಗರಾಜ 'ನೋಡನ ಮಾವ, ಅಜ್ಜಿನೂ ಕೇಳನ. ಅವಳು ಹೇಳ್ದಂಗೆ ಎಷ್ಟು ತರಬಕು ಅಷ್ಟಕ್ಕೆ ವ್ಯವಸ್ಥೆ ಮಾಡನ' ಎಂದು ಹೇಳಿ ವಾಸನಾಯ್ಕರನ್ನು ಹಿಂಬಾಲಿಸಿದ.

ಸೂಡು ಸಂಪೂರ್ಣ ಭಸ್ಮವಾಗಿತ್ತು. ಎಲ್ಲ ಬೂದಿಯಾಗಿ ರಾಶಿ ಬಿದ್ದಿದ್ದರೂ ತಲೆಭಾಗಕ್ಕೆ ಹಾಕಿದ್ದ ದೊಡ್ಡ ಕುಂಟೆ ಪೂರ್ಣವಾಗಿ ಸುಟ್ಟಿರಲಿಲ್ಲ. ಕುಂಟೆಯ ಬುಡದಲ್ಲಿ ಕೆಂಡ ನಿಗಿನಿಗಿ ಉರಿಯುತ್ತಿತ್ತು. ಅದನ್ನು ಹುಶಾರಾಗಿ ಹಸಿ ಕಟ್ಟಿಗೆಯೊಂದರಿಂದ ಪಕ್ಕಕ್ಕೆ ಸರಿಸಿದ ಜಯಣ್ಣ ಉಳಿದ ಬೂದಿಯಲ್ಲಿ ಮೂಳೆಗಾಗಿ ತಡಕಾಡಿದ. ತಾನು ಒಯ್ದಿದ್ದ ಗುದ್ದಲಿಯಿಂದ ಬೂದಿಯನ್ನು ಒಟ್ಟು ಮಾಡಿದ. 'ಒಳ್ಳೇ ಸೌದಿ ಹಾಕಿತ್ತು ನೋಡು. ಎಲ್ಲ ಸುಟ್ಟು ಮೂಳೆ ಕೂಡ ಸಿಗದಂತೆ ಬೂದಿಯಾಗಿದೆ' ಎಂದು ಹೇಳುತ್ತಾ ಒಟ್ಟು ಮಾಡಿದ್ದ ಬೂದಿಯನ್ನು ಸಮನಾಗಿ ಹರಡಿದ. ಸೂಡಿನ ಸುತ್ತ ಹಸಿಯಾಗಿದ್ದ ಹುಲ್ಲು, ಅನತಿ ದೂರದಲ್ಲಿದ್ದ ಕುರುಚಲು ಗಿಡಗಳೆಲ್ಲ ಸೂಡಿನ ಶಾಖಕ್ಕೆ ಸುಟ್ಟು ಕರಕಲಾಗಿದ್ದವು. ಆಳೆತ್ತರ ಮೀರಿ ಎದ್ದಿದ್ದ ಸೂಡಿನ ಬೆಂಕಿಯಿಂದ ಹತ್ತಿರದಲ್ಲಿ ಇದ್ದ ಮತ್ತಿ ಮರದ ಚಾಚಿದ ಗೆಲ್ಲು ಬಾಡಿತ್ತು. 'ಮಳೆಗಾಲದಲ್ಲಿ ಆಗಿದ್ದರೆ ಹಿಂಗೆ ಸೂಡು ಕಟ್ಟಾದಕ್ಕೆ ಆಗ್ತರಲಿಲ್ಲ ಬಿಡು ಲಿಂಗ್ರಾಜ. ಬೇಸಗೆ ತರ ಬಿಸಿಲೇ ಇದ್ದಿದ್ರಿಂದ ಎಲ್ಲ ಸುಸೂತ್ರವಾಯ್ತು' ಎಂದು ಯಾರೂ ಏನನ್ನೂ ಕೇಳದೆ ಇದ್ದರೂ ಹೇಳುತ್ತಾ ಸೂಡಿನ ಉತ್ತರ ಭಾಗದಲ್ಲಿ ಗಿಡ ನೆಡುವುದಕ್ಕಾಗಿ ಒಂದು ಸಣ್ಣ ಗುದ್ದನ್ನು ಗುದ್ದಲಿಯಿಂದಲೇ ತೆಗೆದ. ಬೆಂಕಿಯಿಂದ ನೆಲವೆಲ್ಲ ಬಿರುಸಾಗಿದ್ದ ಕಾರಣ ಗುದ್ದಲಿಯಿಂದ ಅಗೆದರೂ ಅರ್ಧ ಅಡಿಗಿಂತ ಹೆಚ್ಚು ಆಳಕ್ಕೆ ತೆಗೆಯಲಾಗಲಿಲ್ಲ. 'ಇರಲಿ, ನಾಳೆ ಒಂದು ಸಣ್ಣ ಸಬ್ಬಲ್ ತಂದರೆ ಗಿಡ ನೆಡವಷ್ಟು ಗುದ್ದು ಮಾಡಬಹುದು' ಎಂದು ಹೇಳುತ್ತಾ ಸೂಡಿನ ದಕ್ಷಿಣ ಭಾಗಕ್ಕೆ ಎರಡು ಗೂಟಗಳನ್ನು ಹೂಳಿ ಅಲ್ಲಿ ಮಾವಿನೆಲೆಯ ತೋರಣಕ್ಕೆ ವ್ಯವಸ್ಥೆ ಮಾಡಿದ. ಮೂರನೇ ದಿನದ ಕಟ್ಟಳೆಯಂತೆ ಅಲ್ಲಿ ಎಡೆ ಇಟ್ಟು ಪೂಜೆ ಸಲ್ಲಿಸಿ ಅದನ್ನು ಪಿತೃಗಳಿಗೆ ಸಲ್ಲಿಸುವುದಂತೆ. ಎಡೆಯಲ್ಲಿದ್ದ ಭಕ್ಷ್ಯಗಳನ್ನು ಕಾಗೆ ಮುಟ್ಟಿದರೆ ಅದು ಪಿತೃಗಳಿಗೆ ಸೇರಿದಂತೆ. 'ಇಲ್ಲೇನು ಕಾಗೆಗಳಿಗೆ ಬರಗಾಲವೇ, ಹಿಂಡು ಹಿಂಡೇ ಇದಾವೆ' ಎಂದು ಹೇಳುತ್ತಾ ಜಯಣ್ಣ ಸೂಡಿನ ಬಳಿ ಆಗಬೇಕಾದ ಸಿದ್ಧತೆಗಳನ್ನು ಒಬ್ಬನೇ ಮಾಡಿ ಮುಗಿಸಿದ. ವಾಸನಾಯ್ಕರೂ, ಜೊತೆ ಸೇರಿದ್ದ ಲಿಂಗರಾಜನೂ ಅವನು ಮಾಡುತ್ತಾ ಇದ್ದುದನ್ನು ನೋಡುತ್ತಾ, ಅವನು ಹೇಳುತ್ತಾ ಇದ್ದುದನ್ನು ಕೇಳಿಸಿಕೊಳ್ಳುತ್ತಾ ನಿಲ್ಲಬೇಕಾಯಿತು.

ಕೆಲಸ ಮುಗಿದ ಮೇಲೆ 'ಲಿಂಗ್ರಾಜ, ಅಜ್ಜ ಚೆನ್ನಾಗಿ ಬಾಳಿ ಬದುಕಿದೋನು, ಈಗೆಲ್ಲ ಹಿರೇರನ್ನು ವರ್ಷಕ್ಕೆ ಒಂದು ಸಲ ನೆನೆಸಿಕೊಳ್ಳೋದಕ್ಕೆ ಅವರನ್ನು ಸುಟ್ಟ ಜಾಗದಲ್ಲಿ ಸಮಾಧಿ ಅಂತ ಕಟ್ಟೋದನ್ನು ನಮ್ಮ ಕಡೇನೂ ಸುರು ಮಾಡಿದಾರೆ. ಸಾಬರ ಗೋರಿ ತರ ಅಲ್ಲಿ ಸಿಮೆಂಟ್ ಕಟ್ಟೆ ಕಟ್ಟಿ ಪ್ರತಿ ವರ್ಷ ಅವರ ತಿಥಿ ದಿನ ಎಡೆ ಇಟ್ಟು ಪೂಜೆ ಮಾಡ್ತಾರೆ. ಇಲ್ಲೇನೂ ಅಂಥದ್ದೊಂದು ಗೋರಿ ಕಟ್ಟೆ ಕಟ್ಟಿಬಿಡಿ. ವರ್ಷಕ್ಕೆ ಒಂದು

ಸಲ ಇಲ್ಲಿಗೆ ಬಂದು ಪೂಜೆ ಮಾಡಿ ಹೋಗಬಹುದು..' ಎಂದ ಜಯಣ್ಣ. 'ಅದೆಲ್ಲ ಯಂತಕ್ಕೆ ಮಾರಾಯ. ಹಿರೇರಿಗೆ ಅಂತ ಮನೆಯಲ್ಲಿ ಪ್ರತಿ ಸಲ ವಿಶೇಷ ಅಂತ ಮಾಡಿದಾಗೆಲ್ಲ ಇಡುಕಲಿಗೆ ನಮ್ಮಲ್ಲಿ ಎಡೆ ಇಡ್ತಾರಲ್ಲ. ಹಿಂಗೆ ಸಾಬರ ತರ ಗೋರಿ ಕಟ್ಟಿ ಅಲ್ಲಿಗೆ ಪೂಜೆ ಮಾಡಾದು ಅಂದ್ರೆ ಅದೆಲ್ಲ ಸುಮ್ಮನೆ ಖರ್ಚಿನ ಬಾಬ್ತು ಅಷ್ಟೆ' ಎಂದು ಲಿಂಗರಾಜ ಖಚಿತವಾಗಿ ಹೇಳಿದಾಗ ಅದನ್ನು ಕೇಳಿಸಿಕೊಂಡ ವಾಸನಾಯ್ಕರು 'ನಮ್ಮ ಕಡೆನೂ ದುಡ್ಡಿದ್ದೋರು ಹಿಂಗೆ ಸಮಾಧಿ ಮಾಡಿದ ಜಾಗದಲ್ಲಿ ಸಿಮೆಂಟ್ ಕಟ್ಟೆ ಕಟ್ತಾರಪ್ಪ. ಅದೆಲ್ಲ ಈಚೀಚೆಗೆ ಸುರು ಆದಂಗದೆ. ದುಡ್ಡಿದ್ದೋರಿಗೆ ಬದ್ದೆಲ್ಲ ಬಂಗಾರವಂತೆ.. ಅಂತೂ ಏನೋ ಒಂದು ಹೊಸದಾಗಿ ಸುರು ಮಾಡ್ತಾರಪ್ಪ' ಎಂದು ತಮ್ಮ ಅಸಮಾಧಾನವನ್ನು ಹೊರಹಾಕಿದರು. 'ಹೋಗಲಿ ಬಿಡಿ. ಎಲ್ಲಾ ಕಡೆ ಮಾಡ್ತಾರಲ್ಲ ಅಂತ ಹೇಳಿದೆ' ಎಂದು ಜಯಣ್ಣ ತನ್ನ ಪ್ರಸ್ತಾಪವನ್ನು ಹಿಂದೆ ತೆಗೆದುಕೊಂಡವನಂತೆ ಸುಮ್ಮನಾದ.

ಅವರು ಸೂಡಿನ ಜಾಗದಲ್ಲಿ ಮಾಡಬೇಕಿದ್ದ ಸಿದ್ಧತೆಯನ್ನು ಮುಗಿಸಿ ಮನೆ ಕಡೆ ತಿರುಗಿದರು. ಜಯಣ್ಣ 'ನಾನು ಹಿಂಗೆ ಹೋಗತೀನಿ. ಮತ್ತೆ ಮನೆ ಕಡೆ ಯಾಕೆ' ಎಂದು ಕೆಳಗಿನ ಊರಿನ ಕಡೆ ತಿರುಗಿದಾಗ ವಾಸನಾಯ್ಕರು 'ಹಂಗೆ ಹೋಗಂಗಿಲ್ರೀ. ಮನೆಗೆ ಬಂದು ಹಣತೆಗೆ ದೂಪ ಹಾಕಿ ಹೋಗಬೇಕು. ಮತ್ತೆ ನಾಳೆ ಬೆಳಗ್ಗೆ ತಲೆಬೋಳು ಕೊಡೋದಕ್ಕೆ ವ್ಯವಸ್ಥೆ ಆಗಬೇಕಲ್ಲ. ನಿಮ್ಮೂರಲ್ಲಿ ಇದ್ದಾರೆ ತಾನೆ ಚೌರದೋರು..' ಎಂದರು. 'ನಮ್ಮೂರಲ್ಲಿ ಎಲ್ಲಿದಾರೆ ಚೌರದೋರು. ಇಲ್ಲಿರೋರೆಲ್ಲ ನಾವು ನಾವೇ ದಾಯಿದ್ರು. ಮೂಲದಲ್ಲಿ ಒಂದೇ ಮನೆಯಂತೆ. ಮೂರೋ ನಾಲ್ಕೋ ತಲೆ ಹಿಂದೆ. ಚೌರದೋರಿಗೆ ಹೇಳಿ ಬಂದ್ರಾಯ್ತು. ಯಾರು ನೀನು ಕೊಡ್ತೀಯೇನೊ.. ಅಜ್ಜನಿಗೆ ಕೊನೆಗಾಲದಲ್ಲಿ ನೀನೆ ತಾನೆ ಸೇವೆ ಮಾಡಿದೋನು?' ಎಂದು ಜಯಣ್ಣ ಕೇಳಿದ. ಅದಕ್ಕೆ 'ಅಜ್ಜನ ಮಗನೇ ಇದಾರಲ್ಲ, ಯಲ್ಲಬಾವ, ಅವರೇ ಕೊಡಬೇಕು. ಮೊಮ್ಮಕ್ಕಳು ಯಾಕೆ?' ಎಂದು ವಾಸನಾಯ್ಕರು ಆ ಬಗ್ಗೆ ಚರ್ಚೆಗೆ ಅವಕಾಶ ಇಲ್ಲದಂತೆ ಹೇಳಿದರು. 'ಅದೂ ಸರಿನೇ, ಚೌರದವನಿಗೆ ಫೋನ್ ಮಾಡಿಬಿಡು ಲಿಂಗ್ರಾಜ. ನಿನ್ನೆ ಅವನೂ ಬಂದಿದ್ದನೇನೋ. ಅಜ್ಜ ಸುತ್ತಮುತ್ತ ಇದ್ದೋರಿಗೆಲ್ಲ ಗೊತ್ತಿದ್ದೋನೆ' ಎನ್ನುತ್ತಾ ಮನೆಯ ವರೆಗೂ ಬಂದ. ಹೊರಗಡೆ ಇರಿಸಿದ್ದ ಚೆಂಬಿನಿಂದ ಕಾಲು ತೊಳೆದುಕೊಂಡು ಜಗುಲಿಗೆ ಬಂದು ಅಲ್ಲಿದ್ದ ಹಣತೆಗೆ ದೂಪ ಹಾಕಿ ಅಲ್ಲಿಯೇ ಕುರ್ಚಿಯ ಮೇಲೆ ಕುಳಿತ. ಜಯಣ್ಣ ಬಂದುದನ್ನು ನೋಡಿದ ಈರಮ್ಮ ಬಾವಿಕಟ್ಟೆಯಿಂದ ಬಂದು ಒಳಮನೆಗೆ ಹೋಗಿ ಮೂವರಿಗೂ ಸಣ್ಣ ಲೋಟಗಳಲ್ಲಿ ಬಿಸಿ ಕಾಫಿಯನ್ನು ತಂದುಕೊಟ್ಟಳು. ಕಾಫಿ ಕೊಡುವಾಗ ಈರಮ್ಮನೊಟ್ಟಿಗೆ ಜಯಣ್ಣ ಕ್ಷೇಮ ಸಮಾಚಾರ ವಿನಿಮಯ ಮಾಡಿಕೊಂಡ.

ಆಗಲೇ ಊರಿನ ಅನೇಕ ಮಹಿಳೆಯರು ಬಂದು ಒಳಮನೆಗೆ ಸೇರಿದ್ದರು. ಬಾವಿಕಟ್ಟೆಯಲ್ಲಿ ಬಟ್ಟೆ ಒಗೆಯುವ ಕೆಲಸ ಮುಂದುವರಿದಿತ್ತು. ಮನೆಯವರೆಲ್ಲರ ಬಟ್ಟೆ ಒಗೆದು ಸ್ನಾನ ಮಾಡಿ ಅಗಲಿದವನ ಗುಣಗಾನ ಮಾಡುತ್ತಾ ಜಗುಲಿಯಲ್ಲಿ ಅಲ್ಲಲ್ಲಿ ನೆಲೆಗೊಳ್ಳುವಾಗ ಮಧ್ಯಾಹ್ನದ ಊಟದ ಹೊತ್ತಾಯಿತು. ಅಡುಗೆ ಮನೆಯಲ್ಲೂ, ಬಾವಿಕಟ್ಟೆಯಲ್ಲೂ ಸೇರಿದ್ದ ಊರಿನ ಮಹಿಳೆಯರು ಗಂಗಜ್ಜಿಯನ್ನು ಸಮಾಧಾನಪಡಿಸುತ್ತಾ ಪಾರ್ವತಮ್ಮನನ್ನು ಕೇಳಿ ಕೇಳಿ ಅಡುಗೆ ಸಾಹಿತ್ಯವನ್ನು ಪಡೆದು ಮನೆಯವರಿಗಾಗಿ ಮಧ್ಯಾಹ್ನದ ಊಟಕ್ಕೆ ಅಣಿಗೊಳಿಸಿದರು. ಒಳಗಡೆಯೇ ಇಡುಕಲಿಗೆ ಇಟ್ಟು ಒಂದು ಎಡೆಯನ್ನು ಜಗುಲಿಯಲ್ಲಿ ಇರಿಸಿದ್ದ ಹಣತೆಯ ಮುಂದೆ ಇರಿಸಿ ದೂಪ ಹಾಕಿದರು. ಆ ಎಡೆಯನ್ನು ಹೊರಗಡೆ ಅಂಗಳದ ತುದಿಯಲ್ಲಿದ್ದ ಅಂಟುವಾಳ

ಮರದ ಕೆಳಕೊಂಬೆಯಲ್ಲಿಟ್ಟು ಬಂದರು. ಅಲ್ಲಿಟ್ಟ ಎಡೆಯನ್ನು ಕಾಗೆ ಮುಟ್ಟಿದರೆ ಅದು ಪಿತೃಗಳಿಗೆ ಸಂದಾಯವಾಗುವುದಂತೆ.

ನಾಳೆಯ 'ಕಾರ್ಯ'ಕ್ಕೆ ಪೇಟೆಯಿಂದ ಯಾವ ಯಾವ ಸಾಮಗ್ರಿ ತರಬೇಕು ಎಂಬುದರ ಪಟ್ಟಿಯನ್ನು ಬೆಳಗ್ಗೆಯೇ ನಾಗರಾಜ ತೆಗೆದುಕೊಂಡು ಹೋಗಿದ್ದ. ಅವನ ಜೊತೆಗೆ ನಿನ್ನೆ ಹಿಂಬಾಲಿಸಿದ್ದ ಸೋಮಣ್ಣನೂ ಹೋಗಿದ್ದ. ಸದ್ಯಕ್ಕೆ ಅಗತ್ಯವಾದ ದಿನಸಿ ಸಾಮಾನುಗಳನ್ನು ತರುವಂತೆ ವಾಸನಾಯ್ಕರು ಹೇಳಿದ್ದರು. ಮರುದಿನದ ಕಾರ್ಯಕ್ಕೆ ಅಗತ್ಯವಾಗಿದ್ದ ಕೋಳಿ, ಕುರಿ, ಮೀನು ಇತ್ಯಾದಿ ಬೆಳಗ್ಗೆ ಬೆಳಗ್ಗೆ ಹೋಗಿ ತಂದರೆ ಸಾಕು ಎಂದು ಮಾತಾಡಿಕೊಂಡಿದ್ದರು. ದಿನಸಿ ಸಾಮಾನುಗಳಿಗೆ ತನ್ನಲ್ಲಿದ್ದ ಹಣವೇ ಸಾಕಾಗಬಹುದು ಎಂದುಕೊಂಡಿದ್ದ ನಾಗರಾಜ ಮನೆಯಲ್ಲಿ ದುಡ್ಡಿನ ಬಗ್ಗೆ ಪ್ರಸ್ತಾಪ ಮಾಡದೆ ಹೊರಟಿದ್ದ.

ಪೇಟೆಯಲ್ಲಿ ನೆಟ್ ವರ್ಕ್ ಖಚಿತವಾಗಿ ಸಿಗುವ ಕಡೆ ನಿಂತುಕೊಂಡ ನಾಗರಾಜ ನಿನ್ನೆಯಂತೆಯೇ ರಾಮಣ್ಣನ ಮನೆಗೆ ಮೊಬೈಲ್ ಸಂಪರ್ಕಕ್ಕೆ ಪ್ರಯತ್ನ ನಡೆಸಿದ. ನಾಲ್ಕು ಪ್ರಯತ್ನಗಳ ನಂತರ ರಾಮಣ್ಣನ ಮನೆಯ ಹುಡುಗ ಫೋನ್ ಎತ್ತಿಕೊಂಡ. ನಾಗರಾಜ 'ಎಂಥಾ ಜನವೋ ನೀನು, ಅವರ ತಂದೆಯವರು ತೀರಿ ಹೋದ ಸುದ್ದಿಯನ್ನೂ ಅವರಿಗೆ ಕೊಟ್ಟಿಲ್ಲ ಅಂದರೆ.. ಎಂಥ ಜವಾಬ್ದಾರಿ ನಿಂದು?' ಎಂದು ಹರಿಹಾಯ್ದ. ಆ ಕಡೆಯಿಂದ ಮಾತನಾಡಿದ ಹುಡುಗ 'ಮೇಷ್ಟರು ನಿನ್ನೆಯಿಂದಲೂ ಫೋನಿಗೆ ಸಿಕ್ಕಿಲ್ಲ. ಆದರೂ ಅವರ ಕಡೆಯವರಿಗೆ ಹೇಳಿದ್ದೆ. ಅವರೇ ಮಾತಾಡಿಲ್ಲ ಅಂದರೆ ನಾನೇನು ಮಾಡಲಿ ಸರ' ಎಂದು ರಾಗ ಎಳೆದ. 'ಅಲ್ಲಿ ಅವರಿಗೆ ಹತ್ತಿರ ಇರೋ ಯಾರದ್ದಾದ್ರೂ ನಂಬರ್ ಇದ್ದರೆ ಕೊಡು, ನಾನೇ ಅವರಿಗೆ ತಿಳಿಸ್ತೇನೆ. ಅಷ್ಟಲ್ಲದೆ ಹಿಂದಿನವರು ಹೇಳಿದ್ದಾರಾ ಆಳು ಮಾಡೋದು ಹಾಳು ಅಂತ' ಎಂದು ತನ್ನ ಅಸಹನೆಯನ್ನು ತೋರಿಸಿದ. 'ಅವರ ಹತ್ತಿರದವರ ನಂಬರ್ ನನಗೆ ಕೊಟ್ಟಿಲ್ರೀ...' ಎಂದು ಆ ಕಡೆಯಿಂದ ಹೇಳಿದಾಗ 'ಹೋಗಲಿ ಮಾರಾಯ, ಅವರ ಈಗಿನ ವಿಳಾಸನಾದ್ರೂ ಕೊಡು, ಒಂದು ಕಾಗದ ಹಾಕ್ತೀನಿ. ಅದನ್ನಾದ್ರೂ ಓದಿ ವಿಷಯ ತಿಳೀಲಿ' ಎಂದು ಸಮಾಧಾನದಿಂದ ಹೇಳಿದ. ಸದ್ಯಕ್ಕೆ ಹುಡುಗನಿಗೆ ಮನೆಯ ವಿಳಾಸ ಬಾಯಲ್ಲಿಯೇ ಇತ್ತು. ಬಿಡಿ ಬಿಡಿಯಾಗಿ ವಿಳಾಸದ ವಿವರ ನೀಡಿದ. ಪಿನ್ ಕೋಡನ್ನೂ ನೆನಪಿಟ್ಟುಕೊಂಡಿದ್ದ. ಅಂತೂ ರಾಮಣ್ಣನಿಗೆ ವಿಷಯ ತಿಳಿಸುವ ಇನ್ನೊಂದು ಮಾರ್ಗ ಸಿಕ್ಕಿದಂತಾಯಿತು. ಕೂಡಲೇ ಪೇಟೆಯ ಪೋಸ್ಟ್ ಆಫೀಸ್ ಬಳಿ ಹೋಗಿ ಒಂದು ಇನ್‌ಲ್ಯಾಂಡ್ ಪತ್ರ ಪಡೆದು ಅಲ್ಲಿಯೇ ಬರೆದು ಡಬ್ಬಿಗೆ ಹಾಕಿದ. ಅದನ್ನೆಲ್ಲ ಜೊತೆ ಇದ್ದು ಗಮನಿಸುತ್ತಿದ್ದ ಸೋಮಣ್ಣ 'ಒಳ್ಳೇ ಕೆಲಸ ಮಾಡಿದೆ ಬಿಡು ಮಾರಾಯ. ಕಾಗದ ನೋಡಿದರೆ ಖಂಡಿತಾ ದಿನದ ಹೊತ್ತಿಗಾದ್ರೂ ಬಂದೇ ಬರ್‍ತಾನೆ' ಎಂದು ಹೇಳಿದ.

ರಾಮಣ್ಣನಿಗೆ ಸುದ್ದಿ ಮುಟ್ಟಿಸಿದ ಸಮಾಧಾನದಲ್ಲಿ ಅವರಿಬ್ಬರೂ ಬೇಕಿದ್ದ ದಿನಸಿ ಸಾಮಗ್ರಿಗಳನ್ನು ಕೊಂಡು ಬೈಕಿಗೆ ಕಟ್ಟಿಕೊಂಡರು. ಇಕ್ಕಟ್ಟು ಜಾಗದಲ್ಲಿಯೂ ಮೋಟಾರ್ ಬೈಕಿನಲ್ಲಿ ಹಿಂಬದಿ ಕುಳಿತು ಪ್ರಯಾಣ ಮಾಡುವುದು ಸೋಮಣ್ಣನಿಗೆ ಕಷ್ಟವೆನಿಸಲಿಲ್ಲ. ಹಳ್ಳಿಯ ರಸ್ತೆಗಳಲ್ಲಿ ಇಬ್ಬರಲ್ಲದೆ ಕೆಲವೊಮ್ಮೆ ಮೂರು ನಾಲ್ಕುಮಂದಿಯೂ ಒತ್ತೊತ್ತಾಗಿ ಕುಳಿತು ಪ್ರಯಾಣ ಮಾಡಿದ್ದರ ಅನುಭವ ಸೋಮಣ್ಣನಿಗೂ ಆಗಿತ್ತು. ಪೇಟೆಯನ್ನು ಬಿಟ್ಟು ಮನೆ ಕಡೆ ರಸ್ತೆಯಲ್ಲಿ ತಿರುಗಿದಾಗ ಹಿಂದೆ ಕುಳಿತಿದ್ದವನಿಗೆ ಇಕ್ಕಟ್ಟಾಗ್ತದೇನೋ ಎಂದು ನಾಗರಾಜ ಕೇಳಿದರೆ ಸೋಮಣ್ಣ 'ಇಕ್ಕಟ್ಟಾ... ಇನ್ನೂ ಒಬ್ಬರನ್ನು ಕೂರಿಸಬಹುದು' ಎಂದು ನಗುತ್ತಾ ಹೇಳಿದ. 'ನೀವು ಬಿಡ್ರಪ್ಪ... ಹಳ್ಳಿ ರೋಡಲ್ಲಿ ಮೂರು ನಾಲ್ಕು ಜನ ಒಂದೇ ಬೈಕಲ್ಲಿ ಹೋಗೋರು' ಎಂದು ನಗುತ್ತಾ ಹೇಳಿದ ನಾಗರಾಜ ಎಚ್ಚರಿಕೆಯಿಂದಲೇ ಬೈಕ್ ಚಲಾಯಿಸಿದ.

ಅವರು ಮನೆಗೆ ಬಂದಾಗ ಮಧ್ಯಾಹ್ನದ ಊಟಕ್ಕೆ ಜಗುಲಿಯಲ್ಲಿ ಕುಳಿತಿದ್ದರು. ಸಾಮಾನು ಚೀಲವನ್ನು ಸೋಮಣ್ಣ ಹೊತ್ತು ಅಡುಗೆ ಮನೆ ಕಡೆ ಸಾಗಿಸುತ್ತಿದ್ದಾಗ ನಾಗರಾಜ ಊಟಕ್ಕೆ ಕುಳಿತಿದ್ದ ವಾಸಮಾವನನ್ನು ಉದ್ದೇಶಿಸಿ ತಾನು ರಾಮಣ್ಣನನ್ನು ಸಂಪರ್ಕ ಮಾಡಲು ನಡೆಸಿದ ಪ್ರಯತ್ನವನ್ನು ಚುಟುಕಾಗಿ ಹೇಳಿ 'ಕೊನೆಗೆ ಅವನ ಮನೆ ಅಡ್ರೆಸ್ ತಿಳಿದು ಕಾಗದ ಹಾಕಿ ಬಂದೆ' ಎಂದ. 'ಸದ್ಯ, ಸುದ್ದಿ ತಿಳಿಯೋ ಹಂಗೆ ಅಯ್ತಲ್ಲ. ಇನ್ನು ಅವನು ಬರದೇ ಎಲ್ಲಿ ಹೋಗ್ತಾನೆ' ಎಂದು ಜಗುಲಿಯಲ್ಲಿ ಊಟಕ್ಕೆ ಕುಳಿತವರೊಬ್ಬರು ಹೇಳಿ ಸಮಾಧಾನಪಟ್ಟುಕೊಂಡರು. ಮನೆಯವರ ಜೊತೆ ಊರಿನ ಕೆಲವು ಗಂಡಸರೂ ಆ ವೇಳೆಗೆ ಬಂದು ಮುಂದಿನ ಕಾರ್ಯದಲ್ಲಿ ನೆರವಾಗಲು ಬಂದಿದ್ದರು.

ಊಟದ ನಂತರ ಊರಿನ ಒಂದಿಬ್ಬರು ಲಿಂಗರಾಜನನ್ನು ಕೇಳಿ ಮನೆ ಎದುರಿನ ಅವರ ತೋಟದಲ್ಲಿ ಬಾಳೆ ಎಲೆ ಕುಯ್ಯಲು ಹೊರಟರು. 'ನಮ್ಮ ತೋಟದಲ್ಲಿ ಬಾಳೆ ಕಮ್ಮಿ. ಪೇಟೆಯಿಂದಲೇ ತಂದಿದ್ದರೆ ಒಳ್ಳೇದಿತ್ತು..' ಎಂದು ಲಿಂಗರಾಜ ಹೇಳಿದಾಗ 'ನಿಮ್ಮ ತೋಟದಲ್ಲಿ ಇಲ್ಲದಿದ್ದರೆ ಬೇರೆ ತೋಟದಲ್ಲಿ ಇಲ್ವೇನ್ರಾ? ಅದೂ ನಮ್ಮ ತಿಮ್ಮಜ್ಜನ ಕಾರ್ಯಕ್ಕೆ..' ಎಂದು ತೋಟದ ಕಡೆ ಹೊರಟಿದ್ದ ಯುವಕ ಹೇಳಿದ. 'ಎಲ್ಲಾದರೂ ಸರಿಯೇ.. ನೂರೈವತ್ತು ಇನ್ನೂರು ಬಾಳೆ ಎಲೆ ಬೇಕಾಗಬಹುದು ನೋಡಿ' ಎಂದರು ಊಟದ ನಂತರ ಎಲೆ ಅಡಿಕೆ ತಾಂಬೂಲ ಹಾಕಿಕೊಳ್ಳುತ್ತಿದ್ದ ವಾಸನಾಯ್ಕರು. 'ಮತ್ತೆ ಕಡುಬಿಗೂ ಎಲೆ ಬೇಕಾಗ್ತವೆ ಕಣ್ರೋ.. ದೊಡ್ಡ ದೊಡ್ಡ ಕೀತು ಇರೋವು ಬೇಕಾಗ್ತವೆ' ಎಂದು ಜಗುಲಿಯಲ್ಲಿ ಊಟಕ್ಕೆ ಕುಳಿತಿದ್ದ ಹಿರಿಯನೊಬ್ಬ ಕೂಗಿ ಹೇಳಿದ.

ಮರುದಿನದ ವ್ಯವಸ್ಥೆಗೆ ದುಡ್ಡಿಗಾಗಿ ಲಿಂಗರಾಜ ಒಳಗಡೆ ಅವ್ವನಲ್ಲಿ ಸಮಾಲೋಚನೆ ನಡೆಸುತ್ತಿದ್ದಾಗ ನಾಗರಾಜನೂ ಜೊತೆ ಸೇರಿದ. ವಾಸಮಾವ ರಾತ್ರಿ ಹೇಳಿದ್ದು ನೆನಪಿನಲ್ಲಿತ್ತು. ಅವರನ್ನು ಒಳಗೆ ಕರೆದರು. ಹುಡುಗರು ಕರೆದ ಧಾಟಿಯಿಂದಲೇ ಅದರ ಕಾರಣವನ್ನು ತಿಳಿದ ಅವರು ಒಳಗೆ ಬಂದು ಚಡ್ಡಿ ಜೇಬಿನಿಂದ ತೆಗೆದು 'ಐದು ಸಾವಿರ ಐತೆ' ಎನ್ನುತ್ತಾ ಲಿಂಗರಾಜನಿಗೆ ಕೊಟ್ಟರು. ಹೇಗಾದರೂ ವ್ಯವಸ್ಥೆ ಮಾಡಬೇಕಿದ್ದ ಅವರಿಗೆ ಅದರಿಂದ ನಿರಾಳವಾಯಿತು. ಯಾವುದಕ್ಕೂ ಹಿಡಿತ ಮಾಡದೆ ಮೂರು ದಿನದ 'ಕಾರ್ಯ' ಮುಗಿಸುವ ಧೈರ್ಯ ಹುಡುಗರಿಗೆ ಬಂದಿತು. ಬೆಳಗ್ಗೆಯೇ ಬಂದು ಸೂಡಿನ ಜಾಗದಲ್ಲಿ ಅವಶ್ಯಕ ಕೆಲಸ ಮಾಡಿದ್ದ ಜಯಣ್ಣ ಸಂಜೆ ವೇಳೆಗೆ ಮತ್ತೆ ಬಂದ. ಆ ವೇಳೆಗೆ ಹತ್ತಿರದ ಕೆಲವು ನೆಂಟರೂ ಬಂದಿದ್ದರು. ಊರಿನ ಕೆಲವರು ಸಣ್ಣ ಪುಟ್ಟ ಕೆಲಸಗಳನ್ನು ನಿರ್ವಹಿಸಲು ಅಣಿಯಾಗಿದ್ದರು. ಲಿಂಗರಾಜನ ಬಳಿ ಬಂದ ಜಯಣ್ಣ 'ಬಾಳೆಎಲೆಗೆ ವ್ಯವಸ್ಥೆ ಆಯ್ತಾ? ಹೆಂಗಸರು ಕಡುಬಿಗೆ ಅಕ್ಕಿ ನೆನೆಸಿದರಾ... ನಾಳೆ ಬೆಳಗ್ಗೆ ಹತ್ತು ಗಂಟೆಯ ಒಳಗೆಲ್ಲಾ ತುಕಡಿಯ ವ್ಯವಸ್ಥೆ ಆದರೆ ಹನ್ನೆರಡು ಗಂಟೆ ಹೊತ್ತಿಗೆ ಎಡೆ ಇಡಾದಕ್ಕೆ ಸಾಧ್ಯ..' ಎಂದು ವ್ಯವಸ್ಥೆಯ ಉಸ್ತುವಾರಿಯನ್ನು ವಹಿಸಿಕೊಂಡವನಂತೆ ಹೇಳಿದ. ಯಲ್ಲನಾಯ್ಕರಿಗಿಂತ ಕೆಲವೇ ವರ್ಷ ಚಿಕ್ಕವನಾಗಿದ್ದ ಜಯಣ್ಣ ವಾರಿಗೆಯಲ್ಲಿ ಚಿಕ್ಕಪ್ಪನಾಗಿದ್ದರೂ ಅವನ ವ್ಯವಹಾರಗಳ ಬಗ್ಗೆ ಅಷ್ಟೇನೂ ಗೌರವ ಇಟ್ಟುಕೊಳ್ಳದ ಲಿಂಗರಾಜ ತನ್ನ ಅಸಮಾಧಾನವನ್ನು ತೋರಿಸಿಕೊಳ್ಳದೆ 'ಎಲ್ಲಾ ಆಗ್ತಾ ಇದೆ.. ಉಳಿದದ್ದು ನಾಳೆ ಬೆಳಗ್ಗೆ ಆಗುತ್ತೆ' ಎಂದು ಚುಟುಕಾಗಿ ಹೇಳಿದ. 'ಅಜ್ಜನಿಗೆ ಅಪರೂಪಕ್ಕೆ ಔಷಧಿ ತಗೊಳ್ಳೋ ಅಭ್ಯಾಸ ಇತ್ತಲ್ಲ, ಅದಕ್ಕೆ ಒಂದು ಬಾಟಲಿ ಸರಾಪನ್ನು ಎಡೆಗೆ ಇಡಬೇಕಾಗ್ತದೆ. ಹಂಗೇ ಬೀಡಿ ಕಟ್ಟು ಬೆಂಕಿ ಪಟ್ಣ ಇಡೋದು ಮರೀಬಾರ್ದು. ಅವನು ಅಪರೂಪಕ್ಕೆ ಬೀಡಿ ಸೇದ್ತಾ ಇದ್ದ' ಎಂದು ಪೇಟೆಗೆ ದಿನಸಿ ಸಾಮಾನು ತರಲು ಹೋಗಿದ್ದ ನಾಗರಾಜನಲ್ಲಿ ಜಯಣ್ಣ ಸೂಚಿಸಿದಾಗ 'ಅವನ್ನೆಲ್ಲ ನಾಳೆ ಬೆಳಗ್ಗೆ ತಂದು ಬಿಡಾನ' ಎಂದು

ಸಮಾಧಾನಪಡಿಸಿದ. ಸರಾಪು ಎಂದು ಸೂಚಿಸಿದ್ದಕ್ಕೆ ಅಸಮಾಧಾನಗೊಂಡ ಲಿಂಗರಾಜನಿಗೆ 'ಈ ಹೆಳೆಯಲ್ಲಿ ತನಗೆ ಬೇಕಾದ್ದನ್ನೆಲ್ಲ ತರಿಸೋದಕ್ಕೆ ವ್ಯವಸ್ಥೆ ಮಾಡ್ತಾ ಇದ್ದಾನೆ' ಎನಿಸಿತು. ಆದರೆ ಅದನ್ನು ತೋರಿಸಿಕೊಳ್ಳಲಿಲ್ಲ.

ಹತ್ತಿರದ ನಂಟರು, ಊರಿನವರೆಲ್ಲ ಸೇರಿ ಕೈಜೋಡಿಸಿದ್ದರಿಂದ ಮರುದಿನ ಹನ್ನೆರಡು ಗಂಟೆಯ ಒಳಗೆ ಮೀಸಲು ಅಡಿಗೆ ಆಗಿತ್ತು. 'ಬಾಳೆಕಾಯಿ ಪಲ್ಲೆ ಮಾಡೋದು ಬಿಡಬೇಡ. ನಮ್ಮಲ್ಲಿ ಅದೇ ರಿವಾಜು' ಎಂದು ಹಿರಿಯರೊಬ್ಬರು ಬೆಳಗ್ಗೆಯೇ ನೆನಪಿಸಿದ್ದರಿಂದ ತೋಟದಲ್ಲಿ ಬಿಟ್ಟಿದ್ದ ಬಾಳೆಕೊನೆಯನ್ನು ಅದು ಚಿಗುರು ಎಂದು ಗೊತ್ತಾದರೂ ರಿವಾಜಿಗಾಗಿ ಕಡಿದು ತರಬೇಕಾಯಿತು. ಅಜ್ಜನಿಗೆ ಪ್ರಿಯವಾದ ತಿಂಡಿ ತೀರ್ಥಗಳನ್ನು ಸಿದ್ಧಪಡಿಸಿ ನಡುಮನೆಯಲ್ಲಿ ಕಳಸವನ್ನೂ, ಹಣತೆಯನ್ನೂ ಇರಿಸಿ ಪೂಜೆಗೆ ಅಣಿಗೊಳಿಸಲಾಯಿತು. ಬೆಳಗ್ಗೆ ಬಂದಿದ್ದ ಚೌರದವನಿಗೆ ಮುಡಿ ಒಪ್ಪಿಸಿದ ಯಲ್ಲನಾಯ್ಕರು ಸ್ನಾನ ಮಾಡಿ ಅಪ್ಪಯ್ಯನಿಗೆ ಎಡೆ ಇಡಲು ಸಜ್ಜಾದರು. ಅಷ್ಟರಲ್ಲಿ 'ಸೂಡಿನ ಹತ್ರ ಒಯ್ದು ಪೂಜೆ ಮಾಡಿ ಬರಬೇಕಲ್ರೊ' ಎಂದು ಜಯಣ್ಣ ಸೂಚಿಸಿದ. ಅಂತ್ಯಕ್ರಿಯೆಯ ಬಗ್ಗೆ ಹೇಗೋ ಮೂರುದಿನದ ಕಟ್ಟಳೆಯ ಬಗ್ಗೆಯೂ ನಿರ್ದಿಷ್ಟ ನಿಯಮಗಳಿಲ್ಲದೆ, ಸೇರಿದ್ದ ಹಿರಿಯರಲ್ಲಿ ಒಬ್ಬೊಬ್ಬರು ಒಂದೊಂದು ರೀತಿಯ ರಿವಾಜುಗಳನ್ನು ಹೇಳುತ್ತಾ ಇದ್ದುದನ್ನು ಅಸಹನೆಯಿಂದ ಕೇಳಿಸಿಕೊಂಡ ಲಿಂಗರಾಜ ಅದನ್ನೆಲ್ಲ ಮೌನವಾಗಿ ಒಪ್ಪಿಕೊಂಡವನಂತೆ ತೋರಿಸುತ್ತಾ ತನಗೆ ಸಾಧ್ಯವಾದುದನ್ನು ಮಾಡುತ್ತಿದ್ದ. ಅವನೊಂದಿಗೆ ನಾಗರಾಜನೂ ಜೊತೆ ಸೇರಿದ್ದ. ಎಡಗೈಯಲ್ಲಿ ಸೂಡಿಗೆ ಕಟ್ಟಿಗೆ ಹಾಕಬೇಕು ಎಂದು ಹೇಳಿದ್ದ ಹಿರಿಯನಿಗೆ ಅದು ತನಗೆ ಕೇಳಿಸಿಲ್ಲ ಎಂಬುದನ್ನು ನಟಿಸುತ್ತಾ ಬಲಗೈಯಿಂದಲೇ ಕಟ್ಟಿಗೆಯನ್ನು ಹಾಕಿದ್ದನ್ನು ಗಟ್ಟಿದನಿಯಲ್ಲಿ ಆಕ್ಷೇಪಿಸಲೂ ಆಗಿರಲಿಲ್ಲ. ಅಂತ್ಯಕ್ರಿಯೆಯ ದಿನ ಬಂದಿದ್ದ ಇನ್ನೊಬ್ಬ ಹಿರಿಯ ಮೂರನೇ ದಿನದ ಕಟ್ಟಳೆಯ ವಿಧಿಗಳು ಮಾಡುವವರ ಅನುಕೂಲಕ್ಕೆ ತಕ್ಕಂತೆ ನಡೆಯುತ್ತಾ ಇದ್ದದನ್ನು ನೋಡಿ 'ಹಿಂದೆ ಹಿರೇ ದಾಸಯ್ಯ ಬಂದು ಹಿಂಗೆ ಹಿಂಗೆ ಮಾಡಿ ಅಂತ ಹೇಳತಿದ್ದ. ಈಗ ದಾಸಯ್ಯಗಳೇ ಇಲ್ಲ, ಅವರ ಕಡೆಯವರನ್ನು ಯಾರೂ ಕರಿಯೋದು ಇಲ್ಲ. ಎಲ್ಲ ಕಲಿಗಾಲ' ಎಂದು ತನ್ನಷ್ಟಕ್ಕೆ ಹೇಳಿಕೊಂಡದ್ದನ್ನು ಪಕ್ಕದಲ್ಲಿದ್ದವನೊಬ್ಬ ಕೇಳಿಸಿಕೊಂಡು 'ಉಸಿರೇ ಹೋದ ಮೇಲೆ ಎಂಥ ರೀತಿ ರಿವಾಜು? ಅಂತ ಈಗಿನ ಹುಡುಗರು ಕೇಳ್ತಾರೆ ಅಜ್ಜಾ' ಎಂದು ಕೆಳಗಿನ ದನಿಯಲ್ಲಿ ಹೇಳಿದ.

'ಕಾರ್ಯ'ಕ್ಕೆ ಬಂದವರೆಲ್ಲ ಎಡೆಗೆ ಇಕ್ಕಲು ನಾನಾ ಬಗೆಯ ತಿಂಡಿ ಪದಾರ್ಥಗಳನ್ನು ತಂದಿದ್ದರು. ಹತ್ತಿರದ ಬಂಧುಗಳು ಅಜ್ಜನಿಗೆ ಇಷ್ಟವಾದುದನ್ನು ಮಾಡಿಕೊಂಡು ಬಂದು ಎಡೆಗೆ ಇಕ್ಕಿ ದೂಪ ಹಾಕಿದ್ದರು. ಪೇಟೆಯ ಕಡೆಯಿಂದ ಬಂದವರು ಬಿಸ್ಕತ್ತು, ಖಾರಾಸೇವು, ಖರ್ಜೂರದ ಹಣ್ಣು, ಬಾಳೆ ಹಣ್ಣು ಮೊದಲಾಗಿ ನಾಗಾ ಬಗೆಯ ಖಾದ್ಯಗಳನ್ನು ತಂದು ಎಡೆಗೆ ಇಕ್ಕಿದ್ದರು. ಮನೆಯವರು ರಿವಾಜಿನಂತೆ ಹೋಳಿಗೆ, ಕಡುಬು, ರೊಟ್ಟಿ, ದೋಸೆ, ಅನ್ನ ಇತ್ಯಾದಿಯ ಜೊತೆ ಕೋಳಿ, ಕುರಿ, ಮೀನಿನ ಖಾದ್ಯಗಳನ್ನೂ ಎಡೆಗೆ ಇಕ್ಕಿ ದೂಪ ಹಾಕಿದ್ದರು. ಜಯಣ್ಣ ಹಿಂದಿನ ದಿನವೇ ಸೂಚಿಸಿದ್ದಂತೆ ಬಣ್ಣದ ಸರಾಪಿನ ಬಾಟಲಿಯನ್ನೂ ಮುಚ್ಚುಳ ತೆಗೆದು ಇರಿಸಿದ್ದರು. ಬೀಡಿ ಬೆಂಕಿ ಪೊಟ್ಟಣವನ್ನೂ ಒಂದು ಬದಿ ಇಟ್ಟಿದ್ದರು. ಜಕಣಿ ಕೂಡಿಸುವಂತೆ ಎರಡು ದೀಪಗಳ ಕುಡಿಗಳು ಪರಸ್ಪರ ಕೂಡುವುದು ಈ ಮೂರುದಿನದ ಕಟ್ಟಳೆಯಲ್ಲಿ ಇಲ್ಲದ ಕಾರಣ ಎಡೆ ಇಟ್ಟದ್ದು ಮುಗಿದ ನಂತರ ಎಲ್ಲರನ್ನೂ ಊಟಕ್ಕೆ ಎಬ್ಬಿಸಿದರು. ಎಡೆಗೆ ಹಾಕಿದ್ದ ಎಲ್ಲ ಖಾದ್ಯವಸ್ತುಗಳನ್ನು ಒಟ್ಟುಗೂಡಿಸಿ ಪಂಕ್ತಿಯಲ್ಲಿ ಕುಳಿತವರೆಲ್ಲರಿಗೂ ಸ್ವಲ್ಪ ಸ್ವಲ್ಪ ಬಡಿಸುವುದೂ ಕಟ್ಟಳೆಯಂತೆ. ಬಂದವರೆಲ್ಲರಿಗೂ ಕಡುಬು, ಚಿಚ್ಚದ ಜೊತೆಗೆ ಅನ್ನ, ಹುಳಿಸಾರಿನ ಸೇವೆಯೂ ನಡೆಯಿತು. ಯಲ್ಲನಾಯ್ಕರೂ, ವಾಸನಾಯ್ಕರೂ ಹಿಂದಿನ ದಿನ ಲೆಕ್ಕ

ಹಾಕಿದ್ದಕ್ಕಿಂತಲೂ ಹೆಚ್ಚಿನ ಜನ ಬಂದಿದ್ದರೂ ಉಪಚಾರಕ್ಕೆ ಕೊರತೆ ಆಗಲಿಲ್ಲ. ಊಟದ ನಂತರ ಎಲೆ ಅಡಿಕೆ ಮೆಲ್ಲುತ್ತ ಮನೆಯವರೆಲ್ಲರಿಗೂ ಎರಡು ಅಡಿಕೆ, ಎರಡು ಎಲೆಯಂತೆ ನೀಡಿ ಬಂಧುಗಳೆಲ್ಲ ನಿರ್ಗಮಿಸಿದರು. 'ಕೊನೆಗೂ ರಾಮಣ್ಣ ಬರಲೇ ಇಲ್ಲ ನೋಡಿ. ಎಂಥ ಮಕ್ಕಳಪ್ಪ' ಎಂದು ಹಿಂದಿನ ಕಟ್ಟಳೆಗಳನ್ನು ನೆನಪಿಸಿಕೊಂಡಿದ್ದ ಹಿರಿಯ ಹೇಳಿದ್ದಕ್ಕೆ ಅಲ್ಲಿ ಸೇರಿದ್ದವರು ಪ್ರತಿ ಹೇಳಲಿಲ್ಲ. ಅವರ ಮೌನವೇ ಹಿರಿಯನ ಹೇಳಿಕೆಗೆ ಸಮ್ಮತಿಯಂತೆ ಅದನ್ನು ಕೇಳಿಸಿಕೊಂಡಿದ್ದ ಲಿಂಗರಾಜನಿಗೆ ಅನ್ನಿಸಿತು.

* * *

ಅಧ್ಯಾಯ–9

# ರಾಮಣ್ಣ ಬಂದ

ತಿಮ್ಮನಾಯ್ಕರ ಮೂರನೇ ದಿನದ 'ಕಾರ್ಯ' ಮುಗಿದ ರಾತ್ರಿಯೇ ಹನ್ನೊಂದು ದಿನಕ್ಕೆ ತಿಥಿ ಕಾರ್ಯವನ್ನು ವಾಡಿಕೆಯಂತೆ ನಿಗದಿಪಡಿಸಲಿಲ್ಲ. ಇಪ್ಪತ್ತೊಂದನೆಯ ದಿನವೂ ಮಾಡಬಹುದು ಎಂದು ಹಿರಿಯರೊಬ್ಬರು ಹೇಳಿದ್ದರಿಂದ ಅದನ್ನೇ ಗಟ್ಟಿಯಾಗಿ ಹಿಡಿದುಕೊಂಡ ಹುಡುಗರು 'ಹಂಗೆ ಮಾಡಾನ. ಹೆಂಗೂ ಮೂರು ದಿನದ್ದು ಮುಗಿತಲ್ಲ. ಇನ್ನೂ ಸಮಾರಾಧನೆ. ಅನುಕೂಲ ನೋಡಿಕೊಂಡು ನಿಧಾನವಾಗೇ ಮಾಡನ' ಎಂದು ನಾಗರಾಜ ಹೇಳಿದ್ದನ್ನು ಲಿಂಗರಾಜನೂ ಒಪ್ಪಿಕೊಂಡ. ಅವರಲ್ಲಿ ತಿಥಿ ಅಂದರೆ ಕುರಿ ಊಟವೇ. ಬಂದವರು ಸಂತೃಪ್ತರಾಗಬೇಕು. ಹತ್ತಿರದ ಬಂಧುಗಳಷ್ಟೇ ಅಲ್ಲದೆ, ಕುರಿ ಅನ್ನುವ ಹೆಸರು ಕೇಳಿದ ಮಾತ್ರಕ್ಕೆ ಬರುವವರ ಸಂಖ್ಯೆ ಹೆಚ್ಚುತ್ತದೆ. ಹಳ್ಳೂರು ಸುತ್ತಲಿನ ಹಳ್ಳಿಗಳಿಗೆ ತಿಮ್ಮನಾಯ್ಕರು ಮಕ್ಕಳು ಮೊಮ್ಮಕ್ಕಳನ್ನು ಓದಿಸಿದವರೆಂದೇ ಹೆಸರಾದವರು. 'ಇದ್ಯಾವಂತರ ಮನೆ' ಎಂದು ಹೇಳುತ್ತಾ ಇದ್ದ ಕಾರಣ ನಾಲ್ಕು ನೂರು– ಐದು ನೂರು ಜನರಾದರೂ ಸಮಾರಾಧನೆಯ ದಿನ ಬರಬಹುದು ಎಂದು ಅವರು ನಿರೀಕ್ಷೆ ಮಾಡಿದರು.

ಸೋಮವಾರ ಮೂರುದಿನದ ಕಟ್ಟಳೆ ಮುಗಿದ ಕಾರಣ ನಾಗರಾಜ ಒಂದು ದಿನಕ್ಕಷ್ಟೇ ರಜೆ ಮುಗಿಸಿ ಮಂಗಳವಾರ ಬೆಳಗ್ಗೆಯೇ ಹೈಸ್ಕೂಲಿಗೆ ಹೊರಡಲು ಸಿದ್ಧನಾದ. ಅವನೊಟ್ಟಿಗೆ ರಾಜೇಶ್ವರಿಯೂ ತಯಾರಾದಳು. ಕಟ್ಟಳೆ ಮುಗಿದ ಹಿಂದಿನ ರಾತ್ರಿ ಮನೆಯಲ್ಲಿ ಹತ್ತಿರದ ಯಾವ ಬಂಧುಗಳೂ ಉಳಿದಿರಲಿಲ್ಲ. ವಾಸನಾಯ್ಕರೊಬ್ಬರು ಮಾತ್ರ ಉಳಿದಿದ್ದರು. 'ನಾನು ಅವ್ವನ ಜೊತೆ ಸ್ವಲ್ಪ ದಿನ ಇರ್ತೀನಿ' ಎಂದು ಈರಮ್ಮ ಹೇಳಿದ್ದರಿಂದ ವಾಸನಾಯ್ಕರು ನಾಗರಾಜ ಹೊರಟ ಹೊತ್ತಿಗೆ ಊರಿಗೆ ಹೋಗಲು ಸಿದ್ಧರಾದರು. ಹೊರಡುವ ಮೊದಲು ಅವರು ಯಲ್ಲಬಾವನ ಜೊತೆ ಹುಡುಗರಿಬ್ಬರನ್ನೂ ಕೂರಿಸಿಕೊಂಡು ತಿಥಿಯ ಖರ್ಚು ವೆಚ್ಚದ ಬಗ್ಗೆ ಚರ್ಚೆ ಮಾಡಿದರು. ತಮ್ಮಿಂದಲೂ ಒಂದಿಷ್ಟು ಒದಗಿಸುವ ಭರವಸೆ ಕೊಟ್ಟರು. ಹೊರಡುವ ಮೊದಲು ಒಳಕ್ಕೆ ಲಿಂಗರಾಜನನ್ನು ಕರೆದ ನಾಗರಾಜ 'ಮಾವನ ಕಡೆಯಿಂದ ಇಸುಕೊಳ್ಳೋದು ಬ್ಯಾಡ. ನಾನೇ ಹೆಂಗಾದರೂ ವ್ಯವಸ್ಥೆ ಮಾಡ್ತೇನೆ.. ನನಗೆ ಹಂಗಾಮಿ ಸಾಲ ಸಿಗಬಹುದು' ಎಂದು ಧೈರ್ಯ ಹೇಳಿದ. ದುಡ್ಡಿನ ವ್ಯವಸ್ಥೆ ಆದರೆ ತಿಥಿ ಕಾರ್ಯಕ್ಕೆ ಆಯನೂರಿಗೋ ಹೊನ್ನಾಳಿಗೋ ಹೋಗಿ ಕುರಿಗಳನ್ನು ತಂದು ಬಿಡಬಹುದು

ಎಂದು ಅವರು ತೀರ್ಮಾನ ಮಾಡಿಕೊಂಡಿದ್ದರು. ಸಮಾರಾಧನೆಗೆ ಇನ್ನಿತರ ಸಾಮಾನು ಸರಂಜಾಮುಗಳನ್ನು ತಾನು ಹೊಂದಿಸುವುದಾಗಿ ಲಿಂಗರಾಜ ಹೇಳಿ ಅದರಂತೆ ಕಾರ್ಯೋನ್ಮುಖನಾಗಿದ್ದ.

ಈಚಿನ ವರ್ಷಗಳಲ್ಲಿ ಪ್ರಾರಂಭವಾಗಿರುವಂತೆ 'ಉತ್ತರಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ'ಯನ್ನು ಸಿದ್ಧಪಡಿಸುವುದೋ ಅಥವಾ ಬಾಯಿ ಕರೆಯಿಂದ ಬಂಧುಗಳಿಗೆ ವಿಷಯ ತಿಳಿಸುವುದೋ ಎಂಬ ಜಿಜ್ಞಾಸೆಯಲ್ಲಿ ಲಿಂಗರಾಜ ಎರಡು ದಿನಗಳ ನಂತರ ಪೇಟೆ ಕಡೆ ಹೋಗಿದ್ದ. ಅಲ್ಲಿ ಲಗ್ನಪತ್ರಿಕೆ, ತಿಥಿ ಕಾರ್ಡು, ಸಹಕಾರ ಸಂಘದ ವಾರ್ಷಿಕ ಪತ್ರ, ಸರ್ಕಾರಿ ಪ್ರೌಢಶಾಲೆಯವರು ವರ್ಷಕ್ಕೊಮ್ಮೆ ಹೊರಡಿಸುವ ಪತ್ರಿಕೆಯಷ್ಟಕ್ಕೆ ವ್ಯವಹಾರ ನಡೆಸುತ್ತಿದ್ದ ರಾಘವೇಂದ್ರ ಪ್ರೆಸ್ ಹತ್ತಿರ ಹೋಗಿ ವಿಚಾರಿಸುತ್ತಿದ್ದಾಗ ದಿವಂಗತರ ಭಾವಚಿತ್ರವೂ ಇದ್ದರೆ ಆಹ್ವಾನ ಪತ್ರಿಕೆಗೆ ಶೋಭೆ ಎಂದು ಹೇಳಿದ್ದರಿಂದ ಅಜ್ಜನ ಚಿತ್ರವನ್ನು ಮನೆಯಲ್ಲಿ ಎಲ್ಲಿ ಪತ್ತೆ ಮಾಡುವುದು ಎಂದು ಯೋಚಿಸುತ್ತಾ ಮುದ್ರಣಾಲಯದಿಂದ ಹೊರಬಂದ. ಮುದ್ರಣಾಲಯದ ಮಾಲೀಕ 'ನಮ್ಮ ಸಿನಿಮಾ ನಿರ್ದೇಶಕರ ತಂದೆಯವರಲ್ಲವೋ.. ಮತ್ತೆ ಅವರ ಚಿತ್ರ ಇಲ್ಲದಿದ್ದರೆ ಹೇಗೆ?' ಎಂದು ಹೇಳಿದ್ದರಿಂದ ಕಿರಿಕಿರಿಯೂ ಆಗಿತ್ತು. 'ಕಾಸಿಲ್ಲ, ಕರಿಮಣಿ ಇಲ್ಲ.. ಹೆಸರು ಮಾತ್ರ ಸಿನಿಮಾ ನಿರ್ದೇಶಕನದು..' ಎಂದು ಒಳಗೊಳಗೆ ಸಿಡುಕುತ್ತಾ ರಸ್ತೆ ಬದಿ ನಿಲ್ಲಿಸಿದ್ದ ಮೋಟಾರು ಬೈಕನ್ನು ಹತ್ತಿ ಊರು ಕಡೆ ತಿರುಗಿಸಿದ.

ಪೇಟೆಯಿಂದ ಹತ್ತು ಕಿಲೋ ಮೀಟರ್ ಸಾಗಿ ಊರುಕಡೆಯ ಒಳದಾರಿಗೆ ತಿರುಗುವವರೆಗೂ ಲಿಂಗರಾಜನಿಗೆ ಚಿಕ್ಕಪ್ಪನ ಮನೆಯಲ್ಲಿ ತನಗಾಗಿದ್ದ ಕೆಟ್ಟ ಅನುಭವಗಳದೇ ಮೆಲುಕು. ಚಂಡಾಲ, ಎಷ್ಟು ನಯವಾಗಿ ತನ್ನನ್ನು ಮನೆಯ ಸಂಬಳದ ಆಳಿನಂತೆ ಬಳಸಿಕೊಂಡ ಎಂದು ಮುಖ ಕಿವಿಚುತ್ತಾ ರಸ್ತೆಯಿಂದ ಮನೆಯ ಕಡೆ ಅಗಚುವ ಕಚ್ಚಾರಸ್ತೆಯಲ್ಲಿ ತಿರುಗಿಸುತ್ತಿದ್ದಾಗ ಹಿಂದುಗಡೆಯಿಂದ ತೀರ ಸಮೀಪಕ್ಕೆ ಬಂದ ಕಾರಿನ ಹಾರನ್ನು ಬೆಚ್ಚುವಂತೆ ಮಾಡಿತು. ತನ್ನದೇ ಯೋಚನೆಯಲ್ಲಿದ್ದವನು ಹಿಂದೆ ಬರುತ್ತಿದ್ದ ಕಾರನ್ನು ಬೈಕಿನ ಕನ್ನಡಿಯಲ್ಲಿ ಗಮನಿಸಿರಲಿಲ್ಲ. ಹಾರನ್ನು ಒಮ್ಮೆಯಷ್ಟೆ ಅಲ್ಲದೆ, ಪದೇ ಪದೇ ಗಮನ ಸೆಳೆಯುವಂತೆ ಸದ್ದು ಮಾಡಿದ್ದರಿಂದ ರಸ್ತೆ ಬದಿಗೆ ಬೈಕನ್ನು ನಿಧಾನವಾಗಿ ನಿಲ್ಲಿಸಿ ಕಾರನ್ನು ಮುಂದೆ ಹೋಗಲು ಬಿಟ್ಟ. ಅವನನ್ನು ದಾಟಿದ ಕಾರು ಮುಂದೆ ಹೋಗಲಿಲ್ಲ. ಅವನ ಬೈಕಿನ ಎದುರುಗಡೆಯೇ ನಿಂತಿತು. ಯಾರಿರಬಹುದು ಎಂದು ಅವನು ಅನುಮಾನ ಪಡುತ್ತಿದ್ದಾಗ ಎಡಗಡೆಯ ಬಾಗಿಲು ತೆರೆದುಕೊಂಡಿತು. ನೋಡಿದರೆ ಉದ್ದ ತೋಳಿನ ಅಂಗಿಯನ್ನು ಧರಿಸಿ ತಲೆಕೂದಲನ್ನು ಕೆದರಿದಂತೆ ಹರಡಿಕೊಂಡಿದ್ದ ರಾಮಣ್ಣ ಇಳಿದ. ಇವನನ್ನು ನೋಡುತ್ತಲೇ 'ಯಂತದ ಮಾರಾಯ, ಪೇಟೆಯಿಂದಲೂ ಫಾಲೋ ಮಾಡ್ಕಂಡು ಬರ್ತಾ ಇದೀವಿ. ನಿನ್ನದೇ ಪ್ರಪಂಚದಲ್ಲಿ ಮುಳುಗಿ ಹೋಗಿದ್ದೀಯಾ...?' ಊರು ಬಿಟ್ಟು ವರ್ಷಗಳೇ ಕಳೆದಿದ್ದರೂ ರಾಮಣ್ಣ ಹಳ್ಳಿಯ ಪರಿಸರಕ್ಕೆ ಬರುತ್ತಲೇ ಮೂಲದ ಭಾಷೆಗೆ ತಿರುಗಿದ್ದು ಕೇಳಿ 'ಈ ನಾಟಕಕ್ಕೇನೂ ಕಡಿಮೆ ಇಲ್ಲ' ಎಂದು ಮನಸ್ಸಿನಲ್ಲಿ ಅಂದುಕೊಂಡವನು ಅವನನ್ನು ನಗುಮುಖದಿಂದ ಎದುರುಗೊಂಡ. ಪರಸ್ಪರ ಸಂಪರ್ಕ ಇಲ್ಲದೆ ಎರಡು ವರ್ಷ ಮೇಲಾಗಿತ್ತು. ಊರಿಗೆ ಅವನು ಬರದೆ ಎಷ್ಟು ವರ್ಷವಾಗಿತ್ತೋ ಅವನಿಗೂ ಲೆಕ್ಕ ಹಾಕಲು ಪುರುಸೊತ್ತು ಇರಲಿಲ್ಲ.

'ಹುಸೇನಿ ಕಾರು ರಸ್ತೆ ಬದಿ ಹಾಕು' ಎಂದು ಡ್ರೈವರನಿಗೆ ಹೇಳಿದ ರಾಮಣ್ಣ ಅಲ್ಲಿಯೇ ನಿಂತು ಹೆಚ್ಚಿನ ಕುತೂಹಲ ತೋರಿಸಿ ತಿಮ್ಮನಾಯ್ಕರ ಅಂತಿಮ ದಿನಗಳ ವಿವರ ಪಡೆದ. 'ಚಿತ್ರದುರ್ಗದ ಕಡೆ ಗೊಲ್ಲರ ಹಟ್ಟಿಯಲ್ಲಿ ಮೂರು ವಾರಗಳಿಂದ ಚಿತ್ರೀಕರಣ ಮಾಡುತ್ತಾ ಇದ್ದೆ, ಡಿಸ್ಟರ್ಬ್ ಆಗಾದೆ ಬ್ಯಾಡ ಅಂತ ಫೋನು, ಮೊಬೈಲು ಯಾವುದನ್ನೂ ಇಟ್ಕಂಡಿರಲಿಲ್ಲ. ನಿನ್ನೆ ಬೆಳಗ್ಗೆ ವಾಪಸು ಬೆಂಗಳೂರಿಗೆ ಬಂದಾಗಲೇ ನಾಗರಾಜನ

ಕಾಗದ ಸಿಕ್ಕಿ ವಿಷಯ ಗೊತ್ತಾಗಿ ತಕ್ಷಣ ಹೊರಟು ಬಂದೆ. ಅವ್ವ ಹೆಂಗದಾಳೆ? ನಾನೂ ಈ ಕಡೆ ಬರದೆ ಬಾಳ ದಿನವೇ ಆಯ್ತಲ್ಲ..' ಎಂದು ಲಿಂಗರಾಜನಿಗೆ ವರದಿ ಒಪ್ಪಿಸುವವನಂತೆ ಹೇಳಿದ. ಲಿಂಗರಾಜನೂ ಸಂಕ್ಷಿಪ್ತವಾಗಿ ಎರಡು ವಾರಗಳ ಹಿಂದೆ ಹೊಂಗಿ ಬಿದ್ದಿದ್ದು, ಅದೇ ನೆಪದಲ್ಲಿ ಕಾಲು ನೋವು ಅಂತ ಹೇಳ್ತಾ ಇದ್ದುದು, ಯಾವ ಸುಳಿವೂ ನೀಡದಂತೆ ವಾಂತಿ ಮಾಡಿ ಹಾಗೆಯೇ ಉಸಿರು ನಿಲ್ಲಿಸಿದ್ದನ್ನು ಹೇಳಿ, ಅವನನ್ನು ಸಂಪರ್ಕ ಮಾಡಲು ಅವತ್ತಿನಿಂದ ಸತತ ಪ್ರಯತ್ನ ಪಟ್ಟುದನ್ನೂ ಹೇಳಿದ. 'ಸರಿ ಬಿಡು.. ಅಪ್ಪಯ್ಯನಿಗೆ ಎಂಬತ್ತರ ಮೇಲೆಯೇ ಆಗಿರಬೇಕು. ಸದ್ಯ ಯಾರಿಗೂ ಹೆಚ್ಚಿನ ತೊಂದರೆ ಕೊಡದೆ ಹೋದನಲ್ಲ. ಎಲ್ಲಾದರೂ ಪೆರಾಲಿಸಿಸ್ ತರ ಆಗಿಬಿಟ್ಟದ್ದರೆ ಎಷ್ಟು ಕಷ್ಟ ಆಗಿರಾದು..' ಎಂದು ನಿರಾಳತೆಯನ್ನು ವ್ಯಕ್ತಪಡಿಸಿದ. ಲಿಂಗರಾಜ ಮಾತಾಡುತ್ತಲೇ ಕಾರಿನ ಒಳಗೆ ಕಣ್ಣು ಹಾಯಿಸಿದರೆ ಅಲ್ಲಿ ಡ್ರೈವರ್ ಮಾತ್ರ ಇದ್ದ. ಹಿಂದಿನ ಸೀಟಿನಲ್ಲಿ ಎರಡು ಸೂಟ್‌ಕೇಸ್‌ಗಳಿದ್ದವು. ಮಂಜುಳಾ ಚಿಕ್ಕಮ್ಮ ಬಂದಿಲ್ಲ ಎಂಬುದು ಗಮನಕ್ಕೆ ಬಂದರೂ ಅದರ ಬಗ್ಗೆ ಕೇಳಬೇಕು ಎನಿಸಲಿಲ್ಲ. 'ಆಯಿತು. ಹೋಗನ ಈಗ' ಎಂದು ಹೇಳುತ್ತಾ ಬೈಕನ್ನು ಚಾಲು ಮಾಡಿ ಕಾರಿನ ಮುಂದೆ ಸಾಗಿದ. ರಾಮಣ್ಣನ ಕಾರು ಅವನನ್ನು ಹಿಂಬಾಲಿಸಿತು.

ಪೇಟೆಗೆ ಹೋದವನು ಸ್ವಲ್ಪ ಹೊತ್ತಿಗೆ ಕಾರಿನ ಸಹಿತ ಬಂದುದನ್ನು ನೋಡಿ ಮನೆಯಲ್ಲಿದ್ದವರಿಗೆ ಬೆರಗಾಯಿತು. ಕಾರಿನಿಂದ ಇಳಿದ ರಾಮಣ್ಣನನ್ನು ನೋಡಿ ಗಂಗಮ್ಮನಿಗಂತೂ ಮಿಶ್ರಭಾವಗಳು ಆವರಿಸಿದವು. ಅದುಮಿಟ್ಟ ದುಃಖ ಪುಟಿದಂತೆ ಹೊರಹೊಮ್ಮಿತು. 'ಎಷ್ಟು ಸಲ ನೆನೆಸಿಕೊಂಡ್ರೋ ನಿನ್ನ..' ಎಂದು ಹೇಳಿದವರು ಮುಂದೆ ಮಾತಾಡಲಾಗದೆ ಗದ್ಗದಿಸಿದರು. ಅವ್ವನನ್ನು ವರ್ಷಗಳ ನಂತರ ನೋಡಲು ಬಂದ ತನ್ನ ವರ್ತನೆಗೆ ಅವನಲ್ಲಿ ಸಮರ್ಥನೆ ಇರಲಿಲ್ಲ. ಅಪರಾಧಿ ಭಾವದಿಂದ ತಲೆ ತಗ್ಗಿಸಿಕೊಂಡು 'ಏನೇನೋ ಕೆಲಸ.. ಬರಾನ ಬರಾನ ಅಂತ ಎಷ್ಟೋ ಸಲ ಅಂದ್ಕೊಂಡೆ. ಆದ್ರೂ ಸಮಯ ಸಿಗ್ತಿರಲಿಲ್ಲ. ಹೆಂಗೂ ಏನಾದರೂ ತುರ್ತು ಅಂತ ಇದ್ದರೆ ಹುಡುಗರು ತಿಳಸ್ತಾರಲ್ಲ ಅಂತ ಇದ್ದೆ...' ಎಂದು ಸಮಜಾಯಿಶಿ ನೀಡಲು ಪ್ರಯತ್ನ ನಡೆಸಿದ. ಕಾರಿನ ಬಳಿ ಬಂದ ಯಲ್ಲನಾಯ್ಕರನ್ನೂ ಕೈಹಿಡಿದು 'ಹೆಂಗಿದಿಯಾ ಈಗ?' ಎಂದು ಕ್ಷೇಮ ಸಮಾಚಾರ ವಿಚಾರಿಸಿದ. 'ಸದ್ಯ ಈಗಲಾದ್ರೂ ಬಂದ್ಯಲ್ಲ, ಮಂಜುಳತ್ತಿಗೆ ಬರ್ಲಿಲ್ವ' ಎಂದು ಹೇಳುತ್ತಾ ಈರಮ್ಮ ಕಾರಿನ ಬಳಿ ಬಂದಾಗ 'ನೀನು ಯಾವಾಗ ಬಂದ್ಯೇ.. ಎಲ್ಲ ಚೆನ್ನಾಗಿದ್ದಾರ..?' ಎಂದು ವಿಚಾರಿಸಿದ. 'ಅಪ್ಪಯ್ಯಗೆ ಹುಷಾರು ತಪ್ಪಿದ ದಿನದಿಂದಲೂ ಇಲ್ಲೇ ಇದೀನೋ ಮಾರಾಯ' ಎಂದು ಈರಮ್ಮ ಹೇಳಿದ್ದು ತನ್ನನ್ನು ಛೇಡಿಸಲು ಉದ್ದೇಶಿಸಿದಂತೆ ಎಂದು ಒಳಗೊಳಗೆ ಅನ್ನಿಸಿದರೂ ಅದನ್ನು ತೋರಿಸಿಕೊಳ್ಳದೆ 'ಒಳ್ಳೇದಾಯ್ತು ಬಿಡು, ನೀನು ಇಲ್ಲಿ ಇರ್ತೀಯಾ ಅಂತ ಧೈರ್ಯ ಇತ್ತು..' ಎಂದು ಹೇಳುತ್ತಾ ಅವನು ಮನೆಯ ಜಗುಲಿಯನ್ನು ಹತ್ತಿದ. ಎಷ್ಟೋ ವರ್ಷಗಳ ಹಿಂದೆ ಇದ್ದ ಮನೆಯಲ್ಲಿ ಸಾಕಷ್ಟು ಸುಧಾರಣೆ ಆಗಿತ್ತು. ಮೂರಂಕಣವಿದ್ದ ಹಿಂದಿನ ಮನೆಗೆ ಮೂರು ಕಡೆ ಕಡಿಮಾಡು ಸೇರಿಸಿ ವಿಸ್ತರಿಸಿದ್ದನ್ನು ಗಮನಿಸಿದ. 'ಹಂಗೆ ಬಚ್ಚಲಿಗೆ ಹೋಗಿ ಕೈಕಾಲು ಮುಖ ತೊಳ್ಕ ಬಾ' ಎಂದು ಈರಮ್ಮ ಉಪಚಾರ ಮಾಡಿದಾಗ ಕಡಿಮಾಡಿನಲ್ಲಿದ್ದ ಬಚ್ಚಲು ಮನೆ ಪ್ರವೇಶಿಸಿ ಅಲ್ಲಿನ ಸ್ವಚ್ಛತೆಗೆ ಬೆರಗಾದ. 'ಮಂಜುವನ್ನೂ ಕರೆದುಕೊಂಡು ಬರಬಹುದಿತ್ತು' ಎಂದು ಅವನಿಗೆ ಮೊದಲ ಬಾರಿಗೆ ಅನ್ನಿಸಿತು. ಅವನು ಮುಖ ತೊಳೆದುಕೊಂಡು ಹೊರಕ್ಕೆ ಬಂದಾಗ ಕಾರಿನ ಡ್ರೈವರ್ ಹುಸೇನಿ ಕಾರಿನಲ್ಲಿ ತಂದಿದ್ದ ಅವನ ಬಟ್ಟೆ ಬರೆಗಳಿದ್ದ ಎರಡು ಸೂಟ್ ಕೇಸ್‌ಗಳನ್ನು ತಂದು ಜಗುಲಿಯ ಮೂಲೆಯಲ್ಲಿ ಇಟ್ಟಿದ್ದ. ಅವನು ಮುಖ ತೊಳೆದುಕೊಂಡು ಹೊರಗೆ ಬಂದಾಗ ಲಿಂಗರಾಜ ಒಣಗಿದ ಟವೆಲ್ ನೀಡಿದ. 'ಥ್ಯಾಂಕ್ಸ್ ಕಣೊ.. ನಾನೂ ತಂದಿದ್ದೆ, ಒಳಗೆ ಸೂಟ್ ಕೇಸಿನಲ್ಲಿದೆ' ಎಂದು

ಹೇಳುತ್ತಾ ಒರೆಸಿಕೊಂಡು ಜಗುಲಿಯಲ್ಲಿ ಹಾಕಿದ್ದ ಕುರ್ಚಿಯಲ್ಲಿ ಕುಳಿತ. ಒಳಗಿನಿಂದ ಕಾಫಿ ಲೋಟ ಹಿಡಿದು ಹೊರಬಂದ ಅತ್ತಿಗೆ ಪಾರ್ವತಿಯನ್ನು ನೋಡಿ 'ಚೆನ್ನಾಗಿದ್ದೀರಾ?' ಎಂದು ವಿಚಾರಿಸಿದ. 'ಮಂಜುಳನ್ನೂ ಕರ್ಕೊಂಡು ಬರಬಹುದಿತ್ತು' ಎಂದು ಪಾರ್ವತಮ್ಮ ಹೇಳಿ ಕಾಫಿ ಲೋಟ ಕೈಗಿತ್ತಳು. ಬೆಂಗಳೂರಿನಿಂದ ಎಷ್ಟು ಹೊತ್ತಿಗೆ ಹೊರಟಿದ್ದನೋ, ರಾತ್ರಿ ಎಲ್ಲಿ ಉಳಿದುಕೊಂಡಿದ್ದನೋ, ಬೆಳಗ್ಗೆ ಹನ್ನೊಂದು ಹನ್ನೆರಡರ ಸುಮಾರಿಗೆ ಊರಿಗೆ ಬಂದಿದ್ದ ರಾಮಣ್ಣನ ಪ್ರಯಾಣದ ವಿವರಗಳನ್ನೂ ಯಾರೂ ಕೇಳಲಿಲ್ಲ.

ಸ್ವಲ್ಪ ಹೊತ್ತಿನಲ್ಲಿ ಮನೆಯ ಒಳಗೆ ಹೊರಗಡೆ ಓಡಾಡಿದ ರಾಮಣ್ಣ ಅವ್ವನ ಬಳಿ ಕುಳಿತು ತನ್ನ ಕೆಲಸಗಳ ಬಗ್ಗೆ ವರದಿ ಒಪ್ಪಿಸಿದ. 'ಸಿನಿಮಾ ತಗೀತಿಯಂತಲ್ಲ' ಎಂದು ತಾನು ಕೇಳಿದ್ದನ್ನು ಗಂಗಮ್ಮ ನೆನಪು ಮಾಡಿದರು. 'ತೆಗೆದಿದೀನಿ. ಈಗಲೂ ಒಂದು ಸಿನಿಮಾ ಕೆಲಸದಲ್ಲಿ ಹಳ್ಳೀಲಿದ್ದೆ. ಅಪ್ಪಯ್ಯನ ಸುದ್ದಿ ಅದಕ್ಕೇ ಗೊತ್ತಾಗಲಿಲ್ಲ' ಎಂದು ಇನ್ನೊಮ್ಮೆ ಸಮಜಾಯಿಶಿ ನೀಡಿದ.

ಸಣ್ಣ ಹಳ್ಳಿಯಾಗಿದ್ದರೂ ಮನೆಗಳು ಒತ್ತಾತ್ತಾಗಿ ಇಲ್ಲದ ಕಾರಣ ರಾಮಣ್ಣ ಕಾರಿನಲ್ಲಿ ಬಂದದ್ದು ಊರಲ್ಲಿ ಸುದ್ದಿಯಾಗಲಿಲ್ಲ. ಪ್ರಸಿದ್ಧ ಚಿತ್ರನಿರ್ದೇಶಕನೂ ಆಗಿ ಹಲವು ಪ್ರಶಸ್ತಿಗಳನ್ನು ಪಡೆದ ತನ್ನನ್ನು ಊರಿನ ಜನ ಒಟ್ಟಾಗಿ ಬಂದು ಎದುರುಗೊಳ್ಳಬಹುದು ಎಂದು ಮನಸ್ಸಿನಲ್ಲಿ ಅಂದುಕೊಂಡಿದ್ದ ಅವನಿಗೆ ಪಿಚ್ ಎನಿಸಿತು. ಅದನ್ನು ತೋರಿಸಿಕೊಳ್ಳಲಿಲ್ಲ. ತನ್ನನ್ನು ಎದುರುಗೊಂಡ ಲಿಂಗರಾಜನಲ್ಲಿ ಸಂಭ್ರಮವೇನೂ ಕಾಣಲಿಲ್ಲ. ಬದಲಾಗಿ ಅಸಮಾಧಾನದ ಸುಳಿವು ಇದ್ದುದನ್ನು ಗಮನಿಸಿದ. ಜಗುಲಿಯಲ್ಲಿ ಇರಿಸಿದ್ದ ತನ್ನ ಎರಡೂ ಸೂಟ್‌ಕೇಸುಗಳನ್ನು ಅಲ್ಲಿಯೇ ಬಿಚ್ಚಿ ತಾನು ತಂದಿದ್ದ ಎರಡು ಸೀರೆಗಳನ್ನು ಅವ್ವನಿಗೆ ಕೊಟ್ಟ. ಅವನಿಗೆ ಸೀರೆಗಳನ್ನು ಕೊಳ್ಳುವಾಗ ಅಕ್ಕ ಈರಮ್ಮ ಮನೆಗೆ ಬಂದಿರಬಹುದೆನ್ನುವ ಕಲ್ಪನೆಯೂ ಬಂದಿರಲಿಲ್ಲ. ವರ್ಷಗಳ ನಂತರ ಬಂದರೂ ಮನೆಯಲ್ಲಿ ಆತ್ಮೀಯವಾದ ವಾತಾವರಣ ಇಲ್ಲ ಎಂಬುದು ಅವನ ಅನುಭವಕ್ಕೆ ಬರತೊಡಗಿತು. ಮನೆಯಲ್ಲಿದ್ದವರಿಗೆಲ್ಲ ರಾಮಣ್ಣನ ಬಗ್ಗೆ ತಿಳಿದುಕೊಳ್ಳುವುದು ಕುತೂಹಲ ಇತ್ತು. ತನ್ನ ಸಂಸಾರ, ಮಕ್ಕಳು, ಆಸ್ತಿ ಮನೆ ವಿಚಾರವಾಗಿ ತಿಳಿದುಕೊಳ್ಳುವ ಆಸಕ್ತಿ ಇತ್ತು. ಅವನಾಗಿಯೇ ತಿಳಿಸಲಿ ಎಂದು ಎಲ್ಲರೂ ನಿರೀಕ್ಷೆ ಮಾಡಿದಂತಿತ್ತು. 'ಇಷ್ಟು ವರ್ಷ ನಮ್ಮ ಸುಖ ಕಷ್ಟ ವಿಚಾರಿಸಲಿಲ್ಲ. ಈಗ ಬಂದಿದ್ದಾನೆ ಅಂತ ಅವನಲ್ಲಿ ನಮ್ಮ ಸುಖಕಷ್ಟ ಹೇಳಿಕೊಳ್ಳೋದಾ' ಎಂದು ಮನೆಯವರೆಲ್ಲ ಭಾವಿಸಿದಂತಿತ್ತು.

ಮಧ್ಯಾಹ್ನ ಊಟಕ್ಕೆ ಕುಳಿತಾಗ ಈರಮ್ಮನೇ ಅಪ್ಪಯ್ಯನ ತಿಥಿಯ ದಿನದ ಪ್ರಸ್ತಾಪ ಮಾಡಿದಳು. ಜೊತೆಗೆ ಕುಳಿತಿದ್ದ ಲಿಂಗರಾಜನಾಗಲೀ, ಯಲ್ಲನಾಯ್ಕರಾಗಲೀ ಆ ಬಗ್ಗೆ ಏನನ್ನೂ ತಾವಾಗಿ ಹೇಳಲಿಲ್ಲ. ರಾಮಣ್ಣ ವಿಚಾರಿಸಿಕೊಳ್ಳುತ್ತಾನೆ ಎಂಬ ನಿರೀಕ್ಷೆಯೂ ಎಲ್ಲರಲ್ಲಿ ಇತ್ತು. ಬಹಳ ವರ್ಷಗಳ ನಂತರ ಊರಿನ ಊಟದ ಸವಿಯನ್ನು ಅನುಭವಿಸುತ್ತಿದ್ದ ರಾಮಣ್ಣ ಅಕ್ಕ ಮಾಡಿದ ಪ್ರಸ್ತಾಪಕ್ಕೆ ಪ್ರತಿಯಾಗಿ ಏನನ್ನೂ ಹೇಳಲಿಲ್ಲ. ವಿವರಗಳನ್ನೂ ಕೇಳಲಿಲ್ಲ. 'ಉಪ್ಪಿನ ಕಾಯಿ ಚೆನ್ನಾಗಿದೆ. ನಮ್ಮ ಮಂಜು ಕಡೆಯವರು ಹಿಂಗೆ ಮಿಡಿ ಉಪ್ಪಿನಕಾಯಿ ಹಾಕುತ್ತಾರೆ' ಎಂದು ವಿಷಯವನ್ನು ಬದಲಿಸಿದ. ಹಿತ್ತಲ ತಾಜಾ ತರಕಾರಿ ಸಾರು, ಬಿಸಿಯಾಗಿದ್ದ ಕೆಂಪಕ್ಕಿ ಅನ್ನ, ಮಿಡಿ ಉಪ್ಪಿನಕಾಯಿ ಜೊತೆ ಊಟ ಅವನಿಗೆ ಇಷ್ಟವಾಯಿತು. ಅದನ್ನು ಇನ್ನೊಮ್ಮೆ ಹೇಳಿದ. ತಿಥಿ ಕಾರ್ಯದ ವ್ಯವಸ್ಥೆ ಬಗ್ಗೆ ಚಿಕ್ಕಪ್ಪ ಏನಾದರೂ ವಿವರ ಕೇಳಬಹುದು ಎಂದು ಲಿಂಗರಾಜ ನಿರೀಕ್ಷೆ ಮಾಡಿದ್ದ. ಅದು ನಿಜವಾಗಲಿಲ್ಲ.

ಊಟ ಮುಗಿಸಿ ಜಗುಲಿಗೆ ಬಂದವರಿಗೆ ವಾಡಿಕೆಯಂತೆ ಎಲೆ ಅಡಿಕೆ ತಟ್ಟೆ ಎದುರಾಯಿತು. ಊರಿಗೆ ಬಂದಾಗ ರಾಮಣ್ಣ ಅಪರೂಪಕ್ಕೆ ತಾಂಬೂಲ ಹಾಕುತ್ತಿದ್ದ. ಈಗ ಒಳ್ಳೆಯ ಊಟ ಬಿದ್ದ ನಂತರ ತಾಂಬೂಲ

ಹಾಕುವ ಹುರುಪು ಬಂತು. ಹಸನಾದ ಬೆಟ್ಟೆಯನ್ನು ಹುಡುಕಿ ಬಾಯಲ್ಲಿ ಹಾಕಿ, ಮನೆ ತೋಟದ ಎಲೆಯನ್ನು ಚೆನ್ನಾಗಿ ಒರೆಸಿ ಅದರ ಬೆನ್ನಿಗೆ ತೆಳುವಾಗಿ ಸುಣ್ಣ ಲೇಪಿಸಿ ಸುರುಳಿ ಸುತ್ತಿ ಕಟಬಾಯಿಂದ ಬಾಯಿಗೆ ತುರುಕಿಕೊಂಡ. ಕೆಲವೇ ಕ್ಷಣಗಳಲ್ಲಿ ಬೆಟ್ಟಡಿಕೆ ಪುಡಿಯಾಗಿ ಲಾಲಾರಸದಲ್ಲಿ ಅಡಿಕೆಯ ಚೊಗರು, ಎಲೆ ಸುಣ್ಣದ ಸಂಯುಕ್ತದೊಂದಿಗೆ ಮಿಳಿತವಾಗಿ ಹಿತಕರವಾದ ಸವಿ ನಾಲಗೆಯಲ್ಲಿ ಹರಿದಾಡಿತು. ಎಲೆ ಅಡಿಕೆಯೊಂದಿಗೆ ತಂಬಾಕನ್ನೂ ಹಾಕುವ ಅಭ್ಯಾಸವಿದ್ದ ಯಲ್ಲನಾಯ್ಕರಿಗೆ ಅದು ನಿತ್ಯದ ಅಭ್ಯಾಸವಾಗಿದ್ದು ಸಿಕ್ಕಿದ ಅಡಿಕೆಯೊಂದನ್ನು ಬಾಯಿಗೆ ಎಸೆದು ಎಲೆಯ ಬೆನ್ನಿಗೆ ಸುಣ್ಣವನ್ನು ಬಳಿದು ಸುರುಳಿಯಾಗಿ ಅಡಕಿಕೊಂಡರು. ಹೆಬ್ಬೆರಳಲ್ಲಿ ಉಳಿದಿದ್ದ ಸುಣ್ಣದ ಶೇಷವನ್ನು ತಂಬಾಕಿನ ಚಿಕ್ಕದೊಂದು ತುಣುಕಿಗೆ ಸೇರಿಸಿ ತಿಕ್ಕಿ ಅದನ್ನು ಬಾಯಿಗೆ ಎಸೆದುಕೊಂಡರು. ಅಣ್ಣತಮ್ಮಂದಿರು ತಾಂಬೂಲ ಚರ್ವಣದ ಸವಿಯಲ್ಲಿ ಇದ್ದುದನ್ನು ಕಿರಿದಾಗಿ ಗಮನಿಸುತ್ತಿದ್ದ ಲಿಂಗರಾಜ ಉತ್ತೇಜಿತನಾಗಿ ತಾನೂ ಅಡಿಕೆಯೊಂದನ್ನು ಬಾಯಿಗೆ ಎಸೆದುಕೊಂಡು ಒಳ್ಳೆಯ ಚಿಗುರು ಎಲೆಗಾಗಿ ತಟ್ಟೆಯಲ್ಲಿ ಅರಸಿ ತೆಳುವಾಗಿ ಸುಣ್ಣ ಲೇಪಿಸಿಕೊಂಡು ಬಾಯಲ್ಲಿ ಅಡಕಿಕೊಂಡ.

ವಿರಾಮದಲ್ಲಿದ್ದಾಗ ಮಾತಾಡುವುದಕ್ಕೆ ತಮ್ಮದೇ ಕಾರಣಗಳಿಂದ ಸುಮ್ಮನಿದ್ದವರು ಈಗ ಬಾಯಲ್ಲಿ ತಾಂಬೂಲವಿದ್ದಾಗ ಮಾತಿಗೆ ಅವಕಾಶವೆಲ್ಲಿ? ಅಲ್ಲಿ ಮೌನವೇ ನೆಲೆಯಾಗಿತ್ತು. ಅಪರೂಪಕ್ಕೆ, ಎಷ್ಟೋ ವರ್ಷಗಳ ನಂತರ ಮನೆಗೆ ಬಂದ ಮಗ ರಾಮಣ್ಣ ತಾನಾಗಿ ಮಾತನಾಡದೆ ಸುಮ್ಮನೆ ಇರುವುದನ್ನು ಗಂಗಮ್ಮ ಗಮನಿಸಿದ್ದರು. ಏನು ಸಮಸ್ಯೆಯೋ ಎಂದು ಅವರಿಗೆ ಯೋಚನೆಯಾದರೂ ಅದನ್ನು ಬಾಯಿ ಬಿಟ್ಟು ಹೇಳಲಿಲ್ಲ. ತಾಂಬೂಲ ಮುಗಿದ ನಂತರ ನೀರು ತರಿಸಿಕೊಂಡು ಬಾಯಿ ಮುಕ್ಕಳಿಸಿದ ರಾಮಣ್ಣ ಜಗುಲಿಯಲ್ಲಿ ಹಾಸಿದ್ದ ಚಾಪೆಯ ಮೇಲೆ ಅಡ್ಡಾಗಲು ಸಜ್ಜಾದ. ಅದನ್ನು ನೋಡಿದ ಯಲ್ಲನಾಯ್ಕರು 'ತಮ್ಮ, ಚಿಗಪ್ಪನಿಗೆ ಹಾಸುಗೆ ತಂದು ಹಾಕು, ಸ್ವಲ್ಪ ಹೊತ್ತು ಮಲಗಲಿ' ಎಂದು ಲಿಂಗರಾಜನಿಗೆ ಆದೇಶಿಸಿದರು. ಲಿಂಗರಾಜ ಜಗುಲಿಯಲ್ಲಿಯೇ ಸುತ್ತಿಟ್ಟ ತಡಿಯನ್ನು ಬಿಚ್ಚಿ ಹೊದಿಕೆಯನ್ನು ಕೊಡವಿ ಹಾಕಿಕೊಟ್ಟ. 'ಇರಲಿ ಬಿಡು, ರಾತ್ರಿ ಸರಿಯಾಗಿ ನಿದ್ದೆ ಆಗಲಿಲ್ಲ' ಎಂದು ಹೇಳುತ್ತ ರಾಮಣ್ಣ ಹಾಸುಗೆಯ ಮೇಲೆ ಉರುಳಿಕೊಂಡ. ರಾಮಣ್ಣನ ಜೊತೆಗೆ ಬಂದಿದ್ದ ಡ್ರೈವರ್ ಹುಸೇನಿ ಮನೆಯ ಸುತ್ತಮುತ್ತ ಠಳಾಯಿಸುತ್ತ ಕಾರಿನ ಮುಂದಿನ ಸೀಟನ್ನು ಹಿಂದಕ್ಕೆ ಬಾಗಿಸಿಕೊಂಡು ವಿಶ್ರಾಂತಿಗೆ ಜಾರಿದ.

ಸಂಜೆಯ ಹೊತ್ತಿಗೆ ಎಚ್ಚರಗೊಂಡ ರಾಮಣ್ಣನಿಗೆ ಪ್ರಯಾಣದ ಬಳಲಿಕೆ ಇಳಿದಿತ್ತು. ಮೈಯೆಲ್ಲ ಹಗುರವಾದ ಭಾವ. ಎದ್ದವನು ಸುತ್ತ ಯಾರೂ ಕಾಣಿಸದೆ ಇದ್ದಾಗ ಅಡುಗೆ ಮನೆಯಲ್ಲಿ ಹಣಿಕಿದನು. ಅಲ್ಲಿ ಈರಮ್ಮ ಒಲೆಯ ಮುಂದೆ ಕುಳಿತು ಕಾಫಿಯನ್ನು ಲೋಟಗಳಿಗೆ ಬಗ್ಗಿಸುತ್ತಿದ್ದಳು. ರಾಮಣ್ಣ ಬಂದಿದ್ದನ್ನು ನೋಡಿ ಒಲೆಯ ಶಾಖದ ವಲಯದಲ್ಲಿ ಮಣೆಯೊಂದನ್ನು ಹಾಕಿದಳು. ಹುಡುಗನಾಗಿದ್ದಾಗ ಒಲೆಯ ಬದಿ ಕಾಲು ಚಾಚಿ ಕುಳಿತುಕೊಳ್ಳುತ್ತಿದ್ದ ಆಪ್ಯಾಯಮಾನವಾದ ನೆನಪನ್ನು ತಂದುಕೊಂಡ ರಾಮಣ್ಣ 'ಹಿಂಗೆ ಒಲೆ ಮುಂದೆ ಕುಂತು ಯಾವ ಕಾಲ ಆಗಿತ್ತೋ' ಎಂದು ಹೇಳುತ್ತಾ ಬಂದು ಕುಳಿತುಕೊಂಡ. ಅಡುಗೆ ಮನೆಯನ್ನು ಪರಿಶೀಲಿಸುವಂತೆ ಸುತ್ತ ನೋಡಿದಾಗ ಅದರಲ್ಲಿಯೂ ಅಚ್ಚುಕಟ್ಟುತನ ಇದ್ದುದು ಗಮನಕ್ಕೆ ಬಂತು. ಪಾತ್ರೆಗಳು ಹೆಚ್ಚಿನ ಸಂಖ್ಯೆಯಲ್ಲಿ ಇರಲಿಲ್ಲ. ಆದರೆ ಇದ್ದ ಪಾತ್ರೆಗಳನ್ನು ಒಂದು ಶಿಸ್ತಿನಲ್ಲಿ ಜೋಡಿಸಿ ಇಡಲು ಅನುಕೂಲವಾಗುವಂತೆ ಗೋಡೆಯ ಪಕ್ಕದಲ್ಲಿ ಕಟ್ಟೆಗಳನ್ನು ಮಾಡಲಾಗಿತ್ತು. ತಾಮ್ರದ ಕೊಡಪಾನಗಳಲ್ಲಿ ನೀರು. ಪಾತ್ರೆಗಳನ್ನು ನಿಂತುಕೊಂಡು ತೊಳೆಯುವುದಕ್ಕೆ ಅನುಕೂಲವಾಗುವಂತೆ ಮೂಲೆಯಲ್ಲಿ ಎತ್ತರಿಸಿದ ಕಟ್ಟೆ ಇತ್ತು. 'ಇವೆಲ್ಲ ಮೊದಲು ಇರಲಿಲ್ಲ ಅಲ್ವ' ಎಂದು ಅವನು ಬೆರಗಿನಿಂದ ಕೇಳಿದಾಗ 'ಎಲ್ಲ ಲಿಂಗರಾಜು ಬಂದ

ಮೇಲೆ ಆಗಿದ್ದು. ಅವನೇ ಒಬ್ಬ ಗಾರೆ ಮೇಸ್ತ್ರಿ ಕರ್ಕಂಡು ಬಂದು ಮಾಡಿಸಿದ್ದನಂತೆ. ಬಗ್ಗಿಕೊಂಡು ಯಾಕೆ ಕಷ್ಟಪಡುತ್ತೀರಿ ಅಂತ ಅವ್ವಗೆ ಹೇಳಿದ್ದನಂತೆ' ಎಂದು ಈರಮ್ಮ ಸೋದರಳಿಯನ ಬಗ್ಗೆ ಮೆಚ್ಚುಗೆ ಸೂಚಿಸಿದಳು. ರಾಮಣ್ಣ ಮತ್ತೇನೂ ಲಂಬಿಸಿದೆ ಎದ್ದು ಜಗುಲಿಯ ಕಡೆಗೆ ಬಂದ. ಅಲ್ಲಿ ಕಾರಿನಿಂದ ಹೊರಬಂದು ಆಚೀಚೆ ನೋಡುತ್ತಿದ್ದ ಡ್ರೈವರ್ ಹುಸೇನಿಗೆ ಕಾಫಿ ಕೊಡುವಂತೆ ಈರಮ್ಮನಿಗೆ ಕೂಗಿ ಹೇಳಿ ಅಂಗಳ ಇಳಿದು ಮನೆಯ ಎದುರಿಗೆ ಇದ್ದ ತೋಟದ ಕಡೆ ಹೆಜ್ಜೆ ಹಾಕಿದ.

ಮನೆಯ ಎದುರಿಗೆ ಸುತ್ತ ಕಳ್ಳಿ ಬೇಲಿ ಇದ್ದ ತೋಟ. ತಮ್ಮ ಪಾಲಿಗೆ ಬಂದದ್ದೇ ಎರಡು ಎಕರೆ ತರಿ ಜಮೀನು ಎಂದು ಅಪ್ಪಯ್ಯ ಹೇಳುತ್ತಿದ್ದ. ಗದ್ದೆಯಲ್ಲಿ ಒಂದು ಎಕರೆಯಷ್ಟು ಜಾಗದಲ್ಲಿ ಅಡಿಕೆ ತೋಟ ಎಬ್ಬಿಸಿದ್ದನ್ನು ಬಾಲ್ಯದಿಂದಲೇ ನೋಡಿದ್ದ ರಾಮಣ್ಣ. ಗದ್ದೆಯ ಎರಡೂ ಕಡೆ ವಿಸ್ತರಿಸಿದ ಸರ್ಕಾರಿ ಜಾಗದಲ್ಲಿ ಗಿಡಗಂಟೆಗಳನ್ನು ಸವರಿ ಚೊಕ್ಕ ಮಾಡಿಕೊಂಡಿದ್ದರು. ಆ ಜಾಗ ಎತ್ತು ಮೇಯಿಸುವ ಬ್ಯಾಣವೂ ಆಗಿತ್ತು, ಅಪ್ಪಯ್ಯನ ಜೊತೆ ಅಣ್ಣಯ್ಯನೂ ಸೇರಿಕೊಂಡ ಮೇಲೆ ಪ್ರತಿ ವರ್ಷ ಸ್ವಲ್ಪ ಸ್ವಲ್ಪ ಜಾಗವನ್ನು ಸವರಿ ಚೊಕ್ಕ ಮಾಡಿಕೊಳ್ಳುತ್ತಾ ಐದಾರು ಎಕರೆಯಷ್ಟು ಜಾಗಕ್ಕೆ ಸುತ್ತ ಬೇಲಿ ಹಾಕಿ ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದು ಅವನ ಗಮನದಲ್ಲಿತ್ತು. ಊರಲ್ಲಿ ಎಲ್ಲ ಕುಟುಂಬದವರೂ ತಮ್ಮ ತಮ್ಮ ತರಿ ಜಮೀನಿಗೆ ಹೊಂದಿಕೊಂಡ ಜಾಗವನ್ನು ಒತ್ತುವರಿ ಮಾಡಿಕೊಂಡು ಸುತ್ತ ಬೇಲಿ ಹಾಕಿ ಸ್ವಾಧೀನಪಡಿಸಿಕೊಂಡು ಅದರಲ್ಲಿ ಏನನ್ನಾದರೂ ಬೆಳೆದುಕೊಳ್ಳುತ್ತಿದ್ದುದನ್ನು ಅವನು ಊಹಿಸಿದ್ದ. ತೋಟದಲ್ಲಿ ಅಡಿಕೆ ಮರಗಳು ಸೊಂಪಾಗಿದ್ದವು. ಅಲ್ಲಲ್ಲಿ ಮೆಣಸಿನ ಬಳ್ಳಿಗಳನ್ನು ಹಬ್ಬಿಸಲಾಗಿತ್ತು. ಬಾಳೆಯೂ ಸಾಕಷ್ಟಿತ್ತು. ಕೆಲವು ಕಡೆ ಏಲಕ್ಕಿ ಗಿಡಗಳನ್ನೂ ಹಾಕಿದ್ದರು. ತೋಟಕ್ಕೆ ಬಿಗಿಯಾದ ಬೇಲಿಯನ್ನು ಮಾಡಿಕೊಂಡಿದ್ದರು. ಕಡಿಮೆ ಜಾಗದಲ್ಲಿ ಹೆಚ್ಚಿನ ಆದಾಯ ಬರುವಂತೆ ಮಾಡಿಕೊಂಡ ಅಪ್ಪಯ್ಯನ ಕೃಷಿ ತಜ್ಞತೆಗೆ ರಾಮಣ್ಣನಲ್ಲಿ ಮೆಚ್ಚುಗೆ ಮೂಡಿತು.

ಅಪ್ಪಯ್ಯನ ಸಾವಿನ ಸುದ್ದಿ ತಂದಿದ್ದ ನಾಗರಾಜನ ಪತ್ರ ಓದಿದ ಮೇಲೆ ಅವನಿಗೆ ಊರಿನ ನೆನಪು ಜಾಗೃತವಾಗಿ ಬಹಳ ವರ್ಷಗಳ ನಂತರ ಹೋಗುವುದಕ್ಕೆ ಒತ್ತಾಸೆಯಾಗಿತ್ತು. ಬೆಂಗಳೂರಿನಿಂದ ಏಳೆಂಟು ಗಂಟೆಗಳ ಪ್ರಯಾಣದಲ್ಲಿ ಅವನಿಗೆ ನಾನಾ ಯೋಚನೆಗಳು ಬರುತ್ತಿದ್ದವು. ಅಪ್ಪಯ್ಯನಿಗೆ ತಾವಿಬ್ಬರೇ ಗಂಡುಮಕ್ಕಳು. ಅಕ್ಕನಿಗೆ ಮದುವೆ ಮಾಡಿಕೊಟ್ಟಿರುವುದರಿಂದ ಒಟ್ಟು ಆಸ್ತಿಯಲ್ಲಿ ಇಬ್ಬರಿಗೆ ಸಮಪಾಲು ಸಿಗಬೇಕಾಗುತ್ತದೆ ಎಂಬ ಸೂಚನೆಯೂ ಪ್ರಯಾಣ ಕಾಲದಲ್ಲಿ ಹೊಳೆದಿತ್ತು. ಬೆಂಗಳೂರಿನ ಸುತ್ತಮುತ್ತ ಭೂಮಿಗೆ ಇರುವ ಬೆಲೆಯ ಬಗ್ಗೆ ಅರಿವಿದ್ದ ಅವನಿಗೆ ಊರಲ್ಲಿನ ಆಸ್ತಿಯಲ್ಲಿ ತನಗೆ ಇರುವ ಹಕ್ಕನ್ನು ಪಡೆಯುವುದು ತನ್ನ ಮಗನ ಭವಿಷ್ಯದ ದೃಷ್ಟಿಯಿಂದಲೂ ಅಗತ್ಯ ಎನಿಸುವ ಭಾವ ಮೂಡಿತು. ಅವನಿದ್ದ ಬಡಾವಣೆಯಲ್ಲಿ ಚದರ ಅಡಿಗೆ ಹದಿನೆಂಟು ಇಪ್ಪತ್ತು ಸಾವಿರದಂತೆ ಇದ್ದ ಮೌಲ್ಯವನ್ನು ಅವನು ಲೆಕ್ಕ ಹಾಕುತ್ತಾ ಊರಲ್ಲಿ ಒಂದು ಎಕರೆಯಷ್ಟು ಜಾಗ ಸ್ವಂತದ್ದಾಗಿ ಬಂದರೂ ಅದು ಹೆಚ್ಚಿನ ಬೆಲೆ ಬಾಳುತ್ತದೆ ಎನಿಸಿತು. ಎಷ್ಟೇ ಆಸ್ತಿ ಇರಲಿ, ಅಪ್ಪ ತೀರಿಕೊಂಡ ನಂತರ ಅವನ ಆಸ್ತಿಯನ್ನು ಮಕ್ಕಳು ಹಂಚಿಕೊಳ್ಳುತ್ತ ಇದ್ದುದನ್ನು ಅವನ ಸಹೋದ್ಯೋಗಿಗಳಿಂದ ಕೇಳಿದ್ದ. ಆದ್ದರಿಂದ 'ಹೇಗೂ ಊರಿಗೆ ಹೋಗುತ್ತಿದ್ದೇನೆ. ಅಪ್ಪಯ್ಯನ ಆಸ್ತಿಯನ್ನು ಪಾಲು ಮಾಡಿಕೊಂಡೇ ಬರುವುದು' ಎಂಬ ಸೂಚನೆ ಹೊಳೆದಿತ್ತು. ಅದು ಸಮಯ ಸರಿದಂತೆ ದೃಢವಾಗತೊಡಗಿತ್ತು. ಅದೇ ದೃಷ್ಟಿಯಿಂದ ಅವನು ತೋಟದ ಸುತ್ತ ತಿರುಗಾಡಲು ಹೊರಟಿದ್ದ. ಒಂದೊಂದು ಸಾಲನ್ನು ನಿಧಾನವಾಗಿ ದಾಟುತ್ತಾ ಸುತ್ತಮುತ್ತ ನೋಡುತ್ತ ಅದರ ಸಾಂದ್ರತೆಯನ್ನು ಅನುಭವಿಸುತ್ತಿದ್ದವನಿಗೆ ಹಿಂದಿನಿಂದ ಹೆಜ್ಜೆಯ ಸಪ್ಪಳವಾಗಿದ್ದು ತಿರುಗಿ ನೋಡುವಂತೆ ಮಾಡಿತು. ತಲೆಗೆ

ಹಾಳೆಟೋಪಿಯನ್ನು ಹಾಕಿಕೊಂಡಿದ್ದು ಸಣ್ಣದೊಂದು ಕತ್ತಿಯನ್ನು ಹಿಡಿದಿದ್ದ ವ್ಯಕ್ತಿ ಇವನು ತಿರುಗಿ ನೋಡುತ್ತಲೂ 'ನಮಸ್ಕಾರ... ಯಾವಾಗ ಬಂದೆ ರಾಮಣ್ಣ' ಎಂದ. ಊರಿನವನೇ.. ಆದರೂ ಯಾರೆಂದು ನೆನಪಾಗುತ್ತಿಲ್ಲ ಎಂದುಕೊಂಡವನು ಅದೇ ಅಪರಿಚಿತ ಭಾವದಲ್ಲಿ 'ನಮಸ್ಕಾರ, ಯಾರೂಂತ ಗೊತ್ತಾಗಲಿಲ್ಲ..' ಎಂದ. 'ನಾನು ಸೋಮ, ನೀನು ಮೇಷ್ಟ್ರಾಗಿ ಬತ್ತಾ ಇದ್ದಾಗ ಕುರಿ ಮೇಸ್ತಾ ಇದ್ದೆ..' ಎಂದು ಪರಿಚಯದ ಸುಳಿವು ನೀಡಿದ. 'ಓಹ್, ಸೋಮಣ್ಣ... ನಿನಗೆ ಊರಿನ ಹುಡುಗರೆಲ್ಲ ಹಂಗೇ ತಾನೇ ಕರಿಯಾದು..' ಎಂದು ಹಿಂದಿನ ಪರಿಚಯದ ಲಯಕ್ಕೆ ಬಂದ. ಉಭಯಕುಶಲೋಪರಿಯಾಯಿತು. 'ಸೋಮಣ್ಣ, ಈ ತ್ವಾಟದಲ್ಲಿ ಎಷ್ಟು ಅಡಿಕೆ ತಗೀತಾರೋ ನಮ್ಮ ಮನೆಯೋರು?' ಎಂದು ಕೇಳಿದ. 'ಎಷ್ಟು ಅಂತ ಹೆಂಗೆ ಹೇಳಲಿ ರಾಮಣ್ಣ, ಹದಿನೈದು ಇಪ್ಪತ್ತು ವರ್ಷದ ಮರ. ನಾನೂರು ಮರ ಇದಾವೆ ಅಂತ ಹೋದ ವರ್ಷ ಬೇಸಾಯ ಮಾಡಿಸೋವಾಗ ಲಿಂಗ್ರಾಜ ಹೇಳಿದ್ದ. ನಾನೂರು ಮರ ಅಂದರೆ ಒಂದು ಎಕರೆ ತೋಟ. ಇಲ್ಲೆಲ್ಲ ಎಕರೆಗೆ ಆರು ಎಂಟು ಕ್ವಿಂಟಲ್ ಬರುತ್ತೇ ಅಂತ ಹೇಳ್ತಾರೆ. ಒಂದು ಹೆಚ್ಚು ಒಂದು ಕಡಿಮೆ...' ಎಂದು ತನ್ನ ಅಂದಾಜನ್ನು ಹೇಳಿದ. ಕ್ವಿಂಟಲ್ ಅಡಿಕೆಗೆ ಸರಾಸರಿ ಧಾರಣೆಯನ್ನು ರಾಮಣ್ಣ ಕೇಳಿಕೊಂಡ. ತೋಟದ ಕೆಲಸಕ್ಕೆ ಏನೇನು ಕೆಲಸ ಇರುತ್ತದೆ, ಎಷ್ಟು ದಿನ ಬೇಕಾಗುತ್ತದೆ ಎಂಬುದನ್ನು ವಿವರವಾಗಿ ಕೇಳಿದ. ಸೋಮಣ್ಣ ತನಗೆ ತಿಳಿದದ್ದನ್ನು ಹೇಳಿದ. ಅಲ್ಲಿಯವರೆಗೆ ತೋಟದಲ್ಲಿ ನಿಂತು ಮಾತಾಡುತ್ತಿದ್ದ ಅವರು ಮನೆ ಕಡೆ ತಿರುಗಿದಾಗ ರಾಮಣ್ಣ ತನ್ನ ಬೆಂಗಳೂರಿನ ಚಟುವಟಿಕೆಗಳನ್ನು ತಿಳಿಸುತ್ತಾ ಸೋಮಣ್ಣನಲ್ಲಿ ಆಸಕ್ತಿ ಮೂಡಿಸುವ ಪ್ರಯತ್ನ ಮಾಡಿದ. ಊರಲ್ಲಿ ಇದ್ದರೂ ಸಿನಿಮಾಗಳನ್ನು ಮನೆಯ ಟಿವಿಯಲ್ಲಿ ನೋಡುತ್ತಿದ್ದ ಸೋಮಣ್ಣನಿಗೆ ಒಮ್ಮೆಯಾದರೂ ರಾಮಣ್ಣನ ಯಾವ ಚಿತ್ರವನ್ನೂ ನೋಡಿದ ನೆನಪು ಬರಲಿಲ್ಲ. ಹಾಗೆ ಹೇಳಿದರೆ ಬೇಜಾರು ಮಾಡಿಕೊಳ್ಳಬಹುದು ಎಂದುಕೊಂಡ ಅವನು ರಾಮಣ್ಣ ಹೇಳುತ್ತಾ ಇದ್ದುದನ್ನು ಆಸಕ್ತಿ ಇದ್ದವನಂತೆ ಕೇಳಿಸಿಕೊಂಡ.

ಅವರು ಮನೆಗೆ ವಾಪಸು ಬರುವಾಗ ಕತ್ತಲಾಗಿತ್ತು. ಡ್ರೈವರ್ ಹುಸೇನಿಯೂ ರಸ್ತೆಗುಂಟ ಸಂಜೆಯ ವಿಹಾರ ನಡೆಸಿ ವಾಪಸಾಗಿದ್ದ. ಅವರು ಮನೆಯೊಳಕ್ಕೆ ಬಂದಾಗ ಜಗುಲಿಯಲ್ಲಿ ಯಲ್ಲನಾಯ್ಕರೂ, ಲಿಂಗರಾಜನೂ ಸಣ್ಣ ದನಿಯಲ್ಲಿ ಮಾತಾಡುತ್ತಿದ್ದವರು ಇವರು ಬಂದಾಗ ಮಾತು ನಿಲ್ಲಿಸಿದರು. ಯಲ್ಲನಾಯ್ಕರೇ 'ವಾಕಿಂಗ್ ಹೋಗಿದ್ದಾ..?' ಎಂದು ವಿಚಾರಿಸಿದರು. ಜೊತೆಗೆ ಸೋಮಣ್ಣ ಬಂದುದನ್ನೂ ಗಮನಿಸಿ ಅವನಿಗೆ ಹೇಳಿದ್ದ ಕೆಲಸದ ಬಗ್ಗೆ ವಿಚಾರಿಸಿದರು. ಅವನು ಏನೋ ಸಬೂಬು ಹೇಳಿ ಲಿಂಗರಾಜನನ್ನು ಮನೆಯಿಂದ ಹೊರಕ್ಕೆ ಕರೆದುಕೊಂಡು ಹೋದ. ಅಂಥದ್ದೆಲ್ಲ ನಿತ್ಯವೂ ನಡೆಯುತ್ತಿದ್ದರಿಂದ ಯಲ್ಲನಾಯ್ಕರಿಗೆ ಅದರಲ್ಲಿ ವಿಶೇಷವೇನೂ ಕಾಣಿಸಲಿಲ್ಲ. ರಾಮಣ್ಣನಿಗೆ ಮಾತ್ರ ಸೋಮಣ್ಣ ಅದ್ಯಾಕೆ ಬಂದ ತಕ್ಷಣ ಲಿಂಗರಾಜನನ್ನು ಕರೆದುಕೊಂಡು ಹೋದ ಎಂಬುದು ಪ್ರಶ್ನೆಯಾಯಿತು. ತಾನು ತೋಟದಲ್ಲಿ ಮಾತಾಡಿದ್ದೆಲ್ಲವನ್ನೂ ಹೇಳುತ್ತಾನೆಯೇ... ಅಷ್ಟಕ್ಕೂ ಹೇಳಿದರೂ ಅದರಲ್ಲಿ ತಪ್ಪೇನು ಎಂದು ತನ್ನೊಳಗೆ ಯೋಚಿಸಿ ಸುಮ್ಮನಾದ. ಅವನು ಮೊದಲಿಂದಲೂ ಅಣ್ಣಯ್ಯನೆಂದು ಕರೆಯುತ್ತಿದ್ದ ಯಲ್ಲನಾಯ್ಕರಲ್ಲಿ ಬಹಳ ವರ್ಷಗಳ ನಂತರ ಬಂದಿರುವುದರಿಂದ ಮಾತು ಆರಂಭಿಸುವ ಸಂಕೋಚ ಅನುಭವಿಸುತ್ತಾ ಸ್ವಲ್ಪ ಹೊತ್ತು ಕುಳಿತ. ಅಷ್ಟರಲ್ಲಿ ಕರಂಟು ಹೋಗಿ ಜಗುಲಿಯಲ್ಲಿ ಕತ್ತಲು ದಟ್ಟವಾಯಿತು. ಅದು 'ಕರಂಟು ಹಿಂಗೇ ಹೋಗ್ತಾ ಇರುತ್ತಾ?' ಎಂದು ಮಾತು ಆರಂಭಿಸಲು ನೆಪವಾಯಿತು. ಯಲ್ಲನಾಯ್ಕರು ಹೆಚ್ಚೇನೂ ಆಸಕ್ತಿ ತೋರದೆ ಕೇಳಿದ್ದಕ್ಕೆ ಉತ್ತರ ಕೊಡುವಂತೆ 'ಮಳೆಗಾಲದಲ್ಲಿ ಕರಂಟೇ ಇರಲ್ಲ. ಈಗ ಇದ್ದುದೇ ಹೆಚ್ಚು..' ಎಂದರು.

ಅಷ್ಟರಲ್ಲಿ ಹೊರಗಡೆ ಸೋಮಣ್ಣನೊಂದಿಗೆ ಹೋಗಿದ್ದ ಲಿಂಗರಾಜ ಮನೆಯೊಳಕ್ಕೆ ಬಂದ. ಅವನು ಬರುತ್ತಲೂ ಕರಂಟು ಬಂದು ಬೆಳಕಾಯಿತು. ಅವನು ನೇರವಾಗಿ ಅಡುಗೆ ಮನೆಗೆ ಹೋದ. ರಾಮಣ್ಣ ಬೆಳಕಿನಲ್ಲಿ ಅಣ್ಣಯ್ಯನತ್ತ ನೋಡುತ್ತ ಕುಳಿತ. ಮತ್ತೆ ಅವನೇ ಏನಾದರೂ ಮಾತು ಆರಂಭಿಸುವುದು ಅನಿವಾರ್ಯವಾಯಿತು. ಮಳೆ ಬೆಳೆಯ ವಿಚಾರ ತೆಗೆದ. ಅದರ ಬಗ್ಗೆ ರಾಮಣ್ಣ ಏನಾದರೂ ಕೇಳುವುದು, ಅದಕ್ಕೆ ಯಲ್ಲನಾಯ್ಕರು ಚುಟುಕಾಗಿ ಉತ್ತರ ನೀಡುವುದು ಮುಂದುವರಿಯಿತು.

ಯಲ್ಲನಾಯ್ಕರು ಮೊದಲಿನಿಂದಲೂ ಮಿತಭಾಷಿ. ತಾವಾಗಿ ಮಾತು ಆರಂಭಿಸುವುದು ಕಡಿಮೆ. ಅರವತ್ತಾಗದಿದ್ದರೂ ಆಳ್ತನದಲ್ಲಿ ಎಪ್ಪತ್ತು ಮುಟ್ಟಿದವರಂತೆ ಕಾಣುತ್ತಿದ್ದರು. ಪೇಟೆಯ ಹವಾನಿಯಂತ್ರಿತ ವಲಯದಲ್ಲಿಯೇ ತನ್ನ ಕಾಲೇಜು, ಸಿನಿಮಾ, ಉಪನ್ಯಾಸಗಳ ಚಟುವಟಿಕೆಯಲ್ಲಿ ನಿರತನಾಗಿದ್ದ ರಾಮಣ್ಣ ಯಲ್ಲನಾಯ್ಕರಿಗಿಂತ ಎರಡೇ ವರ್ಷ ಕಿರಿಯನಾಗಿದ್ದರೂ ಅವರಿಗಿಂತ ಹತ್ತು ಹದಿನೈದು ವರ್ಷ ಚಿಕ್ಕವನಂತೆ ಕಳೆಕಳೆಯಾಗಿ ಕಾಣುತ್ತಿದ್ದುದನ್ನು ಈರಮ್ಮ ಗುರುತಿಸಿ ಅದನ್ನು ಅತ್ತಿಗೆ ಪಾರ್ವತಮ್ಮನಿಗೆ ಹೇಳಿದ್ದಳು. 'ಪೇಟೆ ಹತ್ರ ಇದಾರಲ್ಲ, ನಮ್ಮ ಹಾಗೆ ಬಿಸಿಲಿಗೆ ಕಾಯಬೇಕಾ, ಮಳೆಗೆ ತೋಯಬೇಕಾ? ನೀವು ಎಂತ ಹೇಳ್ತೀರಿ ಅತ್ತಿಗೆಮ್ಮ' ಎಂದು ಆಕೆ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಳು. ಅಡುಗೆ ಮನೆಯಲ್ಲಿ ಚಿಕ್ಕಪ್ಪನ ರಾತ್ರಿಯ ಆತಿಥ್ಯಕ್ಕೆ ವ್ಯವಸ್ಥೆ ಮಾಡುವುದರಲ್ಲಿ ನಿರತನಾಗಿದ್ದ ಲಿಂಗರಾಜ ಅವರಿಬ್ಬರ ಮಾತನ್ನು ಕೇಳಿಸಿಕೊಂಡು ಸುಮ್ಮಗೆ ನಗೆಯಾಡಿದ್ದ. ಅತ್ತಿಗೆ ನಾದಿನಿಯರಿಬ್ಬರೂ ಗಂಗಮ್ಮನವರನ್ನು ಒಲೆದಸಿ ಕುಳ್ಳಿರಿಸಿ ಅಕ್ಕಿ ರೊಟ್ಟಿ ಸುಟ್ಟರು. ಕೆಂಪಕ್ಕಿ ಅನ್ನ ಮಾಡಿದ್ದರು. ಅನ್ನಕ್ಕೆ ಹುಳಿಸಾರು. ಈರಮ್ಮನೇ ಮುತುವರ್ಜಿ ವಹಿಸಿ ರಾಮಣ್ಣನಿಗಾಗಿ ಸಾರಿಗೆ ಮಸಾಲೆ ಅರೆದಿದ್ದಳು. ಸೂತಕದ ಮನೆಯಾಗಿದ್ದರೂ ಅಪರೂಪಕ್ಕೆ ಬಂದ ರಾಮಣ್ಣನಿಗಾಗಿ ಮಹಿಳೆಯರು ಸಂಭ್ರಮಗೊಂಡಿದ್ದರು. ಲಿಂಗರಾಜ ತನ್ನಷ್ಟಕ್ಕೆ ಎಷ್ಟು ಬೇಕೋ ಅಷ್ಟು ಮಾತು ಆಡಿದ್ದ. ಅಪ್ಪಯ್ಯ ಸೂಚಿಸಿದ್ದಂತೆ ರಾಮಣ್ಣನ ಆತಿಥ್ಯಕ್ಕೂ ವ್ಯವಸ್ಥೆ ಮಾಡಿದ್ದ. ಅದಕ್ಕಾಗಿ ಸಂಜೆಯ ಹೊತ್ತಿಗೆ ಪೇಟೆ ಕಡೆಗೂ ಹೋಗಿ ಬಂದಿದ್ದ.

ರೊಟ್ಟಿ ತಟ್ಟಿ ಹೆಂಚಿನಲ್ಲಿ ಬೇಯಿಸಿದ ನಂತರ ಕೆಂಡದಲ್ಲಿ ಹದವಾಗಿ ಸುಡುತ್ತಿದ್ದಾಗ ಈರಮ್ಮ ಲಿಂಗರಾಜನನ್ನು ಕರೆದು ಎಲ್ಲರನ್ನೂ ಊಟಕ್ಕೆ ಕರೆತರಲು ಹೇಳಿದಳು. ಮಧ್ಯಾಹ್ನದಂತೆಯೇ ಎಲ್ಲರೂ ಅಡುಗೆ ಮನೆಗೆ ಬಂದು ಸಾಲಾಗಿ ಮಣೆಯ ಮೇಲೆ ಕುಳಿತರು. ಡ್ರೈವರ್ ಹುಸೇನಿ ಮಧ್ಯಾಹ್ನ ತಾನು ಜಗುಲಿಯಲ್ಲಿಯೇ ತಟ್ಟೆಯಲ್ಲಿ ಹಾಕಿಸಿಕೊಂಡು ಊಟ ಮುಗಿಸಿದ್ದ. ರಾತ್ರಿ ಊಟಕ್ಕೂ ಅವನು ತನಗೆ ಜಗುಲಿಯಲ್ಲೇ ಕೊಡುವಂತೆ ಲಿಂಗರಾಜನಲ್ಲಿ ಹೇಳಿದ್ದ. ತಟ್ಟೆಗೆ ಬಿಸಿ ರೊಟ್ಟಿಯನ್ನೂ ಕೆಂಪು ಮೆಣಸಿನಕಾಯಿ ಹುರಿದು ಸಿದ್ಧಪಡಿಸಿದ ತಾಜಾ ಮಸಾಲೆ ಹಾಕಿದ್ದ ಬಿಸಿ ಬಿಸಿ ಕೋಳಿ ಸಾರನ್ನು ಹಾಕಿದಾಗ ಅದರ ಪರಿಮಳವೇ ರಾಮಣ್ಣನನ್ನು ಬಾಲ್ಯದ ದಿನಗಳಿಗೆ ಕೊಂಡೊಯ್ದಿತು. ಹಬೆಯಾಡುತ್ತಿದ್ದ ಸಾರನ್ನು ಆಘ್ರಾಣಿಸಿ ರೊಟ್ಟಿಯನ್ನು ಅದ್ದಿ ಮೊದಲು ತುತ್ತನ್ನು ಸವಿದ. ಬೆಂಗಳೂರಿನಲ್ಲಿದ್ದಾಗ ಲಿಂಗರಾಜನಿಗೆ ಚಿಕ್ಕಪ್ಪನ ಊಟದ ಅಭಿರುಚಿಯ ಪರಿಚಯವೇ ಇರಲಿಲ್ಲ. ಆದರೂ ಮನೆಯ ರಿವಾಜಿನಂತೆ ಬಣ್ಣದ ದ್ರವ ಇದ್ದ ಬಾಟಲಿಯನ್ನು ತಂದು ಅಪ್ಪಯ್ಯನಿಗೆ ವಾಡಿಕೆಯಂತೆ ಬಗ್ಗಿಸಿದ. ಯಲ್ಲನಾಯ್ಕರೇ 'ನೀನು ದುಬಾರಿ ಮಾಲು ತಗೋಳ್ಳೋನೋ ಏನೊ. ನಮ್ಮಲ್ಲಿ ಅಂಥವೆಲ್ಲ ಸಿಗಲ್ಲ...' ಎಂದು ರಾಮಣ್ಣನಿಗೆ ಉಪಚರಿಸಿದರು. 'ಹಂಗೇನೂ ಇಲ್ಲ ಮಾರಾಯ. ನಾನೂ ಅಪರೂಪಕ್ಕೆ ತಗೊಳ್ಳೊದು. ಇಂಥದ್ದೇ ಅಂತೇನೂ ಇಲ್ಲ' ಎಂದದ್ದು ಕೇಳಿ ಲಿಂಗರಾಜನಿಗೆ ಧೈರ್ಯ ಬಂತು. ತಟ್ಟೆಯ ಮುಂದೆ ಲೋಟವನ್ನಿಟ್ಟು ರಾಮಣ್ಣನೇ ತನಗೆ ಬೇಕೆನಿಸುವಷ್ಟು ಸುರಿದುಕೊಳ್ಳುವಂತೆ

ಬಾಟಲಿಯನ್ನೇ ಮುಂದೆ ಮಾಡಿದ. ರಾಮಣ್ಣ 'ಪರವಾಯಿಲ್ಲ ನೀನೇ ಹಾಕು. ಸ್ವಲ್ಪ ಸಾಕು' ಎಂದು ಹೇಳಿದ ಮೇಲೆ ಲಿಂಗರಾಜ ಉದಾರವಾಗಿಯೇ ಸುರಿದ. ಯಲ್ಲನಾಯ್ಕರು ತೆಗೆದುಕೊಂಡಂತೆ ಒಂದೇ ಉಸಿರಿಗೆ ತೆಗೆದುಕೊಳ್ಳುವುದಕ್ಕಿಂತ ಗುಟುಕು ಗುಟುಕಾಗಿ ಸೇವಿಸುತ್ತಾ ಅದಕ್ಕೆ ವ್ಯಂಜನವಾಗಿ ಕೋಳಿಸಾರಿನಲ್ಲಿ ಅದ್ದಿದ ರೊಟ್ಟಿಯನ್ನು ಬಳಸಿಕೊಂಡ. ಹಳ್ಳಿ ಮನೆಯಲ್ಲಿ ಒಂದೇ ಗುಟುಕಿಗೆ ಸೇವಿಸುವುದನ್ನು ಅವನು ಬಾಲ್ಯದ ದಿನಗಳಲ್ಲಿ ನೋಡಿದ್ದ. ಅವನು ಕೆಲಸಕ್ಕೆ ಸೇರಿದ ಮೇಲೆ, ಅದರಲ್ಲೂ ಕಾಲೇಜು ಉಪನ್ಯಾಸಕನಾಗಿ, ಜೊತೆಗೆ ಸಿನಿಮಾ ನಿರ್ಮಾಣದಲ್ಲಿ ತೊಡಗಿಕೊಂಡಾಗ ಹೊಸದಾಗಿ ಆಗಿದ್ದ ಮಿತ್ರರ ಬಳಗದಲ್ಲಿ ನಡೆಯುತ್ತಿದ್ದ ಮೋಜಿನ ಕೂಟಗಳಲ್ಲಿ ಅಪರೂಪಕ್ಕೆ ಭಾಗಿಯಾಗಿದ್ದರೂ ಹಳ್ಳಿ ಮನೆಯಲ್ಲಿ ಅದು ಬೇರೆಯೇ ರೀತಿಯಲ್ಲಿರುವುದು ಅವನಿಗೆ ಅರ್ಥವಾಗಿತ್ತು.

ರಾಮಣ್ಣನಿಗೆ ವರ್ಷಗಳ ನಂತರ ಹಳ್ಳಿಯಲ್ಲಿ ಸಿಗುವ ಬಣ್ಣದ ದ್ರವದ ಜೊತೆಗೆ ಅಕ್ಕಿರೊಟ್ಟಿಯೊಂದಿಗೆ ತಾಜಾ ಕೋಳಿ ಸಾರಿನ ಊಟ ವಿಶೇಷ ರುಚಿಯನ್ನು ನೀಡಿತ್ತು. ತೆಳುವಾಗಿ ಸುಟ್ಟಿದ್ದ ರೊಟ್ಟಿಯನ್ನು ಕೇಳಿ ಬಡಿಸಿಕೊಂಡ ಅವನು ಕೆಂಪಕ್ಕಿ ಅನ್ನವನ್ನು ಹುಳಿಸಾರಿನಲ್ಲಿ ಕಲೆಸಿ ಸಂತೃಪ್ತಿಯಿಂದಲೇ ಊಟ ಮುಗಿಸಿದ. ಊಟದ ನಂತರ ಮಧ್ಯಾಹ್ನದಂತೆಯೇ ತಾಂಬೂಲ ಸೇವಿಸಿದ. ಬೆಂಗಳೂರಿನಿಂದ ಬರುತ್ತಿದ್ದಾಗ ಹೊಳೆದಿದ್ದು ಸಂಜೆಯ ವೇಳೆಗೆ ತೋಟದಲ್ಲಿ ಸುತ್ತಾಡುವಾಗ ಖಚಿತ ಸ್ವರೂಪ ಪಡೆದಿದ್ದ ಅಪ್ಪಯ್ಯನ ಆಸ್ತಿಯ ಹಿಸ್ಸೆಯ ಪ್ರಸ್ತಾಪವನ್ನು ನೇರವಾಗಿ ಮಾಡುವ ಧೈರ್ಯವೂ ಊಟದ ನಂತರ ಬಂದಿತ್ತು. ತಾಂಬೂಲ ಸೇವನೆ ಮುಗಿದ ನಂತರ ಲಿಂಗರಾಜ ಮಲಗುವುದಕ್ಕೆ ಹಾಸುಗೆಯ ವ್ಯವಸ್ಥೆ ಮಾಡುತ್ತಿದ್ದಾಗ 'ಹೆಂಗೂ ಊರಿಗೆ ಬಂದಿದೀನಿ. ಅಪ್ಪಯ್ಯನ ಆಸ್ತಿಯನ್ನು ನಾವು ನಾವು ವಿಶ್ವಾಸದಿಂದ ಇದ್ದಾಗಲೇ ಭಾಗ ಮಾಡಿಕೊಂಡರೆ ಒಳ್ಳೆಯದಲ್ವೆ' ಎಂದು ಯಲ್ಲನಾಯ್ಕರಲ್ಲಿ ನೇರವಾಗಿ ಪ್ರಸ್ತಾಪಿಸಿದ. 'ಹೌದಲ್ಲ ಮಾರಾಯ, ದೇವರು ಬಂದಾಗೆ ಬಂದಿದೀಯ. ನಾಳೇನೆ ನೀನು ಹಿಸ್ಸೆ ಪತ್ರ ಮಾಡಿಸಾಕೆ ಏನೇನು ಬೇಕೋ ಅದನ್ನೆಲ್ಲ ಮಾಡಿಸಿ ಬಿಡು. ಅಪ್ಪಯ್ಯನ ಆಸ್ತಿಗೆ ನೀನೂ ಹಕ್ಕುದಾರನೇ. ಬೇಗ ಮಾಡಿಸಿ ರಿಜಿಸ್ಟ್ರು ಮಾಡಿಸಿಯೇ ಹೋಗು' ಎಂದು ಯಲ್ಲನಾಯ್ಕರು ಹೇಳಿದ್ದು ಅವನಿಗೆ ಸಮಸ್ಯೆ ಇಷ್ಟು ಬೇಗ ಪರಿಹಾರವಾಯಿತೇ ಎಂದು ಬೆರಗಾಯಿತು. ಅಣ್ಣಯ್ಯನಿಂದ ಮಾತ್ರವಲ್ಲ, ಅವನೊಂದಿಗೆ ದುಡಿಯಲು ನಿಂತಿದ್ದ ಲಿಂಗರಾಜನಿಂದಲೂ ತನ್ನ ಪ್ರಸ್ತಾಪಕ್ಕೆ ವಿರೋಧ ಬರಬಹುದೆಂದು ಅವನು ನಿರೀಕ್ಷೆ ಮಾಡಿದ್ದ. ಇಷ್ಟು ಬೇಗ ಅಣ್ಣ ಒಪ್ಪಿಕೊಂಡದ್ದು ಅವನಿಗೆ ಆಸ್ತಿಯನ್ನೇ ಪಡೆದುಕೊಂಡಷ್ಟು ನಿರಾಳವಾಯಿತು. ಉಳಿದ ವಿಷಯಗಳನ್ನು ನಾಳೆ ಮಾತಾಡಬಹುದೆಂದು ಹಗುರವಾದ. ಲಿಂಗರಾಜ ಲೋಟಕ್ಕೆ ಉದಾರವಾಗಿ ಸುರಿದಿದ್ದ ಬಣ್ಣದ ದ್ರವವೂ ಅವನನ್ನು ನಿದ್ದೆಗೆ ಸರಿಯಲು ಉತ್ತೇಜಿಸಿತ್ತು.

* * *

## ಅಧ್ಯಾಯ– 10

# ಸರ್ಕಾರಿ ಕಚೇರಿಯಲ್ಲಿ

ಬೆಳಗ್ಗೆ ಏಳುವಾಗ ರಾಮಣ್ಣನಿಗೆ ಮನಸ್ಸೆಲ್ಲ ಹಗುರವಾಗಿತ್ತು. ತಂದೆಯ ಆಸ್ತಿಯನ್ನು ಹಂಚಿಕೊಳ್ಳುವ ಪ್ರಸ್ತಾಪವೇ ದೊಡ್ಡ ಹಗರಣ ಆಗುವುದನ್ನು ಅವನ ಮಿತ್ರವರ್ಗದಲ್ಲಿ ಕಂಡಿದ್ದ. ಇಲ್ಲಿ ಅಂಥದ್ದಕ್ಕೇನೂ ಆಸ್ಪದ ಆಗದಂಥ ಪರಿಸರ. ಅಣ್ಣನ ಬಗ್ಗೆ ಮಾತ್ರವಲ್ಲ, ಅಣ್ಣನ ಮಕ್ಕಳ ಬಗ್ಗೆಯೂ ಅವನಿಗೆ ವಿಶೇಷ ಪ್ರೀತಿ ಮೊಳೆಯಿತು. ಇಷ್ಟು ದಿನ ನಿರ್ಲಕ್ಷ್ಯ ಮಾಡಿದ್ದರ ಬಗ್ಗೆ ಅಪರಾಧಿ ಭಾವವೂ ಕಾಡಿತು. ಅದೇ ಹುರುಪಿನಲ್ಲಿ ಎದ್ದು ನಿತ್ಯ ವಿಧಿಗಳನ್ನು ತೀರಿಸಿಕೊಂಡು ಅಡುಗೆ ಮನೆಗೆ ಪ್ರವೇಶಿಸಿದಾಗ ಅಲ್ಲಿ ಕುಳಿತು ತಿಂಡಿ ತಿನ್ನುತ್ತಿದ್ದ

ಲಿಂಗರಾಜ ಪಕ್ಕಕ್ಕೆ ಸರಿದು ಇವನಿಗೆ ಜಾಗ ಮಾಡಿಕೊಟ್ಟ. ಇವನು ಕುಳಿತಾಗ ಈರಮ್ಮ 'ಈಗಲೇ ನಿನಗೂ ತಿಂಡಿ ಕೊಡಲಾ.. ಇಲ್ಲ, ಬಿಸಿ ನೀರು ಕುಡೀತಿಯಾ' ಎಂದು ಕೇಳಿದಳು. 'ಮೊದಲು ಸ್ವಲ್ಪ ಬಿಸಿ ನೀರು ಕೊಡು, ಆಮೇಲೆ ತಿಂಡಿ' ಎಂದ. ಲಿಂಗರಾಜನಿಂದ ರಾಮಣ್ಣನ ಬೆಳಗಿನ ಅಭ್ಯಾಸಗಳನ್ನು ಕೇಳಿ ತಿಳಿದಿದ್ದ ಈರಮ್ಮ ಬಿಸಿ ನೀರನ್ನು ಕಾಯಿಸಿ ಇಟ್ಟಿದ್ದಳು. ನೀರು ಕುಡಿಯುತ್ತಾ ಇದ್ದಂತೆ ಯಲ್ಲನಾಯ್ಕರೂ ಅಡುಗೆ ಮನೆಗೆ ಬಂದರು. ಅವರಿಗೆ ಬಾಳೆ ಎಲೆಯ ಮೇಲೆ ಹಬೆಯಾಡುತ್ತಿದ್ದ ಕಡುಬನ್ನು ಹಾಕಿ ರಾತ್ರಿಯ ಊಟಕ್ಕೆ ಬಡಿಸಿದ್ದ ಕೋಳಿ ಸಾರನ್ನು ಹಾಕಿದಳು. ನಿನ್ನೆ ರಾತ್ರಿಯೇ ಅವರು ಹಿಸ್ಸೆ ಮಾಡಿಸುವ ಹೊಣೆಯನ್ನು ವಹಿಸಿದ್ದರಿಂದ ಆ ಬಗ್ಗೆ ಮುಕ್ತವಾಗಿ ಮಾತಾಡುವುದಕ್ಕೆ ರಾಮಣ್ಣನಿಗೆ ಅಡ್ಡಿ ಇರಲಿಲ್ಲ. ನೀರು ಕುಡಿದು ಲೋಟವನ್ನು ಕೆಳಕ್ಕೆ ಇಟ್ಟವನು 'ಅದಕ್ಕೆ ನಾವು ಸಬ್ ರಿಜಿಸ್ಟ್ರ ಕಚೇರಿಗೆ ಹೋಗಬೇಕಲ್ಲ..' ಎಂದು ರಾತ್ರಿ ಮಾಡಿದ್ದ ಪ್ರಸ್ತಾಪದ ಮುಂದುವರಿಕೆಯ ಸೂಚನೆ ನೀಡಿದ. ಆಸ್ತಿ ಹಿಸ್ಸೆಯ ಪ್ರಸ್ತಾಪವನ್ನು ಕೇಳಿಸಿಕೊಂಡಿದ್ದ ಲಿಂಗರಾಜ 'ಹಿಸ್ಸೆ ಪತ್ರ ರಿಜಿಸ್ಟ್ರ ಮಾಡಿಸುವುದು ಈಗ ಮೊದಲಿನ ಹಾಗಿಲ್ಲ. ತುಂಬಾ ಬದಲಾವಣೆ ಆಗಿರಬೇಕು. ಅದಕ್ಕೆ ಗೊತ್ತಿದ್ದವರನ್ನು ವಿಚಾರಿಸೋದು ಒಳ್ಳೇದು' ಎಂದು ಹೇಳುತ್ತಾ ಕೈ ತೊಳೆದುಕೊಂಡು ಎದ್ದು ಜಗುಲಿ ಕಡೆಗೆ ಹೊರಟ. 'ಹಂಗಾರೆ ತಾಲೂಕು ಆಫೀಸಿಗೆ ಹೋಗಿ ಬರೋದು ಒಳ್ಳೇದು. ಅಲ್ಲೇ ಸಬ್ ರಿಜಿಸ್ಟ್ರಾರ್ ಕಚೇರಿಯೂ ಇರುತ್ತಲ್ಲ, ನೀನೂ ಜೊತೆಗೆ ಬಂದು ಬಿಡು ಲಿಂಗ್ರಾಜ. ಅದೆಲ್ಲ ಹೇಗೆ ಅಂತ ಕೇಳಿಕೊಂಡೇ ಬರಾನ' ಎಂದು ರಾಮಣ್ಣ ಆಹ್ವಾನಿಸಿದ. 'ಆಗಲಿ ಚಿಕ್ಕಪ್ಪ' ಎಂದು ಲಿಂಗರಾಜ ಒಪ್ಪಿಗೆ ಸೂಚಿಸಿದ.

ತನ್ನೊಂದಿಗೆ ಲಿಂಗರಾಜನೂ ಬರುವುದು ಖಚಿತವಾದ ಮೇಲೆ ರಾಮಣ್ಣ ಬೇಗನೇ ತಿಂಡಿಯನ್ನು ತಿಂದು ಹೊರಡಲು ಸಿದ್ಧನಾದ. ಹುಸೇನಿ ಜಗುಲಿಯಲ್ಲಿ ಕುಳಿತು ತಿಂಡಿಯನ್ನು ಮುಗಿಸಿದ್ದ. ಮಲೆನಾಡಿನ ಕಡುಬು ಅವನಿಗೆ ವಿಚಿತ್ರ ಎನಿಸಿರಬೇಕು. 'ಒಳ್ಳೇ ಬಾಂಬ್ ಇದ್ದ ಹಾಗಿದೆ ಸರ್ ನಿಮ್ಮನೆ ತಿಂಡಿ' ಎಂದು ರಾಮಣ್ಣನಲ್ಲಿ ಹೇಳಿದಾಗ 'ಬೆಂಗಳೂರಲ್ಲಿ ಇವು ಕೆಲವು ಹೋಟಲಲ್ಲಿ ಸಿಗ್ತಾವೆ. ಇಲ್ಲಿ ರೊಟ್ಟಿ, ಕಡುಬು ನಿತ್ಯದ ತಿಂಡಿಗಳು' ಎಂದು ವಿವರಣೆ ಕೊಟ್ಟ. ಲಿಂಗರಾಜನೂ ಸಿದ್ಧನಾದ. ಅವನನ್ನು ಮುಂದಿನ ಸೀಟಿನಲ್ಲಿ ಕೂರಲು ಹೇಳಿದ ರಾಮಣ್ಣ ಹಿಂದೆ ಕುಳಿತ. 'ಮೊದಲು ತಾಲೂಕು ಆಫೀಸಿಗೆ?' ಎಂದು ಲಿಂಗರಾಜ ಮತ್ತೆ ಕೇಳಿದಾಗ 'ಅಲ್ಲಿಗೇ ಹೋಗೋಣ. ಲೆಟ್ಸ್ ಹೀಯರ್ ಫ್ರಂ ಹಾರ್ಸ್ ಮೌತ್.. ಅವರಿಂದಲೇ ಏನೂ ಅಂತ ಕೇಳಿಕೊಂಡರೆ ಯಾರು ಯಾರನ್ನೋ ಹಿಡಿದುಕೊಳ್ಳೋದು ತಪ್ಪುತ್ತದೆ' ಎಂದು ಸಮಜಾಯಿಶಿ ನೀಡಿದ ರಾಮಣ್ಣ.

ಹಳ್ಳೂರಿನಿಂದ ತಾಲ್ಲೂಕು ಕೇಂದ್ರಕ್ಕೆ ಇಪ್ಪತ್ತೈದು ಕಿಲೋಮೀಟರ್ ದೂರವಿದ್ದರೂ ಅಂಕುಡೊಂಕಿನ ರಸ್ತೆಯಾಗಿದ್ದರಿಂದ ಒಂದು ಗಂಟೆಯ ಸಮಯ ಹಿಡಿಯಿತು. ಹನ್ನೊಂದರ ಸುಮಾರಿಗೆ ಅವರು ತಾಲ್ಲೂಕಿನ ಸಬ್ ರಿಜಿಸ್ಟ್ರಾರ್ ಕಚೇರಿಗೆ ಬಂದರು. ಅವರಿಂದ ವಿವರ ಕೇಳುವುದು ಅನಗತ್ಯ ಎಂದು ಲಿಂಗರಾಜನಿಗೆ ಗೊತ್ತಿದ್ದರೂ ತಾನು ಬೇರೆ ಏನಾದರೂ ಹೇಳಿದರೆ ರಾಮಣ್ಣ ನಂಬಲಾರ ಎನಿಸಿದ್ದರಿಂದ ಸುಮ್ಮನೆ ಇದ್ದ. ಬೆಂಗಳೂರಿನಲ್ಲಿ ಪ್ರಶಸ್ತಿ ವಿಜೇತ ಸಿನಿಮಾ ನಿರ್ದೇಶಕನಾಗಿ ಉನ್ನತ ಅಧಿಕಾರಿಗಳನ್ನು ಸುಲಭವಾಗಿ ಭೇಟಿ ಆಗುತ್ತಿದ್ದ ರಾಮಣ್ಣನಿಗೆ ದೂರದ ತಾಲ್ಲೂಕಿನ ಅಧಿಕಾರಿಯ ಭೇಟಿ ಸುಲಭವಾಗಲಿಲ್ಲ. ಅಧಿಕಾರಿಯೊಂದಿಗೆ ಯಾರೋ ಕುಳಿತಿದ್ದು ಅವರೊಂದಿಗೆ ನಗೆ ಕುಶಾಲಿನಲ್ಲಿ ಮಾತಾಡುವುದು ಹೊರಗಡೆ ನಿಂತಿದ್ದ ಇವರಿಗೆ ಕೇಳಿಸುತ್ತಿತ್ತು. ರಾಮಣ್ಣ ಕಳಿಸಿದ್ದ ಪರಿಚಯದ ಚೀಟಿಯನ್ನು ನೋಡಿದ ಆ ಅಧಿಕಾರಿ ಹದಿನೈದು ಇಪ್ಪತ್ತು ನಿಮಿಷ ಕಾಯಿಸಿದ ನಂತರವೇ ಒಳಗೆ ಬರಮಾಡಿಕೊಂಡ. ಕುಳಿತುಕೊಂಡೇ 'ಏನು ಬೇಕಿತ್ತು?' ಎಂದು ಆತ

ಕೇಳಿದ್ದನ್ನು ನೋಡಿ ರಾಮಣ್ಣನಿಗೆ ಕೋಪ ಬಂತು. ಪತ್ರಿಕೆಗಳಲ್ಲಿ ತನ್ನ ಚಿತ್ರ ಸಹಿತ ಸುದ್ದಿಗಳು ಪ್ರಕಟವಾಗುತ್ತಿದ್ದರೂ ತಾಲ್ಲೂಕು ಮಟ್ಟದ ಅಧಿಕಾರಿಗೆ ತನ್ನ ಹೆಸರು ಗೊತ್ತಿಲ್ಲ ಎಂದರೆ ಇವರೆಲ್ಲ ಪತ್ರಿಕೆಗಳನ್ನು ನೋಡುವುದಿಲ್ಲವೇ ಎನಿಸಿತು. ತಾನು ಪರಿಚಯದ ಪತ್ರ ಕಳಿಸಿದರೂ ಅದರಲ್ಲಿನ ವಿವರಗಳನ್ನು ನೋಡದ ಅಧಿಕಾರಿಯ ಬಗ್ಗೆ ತೀವ್ರ ಅಸಮಾಧಾನ ಮೂಡಿತು. ಆತ ಹೇಳದಿದ್ದರೂ ಎದುರಿನ ಕುರ್ಚಿಯಲ್ಲಿ ಕುಳಿತ. ಕಾಲೇಜು ಉಪನ್ಯಾಸಕ ಎಂದು ಪರಿಚಯಿಸಿಕೊಂಡಾಗ ಸ್ವಲ್ಪ ಗೌರವದ ಭಾವ ತೋರಿದ ಅಧಿಕಾರಿ 'ಹೇಳಿ ಸಾರ್... ಏನು ಬಂದದ್ದು?' ಎಂದದ್ದು ಕೊಂಚ ನಿರಾಳವಾಯಿತು. ರಾಮಣ್ಣ ತನ್ನ ಊರು, ತಂದೆ ತೀರಿಕೊಂಡ ನಂತರ ಆಸ್ತಿಯನ್ನು ಅಣ್ಣತಮ್ಮ ಇಬ್ಬರೂ ಹಂಚಿಕೊಂಡು ನೋಂದಾಯಿಸುವ ವಿಧಾನವನ್ನು ಕೇಳಿದಾಗ, 'ಅಂದರೆ ನಿಮ್ಮ ಕುಟುಂಬದ ಆಸ್ತಿಯನ್ನು ಹಂಚಿಕೊಳ್ಳುವುದು, ಅದಕ್ಕೆ ಈಗ ನಿಯಮಗಳಲ್ಲಿ ಬದಲಾವಣೆ ಆಗಿವೆ. ಇಲ್ಲೇ ಅಧಿಕೃತ ಪತ್ರ ಲೇಖಕರಿದ್ದಾರೆ. ಅವರನ್ನು ಸಂಪರ್ಕ ಮಾಡಿದರೆ ಏನೇನು ಮಾಡಬೇಕು ಅಂತ ಹೇಳ್ತಾರೆ. ಹಿಸ್ಸೆ ಪತ್ರಕ್ಕೆ ಹೆಚ್ಚಿನ ಶುಲ್ಕದ ಛಾಪಾ ಕಾಗದ ಬೇಕಿಲ್ಲ. ಕಡಿಮೆ ಖರ್ಚಿನಲ್ಲಿ ಆಗುತ್ತೆ. ಇಲ್ಲೇ ಯಾರನ್ನಾದರೂ ನೋಡಿ' ಎಂದು ಹೇಳಿ ಮೇಜಿನ ಮುಂದಿದ್ದ ಪತ್ರವೊಂದನ್ನು ಕೈಗೆತ್ತಿಕೊಂಡ. ಅದು ತಾನು ನಿರ್ಗಮಿಸಲು ನೀಡಿದ ಸೂಚನೆ ಎಂಬುದನ್ನು ಅರ್ಥ ಮಾಡಿಕೊಂಡ ರಾಮಣ್ಣ ಹೊರಕ್ಕೆ ಬಂದ. 'ಅಧಿಕಾರಿಗಳೆಲ್ಲ ಜನರ ಶತ್ರುಗಳು ಅಂತ ಹೇಳುತ್ತಾ ಇದ್ದುದು ತಮಾಷಿಗಲ್ಲ' ಎಂದು ತನ್ನಷ್ಟಕ್ಕೆ ಹೇಳುತ್ತಾ ಹೊರಗಡೆ ಕಾದಿದ್ದ ಲಿಂಗರಾಜನೊಟ್ಟಿಗೆ 'ಇಲ್ಲಿ ಪತ್ರ ಬರೆಯುವರಿದ್ದಾರಂತಲ್ಲ, ಅವರನ್ನು ವಿಚಾರಿಸಬೇಕಂತೆ. ಎಷ್ಟು ರಾಜಾರೋಷಾಗಿ ಮಧ್ಯವರ್ತಿಗಳ ಹತ್ರ ಜನರನ್ನು ಕಳಿಸುತ್ತಾರಲ್ಲ. ಇಲ್ಲಿನ ಜನಪ್ರತಿನಿಧಿಗಳೂ ಇಂಥವರೊಂದಿಗೆ ಶಾಮೀಲಾಗಿರಬೇಕು, ಇಲ್ಲದಿದ್ದರೆ ಇಂಥ ಧೈರ್ಯ ಎಲ್ಲಿ ಬರಬೇಕು...' ಎಂದು ಸಿಡುಕುತ್ತ ಕಾರಿನ ಬಳಿ ಬಂದ.

ಕಾರಿನ ಹೊರಗಡೆ ನಿಂತು ರಾಮಣ್ಣ ಸಿಡುಕುತ್ತ ಬಂದುದನ್ನು ಕಂಡ ಲಿಂಗರಾಜ 'ನನ್ನ ಗುರುತಿನ ವಕೀಲರು ಒಬ್ಬರಿದ್ದಾರೆ. ಅವರು ಹಿಸ್ಸೆ ಪತ್ರ ಮಾಡಿಸಿಕೊಡುತ್ತಾರೆ. ಅವರಿಗೆ ಒಪ್ಪಿಸಿದರೆ ಯಾವ ತಕರಾರು ಇಲ್ಲದಂತೆ ಕೆಲಸ ಮುಗಿಯುತ್ತದೆ ಅಂತ ನಮ್ಮ ಕಡೆಯವರು ಹೇಳ್ತಾರೆ..' ಎಂದು ಕೆಳದನಿಯಲ್ಲಿ ಸೂಚಿಸಿದ. 'ಇಲ್ಲೇ ಇರ್ತಾರ..? ಅಲ್ಲಿಗೆ ಕರ್ಕೊಂಡು ಹೋಗು' ಎಂದು ರಾಮಣ್ಣ ಹಿಂದೆ ಕುಳಿತುಕೊಂಡ. ಲಿಂಗರಾಜ ಮುಂದಿನ ಸೀಟಿನಲ್ಲಿ ಕುಳಿತು ಅವರನ್ನು ಕೋರ್ಟ್ ಆವರಣದ ಬಳಿ ಕರೆತಂದ. ತಾಲ್ಲೂಕು ಕೇಂದ್ರವಾಗಿದ್ದರಿಂದ ಮುನ್ಸೀಫರ ಹಂತದ ನ್ಯಾಯಾಲಯ. ಸಣ್ಣದೊಂದು ಕಟ್ಟಡದಲ್ಲಿ ಮೇಲುಗಡೆ ನ್ಯಾಯಾಲಯದ ಕಚೇರಿಗಳು. ನೆಲಮಹಡಿಯಲ್ಲಿ ಅಲ್ಲಲ್ಲಿ ಕಂಪ್ಯೂಟರ್‌ಗಳನ್ನು ಇಟ್ಟುಕೊಂಡವರು. ಕಾರನ್ನು ರಸ್ತೆ ಬದಿ ನಿಲ್ಲಿಸಲು ಹೇಳಿದ ಲಿಂಗರಾಜ ನ್ಯಾಯಾಲಯ ಕಟ್ಟಡದ ಬಳಿ ಹೋಗಿ ಅಲ್ಲಿದ್ದವರೊಂದಿಗೆ ಮಾತಾಡಿ ತನಗೆ ಗುರುತಿದ್ದ ವಕೀಲರನ್ನು ಕರೆದುಕೊಂಡು ಬಂದ. ಕಾರಿನ ಬಳಿ ಬಂದಾಗ ಗೌರವದಿಂದ ನಮಸ್ಕರಿಸಿದ ವಕೀಲ ತನ್ನನ್ನು 'ಲೋಕೇಶ ಅಂತ ಸಾರ್. ನಿಮ್ಮ ಹೆಸರನ್ನು ತುಂಬಾ ಕೇಳಿದೀನಿ. ನಿಮ್ಮನ್ನು ಈಗ ಪ್ರತ್ಯಕ್ಷ ನೋಡುವ ಹಾಗೆ ಆಯಿತು..' ಎನ್ನುತ್ತಾ ತಾನೇ ಮುಂದಾಗಿ ಕೈ ನೀಡಿ ಕುಲುಕಿದ. ಲೋಕೇಶ ವಕೀಲರ ಸ್ವಾಗತಕ್ಕೆ ಖುಷಿಯಾಗಿ ಹೋದ ರಾಮಣ್ಣ 'ನಡೀರಿ ನಿಮ್ಮ ಆಫೀಸಿಗೆ, ಅಲ್ಲೇ ಮಾತಾಡೋಣ' ಎಂದ. ಅವರನ್ನು ಪಕ್ಕದಲ್ಲಿ ಕೂರಿಸಿಕೊಂಡು ಅವರ ಕಚೇರಿ ಇದ್ದ ಕಡೆ ದಾರಿ ತೋರಿಸುವಂತೆ ಕೇಳಿದ. ಖುಷಿಯಿಂದ ರಾಮಣ್ಣನ ಪಕ್ಕ ಕುಳಿತ ಲೋಕೇಶರು ಡ್ರೈವರನಿಗೆ ತಮ್ಮ ಕಚೇರಿಯ ಮಾರ್ಗ ತೋರಿಸಿದರು.

ಕೋರ್ಟ್ ಕಟ್ಟಡದಿಂದ ವಕೀಲರ ಕಚೇರಿಗೆ ಬರುವ ಪ್ರಯಾಣ ಸಮಯದಲ್ಲಿ ರಾಮಣ್ಣನಿಂದ ಆಗಬೇಕಾದ ಕೆಲಸದ ಮಾಹಿತಿ ಪಡೆದರು.

ವಕೀಲರ ಕಚೇರಿಯಲ್ಲಿ ಒಬ್ಬ ಮಹಿಳೆ ಕಂಪ್ಯೂಟರ್ ಮುಂದೆ ಕುಳಿತಿದ್ದಳು. ಅವಳನ್ನು ಎಬ್ಬಿಸಿ ಪಕ್ಕದಲ್ಲೆಲ್ಲೋ ಇದ್ದ ಹೋಟಲಿನಿಂದ ಕಾಫಿ ತರಿಸುವಂತೆ ಹೇಳಿ ಲೋಕೇಶರು ರಾಮಣ್ಣನನ್ನು ತನ್ನ ಕೋಣೆಯ ಒಳಕ್ಕೆ ಗೌರವದಿಂದ ಕರೆದು ಕೂರಿಸಿದರು. 'ಹಿಸ್ಸೆ ಪತ್ರ ಸಿದ್ಧಪಡಿಸಲು ಕೆಲವು ಕೆಲಸ ಆಗಬೇಕು ಸರ್, ಮೊದಲು ನಿಮ್ಮ ವಂಶವೃಕ್ಷದ ಪ್ರತಿ ಬೇಕು. ಅದಿಲ್ಲದೆ ರಿಜಿಸ್ಟ್ರೇಶನ್ ಆಗೋದೇ ಇಲ್ಲ. ಅದಾದ ನಂತರ ಆಸ್ತಿ ಯಾರ ಹೆಸರಲ್ಲಿದೆಯೋ ಅದರ ರೆವಿನ್ಯೂ ದಾಖಲೆ. ಅಂದರೆ ಆರ್‌ಟಿಸಿ, ಅದನ್ನೇ ಪಹಣಿ ಅಂತಾರಲ್ಲ. ಹಿಸ್ಸೆ ಮಾಡಿಕೊಡುವವರು ಪವತಿ ಆಗಿರುವುದರಿಂದ ಅವರ ಮರಣ ಪ್ರಮಾಣ ಪತ್ರ. ಯಾವ ಸರ್ವೇ ನಂಬರಿನಲ್ಲಿ ಆಸ್ತಿ ಇದೆಯೋ ಅದರ ಮ್ಯುಟೇಶನ್ ದಾಖಲೆ. ಮೊದಲಾದರೆ ಯಾರ್‍ಯಾರಿಗೆ ಯಾವ ಯಾವ ಭಾಗ, ಎಷ್ಟೆಷ್ಟು ಅಂತ ಭಾಗ ಮಾಡಿ ಚೆಕ್ಕುಬಂದಿ ಹಾಕಿ ತಂದಿದ್ದರೆ ಅದನ್ನೇ ಬರೆದು ಈ ಪತ್ರ ಬರಹಗಾರರು ರಿಜಿಸ್ಟ್ರು ಮಾಡಿಸಿ ಕೊಡುತ್ತಿದ್ದರು. ಆ ಮೇಲೆ ಅಲ್ಲಿನ ಚೆಕ್ಕುಬಂದಿಗೆ ಅನುಗುಣವಾಗಿ ಸರ್ವೆ ಮಾಡಿಸಿ ಗಡಿ ಗುರುತು ಮಾಡಿಕೊಳ್ಳಬಹುದಿತ್ತು. ಈಗ ಸರ್ವೆಯವರೇ ಬಂದು ಗಡಿ ಗುರ್ತು ಮಾಡಿ ನಕ್ಷೆ ಕೊಡಬೇಕು. ಅದಕ್ಕೆ ನೀವು ಅರ್ಜಿ ಕೊಟ್ಟು ಸರ್ವೆ ಮಾಡಿಸಬೇಕು. ಸರ್ವೆಯವರು ನಕಾಶೆ ಸಿದ್ಧಪಡಿಸಿಕೊಟ್ಟ ಮೇಲೆ ಆ ಪ್ರತಿಯನ್ನೂ ತರಬೇಕು. ಆಮೇಲೆ ಇಬ್ಬರು ಖಾತೆದಾರರು ಅಥವಾ ಇಬ್ಬರು ಗಣ್ಯರು ಸಾಕ್ಷಿಯಾಗಿ ಬಂದರೆ ಹಿಸ್ಸೆ ಪತ್ರ ರೆಡಿ ಮಾಡಿ ಒಂದೇ ದಿನದಲ್ಲಿ ರಿಜಿಸ್ಟ್ರು ಮಾಡಿಸಬಹುದು ಸರ್...' ಎಂದು ವಿವರ ನೀಡಿದರು.

'ಈಗ ಅರ್ಜಿ ಸಲ್ಲಿಸುವುದು, ಅದು ಸ್ವೀಕಾರ ಆಗುವುದು, ಇಂತಿಷ್ಟು ದಿನಗಳ ಒಳಗೆ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಎಲ್ಲವೂ ಕಂಪ್ಯೂಟರ್ ಆಗಿದೆ ಸರ್. ಯಾರಿಗೂ ಲಂಚ ಅಂತ ಕೊಡಬೇಕಾಗಿಲ್ಲ. ನಿಮ್ಮದೇ ಆಸ್ತಿಯನ್ನು ಅಣ್ಣ ತಮ್ಮ ಹಿಸ್ಸೆ ಮಾಡಿಕೊಳ್ತಾ ಇರೋದರಿಂದ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲೂ ಹೆಚ್ಚು ದುಡ್ಡು ಕೊಡಬೇಕಿಲ್ಲ. ಅಲ್ಲಿ ಎಷ್ಟು ಕೊಡಬೇಕು ಅಂತ ನಿಗದಿ ಆಗಿರುತ್ತೆ. ಅಷ್ಟಕ್ಕೆ ರಸೀದಿ ಕೂಡ ಕೊಡ್ತಾರೆ. ಹಿಸ್ಸೆ ಪತ್ರ ಆದ್ದರಿಂದ ಛಾಪಾ ಕಾಗದ ಕೂಡ ಹೆಚ್ಚು ದುಡ್ಡಿನದಾಗಬೇಕಿಲ್ಲ. ಮೊದೂಲು ಈ ಎಲ್ಲಾ ದಾಖಲೆ ರೆಡಿ ಮಾಡ್ಕಂಡು ಬನ್ನಿ ಸರ್. ಒಂದೇ ದಿನದಲ್ಲಿ ಹಿಸ್ಸೆ ಪತ್ರ ಮಾಡಿ ಅವತ್ತೇ ರಿಜಿಸ್ಟ್ರು ಮಾಡಿ ಕಳಿಸ್ತೀನಿ' ಎಂದು ವಕೀಲರು ವಿವರಿಸಿದರು. ವಕೀಲರ ವಿವರಣೆ ಕೇಳುತ್ತಾ ಇದ್ದಂತೆ ರಾಮಣ್ಣನಿಗೆ ಎಲ್ಲವೂ ಅಯೋಮಯವಾಯಿತು. ಎಷ್ಟೆಲ್ಲ ದಾಖಲೆಗಳನ್ನು ಸಿದ್ಧಪಡಿಸಬೇಕು ಎಂಬುದರ ಕಲ್ಪನೆ ಅಸ್ಪಷ್ಟವಾಗಿ ಮೂಡಿತು. ಅಷ್ಟರಲ್ಲಿ ವಕೀಲರ ಸಹಾಯಕಿ ತರಿಸಿದ್ದ ಕಾಫಿಯೂ ಬಂತು. ಅದನ್ನು ಕುಡಿಯುತ್ತಿದ್ದಾಗ ಒಂದೊಂದಾಗಿ ಕೈಗೊಳ್ಳಬೇಕಾದ ದಾಖಲೆ ಸಂಗ್ರಹದ ಚಿತ್ರಣ ಸ್ಪಷ್ಟವಾಯಿತು. ವಂಶವೃಕ್ಷವನ್ನು ಹೇಗೆ ಮಾಡಿಸಬೇಕು ಎಂಬುದರ ವಿವರ ಬಯಸಿದರು.

'ಅದಕ್ಕೆ ಇಪ್ಪತ್ತು ರೂಪಾಯಿ ಛಾಪಾ ಕಾಗದದ ಮೇಲೆ ಒಂದು ಮನವಿ ಸಿದ್ಧಪಡಿಸಿ ಅದನ್ನು ನೋಟರಿಯಿಂದ ಅನುಮೋದಿಸಿ ನಾಡಕಚೇರಿಗೆ ಸಲ್ಲಿಸಬೇಕು. ಅದನ್ನು ಅಲ್ಲಿ ಕಂಪ್ಯೂಟರ್ ಗೆ ಸೇರಿಸಿ ಒಂದು ನಂಬರ್ ಕೊಡುತ್ತಾರೆ. ಅದನ್ನು ವಿಲೇಜ್ ಅಕೌಂಟೆಂಟ್ ಮೂಲಕ ತಪಾಸಣೆ ಮಾಡಿಸಿ ವಂಶವೃಕ್ಷವನ್ನು ಕಂಪ್ಯೂಟರ್ ಮೂಲಕ ಕಳಿಸುತ್ತಾರೆ. ಅದು ಮೊದಲ ಕೆಲಸ ಸರ್..' ಎಂದು ಲೋಕೇಶ್ ವಿವರ ನೀಡಿದರು.

‘ತೆಲಗಿ ಹಗರಣ ಆದ ಮೇಲೆ ಛಾಪಾ ಕಾಗದ ತೆಗೆದುಕೊಳ್ಳೋದು ಕೂಡ ಈಗ ಆನ್ ಲೈನ್ ಆಗಿದೆ. ಕೆಲವು ಕೋ ಆಪರೇಟಿವ್ ಬ್ಯಾಂಕ್ ಗಳಿಗೆ ಲೈಸನ್ಸ್ ಕೊಟ್ಟಿದ್ದಾರೆ. ಮೊದಲಿನ ಹಾಗೆ ವೆಂಡರ್‌ಗಳಲ್ಲಿ ಛಾಪಾ ಕಾಗದ ಸಿಗಾದಿಲ್ಲ ಸರ್..’ ಮತ್ತಷ್ಟು ವಿವರ ನೀಡಿ ಲೋಕೇಶ್ ತಮ್ಮನ್ನು ಕೋರ್ಟ್ ಬಳಿ ಬಿಡುವಂತೆ ಕೋರಿದರು. ಸಹಾಯಕಿ ತರಿಸಿಕೊಟ್ಟ ಕಾಫಿಗೆ ಲಿಂಗರಾಜನೇ ಹಣ ಕೊಟ್ಟ. ಏನೆಲ್ಲ ದಾಖಲೆಗಳನ್ನು ಸಿದ್ಧಪಡಿಸಬೇಕು ಎನ್ನುತ್ತಾ ರಾಮಣ್ಣ ನಿಧಾನವಾಗಿ ಎದ್ದು ಕಾರಿನ ಬಳಿ ಬಂದ.

ವಕೀಲರನ್ನು ಕೋರ್ಟಿನ ಬಳಿ ಬಿಟ್ಟು ತಾಲ್ಲೂಕು ಕಚೇರಿ ಬಳಿ ಬಂದಾಗ ‘ಈಗ ಒಂದೊಂದಾಗಿ ಕೆಲಸ ಶುರು ಮಾಡುವ. ಮೊದಲು ಛಾಪಾ ಕಾಗದ ಎಲ್ಲಿ ಸಿಗುತ್ತೆ ನೋಡು’ ಎಂದು ಲಿಂಗರಾಜನಿಗೆ ಸೂಚಿಸಿದ. ಅದು ಲಿಂಗರಾಜನಿಗೆ ಮೊದಲೇ ಗೊತ್ತಿತ್ತು. ಅಲ್ಲಿದ್ದ ಸೌಹಾರ್ದ ಬ್ಯಾಂಕಿನ ಕಚೇರಿಯಲ್ಲಿ ಛಾಪಾ ಕಾಗದ ಸಿಗುತ್ತಿತ್ತು. ಅದನ್ನು ಪಡೆದು ಎದುರಿನಲ್ಲಿದ್ದ ಕಂಪ್ಯೂಟರ್ ಸೆಂಟರಿಗೆ ಒಯ್ದರೆ ಅಲ್ಲಿ ವಂಶವೃಕ್ಷದ ಅರ್ಜಿಯ ಮಾದರಿಯಲ್ಲಿ ಹೊಸಬರ ಮಾಹಿತಿಯನ್ನು ತುಂಬಿಸಿ ಛಾಪಾಕಾಗದದ ಮೇಲೆ ಮುದ್ರಿಸಿ ಕೊಡುತ್ತಿದ್ದರು. ವಂಶವೃಕ್ಷ ಮಾಡಿಸುವುದು ನಿಯಮವಾಗಿದ್ದರಿಂದ ಅದನ್ನು ಒದಗಿಸುವುದಕ್ಕೆ ತಾಲ್ಲೂಕು ಕೇಂದ್ರದಲ್ಲಿ ವ್ಯವಸ್ಥೆಯೊಂದು ರೂಪುಗೊಂಡಿದ್ದುದು ರಾಮಣ್ಣನಿಗೆ ವಿಶೇಷ ಎನಿಸಿತು. ಲಿಂಗರಾಜನಿಂದ ಛಾಪಾ ಕಾಗದ ತರಿಸಿದ ಮೇಲೆ ವಂಶವೃಕ್ಷಕ್ಕೆ ಬೇಕಾದ ಮಾಹಿತಿಯನ್ನು, ಅಂದರೆ ಯಾರೆಲ್ಲ ಅದರಲ್ಲಿ ಸೇರುತ್ತಾರೆ, ಅವರೆಲ್ಲದ ಹೆಸರು, ವಯಸ್ಸು, ಪರಸ್ಪರ ಸಂಬಂಧ ಇತ್ಯಾದಿ ವಿವರಗಳನ್ನು ಒದಗಿಸಲು ಕಂಪ್ಯೂಟರ್ ಸೆಂಟರಿಗೆ ರಾಮಣ್ಣನೇ ಹೋಗಬೇಕಾಯಿತು. ಅವನ ಬಗ್ಗೆ ಲಿಂಗರಾಜ ಸೂಚ್ಯವಾಗಿ ತಿಳಿಸಿದ್ದರಿಂದ ಕಂಪ್ಯೂಟರ್ ಸೆಂಟರಿನ ಶಾಸ್ತ್ರಿ ಎಂಬ ವ್ಯಕ್ತಿ ಗೌರವದಿಂದಲೇ ಬರಮಾಡಿಕೊಂಡು ಕುಳಿತುಕೊಳ್ಳಲು ಕುರ್ಚಿಯೊಂದನ್ನು ಮನೆಯ ಒಳಗಿಂದ ತಂದು ಹಾಕಿದ. ಮೊದಲೇ ಸಿದ್ಧವಾಗಿದ್ದ ಅರ್ಜಿ ನಮೂನೆಯಲ್ಲಿ ರಾಮಣ್ಣನಿಂದ ಯಾರ್ಯಾರನ್ನು ವಂಶವೃಕ್ಷದಲ್ಲಿ ಸೇರಿಸಬೇಕು, ಅವರೆಲ್ಲರ ವಯಸ್ಸು, ಅವರೊಂದಿಗೆ ಇರುವ ಸಂಬಂಧ ಇತ್ಯಾದಿ ವಿವರಗಳನ್ನು ಪಡೆದ. ಜೊತೆಗೆ ‘ತಿಮ್ಮನಾಯ್ಕರು ಈಗ ಪೌತಿಯಾಗಿದ್ದಾರೆ. ವಂಶವೃಕ್ಷದ ಅರ್ಜಿದಾರರು ಅವರ ಹೆಂಡತಿ ಆಗಬೇಕು. ಅವರು ಅರ್ಜಿ ಸಲ್ಲಿಸುವಂತೆ ದಾಖಲೆ ಆಗಬೇಕು. ಅವರ ಸಹಿಯನ್ನು ಮಾಡಿಸಬೇಕು’ ಎಂಬೆಲ್ಲ ನಿಬಂಧನೆಗಳನ್ನು ತಿಳಿಸಿದ. ಸಹಿಯನ್ನು ಹೇಗೋ ಮಾಡಿಸಿದರಾಯಿತು. ಆದರೆ ಗುರುತಿನ ಚೀಟಿಯಾಗಿ ಏನು ಸಲ್ಲಿಸಬೇಕು ಎಂಬುದಕ್ಕೆ ರಾಮಣ್ಣನಲ್ಲಿ ಸ್ಪಷ್ಟತೆ ಇರಲಿಲ್ಲ. ಶಾಸ್ತ್ರಿಯೇ ‘ನಿಮ್ಮ ಮೊಬೈಲ್ ನಂಬರ್ ಇದೆಯಲ್ಲ, ಅದನ್ನೇ ಕೊಟ್ಟರಾಯಿತು’ ಎಂದು ಪರಿಹಾರ ಸೂಚಿಸಿದ. ಅರ್ಜಿ ನಮೂನೆಯಲ್ಲಿ ವಿವರಗಳನ್ನು ತುಂಬಿ ಅದನ್ನು ರಾಮಣ್ಣನಿಗೆ ತೋರಿಸಿದ ಮೇಲೆ ಅದನ್ನು ಛಾಪಾ ಕಾಗದದ ಮೇಲೆ ಮುದ್ರಿಸಿಕೊಟ್ಟ. ಅಷ್ಟಕ್ಕೆ ಅವನು ಇಪ್ಪತ್ತು ರೂಪಾಯಿ ಕೇಳಿದ. ಸದ್ಯ ಒಂದು ಹಂತದ ಕೆಲಸ ಮುಗಿಯಿತಲ್ಲ ಎಂದು ಸಮಾಧಾನಗೊಂಡ ರಾಮಣ್ಣ ಖುಷಿಯಿಂದಲೇ ಹಣ ನೀಡಿದ.

ಮುಂದಿನ ಹಂತ ಅವನು ಪಡೆದ ಛಾಪಾ ಕಾಗದದ ಅರ್ಜಿಗೆ ಸರ್ಕಾರದಿಂದ ನೇಮಕವಾಗಿದ್ದ ನೋಟರಿಯಿಂದ ಸಹಿ ಪಡೆಯುವುದಾಗಿತ್ತು. ನೋಟರಿಯ ವಿಳಾಸವನ್ನೂ ಶಾಸ್ತ್ರಿಯೇ ನೀಡಿದ. ಛಾಪಾ ಕಾಗದ ವಿತರಿಸುವ ಬ್ಯಾಂಕು, ಅದನ್ನು ಮುದ್ರಿಸಿಕೊಡುವ ಕಂಪ್ಯೂಟರ್ ಸೆಂಟರ್ ಮತ್ತು ಅದಕ್ಕೆ ಸಹಿ ಹಾಕುವ ನೋಟರಿ ಇರುವ ವ್ಯವಸ್ಥಿತ ಜಾಲ ಇರುವುದು ಒಂದೇ ಕಡೆ ಎಲ್ಲ ಸೇವೆಯೂ ಸಿಕ್ಕಂತಾಗಿ ಜನರಿಗೆ ಅನುಕೂಲವಾಗುತ್ತದೆ ಎಂದು ರಾಮಣ್ಣ ಮೆಚ್ಚಿಕೊಂಡ. ನೋಟರಿಯ ಬಳಿ ಹೋಗಿ ಅಲ್ಲಿಯೂ ತನ್ನ

ಪರಿಚಯ ಮಾಡಿಕೊಳ್ಳಬೇಕಾದ ಅವಸ್ಥೆಗೆ ಅವನಿಗೆ ಕಿರಿಕಿರಿಯೂ ಆಯಿತು. ಆಗಬೇಕಾದ ಕೆಲಸ ಎಂದುಕೊಂಡು ನೋಟರಿಯ ಶುಲ್ಕವನ್ನು 'ಇಷ್ಟೊಂದು ದುಬಾರಿಯಾ' ಎಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಲೇ ನೀಡಿ ಮತ್ತೆ ಕಾರಿನಲ್ಲಿ ಕುಳಿತ.

ಮುಂದಿನ ಹಂತ ನೋಟರಿಯಿಂದ ಸಹಿ ಹಾಕಿಸಿಕೊಂಡಿದ್ದ ಛಾಪಾಕಾಗದವನ್ನು ನಾಡಕಚೇರಿಯಲ್ಲಿ ಸಲ್ಲಿಸುವುದಾಗಿತ್ತು. ಹಳ್ಳೂರು ಇರುವ ಹೋಬಳಿಯ ನಾಡಕಚೇರಿಯಲ್ಲಿ ಸಲ್ಲಿಸುವುದು ಎಂದರೆ ಅಲ್ಲಿಂದ ಹದಿನೈದು ಕಿಲೋಮೀಟರ್ ದೂರದ ಸಣ್ಣ ಪೇಟೆಗೆ ಹೋಗಬೇಕಿತ್ತು. 'ಸದ್ಯ ಕಾರಲ್ಲಿ ಬಂದಿದ್ದರಿಂದ ಈ ತಿರುಗಾಟಕ್ಕೆ ಅನುಕೂಲ' ಎಂದು ರಾಮಣ್ಣ ಸಮಾಧಾನಪಟ್ಟು ಲಿಂಗರಾಜನ ಸೂಚನೆಯಂತೆ ಹೋಬಳಿ ಕೇಂದ್ರದ ನಾಡಕಚೇರಿಯತ್ತ ಪ್ರಯಾಣ ಬೆಳೆಸಿದ. ಡಾಂಬರು ಹಾಕಿದ್ದರೂ ಹಳ್ಳಿಗಾಡಿನ ಅಂಕುಡೊಂಕು ರಸ್ತೆಯಲ್ಲಿ ಹದಿನೈದು ಕಿಲೋಮೀಟರ್ ಪ್ರಯಾಣಕ್ಕೆ ಅವರು ಮುಕ್ಕಾಲು ಗಂಟೆಯನ್ನು ತೆಗೆದುಕೊಂಡರು.

ಅವರು ನಾಡಕಚೇರಿಯನ್ನು ತಲುಪುವ ವೇಳೆಗೆ ಎರಡು ಗಂಟೆ ಸಮೀಪಿಸಿತ್ತು. ಸರ್ಕಾರಿ ಕಚೇರಿಯ ಸಿಬ್ಬಂದಿಗೆ ಊಟದ ಬಿಡುವು. ಅರ್ಜಿ ಸ್ವೀಕರಿಸುವ ಸಿಬ್ಬಂದಿ ಊಟಕ್ಕೆ ಹೋಗಿದ್ದರಿಂದ ಅವರು ಅವನಿಗಾಗಿ ಕಾಯಬೇಕಾಯಿತು. ಬೆಳಗ್ಗೆ ತಿಂದಿದ್ದ ಕಡುಬು ಅವರು ತಾಲ್ಲೂಕು ಕೇಂದ್ರಕ್ಕೆ ಹೋಗಿ ಕಚೇರಿಗಳಲ್ಲಿ ಸುತ್ತಾಡಿ ಅಲ್ಲಿಂದ ನಾಡಕಚೇರಿವರೆಗೆ ಪ್ರಯಾಣ ಮಾಡುವಷ್ಟರಲ್ಲಿ ಕರಗಿ ಹೋಗಿತ್ತು. ನಾಡಕಚೇರಿಗೆ ಹೊಂದಿಕೊಂಡ ಮನೆಗಳ ಸಾಲಿನಲ್ಲಿ ಇದ್ದ ಸಣ್ಣ ಹೋಟಲಿನಲ್ಲಿ ಏನಾದರೂ ತಿನ್ನಬಹುದೆಂದು ಲಿಂಗರಾಜ ಸೂಚಿಸಿದ್ದನ್ನು ರಾಮಣ್ಣ ಗೊಣಗಾಡದೆ ಒಪ್ಪಿಕೊಂಡ. ಬೆಳಗಿನ ತಿಂಡಿಯನ್ನು ಬಾಂಬ್ ಎಂದು ಬಣ್ಣಿಸಿದ್ದ ಹುಸೇನಿಯೂ ಮೌನವಾಗಿ ಹಿಂಬಾಲಿಸಿ ಅಲ್ಲಿ ಅನ್ನ ಸಾಂಬಾರನ್ನು ಸವಿದರು. ಹಸಿದಿದ್ದರಿಂದ ಬಿಸಿಯಾಗಿದ್ದ ಅನ್ನ ಸಾಂಬಾರು ಕೂಡ ಅವರಿಗೆ ಹಿತವಾಗಿತ್ತು.

ಊಟ ಮುಗಿಸಿ ಅವರು ನಾಡಕಚೇರಿಗೆ ಬಂದಾಗ ಆಗಲೇ ನಾಲ್ಕು ಮಂದಿ ಚಿಕ್ಕ ಕಿಟಕಿಯನ್ನು ತೆರೆದಿದ್ದ ಕೌಂಟರಿನ ಮುಂದೆ ನಿಂತಿದ್ದರು. ಒಳಗಿದ್ದ ಸಿಬ್ಬಂದಿಯೊಬ್ಬ ಅವರಲ್ಲಿ ಒಬ್ಬೊಬ್ಬರ ಕೇಳಿಕೆಯನ್ನು ಪಡೆದು ಅವರಿಗೆ ಬೇಕಾದ ದಾಖಲೆಯನ್ನು ಕಂಪ್ಯೂಟರ್ ನಿಂದ ತೆಗೆದುಕೊಡುತ್ತಿದ್ದ. ರಾಮಣ್ಣನನ್ನು ಕಾರಿನಲ್ಲಿಯೇ ಕೂರಿಸಿ ಸರದಿ ಸಾಲಿನಲ್ಲಿ ನಿಂತ ಲಿಂಗರಾಜ ತನ್ನ ಸರದಿ ಬಂದಾಗ ವಂಶವೃಕ್ಷಕ್ಕಾಗಿ ಸಿದ್ಧಪಡಿಸಿಕೊಂಡು ಬಂದಿದ್ದ ಛಾಪಾಕಾಗದವನ್ನು ನೀಡಿದ. ಅದನ್ನು ಮೊದಲಿಂದ ಕೊನೆಯವರೆಗೆ ನೋಡಿದ ಸಿಬ್ಬಂದಿ 'ಈಗ ಇದಕ್ಕೆ ವಿಲೇಜ್ ಅಕೌಂಟಂಟ್ ಸಹಿ ಬೇಕಲ್ಲ. ಅದಿಲ್ಲದೆ ಇದ್ದರೆ ಇಲ್ಲಿ ಕಂಪ್ಯೂಟರ್‌ನಲ್ಲಿ ತುಂಬಲಾಗುವುದಿಲ್ಲ. ಅವರ ಸಹಿ ಹಾಕಿಸಿಕೊಂಡು ಬನ್ನಿ' ಎಂದ. ಲಿಂಗರಾಜನಿಗೆ ಅದು ಹೊಸ ಅನುಭವ. ನಾಗರಾಜನಿಗೆ ವಂಶವೃಕ್ಷದ ದಾಖಲೆ ಬೇಕಿದ್ದಾಗ ಛಾಪಾ ಕಾಗದದಲ್ಲಿ ಅರ್ಜಿಯನ್ನು ಟೈಪು ಮಾಡಿಸಿ ನೋಟರಿಯವರ ಸಹಿ ಹಾಕಿ ನಾಡಕಚೇರಿಯಲ್ಲಿ ಕೊಟ್ಟು ಮೂರು ನಾಲ್ಕು ದಿನಗಳ ನಂತರ ದಾಖಲೆ ಸಿಕ್ಕಿತ್ತು. 'ನಾವು ವಿಎ ಸಹಿ ಇಲ್ಲದೆ ಹಿಂದೆ ಕೊಟ್ಟಿದ್ದೆವು. ಆಗ ಮಾಡಿಕೊಟ್ಟಿದ್ದಿರಿ' ಎಂದ. 'ಇತ್ತು ಸಾರ್, ಆಗ ನಾವು ಅರ್ಜಿ ಪಡೆದ ಕೂಡಲೇ ಅದು ವಿಎ ಗೆ ಹೋಗುತ್ತಿತ್ತು. ಅಲ್ಲಿಂದ ತಿರುಗಿ ಬಂದ ಮೇಲೆ ಫೈನಲ್ ಆಗಿ ವಂಶವೃಕ್ಷ ಸಿದ್ಧವಾಗುತ್ತಿತ್ತು. ಈಗ ಮೊದಲಿಗೇ ವಿಎ ಸಹಿ ಮಾಡಬೇಕಾಗಿದೆ. ಕಂಪ್ಯೂಟರ್‌ಗೆ ಹಾಕಿದ ನಂತರ ಬೇರೆ ಪರಿಶೀಲನೆಗೆ ಒಳಗಾಗುವುದಿಲ್ಲ' ಎಂದು ಕಿಟಕಿಯ ಆಚೆಯಿಂದಲೇ ವಿವರಣೆ ನೀಡಿದ.

ಲಿಂಗರಾಜ ವಾಪಸು ಕಾರಿನ ಬಳಿ ಬಂದು ಅರ್ಜಿಯನ್ನು ಸಲ್ಲಿಸಲು ಆಗದ ತಾಂತ್ರಿಕ ಕಾರಣವನ್ನು ರಾಮಣ್ಣನಿಗೆ ಹೇಳಿದಾಗ 'ಥೇ.. ಎಂಥ ಕರ್ಮ ಇದು. ಒಂದು ಅರ್ಜಿ ಕೊಡುವುದಕ್ಕೆ ಇಡೀ ಒಂದು ದಿನ

ಆಗಿ ಹೋಯ್ತಲ್ಲ, ಅದೇನು ತಾಂತ್ರಿಕ ಕಾರಣ. ಆ ವಿಲೇಜ್ ಅಕೌಂಟೆಂಟ್ ಇಲ್ಲಿಗೇ ಬಂದು ನೋಡಬೇಕಲ್ವ..' ಎಂದು ಕೋಪಗೊಂಡ. 'ಎಲ್ಲಿದ್ದಾನೆ ಅವನು? ನೋಡಿ ಗ್ರಾಚಾರ ಬಿಡಿಸಬೇಕು. ಜನ ಅಂದರೆ ಏನಂತ ತಿಳಿದಿದ್ದಾರೆ?' ಎಂದು ಕಾರಿನ ಒಳಗಿದ್ದೇ ಕೂಗಾಡಿದ. ಅವನ ಅಬ್ಬರಕ್ಕೆ ಸುಮ್ಮನಾದ ಲಿಂಗರಾಜ 'ಈಗೆಲ್ಲ ಆನ್ ಲೈನ್ ಆಗಿದೆ ಚಿಕ್ಕಪ್ಪ, ಇವರಾದರೂ ಏನು ಮಾಡ್ತಾರೆ. ಒಂದು ಕಾಲಂನಲ್ಲಿ ತಪ್ಪು ಎಂಟ್ರಿ ಆದ್ರೂ ಕಂಪ್ಯೂಟರ್ ರಿಜೆಕ್ಟ್ ಮಾಡ್ತದಂತೆ..' ಎಂದು ಸಮಾಧಾನಪಡಿಸಿದ. 'ಇನ್ನು ಅವನನ್ನು ಹುಡುಕಿಕೊಂಡು ಹೋಗಬೇಕಾ?' ಎಂದು ರಾಮಣ್ಣ ಅಸಹನೆಯಿಂದ ಹೇಳಿದಾಗ 'ಅವನು ಪೇಟೆಯಲ್ಲಿ ಇರುತ್ತಾನೆ. ಅಲ್ಲಿಗೆ ಹೋಗಿ ಸಹಿ ಹಾಕಿಸಿಕೊಂಡು ಬರೋಣ. ಈಗ ಇಲ್ಲೇ ಪಹಣಿ ದಾಖಲೆ ತೆಗೆಸಿ, ಹಿಸ್ಸೆಗೆ ಮೊದಲು ಜಮೀನಿನ ಸರ್ವೆಗಾಗಿ ಇದೇ ಕಚೇರಿಯಲ್ಲಿ ಅರ್ಜಿ ಸಲ್ಲಿಸೋಣ. ಸರ್ವೆ ಆಗದೆ ರಿಜಿಸ್ಟರ್ ಮಾಡುವುದಿಲ್ಲ ಅಂತ ಲೋಕೇಶರೇ ಹೇಳಿದರಲ್ಲ' ಎಂದು ಲಿಂಗರಾಜ ಮೆಲ್ಲಗೆ ಹೇಳಿ ರಾಮಣ್ಣನನ್ನು ಸಮಾಧಾನಪಡಿಸಿದ.

ಹಳ್ಳೂರಿನ ತಮ್ಮ ಜಮೀನಿನ ಸರ್ವೆ ನಂಬರ್ ಲಿಂಗರಾಜನಿಗೆ ಗೊತ್ತಿತ್ತು. ಆ ಸರ್ವೆ ನಂಬರ್ ಹೇಳಿ ಪಹಣಿ ದಾಖಲೆಯನ್ನು ನಾಡಕಚೇರಿಯಲ್ಲಿ ತೆಗೆಸಿದ. ಅದನ್ನು ಇನ್ನೊಂದು ನಮೂನೆಯ ಅರ್ಜಿಯ ಸಹಿತ ಸಲ್ಲಿಸಬೇಕಿದ್ದ ಕಾರಣ ಅದರ ಜೆರಾಕ್ಸ್ ಪ್ರತಿಯನ್ನೂ ಅಲ್ಲಿಯೇ ಮಾಡಿಸಿದ. ಜಮೀನಿನ ಸರ್ವೆ ಮಾಡಿಸುವುದಕ್ಕೆ ನಿಗದಿಯಾದ ಅರ್ಜಿಯನ್ನು ಪಡೆದು ರಾಮಣ್ಣನಿಗೆ ಒಪ್ಪಿಸಿದ. ಅದರಲ್ಲಿ ಆಸ್ತಿಯ ಒಟ್ಟು ಭಾಗವನ್ನು ಯಾರು, ಯಾರಿಗೆ, ಎಷ್ಟೆಷ್ಟು ಕೊಡಬೇಕು ಎಂಬುದರ ವಿವರಗಳನ್ನು ಒದಗಿಸಬೇಕಿತ್ತು. ಪಹಣಿ ದಾಖಲೆಯನ್ನು ರಾಮಣ್ಣ ನೋಡಿದಾಗ ಅದು ತಂದೆ ತಿಮ್ಮನಾಯ್ಕರ ಹೆಸರಿನಲ್ಲಿತ್ತು. ಸರ್ವೆ ಮಾಡಿಸುವುದಕ್ಕೆ ಮನವಿ ಮಾಡುವ ಅರ್ಜಿಯಲ್ಲಿ ಮೂಲ ಮಾಲಕರು ತಮ್ಮ ಹೆಸರಿನಲ್ಲಿದ್ದ ಜಮೀನಿನಲ್ಲಿ ಯಾರಿಗೆ ಎಷ್ಟು ಭಾಗ ನೀಡಲು ಉದ್ದೇಶಿಸಿದ್ದಾರೆ ಎಂಬುದನ್ನು ನಮೂದಿಸಬೇಕಿತ್ತು. ಯಾರು, ಯಾರಿಗೆ ಕೊಡಲಿದ್ದಾರೆ ಎಂಬುದರ ವಿವರವನ್ನೂ ತುಂಬಬೇಕಿತ್ತು. ಪಹಣಿಯಲ್ಲಿ ದಾಖಲಾಗಿದ್ದ ಜಮೀನು ಎರಡು ಎಕರೆ ಎಂದಿತ್ತು. ಅದನ್ನು ಯಲ್ಲನಾಯ್ಕರಿಗೂ, ರಾಮಣ್ಣನಿಗೂ ಸಮಪಾಲು ಮಾಡಬೇಕು ಎಂದಿದ್ದರೆ ಅದರಂತೆ ಅರ್ಜಿಯಲ್ಲಿ ನಮೂದಿಸಬೇಕಿತ್ತು. ಪಹಣಿಯನ್ನು ಎಚ್ಚರಿಕೆಯಿಂದ ಓದಿದ ರಾಮಣ್ಣ ಸರ್ವೆ ಮಾಡಿಸಲು ಸಲ್ಲಿಸಬೇಕಿದ್ದ ಅರ್ಜಿ ನಮೂನೆಯನ್ನೂ ಪರಿಶೀಲಿಸಿದ. ಇರುವ ಎರಡು ಎಕರೆಯಲ್ಲಿ ಇಬ್ಬರು ಮಕ್ಕಳಿಗೆ ಸಮಪಾಲು ಎಂದರೆ ತಲಾ ಒಂದು ಎಕರೆ ಸಿಗುತ್ತದೆ ಎಂದು ಅವನು ಎಣಿಸಿದ್ದು ಸರಿಯಲ್ಲ ಎನಿಸಿತು. ನಾಡಕಚೇರಿಯ ಆವರಣದಲ್ಲಿ ನಿಂತು ಈ ಬಗ್ಗೆ ತಾನೊಬ್ಬನೇ ತೀರ್ಮಾನ ತೆಗೆದುಕೊಳ್ಳುವುದು ಸರಿಯಲ್ಲ ಎಂದೂ ಅವನಿಗೆ ತೋರಿತು. 'ಏನು ಮಾಡುವುದು? ಅಣ್ಣಯ್ಯನೂ ಬಂದಿದ್ದರೆ ಇಲ್ಲೇ ತೀರ್ಮಾನ ತೆಗೆದುಕೊಳ್ಳಬಹುದಿತ್ತು' ಎಂದು ಲಿಂಗರಾಜನಲ್ಲಿ ಮೆಲ್ಲಗೆ ಹೇಳಿದ. 'ಎಷ್ಟೆಷ್ಟು ಭಾಗ ಅಂತ ಸರ್ವೆಯವರು ಬಂದಾಗ ಅವರಿಗೆ ತಿಳಿಸಿ ಅದರಂತೆ ಗಡಿ ಗುರುತು ಮಾಡಿಸಿಕೊಳ್ಳಬಹುದು. ಅವರು ಬರುವುದಕ್ಕೆ ಅನುಕೂಲವಾಗುವಂತೆ ಮೊದಲು ಅರ್ಜಿ ಕೊಟ್ಟು ಬಿಡೋಣ' ಎಂದು ಲಿಂಗರಾಜ ನೀಡಿದ ಸಲಹೆ ಸೂಕ್ತವೆನಿಸಿತು. ಅದರಂತೆ ಅರ್ಜಿಯನ್ನು ತುಂಬಿ ನಾಡಕಚೇರಿಗೆ ಅದೇ ಕಿಟಕಿಯ ಮೂಲಕ ಸಲ್ಲಿಸಲು ರಾಮಣ್ಣನೇ ಹೋದ. ಅರ್ಜಿಯನ್ನು ಪರಿಶೀಲಿಸಿದ ಸಿಬ್ಬಂದಿ 'ಇಲ್ಲಿ ಲೇಟ್ ತಿಮ್ಮನಾಯ್ಕ ಅಂತ ಹಾಕಿದ್ದೀರಲ್ಲ. ಅವರ ವಾರಸುದಾರರು ಯಾರೂ ಇಲ್ಲವಾ? ಅವರ ಹೆಂಡತಿ ಇದ್ದರೆ ಅವರ ಹೆಸರಿಗೆ ಪಹಣಿ ಬದಲಾಗಿ ನಂತರವೇ ಹಿಸ್ಸೆ ಮಾಡಿಕೊಳ್ಳುವುದಕ್ಕೆ ಬರುತ್ತದೆ' ಎಂದು ಹೇಳುತ್ತಾ ಅರ್ಜಿಯನ್ನು ವಾಪಸು ಕೊಟ್ಟ. 'ಇದಕ್ಕೆ ಪರಿಹಾರ ಮಾರ್ಗವೇನು' ಎಂದು ರಾಮಣ್ಣ ಕೇಳಿದ್ದಕ್ಕೆ 'ಪಂಚಾಯ್ತಿಯಿಂದ ಮರಣ ಪ್ರಮಾಣ ಪತ್ರ ಪಡೆದು ತಹಶೀಲ್ದಾರರಿಗೆ ಅರ್ಜಿ ಕೊಟ್ಟು

ತಿಮ್ಮನಾಯ್ಕರ ಹೆಂಡತಿಗೆ ಪಹಣಿಯನ್ನು ಬದಲಾಯಿಸಿ. ಆಮೇಲೆ ಆಸ್ತಿಯನ್ನು ಹಂಚಿಕೊಳ್ಳಬಹುದು..' ಎಂದು ಹೇಳಿದ.

ಸುಲಭದಲ್ಲಿ ಆಗಬಹುದೆಂದುಕೊಂಡಿದ್ದ ಆಸ್ತಿ ಹಂಚಿಕೆಯ ಪ್ರಸ್ತಾಪ ಸಂಕೀರ್ಣ ಸ್ವರೂಪ ಪಡೆದುಕೊಳ್ಳುತ್ತಿರುವುದನ್ನು ಕಣ್ಣಾರೆ ಕಂಡ ರಾಮಣ್ಣನಿಗೆ 'ಇದೆಂಥ ವ್ಯವಸ್ಥೆ' ಎನಿಸಿತು. ಸದ್ಯಕ್ಕೆ ಮನೆಗೆ ಹಿಂತಿರುಗಿ ತಣ್ಣಗೆ ಯೋಚಿಸಿ ನಂತರ ಮುಂದುವರಿಯುವುದೆಂದು ತೀರ್ಮಾನಿಸಿ 'ಈಗ ವಂಶವೃಕ್ಷದ ಅರ್ಜಿಗೆ ವಿಲೇಜ್ ಅಕೌಂಟೆಂಟನ ಸಹಿ ಹಾಕಿಸಿ ಸಲ್ಲಿಸಲು ವ್ಯವಸ್ಥೆ ಮಾಡೋಣ. ಮುಂದಿನ ಕ್ರಮಗಳ ಬಗ್ಗೆ ಮನೆಗೆ ಹೋಗಿ ಯೋಚನೆ ಮಾಡೋಣ. ಇವತ್ತು ಯಾಕೋ ಒಂದು ಕೆಲಸವೂ ನೆಟ್ಟಗೆ ಆಗಲಿಲ್ಲ...' ಎಂದು ಬೇಸರಪಟ್ಟುಕೊಂಡು ಕಾರನ್ನು ಏರಿದ. ರಾಮಣ್ಣನ ಪೇಚಾಟವನ್ನು ಆತಂಕದಿಂದ ಗಮನಿಸುತ್ತಿದ್ದ ಲಿಂಗರಾಜ 'ಆಯ್ತು ಹೋಗೋಣ. ಮೊದಲು ಪೇಟೆಗೆ ಹೋಗಿ ಸಹಿ ಪಡೆದು ಬರೋಣ' ಎಂದು ಹುಸೇನಿಯ ಪಕ್ಕ ಕುಳಿತ. ಅವರು ಪೇಟೆಯ ಕಡೆ ಹೊರಟಾಗ ಗಂಟೆ ನಾಲ್ಕರ ಹತ್ತಿರ ಬಂದಿತ್ತು.

ನಾಡಕಚೇರಿಯಿದ್ದ ಸ್ಥಳದಿಂದ ಪೇಟೆ ಹದಿಮೂರು ಹದಿನಾಲ್ಕು ಕಿಲೋಮೀಟರ್ ದೂರ ಇದ್ದುದರಿಂದ ಅಲ್ಲಿಗೆ ಹೋಗುವುದಕ್ಕೆ ಕನಿಷ್ಠ ಇಪ್ಪತ್ತು ನಿಮಿಷವಾದರೂ ಹಿಡಿಯುತ್ತಿತ್ತು. ಅದನ್ನು ಲೆಕ್ಕ ಹಾಕಿದ ಲಿಂಗರಾಜ ತನಗೆ ಗುರುತಿದ್ದ ವಿಲೇಜ್ ಅಕೌಂಟೆಂಟ್‌ಗೆ ತನ್ನ ಮೊಬೈಲ್ ನಿಂದ ಕರೆ ಮಾಡಿ ತನ್ನ ಚಿಕ್ಕಪ್ಪ, ಖ್ಯಾತ ಚಿತ್ರ ನಿರ್ದೇಶಕ ವಂಶವೃಕ್ಷದ ಅರ್ಜಿಗೆ ಸಹಿಗಾಗಿ ಬರುತ್ತಿದ್ದಾರೆ ಎಂಬ ಸೂಚನೆಯನ್ನು ನೀಡಿದ. ಅವನು ಮೊಬೈಲ್‌ನಲ್ಲಿ ಮಾತಾಡಿದ್ದನ್ನು ಕೇಳಿಸಿಕೊಂಡ ರಾಮಣ್ಣನಿಗೆ ಲಿಂಗರಾಜನ ಬಗ್ಗೆ ಅಭಿಮಾನ ಮೂಡಿತು. ತನ್ನ ಸಲುವಾಗಿ ಅವನು ಎಷ್ಟೆಲ್ಲ ಆಸಕ್ತಿ ವಹಿಸುತ್ತಿದ್ದಾನೆ ಎಂದು ಅವನಿಗೆ ಅರಿವಾಯಿತು. ಅದನ್ನು ವ್ಯಕ್ತಪಡಿಸಲು ಹೋಗಲಿಲ್ಲ. ಸುತ್ತಣ ಸುಂದರ ಪ್ರಕೃತಿ ಸೌಂದರ್ಯವನ್ನು ವೀಕ್ಷಿಸುವವನಂತೆ ಸುತ್ತಮುತ್ತ ನೋಡತೊಡಗಿದ.

ಲಿಂಗರಾಜನಿಗೆ ನಿನ್ನೆ ರಾತ್ರಿ ಆಸ್ತಿಯ ಹಿಸ್ಸೆಯ ಸಂಬಂಧದಲ್ಲಿ ರಾಮಣ್ಣ ಅಪ್ಪಯ್ಯನಲ್ಲಿ ಪ್ರಸ್ತಾಪ ಮಾಡಿದ ಕ್ಷಣದಿಂದಲೇ ರಾಮಣ್ಣನ ಬಗ್ಗೆ ಮೊದಲೇ ಇದ್ದ ಅಸಮಾಧಾನ ತೀವ್ರವಾಗಿತ್ತು. ವರ್ಷಗಳಿಂದ ಮನೆಯ ಕಡೆಗೆ ತಿರುಗಿಯೂ ನೋಡದವನು ಈಗ ಆಸ್ತಿಯ ಹಕ್ಕು ಪಡೆಯುವುದಕ್ಕೆ ಬಂದಿದ್ದಾನಲ್ಲ ಎಂದು ಅವನ ಬಗ್ಗೆ ತಿರಸ್ಕಾರವೇ ಬಲಿತಿತ್ತು. ಅಜ್ಜನೊಂದಿಗೆ ಅಪ್ಪಯ್ಯ ಮನೆಯಲ್ಲಿ ದುಡಿಯಲು ನಿಂತು ಅವನಿಗೆ ಆಸರೆ ಆಗಿದ್ದಲ್ಲದೆ ಊರಿನಲ್ಲಿ ಒಂದು ಸುಸಂಸ್ಕೃತ ಕುಟುಂಬವಾಗಿ ರೂಪಿಸಿದ್ದನ್ನು ಅವನು ಮೆಲುಕು ಹಾಕುತ್ತಿದ್ದ. ಬೆಳಗ್ಗೆಯೇ ರಾಮಣ್ಣ ತನ್ನನ್ನು ತಾಲ್ಲೂಕು ಕಚೇರಿಗೆ ಬರುವಂತೆ ಹೇಳಿದಾಗ ಆ ವೇಳೆಗೆ ತಮ್ಮದಾಗಿದ್ದ ಆಸ್ತಿಯಲ್ಲಿ ಅರ್ಧ ಭಾಗದಷ್ಟು ರಾಮಣ್ಣನ ವಶವಾಗುವುದರ ಕಾನೂನಾತ್ಮಕ ವಾಸ್ತವಕ್ಕೆ ಅವನು ಮಾನಸಿಕವಾಗಿ ಸಿದ್ಧನಾಗಿದ್ದ. ಕೈಯಲ್ಲಿ ಡಿಪ್ಲೊಮಾ ಪದವಿಯ ಪ್ರಮಾಣ ಪತ್ರ ಇದೆ. ಅಣ್ಣ ನಾಗರಾಜ ಸರ್ಕಾರದ ಶಿಕ್ಷಣ ಇಲಾಖೆಯಲ್ಲಿ ಉದ್ಯೋಗ ಪಡೆದುಕೊಂಡಿದ್ದಾನೆ. ಊರಿನ ಆಸ್ತಿಯಲ್ಲಿ ಅರ್ಧ ಭಾಗ ಚಿಕ್ಕಪ್ಪನ ವಶಕ್ಕೆ ಹೋದರೂ ತಾನಾಗಲೀ, ನಾಗರಾಜನಾಗಲೀ ಬೀದಿಗೆ ಬೀಳುವುದಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಳ್ಳುತ್ತಾ ಅವನು ಬೆಳಗ್ಗೆಯೆಲ್ಲ ತನ್ನಷ್ಟಕ್ಕೆ ಧೈರ್ಯ ತಂದುಕೊಳ್ಳುತ್ತಿದ್ದ. ಹಿಸ್ಸೆ ಮಾಡಿಕೊಳ್ಳುವ ಪ್ರಕ್ರಿಯೆ ನಿಯಮಗಳ ಜಟಿಲ ಸುಕ್ಕುಗಳಲ್ಲಿ ವಿಳಂಬವಾಗುತ್ತಾ ಇರುವುದರ ಬಗ್ಗೆ ಅವನಿಗೆ ವಿಕೃತವಾದ ಸಂತೋಷವೂ ಒಳಗೊಳಗೇ ಆಗುತ್ತಿತ್ತು. ಆಸ್ತಿ ಹಿಸ್ಸೆ ಮಾಡಿಕೊಳ್ಳುವ ಮೊದಲ ಹಂತವಾಗಿ ವಂಶವೃಕ್ಷ ಮಾಡಿಸುವ ಪ್ರಕ್ರಿಯೆ ನಡೆಯುತ್ತಿದ್ದಾಗ ಅವನಿಗೆ ನಿರಾಳ ಭಾವ ಬಂದಿತ್ತು. ಅಜ್ಜನ ಮಗನಾಗಿ

ಚಿಕ್ಕಪ್ಪ ರಾಮಣ್ಣನಿಗೆ ಆಸ್ತಿಯ ಹಕ್ಕು ಇದ್ದೇ ಇರುತ್ತದೆ, ಇಷ್ಟು ವರ್ಷ ನಾವೆಲ್ಲ ಕಷ್ಟಪಟ್ಟು ಅಭಿವೃದ್ಧಿಪಡಿಸಿದ ಮಾತ್ರಕ್ಕೆ ಅವನ ಹಕ್ಕು ಮೊಟಕಾಗುವುದಿಲ್ಲ. ಇದು ವಾಸ್ತವ ಸ್ಥಿತಿ. ತಾವೆಲ್ಲ ಒಪ್ಪಿಕೊಳ್ಳದೆ ಬೇರೆ ಉಪಾಯವೇ ಇಲ್ಲ ಎಂದು ಅವನು ತನ್ನಷ್ಟಕ್ಕೆ ಸಮಾಧಾನ ತಾಳಿದ್ದ. ನಾಡಕಚೇರಿಯಲ್ಲಿ ಅಜ್ಜನ ಹೆಸರಿನ ಪಹಣಿಯನ್ನು ತೆಗೆಸಿದ ಮೇಲೆ ಅದರಲ್ಲಿನ ಆಸ್ತಿಯ ಪ್ರಮಾಣ ನೋಡಿ ಅವನಿಗೆ ನಿರಾಳವಾಯಿತು. ಅಜ್ಜನ ಹೆಸರಿಗೆ ಇರುವುದೇ ಎರಡು ಎಕರೆ ಜಮೀನು. ಅದರಲ್ಲಿ ಸಮಪಾಲು ಎಂದರೆ ತಲಾ ಒಂದು ಎಕರೆಯಷ್ಟೆ. ಮೂಲದಲ್ಲಿದ್ದ ತರಿ ಜಮೀನಿಗೆ ಅಕ್ಕಪಕ್ಕದ ಜಾಗವನ್ನು ಒತ್ತುವರಿಯ ನೆಪದಲ್ಲಿ ತಾವೆಲ್ಲ ಅಭಿವೃದ್ಧಿಪಡಿಸಿದ್ದು ಚಿಕ್ಕಪ್ಪನೊಂದಿಗೆ ಹಂಚಿಕೆಗೆ ಬರುವುದಿಲ್ಲ. ಅದೆಲ್ಲ ಸರ್ಕಾರಿ ಭೂಮಿಯನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದವರಿಗೆ ಅಕ್ರಮ– ಸಕ್ರಮ ಯೋಜನೆಯ ಅನ್ವಯ ಇವತ್ತಲ್ಲ ನಾಳೆ ಸೇರುತ್ತದೆ. ಆದ್ದರಿಂದ ತಮ್ಮ ಸ್ವಾಧೀನದಲ್ಲಿರುವ ಐದಾರು ಎಕರೆ ಜಾಗದಲ್ಲಿ ಒಂದು ಎಕರೆಯಷ್ಟೆ ಚಿಕ್ಕಪ್ಪನಿಗೆ ಹಂಚಿಕೆಯಾದರೆ ತಾವು ಕಳೆದುಕೊಳ್ಳುವುದು ಹೆಚ್ಚೇನೂ ಇಲ್ಲ ಎಂಬುದು ಅವನಿಗೆ ಮನವರಿಕೆಯಾಗಿ ತುಂಬ ನಿರಾಳವಾಯಿತು. ಅದೇ ಖುಷಿಯಲ್ಲಿ ವಂಶವೃಕ್ಷದ ಅರ್ಜಿಗೆ ಸಹಿ ಹಾಕಿಕೊಡುವಂತೆ ತನ್ನ ಗುರುತಿನ ವಿಲೇಜ್ ಅಕೌಂಟಂಟನಿಗೆ ಅವನು ಸ್ವಯಂ ಪ್ರೇರಣೆಯಿಂದಲೇ ಸಂಪರ್ಕಿಸಿದ. ಸಹಿ ಹಾಕುವುದಕ್ಕೆ ಕಚೇರಿಯಲ್ಲಿಯೇ ಇರುವುದಕ್ಕೆ ತಾಕೀತು ಮಾಡಿದ್ದ.

ಅರ್ಧ ದಾರಿಯಷ್ಟು ಸಾಗುತ್ತಿದ್ದಂತೆ ಲಿಂಗರಾಜನಿಗೆ ನಾಡಕಚೇರಿಯ ಸಿಬ್ಬಂದಿ ಅಜ್ಜ ಗತಿಸಿದ ನಂತರ ಅಜ್ಜಿಗೆ ಅದು ವರ್ಗಾವಣೆ ಆಗಬೇಕು ಎಂದು ಸೂಚಿಸಿದ್ದು ನೆನಪಾಯಿತು. ಅಂದರೆ ಅಜ್ಜಿಯೇ ವಾರಸುದಾರಳಾಗುತ್ತಾಳೆ. ತಾನು ಮಾಲಕಳಾಗಿ ಇಬ್ಬರು ಮಕ್ಕಳಿಗೆ ಹಂಚಿಕೊಡುವಾಗ ಸ್ವಂತಕ್ಕೆ ಒಂದು ಪಾಲು ಇಟ್ಟುಕೊಳ್ಳುವುದು ಕಾನೂನು ಪ್ರಕಾರ ನ್ಯಾಯವಾಗುತ್ತದೆ. ಅಂದರೆ ಎರಡು ಎಕರೆಯಲ್ಲಿ ಮೂರನೆಯ ಒಂದು ಭಾಗ ಮಾತ್ರ ರಾಮಣ್ಣನಿಗೆ ಹಂಚಿಕೆಯಾಗುತ್ತದೆ... ಎಂಬುದು ಅವನಿಗೆ ಅರಿವಾಯಿತು. ಎರಡು ಎಕರೆಯಲ್ಲಿ ಮೂರನೆಯ ಒಂದು ಭಾಗ ಎಂದರೆ ಇಪ್ಪತ್ತಾರು ಇಪ್ಪತ್ತೇಳು ಗುಂಟೆ. ಸರ್ವೆಯ ಸಿಬ್ಬಂದಿಗೆ ನ್ಯಾಯವಾಗಿ ಕಂಡರೆ ಚಿಕ್ಕಪ್ಪನ ಹಿಸ್ಸೆಗೆ ಫಸಲು ಬರುವ ತೋಟವನ್ನು ಬಿಟ್ಟು ಮಕ್ಕಿಗದ್ದೆಯ ಭಾಗವನ್ನು ಗುರುತು ಮಾಡಿಸಿಕೊಡಬಹುದು. ಜಮೀನು ಅಭಿವೃದ್ಧಿಯಲ್ಲಿ ಕಿಂಚಿತ್ತೂ ನೆರವಾಗದ ವ್ಯಕ್ತಿಗೆ ಊರಿನ ಪಂಚಾಯತುದಾರರಾದರೂ ಫಸಲು ಬರುವ ಅಡಿಕೆ ತೋಟದಲ್ಲಿ ಹೇಗೆ ಪಾಲು ಕೊಡಿಸುತ್ತಾರೆ ಎಂಬ ಪ್ರಶ್ನೆ ಎದ್ದು ಅವನಿಗೆ ನಿರಾಳವಾಯಿತು. ಕಾನೂನಾತ್ಮಕ ಪ್ರಕ್ರಿಯೆ ನಡೆಸಿ ತನ್ನ ಪಾಲಿನ ಆಸ್ತಿಯನ್ನು ರಾಮಣ್ಣ ತೆಗೆದುಕೊಳ್ಳಲಿ ಎಂಬ ಉದಾರ ಭಾವನೆ ಅವನಲ್ಲಿ ಬಲವಾಯಿತು. ಆದ್ದರಿಂದಲೇ ವಂಶವೃಕ್ಷದ ಅರ್ಜಿಗೆ ಸಹಿ ಹಾಕುವಂತೆ ಅವನು ಇನ್ನೊಮ್ಮೆ ವಿಲೇಜ್ ಅಕೌಂಟೆಂಟ್‌ಗೆ ನೆನಪು ಮಾಡಿದನು.

ಅವರು ಪೇಟೆಗೆ ಬಂದು ಅಲ್ಲಿನ ನಾಡಕಚೇರಿ ತಲುಪುವಷ್ಟರಲ್ಲಿ 'ಹಳ್ಳೂರು ರಾಮಣ್ಣನವರು ಊರಿಗೆ ಬಂದಿದ್ದಾರೆ' ಎಂಬ ಸುದ್ದಿ ಪೇಟೆಯಲ್ಲಿ ಹರಡಿತ್ತು. ಅವರನ್ನು ಪತ್ತೆ ಮಾಡುವುದಕ್ಕೆ ಶ್ರಮಿಸಿದ್ದ ಸ್ಥಳೀಯ ಕನ್ನಡ ಸಾಹಿತ್ಯ ಪರಿಷತ್ ಘಟಕದವರು ಅವರ ಇರವನ್ನು ತಿಳಿದು ನಾಡಕಚೇರಿಗೆ ಬಂದರು. ಸಾಹಿತ್ಯ ಪರಿಷತ್ ಘಟಕದ ಮಂಜುನಾಥ ಕಾಮತರು ಒಂದು ಶಾಲನ್ನು ಹಿಡಿದುಕೊಂಡು ಬಂದಿದ್ದರು. 'ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರ ನಿರ್ದೇಶಕರು ನಮ್ಮೂರಿಗೆ ಬಂದರೆ ಅವರನ್ನು ಭವ್ಯವಾಗಿ ಸ್ವಾಗತಿಸಬೇಕಿತ್ತು. ಕೊನೆಯ ಗಳಿಗೆಯಲ್ಲಿ ವಿಷಯ ಗೊತ್ತಾಯಿತು' ಎಂದು ತಮ್ಮ ಹಿಂಬಾಲಕರ ಎದುರು ರಾಮಣ್ಣನವರಿಗೆ ಶಾಲು ಹೊದಿಸಿ 'ನಮ್ಮ ತಾಲ್ಲೂಕಿನ ಗೌರವವನ್ನು ದೇಶದ ತುಂಬ ಎತ್ತಿ ಹಿಡಿದಿದ್ದೀರಿ' ಎಂದು ಹೊಗಳಿದರು.

ನಾಡಕಚೇರಿಯಲ್ಲಿ ಕೆಲವರನ್ನು ಕೂರಿಸಿಕೊಂಡು ಹರಟೆ ಹೊಡೆಯುತ್ತಿದ್ದ ವಿಲೇಜ್ ಅಕೌಂಟೆಂಟನಿಗೆ ಅಲ್ಲಿ ಸ್ಥಳೀಯ ಗಣ್ಯರು ಸೇರಿದ್ದರಿಂದ ಹೆಚ್ಚಿನ ತಕರಾರು ಎತ್ತದೆ ವಂಶವೃಕ್ಷ ಕೋರಿದ್ದ ಛಾಪಾ ಕಾಗದದ ಅರ್ಜಿಗೆ ಸಹಿ ಹಾಕಿ ಕಚೇರಿ ಪದನಾಮ ಇದ್ದ ಸೀಲನ್ನು ಒತ್ತಿ ರಾಮಣ್ಣನ ಕೈ ಕುಲುಕಿದನು. 'ನಮ್ಮನ್ನು ಉದ್ದೇಶಿಸಿ ಇಲ್ಲೇ ಎರಡು ಮಾತು ಹೇಳಬೇಕು' ಎಂದು ಕಾಮತರು ಕೇಳಿದ್ದಕ್ಕೆ 'ಮತ್ತೆ ಎರಡು ವಾರದಲ್ಲಿ ಬರುತ್ತೇನೆ. ಆಗ ದೀರ್ಘವಾಗಿ ನಿಮ್ಮೊಂದಿಗೆ ಮಾತನಾಡುತ್ತೇನೆ. ಈಗ ಮನೆಯ ದುರಂತದಲ್ಲಿ ಪಾಲ್ಗೊಳ್ಳಲು ಬಂದಿದ್ದೇನೆ..' ಎಂದು ನಾಟಕೀಯವಾಗಿ ಹೇಳಿ ನಾಡಕಚೇರಿಯಲ್ಲಿ ಭಾಷಣ ಮಾಡುವ ಅವಕಾಶವನ್ನು ನಿವಾರಿಸಿಕೊಂಡನು.

ಪೇಟೆಯ ನಾಡಕಚೇರಿಯಿಂದ ಹೊರಬಿದ್ದವರು ಮನೆಯ ಕಡೆ ತಿರುಗಿದರು. ಹತ್ತು ಹನ್ನೆರಡು ಕಿಲೋಮೀಟರ್ ದೂರದ ಹಾದಿ. ಹೈಸ್ಕೂಲುವರೆಗಿನ ಶಿಕ್ಷಣವನ್ನು ಊರಲ್ಲಿಯೇ ಕೈಕೊಂಡಿದ್ದ ರಾಮಣ್ಣನಿಗೆ ರಸ್ತೆಯಲ್ಲಿ ಸಾಗುತ್ತಿದ್ದಂತೆ ಹಿಂದಿನ ನೆನಪುಗಳು ಮರುಕಳಿಸಿದವು. ಕತ್ತಲೂ ಆಗುತ್ತಾ ಇದ್ದುದರಿಂದ ಹೆಚ್ಚು ಮಾತಿಲ್ಲದೆ ಊರಿನ ಕಡೆ ಅಗಚುವವರೆಗೆ ಬಂದರು. ಸರ್ಕಾರಿ ರಸ್ತೆಯಿಂದ ಕಚ್ಚಾ ರಸ್ತೆಗೆ ತಿರುಗಿದಾಗ ಕಾರನ್ನು ನಿಲ್ಲಿಸಿ ಇಳಿದ ಹುಸೇನಿ 'ಒಂದು ನಿಮಿಷ ಸಾರ್' ಎನ್ನುತ್ತಾ ರಸ್ತೆಯಂಚಿನಲ್ಲಿ ತುಸು ದೂರ ಸಾಗಿ ದೇಹಬಾಧೆ ತೀರಿಸಲು ನಿಂತನು. ಅದು ಸಾಂಕ್ರಾಮಿಕವಾಗಿ ರಾಮಣ್ಣನೂ ಇಳಿದನು. ಲಿಂಗರಾಜನಿಗೂ ಅವರಿಗೆ ಜೊತೆಗೂಡುವಂತಾಯಿತು. ಕೆಲಸ ಮುಗಿಸಿ ಕಾರಿನ ಹತ್ತಿರ ಬಂದ ಹುಸೇನಿ 'ಇವತ್ತು ಇಲ್ಲೇ ಹಾಲ್ಟ್ ಮಾಡುವುದಾ...' ಎಂದು ಕೇಳಿದ್ದರಿಂದ 'ಏನಯ್ಯ ಇಷ್ಟು ಬೇಗ ನಮ್ಮೂರು ನಿನಗೆ ಬೇಡವಾಯಿತಾ..?' ಎಂದು ರಾಮಣ್ಣ ಛೇಡಿಸಿದನು. 'ಹಂಗಲ್ಲ ಸಾರ್... ಇಲ್ಲಿ ಸುತ್ತಾಡುತ್ತಾ ಇದ್ದರೆ ಇನ್ನೂ ನಾಲ್ಕು ದಿನ ಇದ್ದು ಬಿಡಬೇಕು ಅನ್ನಿಸುತ್ತೆ' ಎಂದು ರಾಮಣ್ಣ ಖುಷಿಪಡುವಂತೆ ಹೇಳಿದನು. 'ನೋಡೋಣ, ನಮ್ಮ ಕೆಲಸ ಇನ್ನೂ ಏನೂ ಆಗಿಲ್ಲ. ಮನೆಗೆ ಹೋಗಿ ಮುಂದೆ ಯೋಚನೆ ಮಾಡೋಣ' ಎಂದು ರಾಮಣ್ಣ ಅವನನ್ನು ಸಮಾಧಾನಪಡಿಸಿದನು. ಲಿಂಗರಾಜ ಪೇಟೆಯಿಂದ ಬರುವಾಗ ಅವರ ಯಾವ ಮಾತಿನಲ್ಲೂ ಮೂಗು ತೂರಿಸಲಿಲ್ಲ.

ಅವರು ಮನೆಗೆ ಬಂದಾಗ ಈರಮ್ಮ ವಾಡಿಕೆಯಂತೆ ಕಾಲುತೊಳೆದುಕೊಂಡು ಬರಲು ಬಚ್ಚಲಿಗೆ ಕಳಿಸಿದಳು. ಕಾಲು ತೊಳೆದುಕೊಂಡು ಜಗುಲಿಗೆ ಬಂದಾಗ 'ಇಡೀ ದಿನ ಆತಲ್ಲ ಮಾರಾಯ, ಕೆಲಸ ಆಯ್ತಾ' ಎಂದು ಕಕ್ಕುಲಾತಿಯಿಂದ ವಿಚಾರಿಸಿಕೊಳ್ಳುತ್ತಾ ಕುಡಿಯುವುದಕ್ಕೆ ಬಿಸಿ ನೀರು ತಂದುಕೊಟ್ಟಳು. ಅಡುಗೆ ಮನೆಯಲ್ಲಿ ಒಲೆಯ ಬದಿ ಶಾಖದ ವಲಯದಲ್ಲಿ ಕುಳಿತಿದ್ದ ಗಂಗಮ್ಮ ರಾಮಣ್ಣ ಬಂದುದನ್ನು ತಿಳಿದು ಜಗುಲಿಗೆ ಬಂದರು. ಅವರನ್ನು ಹಿಂಬಾಲಿಸಿ ಪಾರ್ವತಮ್ಮ ಕಾಫಿ ಬೆರೆಸಿಕೊಂಡು ಬಂದರು. ಮೂವರೂ ಮಹಿಳೆಯರು ತನ್ನ ಉಪಚಾರಕ್ಕೆ ನಿಂತದ್ದನ್ನು ಕಂಡು ರಾಮಣ್ಣನಿಗೆ ಕಸಿವಿಸಿಯೂ ಆಯಿತು. ಬೆಂಗಳೂರಿನ ವಲಯದಲ್ಲಿ ವ್ಯಾವಹಾರಿಕ ನಡವಳಿಕೆಗೆ ಒಗ್ಗಿ ಹೋಗಿದ್ದ ಅವನಲ್ಲಿ ಹಳ್ಳಿಯಲ್ಲಿ ವ್ಯಕ್ತವಾಗುತ್ತಿದ್ದ ಆಪ್ತ ಅನುಭೂತಿಗೆ ಹೇಗೆ ಸ್ಪಂದಿಸುವುದೆಂದು ತಿಳಿಯಲಾಗದೆ ಪೆಚ್ಚಾದನು. ಗಂಗಮ್ಮನವರಿಗೆ ಬೆಳಗ್ಗೆಯೇ ಯಲ್ಲನಾಯ್ಕರಿಂದ ವಿಷಯ ಗೊತ್ತಾಗಿತ್ತು. ವರ್ಷಗಳಿಂದ ಮನೆಯಿಂದ ದೂರ ಇದ್ದವನು 'ಅವರು' ಸತ್ತ ಎರಡು ವಾರದಲ್ಲಿಯೇ ಆಸ್ತಿಯ ಪಾಲಿಗೆ ಬಂದಿದ್ದಾನೆ ಎಂಬುದನ್ನು ಅರಗಿಸಿಕೊಳ್ಳುವುದಕ್ಕೆ ಅವರಿಗೆ ಆಗಿರಲಿಲ್ಲ. ಸೊಸೆಯ ಎದುರು ಹೇಳಿಕೊಂಡರೆ ಮಗನ ಬಗ್ಗೆ ಅವಳು ಅಗೌರವ ತಾಳಬಹುದು ಎಂಬ ಎಚ್ಚರಿಕೆಯನ್ನು ಅವರು ಇಟ್ಟುಕೊಂಡಿದ್ದರು. ವಿಷಯ ತಿಳಿದ ಕ್ಷಣದಿಂದಲೂ ಸಂಕಟ ಅನುಭವಿಸುತ್ತಿದ್ದ

ಅವರು ರಾಮಣ್ಣನನ್ನೇ ಕೇಳಬೇಕು ಎಂದು ಎದುರು ನೋಡುತ್ತಿದ್ದರು. ಅವನು ಕಾಫಿ ಕುಡಿಯುವವರೆಗೆ ತಡೆದುಕೊಂಡರು. ಈರಮ್ಮ ತಾಲ್ಲೂಕು ಕಚೇರಿಯಲ್ಲಿ ಏನಾಯಿತೆಂದು ತಿಳಿಯಲು ಕಾತರಳಾಗಿ ನಿಂತಿದ್ದಳು. ಕಾಫಿ ಕೊಟ್ಟು ಪಾರ್ವತಮ್ಮ ನಿರ್ಗಮಿಸಿ ಅಡುಗೆ ಮನೆ ಸೇರಿಕೊಂಡಿದ್ದಳು. ಲಿಂಗರಾಜ ಬಟ್ಟೆ ಬದಲಿಸಿ ಕೊಟ್ಟಿಗೆಯ ಕಡೆಗೋ, ತೋಟದ ಕಡೆಗೋ ಹೋಗಿದ್ದನು. ಜಗುಲಿಯಲ್ಲಿ ರಾಮಣ್ಣ ಒಬ್ಬನೇ ಇದ್ದ. 'ಅಲ್ಲ ತಮ್ಮ, ಇನ್ನೂ ಅವರ ಜಕಿಣಿ ಕೂಡಿಸಿ ಆಗಿಲ್ಲ, ಆಗಲೇ ಅವರ ಆಸ್ತಿ ಹಿಸ್ಸೆ ಮಾಡಬೇಕು ಅಂತ ಬಂದಿದೀಯಂತಲ್ಲ' ಎಂದು ಅವನನ್ನು ಪಿಸುಮಾತಿನಲ್ಲಿ ಕೇಳಿದರು. ಅಣ್ಣಯ್ಯನಿಂದ ಇಲ್ಲವೇ ಲಿಂಗರಾಜ ಅಥವಾ ನಾಗರಾಜನಿಂದ ಆಕ್ಷೇಪ ನಿರೀಕ್ಷೆ ಮಾಡಿದ್ದ ರಾಮಣ್ಣನಿಗೆ ಅವ್ವನಿಂದ ವಿರೋಧ ಬರಬಹುದೆಂಬ ಕಲ್ಪನೆಯೇ ಇರಲಿಲ್ಲ. ಉಳಿದವರು ವಿರೋಧಿಸಿದರೆ ಅದಕ್ಕೆ ಸಮಜಾಯಿಶಿ ನೀಡುವುದಕ್ಕೆ ಅವನು ಸಿದ್ಧನಾಗಿ ಅದರ ತಾಲೀಮನ್ನೂ ನಡೆಸಿದ್ದನು. ಮೊದಲಿನಿಂದಲೂ ಅಪ್ಪಯ್ಯನ ವ್ಯವಹಾರದಲ್ಲಿ ತಲೆ ಹಾಕದ ಅವ್ವ ಈ ಸಂದರ್ಭದಲ್ಲಿಯೂ ಗಂಡಸರ ವ್ಯವಹಾರದಲ್ಲಿ ತಲೆ ಹಾಕಲಾರರೆಂದು ಅವನು ಭಾವಿಸಿದ್ದನು. ಮಕ್ಕಳ ವ್ಯವಹಾರದಲ್ಲಿ ಅವ್ವ ತಲೆ ಹಾಕುವುದು ಅವನ ಕಲ್ಪನೆಗೂ ಬಂದಿರಲಿಲ್ಲ.

ಅವ್ವನ ಮಾತಿಗೆ ಏನು ಹೇಳಬೇಕು ಎಂದು ತಡಬಡಾಯಿಸುತ್ತಿದ್ದವನಿಗೆ 'ಊರು ಕಡೆ ಬಂದಾಗ ಎಲ್ಲಾ ಕೆಲಸ ಮುಗಿಸಿಕೊಂಡೇ ಹೋಗಬೇಕು ಅಂತ ಅವನು ಹೇಳಿದ್ದಾನೆ. ಅವನಿಗೆ ಮನೆಯಲ್ಲಿ ಹಕ್ಕಿಲ್ಲವೇನವ್ವಾ? ಇನ್ನೂ ಎಷ್ಟು ವರ್ಷಕ್ಕೆ ಬರ್ತಾನೋ.. ಅವನಿಗೆ ಎಷ್ಟೆಲ್ಲಾ ಕೆಲಸ ಇರುತ್ತೆ' ಎಂದು ಈರಮ್ಮ ಮಧ್ಯಪ್ರವೇಶಿಸಿದ್ದು ಸರಿಯಾಗಿ ಪ್ರತಿಕ್ರಿಯೆ ನೀಡುವುದಕ್ಕೆ ಸವಡಾಯಿತು. 'ಹಂಗಲ್ಲವ್ವ, ಆಸ್ತಿ ಕೇಳಿದ ತಕ್ಷಣ ಅದನ್ನು ತಗೊಂಡು ನಾನೇನು ಇಲ್ಲೇ ಬಂದು ಉಕ್ಕೆ ಹೂಡ್ತೀನಾ.. ಇವರೇ ಮಾಡೋರು. ಮುಂದೆ ಹೇಗೋ ಎಂತೋ.. ಒಂದು ಸಲ ಬಂದಾಗ ಮುಖ್ಯವಾದ ಕೆಲಸ ಮುಗಿಸೋದು ಅಂತ ಅಣ್ಣಯ್ಯನಿಗೆ ಹೇಳಿದೆ. ಅವನೇ ನನಗೆ ಮುಂದೆ ನಿಂತು ವ್ಯವಸ್ಥೆ ಮಾಡು ಅಂತ ಹೇಳಿದ ಮೇಲೇನೇ ನಾನು ಇವತ್ತು ಹೋಗಿದ್ದು..' ಎಂದು ಸಮರ್ಥನೆ ನೀಡಲು ಯತ್ನಿಸಿದ. 'ಸರಿ ಬಿಡಪ್ಪ, ನಿನ್ನ ಹಕ್ಕು ಕೊಡಕಾಗಲ್ಲ ಅಂತ ಅವನು ಹೆಂಗೆ ಹೇಳ್ತಾನೆ? ಪಾವು ರಕ್ತ ಪಾಲು ಮಾಡಿಕ್ಯಂಡು ಹುಟ್ಟಿದೋರು. ಅಪ್ಪನ ಆಸ್ತಿನಲ್ಲಿ ಹಕ್ಕುದಾರರೇ.. ಆದರೂ ಇನ್ನೂ ಜಕಿಣಿ ಕೂಡಿಸಿ ಆಗಿಲ್ಲ, ಅಷ್ಟರಲ್ಲೇ ಅಣ್ಣ ತಮ್ಮ ಆಸ್ತಿ ಪಾಲು ಮಾಡಿಕೊಂಡ್ರು ಅಂತ ಜನ ಹೇಳೋ ಹಂಗೇ ಆಗ್ತದಲ್ಲ ಅಂತ..' ಎಂದು ತಮಗೆ ತೋಚಿದ್ದನ್ನು ಹೇಳಿ ನಿಧಾನವಾಗಿ ತಮ್ಮ ಕೋಣೆಯತ್ತ ನಿರ್ಗಮಿಸಿದರು. ರಾಮಣ್ಣ ಬಂದುದನ್ನು ಪಕ್ಕದಲ್ಲಿದ್ದ ತಮ್ಮ ಕೋಣೆಯಲ್ಲಿ ಮಲಗಿದ್ದ ಯಲ್ಲನಾಯ್ಕರು ಕಾರಿನ ಸಪ್ಪಳದಿಂದ ತಿಳಿದಿದ್ದರು. ಎದ್ದು ಜಗುಲಿಗೆ ಬರಬೇಕು ಎಂದುಕೊಳ್ಳುವುದರಲ್ಲಿ ಈರಮ್ಮ ಉಪಚಾರಕ್ಕೆ ನಿಂತಿದ್ದು ಗಮನಕ್ಕೆ ಬಂತು. ಸುಧಾರಿಸಿಕೊಳ್ಳಲಿ, ಸ್ವಲ್ಪ ತಡೆದು ಹೋದರಾಯಿತು ಎಂದು ಹಾಗೆಯೇ ಮೈ ಹೊರಳಿಸಿದರು. ಅವ್ವ ಬಂದು ರಾಮಣ್ಣನನ್ನು ವಿಚಾರಿಸಿಕೊಂಡದ್ದು ಅವರಿಗೆ ಸ್ಪಷ್ಟವಾಗಿಯೇ ಕೇಳಿಸಿತು. ಅದಕ್ಕೆ ಅವನು ಸಮಜಾಯಿಶಿ ಕೊಟ್ಟದ್ದನ್ನೂ ಕೇಳಿಸಿಕೊಂಡರು. 'ಅಣ್ಣಯ್ಯನೇ ವ್ಯವಸ್ಥೆ ಮಾಡು ಅಂತ ಹೇಳಿದ' ಎಂದು ರಾಮಣ್ಣ ಅವ್ವನಲ್ಲಿ ಹೇಳಿದಾಗ ಅದು ತನ್ನ ನಡೆಯನ್ನು ಸಮರ್ಥಿಸುವ ಹುನ್ನಾರ ಎಂಬುದು ಅವರಿಗೆ ಅರ್ಥವಾದರೂ ಅದಕ್ಕೆ ಅಸಮಾಧಾನವೇನೂ ಆಗಲಿಲ್ಲ. 'ಇಷ್ಟು ವರ್ಷ ಅಪ್ಪ ಅವ್ವನ ಬಗ್ಗೆ ಒಂದು ಕಾಗದವನ್ನೂ ಹಾಕಿ ವಿಚಾರಿಸಿಕೊಳ್ಳದವನು ಈಗ ಅಪ್ಪ ಸತ್ತ ಸುದ್ದಿ ಕೇಳಿ ಆಸ್ತಿ ಪಾಲಿಗೆ ಬಂದಿದ್ದಾನಲ್ಲ... ಇರಲಿ, ಅವನ ಪಾಲು ನಮಗೆ ಏಕೆ? ಇವತ್ತಲ್ಲ, ನಾಳೆ ಅವನ ಪಾಲು ಕೊಡಲೇ ಬೇಕಲ್ಲ... ಎಂದು ತಾನು ಒಪ್ಪಿದ್ದರಲ್ಲಿ ತಪ್ಪೇನಿದೆ ಎಂದು ತಮ್ಮಷ್ಟಕ್ಕೆ ಸಮಾಧಾನಗೊಂಡರು.

ಅವ್ವ ಜಗುಲಿಯಿಂದ ನಿರ್ಗಮಿಸಿದ ಮೇಲೆ ಕೋಣೆಯಿಂದ ಹೊರಬಂದ ಯಲ್ಲನಾಯ್ಕರು 'ತುಂಬಾ ತಡವಾಯ್ತಲ್ಲ, ಏನೆಲ್ಲ ಕೆಲಸ ಆಯ್ತು..?' ಎಂದು ರಾಮಣ್ಣನಲ್ಲಿ ಕೇಳಿದರು. ಅಷ್ಟರಲ್ಲಿ ಹೊರಗಡೆ ಹೋಗಿದ್ದ ಲಿಂಗರಾಜನೂ ಒಳಕ್ಕೆ ಬಂದು ಸೇರಿದನು. ಈರಮ್ಮನಂತೂ ರಾಮಣ್ಣನ ಪಕ್ಕದಲ್ಲಿಯೇ ಕುಳಿತಿದ್ದಳು. ಇವತ್ತು ಏನೇನಾಯಿತು ಎಂಬುದನ್ನಷ್ಟೇ ಅಲ್ಲ, ಹಿಸ್ಸೆ ಮಾಡಿಸುವುದಕ್ಕೆ ಏನೇನೆಲ್ಲ ಮಾಡಬೇಕಾಗುತ್ತದೆ ಎಂಬುದನ್ನೂ ತಿಳಿಸುವುದು ಅಗತ್ಯ ಎನಿಸಿತು. ಅದಕ್ಕೆ ರಾಮಣ್ಣ ತರಗತಿ ಕೋಣೆಯಲ್ಲಿ ನಿಂತವನಂತೆ ಮಾನಸಿಕವಾಗಿ ಸಜ್ಜಾದನು.

'ಅಪ್ಪಯ್ಯನ ಆಸ್ತಿ ಮೊದೂಲು ಅವ್ವನ ಹೆಸರಿಗೆ ಬದಲಾಗಬೇಕು. ಅದಕ್ಕೆ ಅವ್ವನ ಹೆಸರಲ್ಲಿ ಅರ್ಜಿ ಕೊಡಬೇಕು. ಅಪ್ಪಯ್ಯನ ಮರಣ ಪ್ರಮಾಣ ಪತ್ರವನ್ನು ಪಂಚಾಯ್ತಿಯಿಂದ ಪಡೆದು ಅರ್ಜಿಯಲ್ಲಿ ಲಗತ್ತಿಸಬೇಕು. ಅದು ಅವ್ವನ ಹೆಸರಿಗೆ ವರ್ಗ ಆದ ಮೇಲೆ ಒಟ್ಟು ಆಸ್ತಿಯನ್ನು ಮೂರು ಪಾಲು ಮಾಡಿಕೊಡುವುದಕ್ಕೆ ಬದಲಾದ ಪಹಣಿಯನ್ನು ಲಗತ್ತಿಸಿ ಸರ್ವೇಯವರಿಗೆ ಅರ್ಜಿ ಕೊಡಬೇಕು. ಅವರು ಬಂದು ಸರ್ವೆ ಮಾಡಿದ ನಂತರ ಹಿಸ್ಸೆ ಮಾಡುವ ಪ್ರಕ್ರಿಯೆ ಆರಂಭವಾಗುತ್ತದೆ...' ಎಂದು ರಾಮಣ್ಣ ಶುರು ಮಾಡಿದನು. 'ಹಂಗಾರೆ ಇದು ನಾಳೆ ನಾಡದು ಆಗೋ ಬಾಬತ್ತಲ್ಲ' ಎಂದು ಯಲ್ಲನಾಯ್ಕರು ಮಧ್ಯೆ ಬಾಯಿ ಹಾಕಿದರು.

'ಅಷ್ಟು ಬೇಗ ಆಗಲ್ಲ, ಇವತ್ತೇ ನಾವು ನೋಡಿದೆವಲ್ಲ. ನಮ್ಮಲ್ಲಿ ತಿರುಗಾಡಲು ಕಾರು ಇತ್ತು ಅಂತ ತಾಲ್ಲೂಕು ಆಫೀಸು, ವಕೀಲರ ಕಚೇರಿ, ನಾಡ ಕಚೇರಿ, ವಿಲೇಜ್ ಅಕೌಂಟೆಂಟ್ ಸಹಿಗೆ ಅಂತ ಮೂರು ಊರು ಸುತ್ತಿಕೊಂಡು ಬಂದೆವು. ಆದರೂ ಇನ್ನೂ ಅರ್ಜಿ ಸಲ್ಲಿಸಲು ಆಗಲಿಲ್ಲ. ವಂಶವೃಕ್ಷದ ಅರ್ಜಿಯನ್ನು ಸಲ್ಲಿಸಿದ ಮೇಲೆ ವಂಶವೃಕ್ಷ ಕೈ ಸೇರುವುದು ಒಂದು ವಾರವಾದರೂ ಆಗಬಹುದು. ಇನ್ನು ಅಜ್ಜಿ ಹೆಸರಿಗೆ ಪಹಣಿ ವರ್ಗ ಆಗಬೇಕಿದ್ದರೆ ಅದಕ್ಕೆ ತಹಶೀಲ್ದಾರರಿಗೆ ಅರ್ಜಿ ಕೊಡಬೇಕು. ಅದನ್ನು ವಿಲೇಜ್ ಅಕೌಂಟೆಂಟ್ ಮತ್ತು ರೆವಿನ್ಯೂ ಇನ್ಸ್‌ಪೆಕ್ಟರ್ ತಪಾಸಣೆ ನಡೆಸಿ ವರದಿ ಸಲ್ಲಿಸಿದ ಮೇಲೆ ಪಹಣಿ ವರ್ಗ ಆಗುತ್ತೆ. ಹೆಸರಿಗೆ **ಸಕಾಲ** ಅಂತ ಇದೆ, ಆದರೆ ಪ್ರತಿಯೊಂದಕ್ಕೂ **ಸಕಾಲ**ದಲ್ಲಿ ದುಡ್ಡು ಕೊಡದೆ ಇದ್ದರೆ ನಮಗೆ ಬೇಕಾದ ಸಮಯಕ್ಕೆ ಯಾವ ದಾಖಲೆಯೂ ಸಿಗೋದಿಲ್ಲ...' ಸರ್ಕಾರಿ ಕಚೇರಿಗಳಲ್ಲಿ ಸುತ್ತಾಡಿ ಅನುಭವ ಇದ್ದ ಲಿಂಗರಾಜ ತಿಳಿಸಿದ.

'ಆಮೇಲೆ ಸರ್ವೆ ಮಾಡಿಸಿ ಅಂತ ಅರ್ಜಿ ಕೊಟ್ಟರೆ ಅದು ಕಂಪ್ಯೂಟರ್‌ನಲ್ಲಿ ದಾಖಲಾಗುತ್ತೆ. ಅದು ಸರದಿಯಂತೆ ಬರುತ್ತದೆ. ಒಂದು ತಿಂಗಳ ಅವಧಿಯಲ್ಲಿ ಮಾಡಿ ಮುಗಿಸಬೇಕು ಅಂತ ನಿಯಮ ಇದೆಯಂತೆ. ಅಂತೂ ಅದು ಅರ್ಜಿ ಕೊಟ್ಟ ಒಂದು ತಿಂಗಳಲ್ಲಿ ಆಗುತ್ತೆ. ಸರ್ವೆ ಆದ ಮೇಲೆ ನಕ್ಷೆ ಬರುವುದಕ್ಕೆ ಕಾಯಬೇಕು. ಅದು ಎಷ್ಟು ಸಮಯ ಹಿಡಿಯುತ್ತದೆಯೋ ಗೊತ್ತಿಲ್ಲ...' ಲಿಂಗರಾಜ ಹೇಳುತ್ತಾ ಹೋದಂತೆ ರಾಮಣ್ಣನಿಗೆ ಇದು ಸದ್ಯಕ್ಕೆ ಬಗೆಹರಿಯುವ ಪ್ರಶ್ನೆ ಅಲ್ಲ ಎನಿಸಿತು.

ಇದೇ ಸಂದರ್ಭದಲ್ಲಿಯೇ ಲಿಂಗರಾಜನಿಗೆ ತಾನು ಗ್ರಹಿಸಿದಂತೆ ಆಸ್ತಿಯಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಪಾಲು ಸಿಗಬಹುದು ಎಂಬುದನ್ನು ತಿಳಿಸಬೇಕು ಎಂಬ ಉತ್ಸಾಹ ಮೂಡಿತು. 'ನಮ್ಮ ಜಮೀನು ಇರುವ ಸರ್ವೆ ನಂಬರಿನಲ್ಲಿ ಅಜ್ಜನಿಗೆ ಇರುವುದು ಎರಡು ಎಕರೆ ತರಿ ಜಮೀನು. ಇದರಲ್ಲಿಯೇ ಮೂರು ಪಾಲು ಆಗಬೇಕಾಗುತ್ತದೆ...' ಎಂದು ಅವನು ಹೇಳುತ್ತಿದ್ದಂತೆ 'ಮೂರು ಯಾಕೆ? ಮೂರನೆಯವರು ಯಾರು?' ಎಂದು ರಾಮಣ್ಣ ಮಧ್ಯೆ ಆಕ್ಷೇಪಿಸಿದ. 'ಮೂರು ಅಂದರೆ ಇಬ್ಬರು ಮಕ್ಕಳು ಮತ್ತು ಅಜ್ಜಿಗೆ ಒಂದು

ಪಾಲು ಬೇಕಲ್ಲ... ಅದಕ್ಕೆ' ಎಂದು ಲಿಂಗರಾಜ ಹೇಳಿದ. 'ಅಂದರೆ ಸಮಪಾಲು ಕೊಡಬೇಕಾಗ್ತದೆಯಾ..? ರಾಮಣ್ಣನಿಗೆ ಜಿಜ್ಞಾಸೆಯಾಯಿತು. 'ಸಮಪಾಲು ಅಂತ ಅಲ್ಲ, ಸ್ವಲ್ಪ ಜಾಸ್ತೀನೂ ಬಿಟ್ಟು ಕೊಡಬಹುದು, ಕಡಿಮೆ ಕೂಡ ಕೊಡಬಹುದು. ಸಾಮಾನ್ಯವಾಗಿ ಈ ಕಡೆ ಸಮಪಾಲೇ ನಿಗದಿ ಮಾಡುತ್ತಾರೆ..' ಎಂದು ಲಿಂಗರಾಜ ವಿವರಿಸಿದ. 'ತೋಟದ ಆಚೆ ಕಡೆಯೂ ನಮ್ಮಲ್ಲಿ ಸಾಕಷ್ಟು ಜಾಗ ಇದೆಯಲ್ಲ, ಮನೆಯ ಕಡೆ, ಹಿತ್ತಲು, ಬ್ಯಾಣ– ಇವೆಲ್ಲ ನಮ್ಮ ಸ್ವಾಧೀನದಲ್ಲಿಯೇ ಇವೆಯಲ್ಲ, ಇವು ಪಾಲಿಗೆ ಸೇರುತ್ತವೆಯಲ್ಲ..' ರಾಮಣ್ಣನಿಗೆ ನಿನ್ನೆಯಷ್ಟೆ ತೋಟದಲ್ಲಿ ಸುತ್ತಾಡಿ ಬಂದಿದ್ದರಿಂದ ಒಟ್ಟು ಜಾಗದ ಬಗ್ಗೆ ಅರಿವಿತ್ತು. ಅದನ್ನೆ ಸ್ಪಷ್ಟಪಡಿಸಿದ. ಯಲ್ಲನಾಯ್ಕರು ಮಧ್ಯೆ ಪ್ರವೇಶಿಸಿ 'ಅಪ್ಪಯ್ಯನ ಹೆಸರಲ್ಲಿದ್ದ ಜಾಗ ಮಾತ್ರ ಪಾಲಿಗೆ ಸೇರ್ತದೆ. ಆಚೆ ಈಚೆ ಸಾಗು ಮಾಡಿಕೊಂಡಿದ್ದು ಸರ್ಕಾರಿ ಜಾಗ. ಇದೆಲ್ಲ ಅಕ್ರಮವಾಗಿದ್ದು. ಸರ್ಕಾರಿ ಜಾಗವನ್ನು ಪಾಲು ಮಾಡುವುದಕ್ಕೆ ಬರುವುದಿಲ್ಲ. ನಾವು ನಾವು ಪಾಲು ಮಾಡಿಕೊಂಡರೂ ಅದು ರಿಜಿಸ್ಟ್ರು ಆಗಲ್ಲ. ರಿಜಿಸ್ಟ್ರು ಆಗಾದು ಸರ್ವೆಯವರು ಮಾಡಿಕೊಟ್ಟ ನಕಾಶೆ ಪ್ರಕಾರ ಮಾತ್ರ ಅಂತ ಹೇಳ್ತಾ ಇದ್ದರು..' ಎಂದರು.

'ಅಂದರೆ ಎರಡು ಎಕರೆಯಲ್ಲಿ ಮೂರು ಪಾಲು ಅಂದರೆ ಒಂದು ಎಕರೆಗಿಂತಲೂ ಕಡಿಮೆ. ಒಬ್ಬರಿಗೆ ಮುಕ್ಕಾಲು ಎಕರೆಯೂ ಬರಲ್ಲ' ಎಂಬುದು ರಾಮಣ್ಣನಿಗೆ ಖಚಿತವಾಯಿತು. 'ಇಷ್ಟು ಜಾಗಕ್ಕಾಗಿ ಇಷ್ಟೆಲ್ಲ ಮಾತಾಡಬೇಕಾಯಿತಲ್ಲ' ಎಂದು ತನ್ನನ್ನು ಈ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಪ್ರಚೋದನೆ ನೀಡಿದ ಮಂಜುಳಾ ಬಗ್ಗೆ ಕೋಪವೂ ಬಂತು.

ಹಿಸ್ಸೆಯ ಕುರಿತಾಗಿ ನಡೆದ ಮಾತುಕತೆಯಲ್ಲಿ ರಾಮಣ್ಣನಿಗೆ ಸ್ಪಷ್ಟತೆ ಬಂತು. ಸದ್ಯಕ್ಕೆ ಇದು ಇತ್ಯರ್ಥವಾಗುವ ಸಂಗತಿಯಲ್ಲ ಎಂಬುದು ದೃಢವಾಯಿತು. ಆಸ್ತಿಯೆಲ್ಲ ಅವ್ವನ ಹೆಸರಿಗೆ ಬರಬೇಕು. ನಂತರ ಅದು ಮೂವರಿಗೆ ಹಂಚಿಕೆಯಾಗುವ ಪ್ರಕ್ರಿಯೆ ಆರಂಭವಾಗಬೇಕು. ಆಸ್ತಿ ವರ್ಗಾವಣೆಗೆ ಐದಾರು ತಿಂಗಳು ಹಿಡಿದರೆ ಮುಂದಿನ ಕೆಲಸಗಳಿಗೆ ಮತ್ತೆ ಎರಡು ತಿಂಗಳಾದರೂ ಹಿಡಿಯುತ್ತದೆ. ಅಂದರೆ ಈಗ ಶುರು ಮಾಡಿದರೆ ಒಂದು ವರ್ಷದಲ್ಲಿ ಮುಗಿಯುವಂಥ ಕೆಲಸ. ಇದೆಲ್ಲ ತನಗೆ ಯಾಕೆ ಬೇಕಿತ್ತು ಎಂದುಕೊಂಡ. ತನ್ನ ಪ್ರಸ್ತಾಪದ ಬಗ್ಗೆ ಸಡಿಲವಾಗಬಾರದೆಂದು 'ವಂಶವೃಕ್ಷದ ದಾಖಲೆಯಂತೂ ಬೇಕಲ್ಲ. ಅದನ್ನು ನಾಳೆ ಸಲ್ಲಿಸಿಬಿಡಬೇಕು..' ಎಂದು ಹೇಳಿ ಸುಮ್ಮನಾದ.

ರಾಮಣ್ಣನಿಗೆ ಎರಡನೆಯ ರಾತ್ರಿಯೂ ಈರಮ್ಮ ಔತಣದ ಊಟ ಇರುವಂತೆ ನೋಡಿಕೊಂಡಿದ್ದಳು. ಮನೆಯಲ್ಲಿದ್ದ ಸಮಯದಲ್ಲಿ ಅವನು ಅಪ್ಪಯ್ಯನ ತಿಥಿ ಕಾರ್ಯದ ಬಗ್ಗೆ ಯಾವುದೇ ಮಾತಾಡಿರಲಿಲ್ಲ. ಅದರ ಸಿದ್ಧತೆಯ ಬಗ್ಗೆಯೂ ಕೇಳಿರಲಿಲ್ಲ. ಏನೇ ಇದ್ದರೂ ರಾಮಣ್ಣನೇ ಪ್ರಸ್ತಾಪ ಮಾಡಲಿ, ತಾವಾಗಿ ಆ ವಿಷಯವನ್ನು ಎತ್ತುವುದು ಬೇಡ ಎಂದು ಮನೆಯಲ್ಲಿದ್ದವರೆಲ್ಲ ತೀರ್ಮಾನ ಮಾಡಿಕೊಂಡಂತಿತ್ತು. ನಿನ್ನೆ ರಾತ್ರಿಯಂತೆ ಲಿಂಗರಾಜ ಉಪಚಾರದ ಹೊಣೆಯನ್ನು ನಿರ್ವಹಿಸಿದ. ಅಪರೂಪಕ್ಕೆ ಮಾಡುತ್ತಿದ್ದ ಕೋಳಿ ಕಜ್ಜಾಯದ ಊಟ. ರಾಮಣ್ಣನಿಗೆ ಅದು ಎಷ್ಟು ಶತಮಾನದ ಹಿಂದೆ ರುಚಿ ನೋಡಿದ್ದೋ ಎನಿಸಿ ಅದನ್ನೇ ಬಾಯಿಬಿಟ್ಟು ಹೇಳಿದ. 'ತುಂಬ ಚೆನ್ನಾಗಿದೆ ಕೋಳಿ ಕಜ್ಜಾಯ' ಎಂದು ಎರಡನೆಯ ಸಲಕ್ಕೆ ಕೇಳಿ ಬಡಿಸಿಕೊಂಡ. ಅನ್ನ ಹುಳಿಸಾರಿನೊಂದಿಗೆ ಊಟ ಮುಗಿಸಿ ತಾಂಬೂಲವನ್ನೂ ಸೇವಿಸಿದ.

ಜಗುಲಿಯಲ್ಲಿ ಲಿಂಗರಾಜ ಸಿದ್ಧಪಡಿಸಿದ ಹಾಸುಗೆಯ ಮೇಲೆ ಮಲಗಿದ ರಾಮಣ್ಣನಿಗೆ ಸ್ವಲ್ಪ ಹೊತ್ತಿಗೆ ಸುಖನಿದ್ದೆ. ಅದರ ಸೂಚನೆಯಾಗಿ ಹೊರಡುತ್ತಿದ್ದ ಗೊರಕೆಯ ಸದ್ದು ಪಕ್ಕದ ಕೋಣೆಯಲ್ಲಿ ಮಲಗಿದ್ದ

ಯಲ್ಲನಾಯ್ಕರಿಗೂ ಕಿರಿ ಕಿರಿ ಆಗುವಷ್ಟು ಉಗ್ರವಾಗಿತ್ತು. ನಿನ್ನೆ ಗೊರಕೆಯೇ ಇರಲಿಲ್ಲ ಎಂದು ತಮ್ಮಷ್ಟಕ್ಕೆ ಅಂದುಕೊಂಡು ಮಗ್ಗಲು ಬದಲಿಸಿದರು.

ಬೆಳಗ್ಗೆ ಎದ್ದ ರಾಮಣ್ಣ ನಿತ್ಯ ವಿಧಿಗಳನ್ನು ತೀರಿಸಿ ಹೊರಟಲು ಸಜ್ಜಾಗುವಂತೆ ಹುಸೇನಿಗೆ ಹೇಳಿದ. ಬೆಳಗ್ಗೆ ಬೆಳಗ್ಗೆಯೇ ತೋಟದ ಕಡೆ ಸುತ್ತಾಡಲು ಹೋಗಿದ್ದ ಹುಸೇನಿ 'ಸಾರ್, ತೋಟದಲ್ಲಿ ಒಳ್ಳೇ ಚಕ್ಕೋತ ಇದಾವೆ. ಬೆಂಗಳೂರಲ್ಲಿ ಒಂದೊಂದಕ್ಕೆ ಐವತ್ತು ರೂಪಾಯಿ ಆದರೂ ಆಗ್ತವೆ' ಎಂದು ವರದಿ ಒಪ್ಪಿಸಿದ. 'ಇರಲಿ ಬಿಡು, ಇಲ್ಲಿ ಅವಕ್ಕೆ ಅಷ್ಟೊಂದು ದುಡ್ಡು ಯಾರೂ ಕೊಡಲ್ಲ' ಎಂದು ಹೇಳಿ ತನ್ನ ಎರಡು ಸೂಟ್‌ಕೇಸುಗಳಲ್ಲಿ ಬಟ್ಟೆಗಳನ್ನು ಜೋಡಿಸಿದ. ಬೆಳಗ್ಗೆ ಎದ್ದು ಕೊಟ್ಟಗೆಯ ಕಡೆ ಹೋಗಿದ್ದ ಲಿಂಗರಾಜನಿಗೆ ಹುಸೇನಿ ಹೇಳುತ್ತಾ ಇದ್ದುದು ಕೇಳಿಸಿ ತೋಟಕ್ಕೆ ಹೋಗಿ ಸಾಕಷ್ಟು ಬಲಿತಿದ್ದ ನಾಲ್ಕು ಚಕ್ಕೋತಗಳನ್ನು ಕಿತ್ತು ತಂದ. 'ಇವನ್ನು ವಾರಗಟ್ಟಲೆ ಇಡಬಹುದು' ಎಂದು ಹೇಳುತ್ತಾ ಹುಸೇನಿಗೆ ಕೊಟ್ಟ. ಅವನ್ನು ಕಾರಿನ ಡಿಕ್ಕಿಯಲ್ಲಿ ಇರಿಸಿದ ಹುಸೇನಿ ರಾಮಣ್ಣನ ಸೂಟ್‌ಕೇಸುಗಳನ್ನೂ ಜಗುಲಿಯಿಂದ ಹೊತ್ತು ತಂದು ಇರಿಸಿದ.

ಈರಮ್ಮನ ಉಪಚಾರದಲ್ಲಿ ಬೆಳಗಿನ ತಿಂಡಿಯನ್ನು ಮುಗಿಸಿದ ರಾಮಣ್ಣ ಅವ್ವನ ಕೋಣೆಯನ್ನು ಪ್ರವೇಶಿಸಿದ. ಅಲ್ಲಿ ಮಂಚದ ಮೇಲೆ ಕುಳಿತಿದ್ದ ಅವ್ವನಿಗೆ ಕಾಲು ಮುಟ್ಟಿ ನಮಸ್ಕರಿಸಿ 'ನಾಡಕಚೇರಿಗೆ ಹೋಗಿ ವಂಶವೃಕ್ಷಕ್ಕೆ ಅರ್ಜಿ ಸಲ್ಲಿಸಿ ಹಂಗೆ ಹೊರಟು ಬಿಡ್ತೀನಿ. ಮತ್ತೆ ಇಲ್ಲಿಗೆ ಬಂದು ಹೊರಟರೆ ತುಂಬ ತಡವಾಗುತ್ತದೆ' ಎಂದು ಹೇಳಿ ಜಗುಲಿಗೆ ಬಂದ. ಅಲ್ಲಿ ನಿಂತಿದ್ದ ಲಿಂಗರಾಜನಿಗೆ ವಂಶವೃಕ್ಷಕ್ಕೆ ಅರ್ಜಿ ಸಲ್ಲಿಸಿ ಹಂಗೆ ನಾವು ಮುಂದೆ ಹೋಗ್ತೇವೆ. ನಿನಗೆ ಅದರ ಸ್ವೀಕೃತಿ ನಂಬರ್ ಕಳಿಸ್ತೇನೆ. ಹೋಗಿ ತಂದು ಬಿಡು. ಮುಂದೆ ನೋಡೋಣ' ಎಂದು ಹೇಳುತ್ತಾ ಜನಗುಲಿಯಿಂದ ಇಳಿದ. ಎದುರಿಗೆ ಸಿಕ್ಕಿದ ಯಲ್ಲನಾಯ್ಕರಿಗೆ 'ನಾಡಕಚೇರಿಗೆ ಹೋಗಿ ಅರ್ಜಿ ಸಲ್ಲಿಸಬೇಕಲ್ಲ' ಎಂದಷ್ಟೆ ಹೇಳಿ ಕಾರನ್ನು ಹತ್ತಿದ. ಅವನು ಹೊರಟಿದ್ದನ್ನು ಕಂಡು ಬಾಗಿಲ ಬಳಿ ಬಂದ ಈರಮ್ಮ, ಪಾರ್ವತಿ ಅತ್ತಿಗೆಮ್ಮನತ್ತ ಕೈ ಬೀಸಿ 'ಬರ್‍ತೀನಿ' ಎಂದು ವಿದಾಯದ ಸೂಚನೆ ನೀಡಿದಾಗ ಹುಸೇನಿ ಕಾರಿನ ವೇಗ ಹೆಚ್ಚಿಸಿದ.

ವೇಗ ಹೆಚ್ಚಿಸಿಕೊಂಡ ಕಾರನ್ನು ನೋಡುತ್ತಿದ್ದ ಈರಮ್ಮ 'ಇದೆಂಥ ಹುಡುಗ...? ಎಷ್ಟೋ ವರ್ಷದ ನಂತರ ಊರು ಕಡೆ ಬಂದವನು, ಅಪ್ಪಯ್ಯನ ತಿಥಿ ಬಗ್ಗೆ ಚಕಾರ ಎತ್ತದೆ ಬರೀ ಹಿಸ್ಸೆ ಬಗ್ಗೆನೇ ಮಾತಾಡ್ತಾ ಇದ್ದನಲ್ಲ... ಇಷ್ಟಕ್ಕೆ ಅಷ್ಟು ದೂರದಿಂದ ಬರಬೇಕಾಗಿತ್ತಾ.." ಎಂದು ಗೊಣಗಿಕೊಂಡಳು.

ಅವಳ ಗೊಣಗಾಟಕ್ಕೆ ಅಲ್ಲಿ ನಿಂತಿದ್ದ ಎಲ್ಲರದೂ ಮೌನ ಸಮ್ಮತಿಯಾಗಿತ್ತು.

* * * * *